ಸೋಮವಾರ, ಮಾರ್ಚ್ 4, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕಣ್ಣೋಟ

ಅನಂತ್ ಅಂಬಾನಿ ಮತ್ತು ರಾಧಿಕಾ ಮರ್ಚೆಂಟ್ ಅವರ ವಿವಾಹಪೂರ್ವ ಕಾರ್ಯಕ್ರಮದಲ್ಲಿ ಗಾಯಕಿ ಶ್ರೇಯಾ ಘೋಷಾಲ್ ಕಾಣಿಸಿಕೊಂಡಿದ್ದು ಹೀಗೆ...

ಇಂದಿನಿಂದ ಕೊಬ್ಬರಿ ಖರೀದಿ ನೋಂದಣಿ ಆರಂಭ: ಒಂದು ದಿನ ಮುಂಚಿತವಾಗಿ ಸಾಲಿನಲ್ಲಿ ನಿಂತ ತೆಂಗು ಬೆಳೆಗಾರರು

ಸರದಿ ಸಾಲಿನಲ್ಲಿ ಕಲ್ಲು, ಚಪ್ಪಲಿ, ಚೀಲ!

ಪ್ರಜಾವಾಣಿ ವಾರ್ತೆ

ತಿಪಟೂರು/ತುಮಕೂರು: ನಾಫೆಡ್ ಮೂಲಕ ಕೊಬ್ಬರಿ ಖರೀದಿ ಮತ್ತು ನೋಂದಣಿ ಪ್ರಕ್ರಿಯೆ ಸೋಮವಾರದಿಂದ (ಮಾರ್ಚ್ 4) ಆರಂಭವಾಗಲಿದ್ದು, ರೈತರು ಒಂದು ದಿನ ಮುಂಚಿತವಾಗಿಯೇ (ಭಾನುವಾರ ಮಧ್ಯಾಹ್ನ ದಿಂದಲೇ) ಕೊಬ್ಬರಿ ಖರೀದಿ ಕೇಂದ್ರಗಳ ಮುಂದೆ ಸರದಿ ಸಾಲಿನಲ್ಲಿ ನಿಂತಿದ್ದಾರೆ.

ರೈತರು ಒಂದು ದಿನ ಮುಂಚಿತವಾಗಿ ತಿಪಟೂರು ತಾಲ್ಲೂಕಿನ ಮೂರು ಖರೀದಿ ಕೇಂದ್ರಗಳ ಬಳಿ ಸೇರಿದ್ದಾರೆ. ತಿಪಟೂರು ಎಪಿಎಂಸಿಯ ಆವರಣ, ಕೊನೆಹಳ್ಳಿ, ಕರಡಾಳು ಎಪಿಎಂಸಿಯ ಕೊಬ್ಬರಿ ಖರೀದಿ ಕೇಂದ್ರದ ಬಳಿ ಸಾಲಿನಲ್ಲಿ ನಿಂತಿದ್ದಾರೆ.

ಸರದಿಯಲ್ಲಿ ನಿಲ್ಲಲು ಆಗದ ಕೆಲವರು ತಮ್ಮ ಬದಲು ಬ್ಯಾಗ್, ಚಪ್ಪಲಿ, ಕಲ್ಲು ಇಟ್ಟಿದ್ದಾರೆ. ಎಲ್ಲ ಕಡೆ ನೆರಳಿಗೆ ಶಾಮಿಯಾನ, ಕುಡಿಯುವ ನೀರು, ಇಂಟರ್‌ನೆಟ್ ಸೇರಿದಂತೆ ಅಗತ್ಯ ಸೌಲಭ್ಯ ಕಲ್ಪಿಸಲಾಗಿದೆ.

ಕರಡಾಳು ಎಪಿಎಂಸಿ ಆವರಣದಲ್ಲಿ ರೈತರು ಸಾಲಿನಲ್ಲಿ ಚಪ್ಪಲಿ ಇಟ್ಟು ಕಾಯತೊಡಗಿದ್ದಾರೆ. ಅಧಿಕಾರಿಗಳು ಎಷ್ಟೇ ಹೇಳಿದರೂ ರೈತರು ಮನೆಗೆ ಹಿಂದಿರುಗಲು ಸಿದ್ಧರಿಲ್ಲ.

ತುರುವೇಕೆರೆ ತಾಲ್ಲೂಕಿನ ಕೊಬ್ಬರಿ ಖರೀದಿ ಕೇಂದ್ರಗಳಿಗೆ ರೈತರು ಚಾಪೆ, ರಗ್ಗು, ಹೊದಿಕೆಗಳೊಂದಿಗೆ ಬಂದಿದ್ದಾರೆ. ಕೇಂದ್ರಗಳ ಮುಂದೆ ಸರದಿ ಸಾಲಿನಲ್ಲಿ ನಿಂತಿರುವ ರೈತರು ಅಲ್ಲಿಯೇ ರಾತ್ರಿ ಊಟ ಮಾಡಿದರು.

ತಿಪಟೂರು ಎಪಿಎಂಸಿ ಮಾರುಕಟ್ಟೆಯ ಕೊಬ್ಬರಿ ಖರೀದಿ ಕೇಂದ್ರದ ಮುಂದೆ ಭಾನುವಾರ ಸರತಿ ಸಾಲಿನಲ್ಲಿ ಚಪ್ಪಲಿ ಇಟ್ಟು ರೈತರು ಸ್ಥಳ ಕಾಯ್ದಿರಿಸಿದರು

ತಿಪಟೂರು, ತುರುವೇಕೆರೆ ತಾಲ್ಲೂಕಿನಲ್ಲಿ ತಲಾ ಆರು, ಗುಬ್ಬಿ, ಚಿಕ್ಕನಾಯಕನಹಳ್ಳಿ, ಹುಳಿಯಾರಿನಲ್ಲಿ ತಲಾ ಎರಡು, ತುಮಕೂರು, ಕುಣಿಗಲ್, ಶಿರಾ ತಾಲ್ಲೂಕಿನಲ್ಲಿ ತಲಾ ಒಂದರಂತೆ ಜಿಲ್ಲೆಯಲ್ಲಿ ಒಟ್ಟು 21 ಖರೀದಿ ಕೇಂದ್ರಗಳಲ್ಲಿ ಕೊಬ್ಬರಿ ಖರೀದಿ ನಡೆಯಲಿದೆ. ಎಲ್ಲ ಕೇಂದ್ರಗಳಲ್ಲಿ ಖರೀದಿಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಮುಂದಿನ 45 ದಿನಗಳ ವರೆಗೆ ಕೊಬ್ಬರಿ ನೋಂದಣಿ ಮತ್ತು ಖರೀದಿಗೆ ಅವಕಾಶ ಕಲ್ಪಿಸಲಾಗಿದೆ. ಪ್ರತಿ ಎಕರೆಗೆ ಆರು ಕ್ವಿಂಟಲ್, ಪ್ರತಿ ರೈತರಿಂದ ಗರಿಷ್ಠ 15 ಕ್ವಿಂಟಲ್ ಕೊಬ್ಬರಿ ಖರೀದಿಗೆ ಅವಕಾಶ ನೀಡಲಾಗಿದೆ.

'ಕಳೆದ ಬಾರಿ ನೋಂದಣಿ ಪ್ರಕ್ರಿಯೆ ಬೇಗ ಮುಗಿದಿದ್ದರಿಂದ ನೋಂದಣಿ ಮಾಡಿಸಲು ಸಾಧ್ಯವಾಗಿಲ್ಲ. ಈ ಬಾರಿಯಾದರೂ ನೋಂದಣಿ ಮಾಡಿಸಿಕೊಳ್ಳೋಣ ಎಂದು ಒಂದು ದಿನ ಮುಂಚಿತವಾಗಿ ಬಂದಿದ್ದೇವೆ. ರಾತ್ರಿ ಇಲ್ಲಿಯೇ ಇದ್ದು, ಬೆಳಿಗ್ಗೆ ನೋಂದಣಿ ಮಾಡಿಸಿಕೊಂಡೇ ಮನೆಗೆ ಹೋಗುತ್ತೇವೆ' ಎಂದು ರೈತ ಕೀರ್ತಿ ಸಾಸಲಹಳ್ಳಿ ಪ್ರತಿಕ್ರಿಯಿಸಿದರು.

ಕೇಂದ್ರದ ಮುಂದೆ ರೈತರ ಠಿಕಾಣಿ

ಹಾಸನ: ಸೋಮವಾರದಿಂದ (ಮಾರ್ಚ್ 4) ಕೊಬ್ಬರಿ ಖರೀದಿಗೆ ರೈತರ ಹೆಸರು ನೋಂದಣಿ ಆರಂಭಿಸಲಾಗುತ್ತಿದ್ದು, ಜಿಲ್ಲೆಯ ತೆಂಗು ಬೆಳೆಗಾರರು ಭಾನುವಾರ ಬೆಳಿಗ್ಗೆಯಿಂದಲೇ ಸರದಿ ಆರಂಭಿಸಿದ್ದಾರೆ.

ನಾಫೆಡ್ ಹಾಗೂ ಕರ್ನಾಟಕ ಸಹಕಾರ ಮಾರಾಟ ಮಹಾಮಂಡಳದಿಂದ ಉಂಡೆ ಕೊಬ್ಬರಿ ಖರೀದಿ ಆರಂಭಿಸುತ್ತಿದ್ದು, ಇದಕ್ಕಾಗಿ ಹೆಸರು ನೋಂದಾಯಿಸಲಾಗುತ್ತಿದೆ. ಈ ಹಿಂದಿನ ನೋಂದಣಿಯನ್ನು ರದ್ದುಪಡಿಸಿರುವ ಸರ್ಕಾರ ಹೊಸದಾಗಿ ನೋಂದಣಿಗೆ ಆದೇಶಿಸಿದೆ.

ಹಿಂದೆ ನಡೆದ ನೋಂದಣಿಯಲ್ಲಿ ಬಹುತೇಕ ರೈತರಿಗೆ ಅವಕಾಶ ಸಿಕ್ಕಿರಲಿಲ್ಲ. ಹೀಗಾಗಿ ಈ ಬಾರಿ ಮತ್ತೆ ಅವಕಾಶ ತಪ್ಪಬಾರದು ಎಂಬ ಉದ್ದೇಶದಿಂದ ರೈತರು ಭಾನುವಾರದಿಂದಲೇ ಕೇಂದ್ರಗಳ ಎದುರು ಠಿಕಾಣಿ ಹೂಡಿದ್ದಾರೆ.

ಜಿಲ್ಲೆಯ ಚನ್ನರಾಯಪಟ್ಟಣ, ಹಿರೀಸಾವೆ, ಅರಸೀಕೆರೆ, ಜಾವಗಲ್ ಸೇರಿದಂತೆ 11 ಕೇಂದ್ರಗಳಲ್ಲಿ ನೋಂದಣಿ ಆರಂಭಿಸಲಾಗುತ್ತಿದೆ. ಈ ಮಾಹಿತಿ ದೊರೆಯುತ್ತಿದ್ದಂತೆಯೇ ರೈತರು ಕೇಂದ್ರಗಳಿಗೆ ಮುಗಿಬಿದ್ದಿದ್ದಾರೆ.

ಚನ್ನರಾಯಪಟ್ಟಣದಲ್ಲಿ ಭಾನುವಾರ ಬೆಳಿಗ್ಗೆ 10 ಗಂಟೆಯಿಂದಲೇ ಸರದಿ ಸಾಲಿನಲ್ಲಿ ನಿಂತಿದ್ದ ರೈತರು, ಗಂಟೆಗಳ ಕಾಲ ಕಾದು ಸುಸ್ತಾದರು. ನಂತರ ತಾವು ನಿಂತಿದ್ದ ಸ್ಥಳಕ್ಕೆ ಕಲ್ಲುಗಳನ್ನಿರಿಸಿ, ಕಲ್ಲುಗಳ ಸಾಲು ನಿರ್ಮಿಸಿದರು. ಆಯಾ ಕಲ್ಲಿನ ಮೇಲೆ ನಂಬರ್ ಬರೆದು, ಆಯಾ ಸಂಖ್ಯೆಯ ಟೋಕನ್ ಅನ್ನು ರೈತರಿಗೆ ನೀಡಲಾಗಿದೆ. ಹೆಚ್ಚಿನ ರೈತರು ಸೇರಿದ್ದರಿಂದ ಸ್ಥಳದಲ್ಲಿ ಪೊಲೀಸರನ್ನು ನಿಯೋಜಿಸಲಾಗಿದೆ.

ಕೊಬ್ಬರಿ ಖರೀದಿ ನೋಂದಣಿಗಾಗಿ ಹಾಸನ ಜಿಲ್ಲೆಯ ಚನ್ನರಾಯಪಟ್ಟಣದ ಎಪಿಎಂಸಿ ಆವರಣದಲ್ಲಿ ಭಾನುವಾರ ರೈತರು ಕಲ್ಲುಗಳನ್ನು ಇಟ್ಟು ಸರದಿ ಆರಂಭಿಸಿದರು

'ಸೋಮವಾರ ಬೆಳಿಗ್ಗೆ ನೋಂದಣಿ ಪ್ರಾರಂಭವಾಗಲಿದೆ. ಹಾಗಾಗಿ ಸರದಿ ಸಾಲಿನಲ್ಲಿ ಕಲ್ಲನ್ನು ಇಡಲಾಗಿದೆ. ಇಡೀ ರಾತ್ರಿ ಇಲ್ಲಿ ಇರುತ್ತೇವೆ. ಕಳೆದ ಸಲ ನೋಂದಣಿ ಮಾಡಿಸಲಾಗಿತ್ತು. ಅದನ್ನು ರದ್ದುಪಡಿಸಲಾಗಿದೆ. ನಮ್ಮ ಬೇಸರವನ್ನು ಯಾರ ಬಳಿ ತೋಡಿಕೊಳ್ಳುವುದು. ವ್ಯವಸ್ಥೆ ಜೊತೆಗೆ ಹೊಂದಿಕೊಳ್ಳಬೇಕು' ಎಂದು ದೇವಿಗೆರೆ ಗ್ರಾಮದ ರೈತ ಅನಂತೇಗೌಡ ತಿಳಿಸಿದರು.

ಸುದ್ದಿ 2 ನಿಮಿಷ

ರಾಜ್ಯದಲ್ಲಿ ಹೆಚ್ಚಿದ ತಾಪಮಾನ

ಬೆಂಗಳೂರು: ರಾಜ್ಯದಲ್ಲಿ ತಾಪಮಾನ ಹೆಚ್ಚಾಗಿದೆ. ಅಲ್ಲದೇ, ರಾಜ್ಯದಾದ್ಯಂತ ಒಣ ಹವೆ ಮುಂದುವರಿದಿದ್ದು, ಮಧ್ಯಾಹ್ನದ ವೇಳೆಯಲ್ಲಿ ಬಿಸಿಗಾಳಿ ಬೀಸುತ್ತಿದೆ.

ಬಾಗಲಕೋಟೆ ಜಿಲ್ಲೆಯಲ್ಲಿ ಭಾನುವಾರ ಗರಿಷ್ಠ ಉಷ್ಣಾಂಶ 38.5 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು. ಈ ಜಿಲ್ಲೆಯಲ್ಲಿ ಬಿಸಿಲಿನ ಝಳ ಹೆಚ್ಚಾಗಿದೆ.

ಮುಂದಿನ ಎರಡು ದಿನಗಳಲ್ಲಿ ಕರಾವಳಿಯ ಕೆಲವು ಕಡೆಗಳಲ್ಲಿ ಮತ್ತು ಉತ್ತರ ಒಳನಾಡಿನ ಒಂದೆರಡು ಕಡೆಗಳಲ್ಲಿ ಗರಿಷ್ಠ ತಾಪಮಾನ ಸಾಮಾನ್ಯಕ್ಕಿಂತ 2–3 ಡಿಗ್ರಿ ಸೆಲ್ಸಿಯಸ್ ಮತ್ತು ದಕ್ಷಿಣ ಒಳನಾಡಿನ ಒಂದೆರಡು ಕಡೆಗಳಲ್ಲಿ ಗರಿಷ್ಠ ತಾಪಮಾನ ಸಾಮಾನ್ಯಕ್ಕಿಂತ 2 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬೆಂಗಳೂರು ನಗರ ಹಾಗೂ ಹೊರವಲಯದಲ್ಲಿ ತಾಪಮಾನ ಏರಿಕೆಯಾಗಿದೆ. ಬೆಂಗಳೂರು ನಗರ ಭಾಗದಲ್ಲಿ ಭಾನುವಾರ ಗರಿಷ್ಠ ತಾಪಮಾನ 33 ಡಿಗ್ರಿ ಸೆಲ್ಸಿಯಸ್, ಅಂತರರಾಷ್ಟ್ರೀಯ ವಿಮಾನ ನಿಲ್ದಾಣ (ಕೆಐಎಎಲ್) 33.9, ಎಚ್‌ಎಎಲ್ ಸುತ್ತಮುತ್ತ 32.2 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು.

ಖಾಸಗಿ ಆಸ್ಪತ್ರೆಗಳಲ್ಲಿ ದರಪಟ್ಟಿ ವರದಿ ಸಲ್ಲಿಸಲು ಸೂಚನೆ

ಬೆಂಗಳೂರು: ಖಾಸಗಿ ವೈದ್ಯಕೀಯ ಸಂಸ್ಥೆಗಳು ಚಿಕಿತ್ಸಾ ದರಪಟ್ಟಿಯನ್ನು ಪ್ರದರ್ಶಿಸಿರುವ ಬಗ್ಗೆ ಅನುಪಾಲನಾ ವರದಿ ಸಲ್ಲಿಸುವಂತೆ ಆರೋಗ್ಯ ಇಲಾಖೆ ಆಯುಕ್ತ ಡಿ. ರಂದೀಪ್ ಅವರು ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಸೂಚಿಸಿದ್ದಾರೆ.

ಕೆ.ಪಿ.ಎಂ.ಇ ಕಾಯ್ದೆಯಡಿ ರಾಜ್ಯದ ಎಲ್ಲ ಖಾಸಗಿ ವೈದ್ಯಕೀಯ ಸಂಸ್ಥೆಗಳು ಕಡ್ಡಾಯವಾಗಿ ಹೊರರೋಗಿ ವಿಭಾಗದ ಸಮಾಲೋಚನಾ ಶುಲ್ಕ, ಶಸ್ತ್ರಚಿಕಿತ್ಸೆ, ಎಕ್ಸ್‌-ರೆ, ಸ್ಕ್ಯಾನಿಂಗ್ ಹಾಗೂ ಇತರ ವೈದ್ಯಕೀಯ ಪರೀಕ್ಷೆಗಳ ಶುಲ್ಕದ ವಿವರವನ್ನು ಪ್ರದರ್ಶಿಸಬೇಕು. ದರ ಫಲಕವು ಮುಖ್ಯ ದ್ವಾರದ ಪ್ರಮುಖ ಸ್ಥಳದಲ್ಲಿ ಸುಲಭವಾಗಿ ಕಾಣುವಂತೆ ಇರಬೇಕು. ಚಿಕಿತ್ಸಾ ದರ ಪಟ್ಟಿಯಲ್ಲಿ ಪ್ರದರ್ಶಿಸಿದ ಪ್ರಕಾರವೇ ರೋಗಿಗಳಿಗೆ ನಿಗದಿತ ಶುಲ್ಕಗಳನ್ನು ವಿಧಿಸುವುದು ಕಡ್ಡಾಯ. ಆದರೂ ಎಲ್ಲ ಖಾಸಗಿ ವೈದ್ಯಕೀಯ ಸಂಸ್ಥೆಗಳು ಚಿಕಿತ್ಸಾ ದರ ಪಟ್ಟಿಯನ್ನು ರೋಗಿಗಳಿಗೆ ಕಾಣುವ ಸ್ಥಳದಲ್ಲಿ ಪ್ರದರ್ಶಿಸಿರದ ಬಗ್ಗೆ, ನಿಗದಿತ ಶುಲ್ಕಕ್ಕಿಂತ ಹೆಚ್ಚುವರಿ ಶುಲ್ಕಗಳನ್ನು ವಿಧಿಸುತ್ತಿರುವ ಬಗ್ಗೆ ದೂರುಗಳನ್ನು ಸ್ವೀಕರಿಸಲಾಗಿದೆ ಎಂದು ತಿಳಿಸಿದ್ದಾರೆ.

ಎಲ್ಲ ಜಿಲ್ಲಾ ಆರೋಗ್ಯಾಧಿಕಾರಿಗಳು ತಮ್ಮ ಕಾರ್ಯವ್ಯಾಪ್ತಿಗೆ ಒಳಪಡುವ ಎಲ್ಲ ಖಾಸಗಿ ವೈದ್ಯಕೀಯ ಸಂಸ್ಥೆಗಳಿಗೆ ಕಡ್ಡಾಯವಾಗಿ ಚಿಕಿತ್ಸಾ ದರಪಟ್ಟಿಗಳನ್ನು ಪ್ರದರ್ಶಿಸುವಂತೆ ಸೂಚಿಸಬೇಕು ಎಂದಿದ್ದಾರೆ.

ಖಾಸಗಿ ವೈದ್ಯಕೀಯ ಸಂಸ್ಥೆಗಳು ಚಿಕಿತ್ಸಾ ದರಪಟ್ಟಿಯನ್ನು ಅವುಗಳ ಆವರಣದಲ್ಲಿ ಪ್ರದರ್ಶಿಸಿರುವ ಬಗ್ಗೆ, ಚಿಕಿತ್ಸಾ ದರಪಟ್ಟಿಯನ್ನು ಪ್ರದರ್ಶಿಸದೇ ಇರುವ ಖಾಸಗಿ ವೈದ್ಯಕೀಯ ಸಂಸ್ಥೆಗಳ ವಿರುದ್ಧ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಪಾಲನಾ ವರದಿಯನ್ನು ಕಳೆದ ಜ.20ಕ್ಕೆ ಸಲ್ಲಿಸಲು ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಸೂಚಿಸಲಾಗಿತ್ತು. ಆದರೆ, ಯಾವುದೇ ಜಿಲ್ಲೆಯಿಂದ ಅನುಪಾಲನಾ ವರದಿ ಕಚೇರಿಗೆ ಸ್ವೀಕೃತವಾಗಿಲ್ಲ. ಮಾರ್ಚ್ 20ರೊಳಗೆ ತಾಲ್ಲೂಕುವಾರು ಸಾಂಖ್ಯಿಕ ಮತ್ತು ವಿವರವಾದ ವರದಿಯನ್ನು ಸಲ್ಲಿಸಬೇಕು ಎಂದು ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಆದೇಶಿಸಿದ್ದಾರೆ.

ಕಡಲೆ ರಾಶಿ ಮಾಡುವ ಯಂತ್ರಕ್ಕೆ ಸಿಲುಕಿ ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ಮಹಾದೇವಿ

ಬೈಲಹೊಂಗಲ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ದೇವಲಾಪುರದಲ್ಲಿ ಕಡಲೆ ರಾಶಿ ಮಾಡುವಾಗ ಯಂತ್ರಕ್ಕೆ ಸಿಲುಕಿ ಮಹಿಳೆಯೊಬ್ಬರು ಭಾನುವಾರ ಮೃತಪಟ್ಟಿದ್ದಾರೆ.

ಮಹಾದೇವಿ ಮಲ್ಲಪ್ಪ ಗಣಾಚಾರಿ(45) ಮೃತರು. ಅವರಿಗೆ ಪತಿ, ಇಬ್ಬರು ಪುತ್ರರು, ಪುತ್ರಿ ಇದ್ದಾರೆ.

ತಮ್ಮ ಕೃಷಿಭೂಮಿಯಲ್ಲಿ ಕಡಲೆ ರಾಶಿ ಮಾಡುವಾಗ ಯಂತ್ರದೊಳಗೆ ಮಹಿಳೆ ಸಿಲುಕಿ ಒದ್ದಾಡಿದ್ದಾರೆ. ಕುಟುಂಬಸ್ಥರು ತಕ್ಷಣವೇ ಯಂತ್ರ ಬಂದ್ ಮಾಡಿ, ಮಹಿಳೆಯನ್ನು ಹೊರತೆಗೆದಿದ್ದಾರೆ. ಆದರೆ, ತೀವ್ರ ರಕ್ತಸ್ರಾವದಿಂದ ಗಾಯಗೊಂಡಿದ್ದ ಮಹಿಳೆಯನ್ನು ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಸಾವನ್ನಪ್ಪಿದ್ದಾರೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ. ಬೈಲಹೊಂಗಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸರ್ಕಾರದ ನಡವಳಿಕೆ ಆತಂಕಕಾರಿ: ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸೌಧದ ಆವರಣದಲ್ಲಿ ಪಾಕಿಸ್ತಾನ ಪರ ಘೋಷಣೆ ಕೂಗಿದ ಘಟನೆ ಮತ್ತು ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣಗಳಲ್ಲಿ ಸರ್ಕಾರ ನಡೆದುಕೊಳ್ಳುತ್ತಿರುವ ರೀತಿ ಕಳವಳಕಾರಿಯಾಗಿದ್ದು, ದೇಶ ವಿದ್ರೋಹಿ ಶಕ್ತಿಗಳನ್ನೇ ಸಮರ್ಥ ಮಾಡುವ ಮತ್ತು ದುಷ್ಕೃತ್ಯಗಳನ್ನು ಮುಚ್ಚಿ ಹಾಕುವ ಷಡ್ಯಂತ್ರ ನಡೆಸಲಾಗಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಆರೋಪಿಸಿದರು.

ಲೋಕಸಭಾ ಚುನಾವಣೆಗಾಗಿ ಪಕ್ಷದ ಪ್ರಣಾಳಿಕೆ ಸಿದ್ಧಪಡಿಸುವುದಕ್ಕೆ ಪೂರ್ವಭಾವಿಯಾಗಿ ಜನತೆಯಿಂದ ಅಭಿಪ್ರಾಯ ಸಂಗ್ರಹಿಸುವ ಸಂಕಲ್ಪ ಅಭಿಯಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

ಸಮಾಜಘಾತುಕ ಶಕ್ತಿಗಳು ಮತ್ತು ಉಗ್ರಗಾಮಿ ಸಂಘಟನೆಗಳು ನಡೆಸುತ್ತಿರುವ ದುಷ್ಕೃತ್ಯಗಳ ಬಗ್ಗೆ ರಾಜ್ಯದ ಕಾಂಗ್ರೆಸ್ ಸರ್ಕಾರ ಸಹಾನುಭೂತಿ ಮನೋಭಾವ ಪ್ರದರ್ಶಿಸುತ್ತಿರುವುದು ಆಘಾತಕಾರಿ ಬೆಳವಣಿಗೆ ಎಂದರು.

'ವಿಧಾನಸೌಧದಲ್ಲಿ ಪಾಕಿಸ್ತಾನ್ ಜಿಂದಾಬಾದ್ ಕೂಗಿರುವ ಆರೋಪಕ್ಕೆ ಸಂಬಂಧಿಸಿದಂತೆ ಎಫ್‌ಎಸ್‌ಎಲ್ ವರದಿ ಬಂದಿದ್ದು, ಪಾಕ್ ಪರ ಘೋಷಣೆ ಕೂಗಿರುವುದು ಸತ್ಯ ಎಂಬ ಅಂಶವೂ ಅದರಲ್ಲಿ ಇದೆ. ಇದನ್ನು ಕೆಲವು ಅಧಿಕಾರಿಗಳು ನನಗೂ ಹೇಳಿದ್ದಾರೆ. ಆದರೆ ಸರ್ಕಾರ ಮಾತ್ರ ವರದಿ ಕೈಸೇರಿಲ್ಲ ಎಂದು ಸತ್ಯ ಮರೆ ಮಾಚುವ ಕೆಲಸದಲ್ಲಿ ನಿರತವಾಗಿದೆ. ಎಫ್‌ಎಸ್‌ಎಲ್ ವರದಿ ಬಿಡುಗಡೆಗೆ ಅಡ್ಡಿ ಮಾಡುತ್ತಿರುವ ಶಕ್ತಿ ಯಾವುದು' ಎಂದು ಅಶೋಕ ಪ್ರಶ್ನಿಸಿದರು.

'ಈ ಘಟನೆಯ ಪ್ರತಿ ಹಂತದಲ್ಲೂ ಸರ್ಕಾರದ ನಡೆ ಅನುಮಾನಾಸ್ಪದವಾಗಿದೆ. ಎಫ್‌ಐಆರ್‌ನಲ್ಲೂ ಐಪಿಸಿ 505 ಮತ್ತು 153 ನೇ ಸೆಕ್ಷನ್ ಹಾಕಲಾಗಿದೆ. ವಾಸ್ತವವಾಗಿ ಐಪಿಸಿ ಕಲಂ 124 ಎ ಅನ್ವಯ ದೇಶದ್ರೋಹದಡಿ ಪ್ರಕರಣ ದಾಖಲಿಸಬೇಕಿತ್ತು. ಆ ಕೆಲಸ ಮಾಡದೇ ತಪ್ಪಿತಸ್ಥರು ಸುಲಭವಾಗಿ ಪಾರಾಗುವ ಮಾರ್ಗವನ್ನು ಸರ್ಕಾರವೇ ತೋರಿಸಿಕೊಟ್ಟಿದೆ' ಎಂದು ಕಿಡಿ ಕಾರಿದರು.

ಇವೆರಡೂ ಘಟನೆಗಳಿಗೆ ಸಂಬಂಧಿಸಿದಂತೆ ಒಬ್ಬೊಬ್ಬ ಸಚಿವ ಒಂದೊಂದು ರೀತಿಯ ಹೇಳಿಕೆ ನೀಡುವ ಮೂಲಕ ಅನುಮಾನಾಸ್ಪದವಾಗಿ ನಡೆದುಕೊಳ್ಳುತ್ತಿದ್ದಾರೆ. ಇನ್ನೆಷ್ಟು ದಿನ ಈ ರೀತಿ ಮುಚ್ಚಿಟ್ಟು ನಾಟಕ ಆಡುತ್ತಾರೆ ಎಂದೂ ಅಶೋಕ ಅವರು ಪ್ರಶ್ನಿಸಿದರು.

ಕ್ರಿಕೆಟಿಗ ವೆಂಕಟೇಶ್ ಪ್ರಸಾದ್ ಅವರು 'ವಿಕಸಿತ ಭಾರತ' ಪತ್ರ (ಪ್ರಣಾಳಿಕೆ) ಜನಾಭಿಪ್ರಾಯ ಸಂಗ್ರಹ ಅಭಿಯಾನದಲ್ಲಿ ತಮ್ಮ ಅಭಿಪ್ರಾಯವನ್ನು ಸಲ್ಲಿಸಿದರು

'3 ಲಕ್ಷ ಜನರ ಅಭಿಪ್ರಾಯ ಸಂಗ್ರಹ ಗುರಿ'

ಬಿಜೆಪಿ ಸಂಕಲ್ಪ ಪತ್ರಕ್ಕಾಗಿ ರಾಜ್ಯದಲ್ಲಿ ಕನಿಷ್ಠ 3 ಲಕ್ಷ ಜನರ ಅಭಿಪ್ರಾಯ ಸಂಗ್ರಹದ ಗುರಿ ಇದೆ. ದೇಶದಲ್ಲಿ 1 ಕೋಟಿ ಜನರ ಅಭಿಪ್ರಾಯ ಸಂಗ್ರಹಿಸುವ ಗುರಿ ಇದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದರು.

ಬಿಜೆಪಿ ಕಚೇರಿಯಲ್ಲಿ ಭಾನುವಾರ ಸಂಕಲ್ಪ ಪತ್ರ ಜನಾಭಿಪ್ರಾಯ ಸಂಗ್ರಹಣಾ ಅಭಿಯಾನದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲಿ ಸಲಹಾ ಪೆಟ್ಟಿಗೆಗಳನ್ನು ಇಡಲಾಗುತ್ತದೆ. ಮಿಸ್ಡ್ ಕಾಲ್ ನೀಡುವುದರ ಮೂಲಕ ಪಾಲ್ಗೊಳ್ಳಬಹುದು. ಕರೆ ಮಾಡಲು ಸಂಖ್ಯೆ 909090–2124 ನೀಡಲಾಗಿದೆ ಎಂದರು.

ಮುಂದಿನ ಲೋಕಸಭಾ ಚುನಾವಣೆಯ ಕ್ಷಣಗಣನೆ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರ ಚಿಂತನೆಯಂತೆ ಪ್ರಣಾಳಿಕೆ ಬದಲು ಜನಾಭಿಪ್ರಾಯ ಪಡೆದು ಸಂಕಲ್ಪ ಪತ್ರದ ಮೂಲಕ ಚುನಾವಣೆ ಎದುರಿಸಲಾಗುತ್ತಿದೆ ಎಂದು ಅವರು ಹೇಳಿದರು.

ಬಿಜೆಪಿ 2014 ರ 2019 ರ ಚುನಾವಣೆ ಸಂದರ್ಭದಲ್ಲಿ ನೀಡಿದ ಬಹುತೇಕ ಎಲ್ಲ ಭರವಸೆಗಳನ್ನು ಈಡೇರಿಸಿದೆ. 10 ವರ್ಷದ ಮೋದಿ ಅವರ ಆಡಳಿತಾವಧಿಯಲ್ಲಿ ಭರವಸೆ ಈಡೇರಿಸಿದ್ದಲ್ಲದೆ, ಯೋಜನೆಗಳ ಶಂಕುಸ್ಥಾಪನೆ, ಜೊತೆಗೆ ಉದ್ಘಾಟನಾ ದಿನಾಂಕ ನಿಗದಿ ಪಡಿಸಿ ಸಕಾಲದಲ್ಲಿ ಪೂರ್ಣಗೊಳಿಸಿದ್ದಾರೆ ಎಂದು ಹೇಳಿದರು.

ಕರ್ನಾಟಕದಲ್ಲಿ ಅಭಿಯಾನ ಮಾರ್ಚ್ 3 ರಿಂದ 15 ರ ತನಕ ನಡೆಯಲಿದೆ. ವಿಕಸಿತ ಭಾರತ– ಇದು ಮೋದಿ ಗ್ಯಾರಂಟಿ ಈ ವಿಷಯದ ಕುರಿತು ರಾಜ್ಯದಾದ್ಯಂತ ವಿಡಿಯೋ ವ್ಯಾನ್ ಹಾಗೂ ಸಲಹೆ ಪೆಟ್ಟಿಗೆಗಳ ಮೂಲಕ ಮುಂದಿನ 5 ವರ್ಷಗಳ ಗುರಿಯ ಕುರಿತು ರಾಜ್ಯದ ಜನರ ಆಶೀರ್ವಾದ ಪಡೆದು ಸಲಹೆಗಳನ್ನು ತೆಗೆದುಕೊಳ್ಳಲು ನಿರ್ಧರಿಸಲಾಗಿದೆ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮತ್ತು ಲೋಕಸಭಾ ಚುನಾವಣಾ ರಾಜ್ಯ ಉಸ್ತುವಾರಿ ರಾಧಾಮೋಹನ್‌ದಾಸ್ ಅಗರವಾಲ್, ರಾಜ್ಯ ಉಪಾಧ್ಯಕ್ಷ ರಾಜೇಂದ್ರ, ಕ್ರಿಕೆಟಿಗ ವೆಂಕಟೇಶ ಪ್ರಸಾದ್, ರಾಜ್ಯ ಸಂಘಟನಾ ಪ್ರಧಾನ ಕಾರ್ಯದರ್ಶಿ ರಾಜೇಶ್ ಜಿ.ವಿ ಹಾಜರಿದ್ದರು.

ಮಂಗನ ಕಾಯಿಲೆ: ವ್ಯಕ್ತಿ ಸಾವು

ಶಿರಸಿ: ತಾಲ್ಲೂಕಿನ ಹತ್ತರಗಿ ಸಮೀಪದ ನವಿಲಗಾರದ 68 ವರ್ಷದ ವ್ಯಕ್ತಿ ಕೆ.ಎಫ್.ಡಿ (ಮಂಗನ ಕಾಯಿಲೆ)ಯಿಂದ ಮಣಿಪಾಲ ಆಸ್ಪತ್ರೆಯಲ್ಲಿ ಭಾನುವಾರ ಮೃತಪಟ್ಟಿದ್ದಾರೆ.

ಕೆಲ ದಿನಗಳ ಹಿಂದೆ ರೋಗ ಬಾಧಿತ ವ್ಯಕ್ತಿ ಶಿರಸಿಯ ಖಾಸಗಿ ಆಸ್ಪತ್ರೆಗೆ ವಾಂತಿ ಹಾಗೂ ಭೇದಿ ನಿಮಿತ್ತ ದಾಖಲಾಗಿದ್ದರು. ನಂತರ ಆಸ್ಪತ್ರೆಯಲ್ಲಿ ಇದ್ದಾಗಲೇ ಅವರ ರಕ್ತದೊತ್ತಡದಲ್ಲಿ ಏರುಪೇರಾಗಿದ್ದು ಪ್ರಜ್ಞಾಹೀನ ಸ್ಥಿತಿಗೆ ತಲುಪಿದ್ದರಿಂದ ಹೆಚ್ಚಿನ ಚಿಕಿತ್ಸೆಗಾಗಿ ಮಣಿಪಾಲ ಆಸ್ಪತ್ರೆಗೆ ಕಳುಹಿಸಲಾಗಿತ್ತು. ಅಲ್ಲಿ ರೋಗಿಯು ಕೆ.ಎಫ್.ಡಿ.ಯಿಂದ ಬಳಲುತ್ತಿರುವುದು ದೃಢಪಟ್ಟಿತ್ತು. 'ರೋಗಿಗೆ ಡಯಾಲಿಸಿಸ್ ಹಾಗೂ ವೆಂಟಿಲೇಟರ್ ಮೂಲಕ ಚಿಕಿತ್ಸೆ ನೀಡಲಾಗುತ್ತಿದ್ದರೂ ಚಿಕಿತ್ಸೆ ಫಲಿಸದೆ ರೋಗಿ ಮೃತಪಟ್ಟಿದ್ದಾರೆ' ಎಂದು ತಾಲ್ಲೂಕು ಆರೋಗ್ಯಾಧಿಕಾರಿ ವಿನಾಯಕ ಭಟ್ ತಿಳಿಸಿದ್ದಾರೆ.

ಚರ್ಚ್‌ಗೆ ಬೆಂಕಿ: ಸಿ.ಎಂಗೆ ವಿಡಿಯೊ ಟ್ಯಾಗ್

ಪ್ರಜಾವಾಣಿ ವಾರ್ತೆ

ರಾಮನಗರ: ನಗರದ ಅರ್ಕಾವತಿ ಬಡಾವಣೆಯ ಪೊಲೀಸ್ ವಸತಿ ಸಂಕೀರ್ಣ ಸಮೀಪದಲ್ಲಿರುವ ಗ್ರೇಸ್ ಕಮ್ಯುನಿಟಿ ಚರ್ಚ್ ಒಳಭಾಗಕ್ಕೆ ಕಿಡಿಗೇಡಿಯೊಬ್ಬ ಬೆಂಕಿ ಹಂಚಿದ್ದಾನೆ. ಈ ಕುರಿತು ರಾಮನಗರ ಪುರ ಪೊಲೀಸ್ ಠಾಣೆಯಲ್ಲಿ ಫೆ. 18ರಂದು ಪ್ರಕರಣ ದಾಖಲಾಗಿದೆ.

15 ದಿನದ ಹಿಂದೆ ನಡೆದಿರುವ ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಇಂದಿಗೂ ಆರೋಪಿಯನ್ನು ಬಂಧಿಸಿಲ್ಲ. ಕ್ರೈಸ್ತ ಸಮುದಾಯದವರು ಬೆಂಕಿಯಿಂದ ಹಾನಿಗೊಂಡಿರುವ ಚರ್ಚ್ ಮತ್ತು ಕ್ರೈಸ್ತರು ರೋದಿಸುತ್ತಿರುವ ವಿಡಿಯೊವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ 'ಎಕ್ಸ್‌'ನಲ್ಲಿ ಟ್ಯಾಗ್ ಮಾಡಿದ್ದಾರೆ.

ಬೆಂಕಿಯಿಂದ ಹಾನಿಗೀಡಾದ ಚರ್ಚ್ ವಿಡಿಯೊವನ್ನು ಕ್ರೈಸ್ತರು ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಗೆ 'ಎಕ್ಸ್'ನಲ್ಲಿ ಟ್ಯಾಗ್ ಮಾಡಿರುವುದು

'ಕ್ರಿಶ್ಚಿಯನ್ಸ್ ವಾಯ್ಸ್' ಎಂಬ ಖಾತೆಯಿಂದ ವಿಡಿಯೊ ಟ್ಯಾಗ್ ಮಾಡಲಾಗಿದ್ದು, ಕ್ರೈಸ್ತರಿಗೆ ರಕ್ಷಣೆ ಒದಗಿಸಬೇಕು ಮತ್ತು ಪ್ರಾರ್ಥನಾ ಮಂದಿರವನ್ನು ಮರು ನಿರ್ಮಿಸಬೇಕು ಎಂದು ಒತ್ತಾಯಿಸಿದ್ದಾರೆ.

ಚರ್ಚ್‌ನಲ್ಲಿ ಪ್ರತಿ ಭಾನುವಾರ ಬೆಳಗ್ಗೆ ಕ್ರೈಸ್ತರು ಪ್ರಾರ್ಥನೆ ಸಲ್ಲಿಸುತ್ತಿದ್ದರು. ಫೆ. 18ರಂದು ಪ್ರಾರ್ಥನೆ ಸಲುವಾಗಿ ಚರ್ಚ್‌ಗೆ ಬಂದಿದ್ದ ಫಾಸ್ಟರ್ ಮೋಹನ್ ಅವರು ಬಾಗಿಲು ತೆರೆದಾಗ ಒಳಗಡೆ ಹೊಗೆ ತುಂಬಿಕೊಂಡಿತ್ತು. ಪೀಠೋಪಕರಣ, ಸೌಂಡ್ ಸಿಸ್ಟಂ, ಸಿಸಿಟಿವಿ ಕ್ಯಾಮೆರಾ ಸೇರಿದಂತೆ ಹಲವು ವಸ್ತುಗಳು ಸುಟ್ಟು ಕರಕಲಾಗಿದ್ದವು. ತಡರಾತ್ರಿ ವ್ಯಕ್ತಿಯೊಬ್ಬ ಚರ್ಚ್ ಕಿಟಕಿಯಿಂದ ಒಳಗೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಪರಾರಿಯಾಗಿದ್ದಾರೆ. ಅಕ್ಕಪಕ್ಕದ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿ ಪರಿಶೀಲಿಸಿದಾಗ ಇದು ಗೊತ್ತಾಗಿದೆ ಎಂದು ಪೊಲೀಸರು ಹೇಳಿದರು.

> ಬೆಂಕಿ ಹಚ್ಚಿದ ಕಿಡಿಗೇಡಿ ಘಟನೆ ಬಳಿಕ ತಲೆ ಮರೆಸಿಕೊಂಡಿದ್ದಾನೆ. ಆತನ ಪತ್ತೆಗಾಗಿ ವಿಶೇಷ ತಂಡ ರಚಿಸಲಾಗಿದ್ದು, ಶೀಘ್ರವೇ ಬಂಧಿಸಲಾಗುವುದು
> **ಕಾರ್ತಿಕ್ ರೆಡ್ಡಿ,** ಎಸ್‌ಪಿ, ರಾಮನಗರ

ಮೂಡುಬಿದಿರೆಯ ಆಳ್ವಾಸ್ ಕನ್ನಡ ಮಾಧ್ಯಮ ಶಾಲೆಯ ಉಚಿತ ಪ್ರವೇಶಕ್ಕೆ ಭಾನುವಾರ ಪರೀಕ್ಷೆ ಬರೆಯಲು ರಾಜ್ಯದ ವಿವಿಧೆಡೆಯಿಂದ ಬಂದಿದ್ದ ವಿದ್ಯಾರ್ಥಿಗಳು

ಆಳ್ವಾಸ್ ಕನ್ನಡ ಮಾಧ್ಯಮ ಶಾಲೆ: ಪರೀಕ್ಷೆ ಬರೆದ 19 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು

ಪ್ರಜಾವಾಣಿ ವಾರ್ತೆ

ಮೂಡುಬಿದಿರೆ: ಆಳ್ವಾಸ್ ಕನ್ನಡ ಮಾಧ್ಯಮ ಶಾಲೆಯ 2024–25ನೇ ಸಾಲಿನ ಪ್ರವೇಶ ಪರೀಕ್ಷೆ ಭಾನುವಾರ ನಡೆಯಿತು. ರಾಜ್ಯದ ವಿವಿಧೆಡೆಯಿಂದ ಬಂದಿದ್ದ 19 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷೆ ಬರೆದರು.

ಈ ವರ್ಷ ಮೊದಲ ಬಾರಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿತ್ತು. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ್ದವರಲ್ಲಿ 19,374 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾದರು. 150 ವಿದ್ಯಾರ್ಥಿಗಳು ಶೃಂಗೇರಿಯಲ್ಲಿ ಪರೀಕ್ಷೆ ಬರೆದರು.

ಶನಿವಾರ ಸಂಜೆಯೇ ವಿದ್ಯಾರ್ಥಿಗಳು ತಮ್ಮ ಪೋಷಕರೊಂದಿಗೆ ಮೂಡುಬಿದಿರೆ ವಿದ್ಯಾಗಿರಿಗೆ ಬಂದಿದ್ದರು. ಕೆಲವರು ಭಾನುವಾರ ಬೆಳಿಗ್ಗೆ ಪರೀಕ್ಷಾ ಕೇಂದ್ರಕ್ಕೆ ಬಂದರು. ಬೆಳಿಗ್ಗೆ 10ರಿಂದ 12.30ರವರೆಗೆ ವಿದ್ಯಾಗಿರಿ ಮತ್ತು ಪುತ್ತಿಗೆಯ 7 ಕಡೆ ಏಕಕಾಲದಲ್ಲಿ ಪರೀಕ್ಷೆ ನಡೆಯಿತು.

ಬೆಳಗಾವಿಯಿಂದ 6,426, ಬಾಗಲಕೋಟೆಯಿಂದ 3,132, ವಿಜಯಪುರದಿಂದ 2,096, ಗದಗದಿಂದ 1,286 ಮತ್ತು ಹಾವೇರಿಯಿಂದ 1,085 ವಿದ್ಯಾರ್ಥಿಗಳು ಪರೀಕ್ಷೆ ಬರೆದರು. ವಿದ್ಯಾರ್ಥಿಗಳಿಗೆ ಪರೀಕ್ಷಾ ಕೇಂದ್ರಕ್ಕೆ ತೆರಳಲು ಪೂರಕ ವ್ಯವಸ್ಥೆ, ಪೋಷಕರು ಉಳಿದುಕೊಳ್ಳಲು ಹಾಗೂ ಅವರ ವಾಹನಗಳ ನಿಲುಗಡೆಗೆ ಆಳ್ವಾಸ್ ಕ್ಯಾಂಪಸ್‌ನೊಳಗೆ ವ್ಯವಸ್ಥೆ ಮಾಡಿದ್ದರಿಂದ ಅಚ್ಚುಕಟ್ಟಾಗಿ ಪರೀಕ್ಷೆ ನಡೆಯಿತು.

ಆಯ್ಕೆಯಾದ 150 ವಿದ್ಯಾರ್ಥಿಗಳಿಗೆ 6ರಿಂದ 9ನೇ ತರಗತಿವರೆಗೆ ವಸತಿ ಮತ್ತು ಊಟದ ಸೌಲಭ್ಯದೊಂದಿಗೆ ಉಚಿತ ಶಿಕ್ಷಣದ ನೀಡಲಾಗುತ್ತದೆ. ಕಳೆದ ವರ್ಷ 19,934 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು.

'ಸರ್ಕಾರದ ವಸತಿ ಶಾಲೆಗಳ ಜತೆ ಆಳ್ವಾಸ್ ಕನ್ನಡ ಮಾಧ್ಯಮ ಶಾಲೆಯನ್ನು ಸೇರ್ಪಡೆ ಮಾಡಿದರೆ ಕನ್ನಡ ಮಾಧ್ಯಮ ಶಾಲೆಯನ್ನು ಉತ್ತಮ ರೀತಿಯಲ್ಲಿ ಮುನ್ನಡೆಸಿಕೊಂಡು ರಾಜ್ಯಕ್ಕೆ ಮಾದರಿ ಶಾಲೆಯಾಗಿ ರೂಪಿಸಲು ಬದ್ಧ' ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಎಂ. ಮೋಹನ ಅಳ್ವ ಹೇಳಿದ್ದಾರೆ.

ಕರ್ನಾಟಕಕ್ಕೆ ಅಗ್ರಸ್ಥಾನ • ಪರಿಸರಸ್ನೇಹಿ ವಿದ್ಯುತ್ ಚಾಲಿತ ವಾಹನಗಳ ಸಂಖ್ಯೆ ಹೆಚ್ಚಳ

ರಾಜ್ಯದಲ್ಲಿ ಇನ್ನೂ 1,190 'ಸಿ.ಎಸ್' ಸ್ಥಾಪನೆ

● ಆದಿತ್ಯ ಕೆ.ಎ.

ಬೆಂಗಳೂರು: ವಿದ್ಯುತ್ ಚಾಲಿತ ವಾಹನಗಳಿಗೆ ರಾಜ್ಯದಲ್ಲಿ ಬೇಡಿಕೆ ಹೆಚ್ಚುತ್ತಿರುವ ಬೆನ್ನಲ್ಲೇ 31 ಜಿಲ್ಲೆಗಳಲ್ಲಿ ಸಾರ್ವಜನಿಕ ಹಾಗೂ ಖಾಸಗಿ ಸಹಭಾಗಿತ್ವದಲ್ಲಿ(ಪಿಪಿಪಿ ಮಾದರಿ) ಹೊಸದಾಗಿ 1,190 ಚಾರ್ಜಿಂಗ್ ಸ್ಟೇಷನ್ (ಸಿ.ಎಸ್) ಸ್ಥಾಪಿಸಲು ಎಸ್ಕಾಂಗಳು ಮುಂದಾಗಿವೆ.

ಹೊಸ ಇವಿ ಚಾರ್ಜಿಂಗ್ ಸ್ಟೇಷನ್‌ಗಳ ಸ್ಥಾಪನೆಯಿಂದ ರಾಜ್ಯದಲ್ಲಿ ಪರಿಸರ ಸ್ನೇಹಿ ವಾಹನಗಳ ಸಂಖ್ಯೆಯೂ ಹೆಚ್ಚಲಿದೆ. ರಾಜ್ಯದಲ್ಲಿ ನಾಲ್ಕು ವರ್ಷಗಳ ಹಿಂದೆ ಕೇವಲ 9 ಸಾವಿರ ವಿದ್ಯುತ್ ಚಾಲಿತ ವಾಹನಗಳಿದ್ದವು. ಈಗ ಇವಿ ಸಂಖ್ಯೆ 3.31 ಲಕ್ಷಕ್ಕೆ ತಲುಪಿದೆ.

ಇಂಧನ ದಕ್ಷತೆ ಮಂಡಳಿ (ಬಿಇಇ) ಅಂಕಿಅಂಶಗಳ ಪ್ರಕಾರ, ರಾಜ್ಯದಲ್ಲಿ ಎಸ್ಕಾಂಗಳು, ಖಾಸಗಿ ಹಾಗೂ ಸರ್ಕಾರೇತರ ಸಂಸ್ಥೆಗಳ ಅಡಿಯಲ್ಲಿ ಸದ್ಯ 5,059 ಇವಿ ಚಾರ್ಜಿಂಗ್ ಸ್ಟೇಷನ್ ಕಾರ್ಯಾಚರಿಸುತ್ತಿದ್ದು, ಇ.ವಿ ಚಾರ್ಜಿಂಗ್ ಸ್ಟೇಷನ್‌ಗಳ ಸ್ಥಾಪನೆಯಲ್ಲಿ ದೇಶಕ್ಕೆ ರಾಜ್ಯವೇ ಅಗ್ರಸ್ಥಾನದಲ್ಲಿದೆ. ನಂತರದ ಸ್ಥಾನದಲ್ಲಿ ಮಹಾರಾಷ್ಟ್ರ, ದೆಹಲಿ, ಕೇರಳ, ತಮಿಳುನಾಡು, ಉತ್ತರಪ್ರದೇಶ ಹಾಗೂ ರಾಜಸ್ಥಾನಗಳಿವೆ.

ಬೆಸ್ಕಾಂ ಸ್ಥಾಪಿಸಿರುವ ಚಾರ್ಜಿಂಗ್ ಸ್ಟೇಷನ್

ಐದು ವರ್ಷಗಳ ಹಿಂದೆ ಬೆಸ್ಕಾಂ ಇ.ವಿ ಚಾರ್ಜಿಂಗ್ ಸ್ಟೇಷನ್‌ಗಳ ಸ್ಥಾಪನೆಗೆ ಮುಂದಾಗಿದ್ದ ವೇಳೆ ನಿರೀಕ್ಷಿತ ಸ್ಪಂದನೆ ದೊರೆತಿರಲಿಲ್ಲ. ಈಗ ಸಿ.ಎಸ್‌ಗೆ ಬೇಡಿಕೆ ಹೆಚ್ಚುತ್ತಿದೆ.

'ಬೆಸ್ಕಾಂ ವ್ಯಾಪ್ತಿಯ ಜಿಲ್ಲೆಗಳಲ್ಲಿ ಸದ್ಯ 195 ಸ್ಟೇಷನ್‌ಗಳಿದ್ದು, 320 ಚಾರ್ಜಿಂಗ್ ಪಾಯಿಂಟ್‌ಗಳಿವೆ. ರಾಜ್ಯದ ವಿವಿಧ ಎಸ್ಕಾಂಗಳಲ್ಲಿ ಒಟ್ಟು 265 ಸಿಎಸ್‌ಗಳಿದ್ದು, 394 ಚಾರ್ಜಿಂಗ್ ಪಾಯಿಂಟ್‌ಗಳಿವೆ' ಎಂದು ಅಧಿಕಾರಿಯೊಬ್ಬರು ಹೇಳಿದರು.

ಹೆದ್ದಾರಿ ಪಕ್ಕದಲ್ಲಿ 140 ಸ್ಟೇಷನ್: ರಸ್ತೆಗೆ ಇಳಿಯುತ್ತಿರುವ ವಿದ್ಯುತ್ ಚಾಲಿತ ವಾಹನಗಳ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಿದ್ದು, ಬೆಸ್ಕಾಂ ಚಾರ್ಜಿಂಗ್ ಸ್ಟೇಷನ್‌ಗಳ ಸಂಖ್ಯೆಯನ್ನೂ ಹೆಚ್ಚಿಸುತ್ತಿದೆ. ಹೆದ್ದಾರಿಗಳ ಪಕ್ಕದಲ್ಲಿ ಸಿ.ಎಸ್ ಸ್ಥಾಪಿಸುವಂತೆ ವಾಹನಗಳ ಚಾಲಕರಿಂದ ಬೇಡಿಕೆ ಬಂದಿತ್ತು. ಬೆಸ್ಕಾಂನ ಎಂಟು ಜಿಲ್ಲೆಗಳ ವ್ಯಾಪ್ತಿಯಲ್ಲಿ ಹಾದುಹೋಗಿರುವ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿಯ ಪಕ್ಕದಲ್ಲಿ 140 ಚಾರ್ಜಿಂಗ್ ಸ್ಟೇಷನ್ ಸ್ಥಾಪನೆ ಕೆಲಸಗಳು ನಡೆಯುತ್ತಿವೆ. ಉಳಿದ ಕೇಂದ್ರಗಳ ಕೆಲಸವನ್ನು ಸದ್ಯದಲ್ಲೇ ಆರಂಭಿಸಲಾಗುವುದು' ಎಂದು ಬೆಸ್ಕಾಂನ ಇವಿ ವಿಭಾಗದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಇ.ವಿ ಮಾಲೀಕರ ಅಗತ್ಯಕ್ಕೆ ತಕ್ಕಂತೆ ಎಸ್ಕಾಂನಿಂದ ಚಾರ್ಜಿಂಗ್ ಸ್ಟೇಷನ್ ಸ್ಥಾಪಿಸಲಾಗುತ್ತಿದೆ. ಪಿಪಿಪಿ ಮಾದರಿಯಲ್ಲಿ 1,190 ಸ್ಟೇಷನ್‌ಗಳ ಪೈಕಿ 530 ಚಾರ್ಜಿಂಗ್ ಸ್ಟೇಷನ್ ಕಾಮಗಾರಿ ಆರಂಭಿಸಲು ಸಿದ್ಧತೆಗಳು ನಡೆದಿವೆ. ಉಳಿದ 660 ಸ್ಟೇಷನ್‌ಗಳ ಕೆಲಸವು ಶೀಘ್ರವೇ ಆರಂಭವಾಗಲಿದೆ. ವೇಗವಾಗಿ ಚಾರ್ಜಿಂಗ್ ಪಾಯಿಂಟ್‌ಗಳತ್ತಲೂ ಚಾಲಕರು ಒಲವು ತೋರುತ್ತಿದ್ದು, ವಾಹನ ದಟ್ಟಣೆ ಪ್ರದೇಶದಲ್ಲಿ ಇಂತಹ 1,314 ಪಾಯಿಂಟ್‌ಗಳನ್ನು ಆರಂಭಿಸಲಾಗುತ್ತಿದೆ' ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ರಾಜ್ಯವಾರು ವಿವರ

ರಾಜ್ಯ	ಚಾರ್ಜಿಂಗ್ ಸ್ಟೇಷನ್‌ಗಳು	ವಿದ್ಯುತ್ ಚಾಲಿತ ವಾಹನಗಳ ಸಂಖ್ಯೆ(ಲಕ್ಷಗಳಲ್ಲಿ)
ಕರ್ನಾಟಕ	5,059	3.31
ಮಹಾರಾಷ್ಟ್ರ	3,079	4.15
ದೆಹಲಿ	1,886	2.74
ಕೇರಳ	958	1.39
ತಮಿಳುನಾಡು	643	2.20
ಉತ್ತರಪ್ರದೇಶ	583	3.31
ರಾಜಸ್ಥಾನ	500	2.33

ಬೆಸ್ಕಾಂ ದರ (ಪ್ರತಿ ಯುನಿಟ್‌ಗೆ)

₹7.38 ವೇಗದ ಚಾರ್ಜಿಂಗ್

₹6.71 ನೇರ ಚಾರ್ಜಿಂಗ್ (ಡಿಸಿ)

₹6.57 ಸಾಮಾನ್ಯ ಚಾರ್ಜಿಂಗ್ (ಎಸಿ)

ಸರ್ಕಾರಿ ಶಾಲೆಗೆ 5 ಕಿ.ಮೀ ನಡೆದುಕೊಂಡು ಹೋಗುತ್ತಿದ್ದ ಮಕ್ಕಳು

11 ವಿದ್ಯಾರ್ಥಿಗಳಿಗೆ ಸೈಕಲ್ ಕೊಡಿಸಿದ ಕಾರ್ಮಿಕ

● ಯಮನೇಶ ಗೌಡಗೇರಾ

ದೇವದುರ್ಗ (ರಾಯಚೂರು ಜಿಲ್ಲೆ): ತಾಲ್ಲೂಕಿನ ಮಲ್ಕಂದಿನ್ನಿ ಗ್ರಾಮದ ಕೂಲಿ ಕಾರ್ಮಿಕ ಆಂಜನೇಯ ದುಡಿಮೆಯಿಂದ ಬಂದ ಹಣದಲ್ಲಿ ಗ್ರಾಮದ 8ನೇ ತರಗತಿಯ 11 ವಿದ್ಯಾರ್ಥಿಗಳಿಗೆ ಹೀರೊ ಸೈಕಲ್‌ಗಳನ್ನು ಕೊಡಿಸುವ ಮೂಲಕ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಇದಕ್ಕಾಗಿ ಅವರು ₹60 ಸಾವಿರ ಖರ್ಚು ಮಾಡಿದ್ದಾರೆ.

ಮಲ್ಕಂದಿನ್ನಿ ಗ್ರಾಮದಲ್ಲಿ ಪ್ರೌಢಶಾಲೆ ಇಲ್ಲ. ಪ್ರೌಢ ಶಿಕ್ಷಣ ಪಡೆಯಲು ವಿದ್ಯಾರ್ಥಿಗಳು 5 ಕಿ.ಮೀ. ದೂರದ ಹೇಮನೂರಿಗೆ ನಡೆದುಕೊಂಡು ಹೋಗುತ್ತಾರೆ. ಪ್ರತಿದಿನ ಕೂಲಿ ಕೆಲಸಕ್ಕೆ ತೆರಳುತ್ತಿದ್ದ ಕಾರ್ಮಿಕ ಆಂಜನೇಯ, ನಡೆದುಕೊಂಡು ಹೋಗುತ್ತಿದ್ದ ವಿದ್ಯಾರ್ಥಿಗಳನ್ನು ಗಮನಿಸಿದ್ದಾರೆ. 11 ಸೈಕಲ್ ಖರೀದಿಸಿ ಶನಿವಾರ ಶಾಲೆಗೆ ತೆರಳಿ ಮುಖ್ಯಶಿಕ್ಷಕ ಬಸವರಾಜ ಮತ್ತು ಶಿಕ್ಷಕರ ಸಮ್ಮುಖದಲ್ಲಿ ವಿದ್ಯಾರ್ಥಿಗಳಿಗೆ ನೀಡಿದ್ದಾರೆ.

ದೇವದುರ್ಗ ತಾಲ್ಲೂಕಿನ ಮಲ್ಕಂದಿನ್ನಿ ಗ್ರಾಮದಲ್ಲಿ ಕಾರ್ಮಿಕ ಆಂಜನೇಯ ಅವರು ಶಾಲೆಯ ವಿದ್ಯಾರ್ಥಿಗಳಿಗೆ ಸೈಕಲ್‌ಗಳನ್ನು ಕೊಡುಗೆಯಾಗಿ ನೀಡಿದರು

'ಬಸ್ ವ್ಯವಸ್ಥೆ ಇಲ್ಲದ ಕಾರಣ ನಡೆದುಕೊಂಡು ಹೋಗಲು ಸಾಧ್ಯವಾಗದೆ ಬಹಳಷ್ಟು ಹೆಣ್ಣು ಮಕ್ಕಳು ಶಿಕ್ಷಣದಿಂದ ದೂರ ಉಳಿಯುತ್ತಿದ್ದಾರೆ. ನಮ್ಮ ಗ್ರಾಮದ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು. ನನ್ನ ಈ ಅಲ್ಪ ಸೇವೆಯಿಂದ ಅವರ ಭವಿಷ್ಯ ಉಜ್ವಲವಾಗಲಿ' ಎಂದು ಆಂಜನೇಯ ತಿಳಿಸಿದರು.

ದೇವದುರ್ಗ ತಾಲ್ಲೂಕಿನಲ್ಲಿ 186 ಕಂದಾಯ ಗ್ರಾಮಗಳು, 50ಕ್ಕೂ ಹೆಚ್ಚು ತಾಂಡಾಗಳು ಹಾಗೂ 30 ದೊಡ್ಡಿಗಳಿವೆ. ಅವುಗಳಲ್ಲಿ ಸುಮಾರು 100ಕ್ಕೂ ಹೆಚ್ಚು ಗ್ರಾಮಗಳಿಗೆ ಇಂದಿಗೂ ಬಸ್‌ನ ವ್ಯವಸ್ಥೆ ಇಲ್ಲ. ಇದರಿಂದ ಮಕ್ಕಳು ಶಿಕ್ಷಣವನ್ನು ಅರ್ಧಕ್ಕೆ ಮೊಟಕುಗೊಳಿಸುತ್ತಿದ್ದಾರೆ.

> ಕೂಲಿ ಕಾರ್ಮಿಕ ಆಂಜನೇಯ ಅವರ ಕಾಳಜಿ ಇತರರಿಗೆ ಮಾದರಿಯಾಗಿದೆ
> **ಬಸವರಾಜ,** ಮುಖ್ಯಶಿಕ್ಷಕ, ಸರ್ಕಾರಿ ಪ್ರೌಢಶಾಲೆ ಹೇಮನೂರು

> ಪ್ರೌಢಶಾಲೆಗೆ ನಡೆದು ಹೋಗಲಾಗದೆ ಪ್ರತಿವರ್ಷ 15–20 ವಿದ್ಯಾರ್ಥಿನಿಯರು ಶಿಕ್ಷಣವನ್ನು ಅರ್ಧಕ್ಕೇ ನಿಲ್ಲಿಸುತ್ತಿದ್ದಾರೆ. ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು ಎಂದು ಸೈಕಲ್ ನೀಡಿದ್ದೇನೆ
> **ಆಂಜನೇಯ ಮಲ್ಕಂದಿನ್ನಿ,** ಕೂಲಿ ಕಾರ್ಮಿಕ

> ಗ್ರಾಮೀಣ ಪ್ರದೇಶದ ಸಾವಿರಾರು ವಿದ್ಯಾರ್ಥಿಗಳು ನಡೆದು ಶಾಲೆಗಳಿಗೆ ತೆರಳುತ್ತಾರೆ. ಸರ್ಕಾರ ಉಚಿತ ಸೈಕಲ್ ವಿತರಣೆ ಯೋಜನೆಯನ್ನು ಮತ್ತೆ ಆರಂಭಿಸಬೇಕು
> **ಸೈಕಲ್ ಪಡೆದ ವಿದ್ಯಾರ್ಥಿಗಳು**

ಸೋಮವಾರ, ಮಾರ್ಚ್ 4, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 64 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಆಳ-ಅಗಲ
ಸಂದೇಶ್‌ಖಾಲಿ: ಜನ-ರಾಜಕೀಯ ಸಂಘರ್ಷ
'ತಬ್ಬಲಿ' ಹುಡುಗಿಗೆ ಕನ್ನಡದಲ್ಲಿ 10 ಚಿನ್ನ 4
ಪಾಕಿಸ್ತಾನದಲ್ಲಿ ಮಳೆ: 37 ಸಾವು 8
ಅಮೆರಿಕ ಪ್ರಜೆಯ ಟೀಕೆ: ರೇಖಾ ಶರ್ಮಾ ವಿವಾದ 9
ಅರಿಸಿನಕ್ಕೆ ಬಂಪರ್ ಬೆಲೆ 8



ಬೆಂಗಳೂರು ಸ್ಫೋಟ: ಕೇಂದ್ರ ಕಾರಾಗೃಹದಲ್ಲಿ ಸಂದರ್ಶಕರ ಮಾಹಿತಿ ಸಂಗ್ರಹ

'ಆರೋಪಿ ಜೊತೆ ಶಂಕಿತರಿಗೆ ನಂಟು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿ ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣದ ತನಿಖೆ ನಡೆಸುತ್ತಿರುವ ಪೊಲೀಸರು, ಬೆಂಗಳೂರಿನ ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹದಲ್ಲಿರುವ ಶಂಕಿತ ಉಗ್ರರ ಚಲನವಲನ ಹಾಗೂ ಅವರನ್ನು ಜೈಲಿನಲ್ಲಿ ಭೇಟಿಯಾಗಿದ್ದ ಸಂದರ್ಶಕರ ಬಗ್ಗೆ ಮಾಹಿತಿ ಕಲೆಹಾಕುತ್ತಿದ್ದಾರೆ.

ಮಂಗಳೂರಿನ ನಾಗುರಿಯಲ್ಲಿ 2022ರ ನ. 19ರಂದು ನಡೆದಿದ್ದ ಕುಕ್ಕರ್ ಬಾಂಬ್ ಸ್ಫೋಟ ಹಾಗೂ ತಮಿಳುನಾಡಿನ ಕೊಯಮತ್ತೂರು ಕೊಟ್ಟಾಯ್ ಈಶ್ವರ ದೇವಸ್ಥಾನ ಬಳಿ 2022ರಲ್ಲಿ ನಡೆದಿದ್ದ ಕಾರು ಬಾಂಬ್ ಸ್ಫೋಟಕ್ಕೂ ರಾಮೇಶ್ವರಂ ಕೆಫೆ ಸ್ಫೋಟಕ್ಕೂ ಸಾಮ್ಯತೆ ಇರುವ ಬಗ್ಗೆ ತನಿಖಾ ತಂಡಗಳು ಅನುಮಾನ ವ್ಯಕ್ತಪಡಿಸಿವೆ.

ಕೆಫೆ ಸ್ಥಳದಲ್ಲಿ ಸಿಕ್ಕಿರುವ ಬಾಂಬ್ ಅವಶೇಷಗಳನ್ನು ಸಂಗ್ರಹಿಸಿರುವ ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರು, ಪ್ರಾಥಮಿಕ ವರದಿಯನ್ನು ತನಿಖಾ ತಂಡಗಳ ಜೊತೆ

ದಿ ರಾಮೇಶ್ವರಂ ಕೆಫೆಯಲ್ಲಿ ಸ್ಫೋಟ ಸಂಭವಿಸಿದ್ದ ಸ್ಥಳದಲ್ಲಿ ದೊರೆತ ಮೊಬೈಲ್ ಸರ್ಕಿಟ್

ಹಂಚಿಕೊಂಡಿದ್ದಾರೆ. ಈ ಹಿಂದೆ ನಡೆದ ಸ್ಫೋಟ ಪ್ರಕರಣದ ತನಿಖೆ ಕೈಗೊಂಡಿದ್ದ ಅಧಿಕಾರಿಗಳು, ಪ್ರಾಥಮಿಕ ವರದಿ ಪರಿಶೀಲಿಸಿದ್ದಾರೆ. 'ಹಳೆ ಬಾಂಬ್ ಸ್ಫೋಟ ಪ್ರಕರಣಕ್ಕೂ ಕೆಫೆ ಪ್ರಕರಣಕ್ಕೂ ಸಾಮ್ಯ ಇದೆ' ಎಂಬುದಾಗಿ ಅವರು ಅಭಿಪ್ರಾಯ-ಪಟ್ಟಿದ್ದಾರೆ.

ಜೈಲಿನಲ್ಲಿರುವ ಉಗ್ರರ ಬಗ್ಗೆ ಪರಿಶೀಲನೆ: ಕುಕ್ಕರ್ ಬಾಂಬ್ ಸ್ಫೋಟದ ಆರೋಪಿ ಮೊಹಮ್ಮದ್ ಶಾರೀಕ್, ಈತನಿಗೆ ಸಹಕಾರ ನೀಡಿದ್ದ ಶಂಕಿತ ಉಗ್ರರು ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದಾರೆ. ಭಯೋತ್ಪಾದನಾ ಕೃತ್ಯಕ್ಕೆ ಸಂಚು ರೂಪಿಸಿದ್ದ ಪ್ರಕರಣದಲ್ಲಿ ಸಿಕ್ಕಿಬಿದ್ದಿರುವ ಶಂಕಿತ ಉಗ್ರರು ಸಹ ಇದೇ ಜೈಲಿನಲ್ಲಿದ್ದಾರೆ. ಇವರೆಲ್ಲರ ಬಗ್ಗೆ ತನಿಖಾ ತಂಡಗಳು ಮಾಹಿತಿ ಕಲೆಹಾಕುತ್ತಿವೆ.

'ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಇರಿಸಿದ್ದ ಆರೋಪಿಗೂ, ಜೈಲಿನಲ್ಲಿರುವ ಶಂಕಿತ ಉಗ್ರರಿಗೂ ನಂಟಿರುವ ಬಗ್ಗೆ ಅನುಮಾನವಿದೆ.

2ನೇ ಪುಟ ನೋಡಿ

'ಸುಳಿವು ಪತ್ತೆ: ಆರೋಪಿ ಬಂಧನ ಶೀಘ್ರ'

'ದಿ ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣದ ಆರೋಪಿ ಬಗ್ಗೆ ಕೆಲ ಸುಳಿವುಗಳು ಲಭ್ಯವಾಗಿದ್ದು, ಆರೋಪಿಯನ್ನು ಶೀಘ್ರದಲ್ಲೇ ಬಂಧಿಸಲಾಗುವುದು' ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ನಗರದ ಪೊಲೀಸ್ ಕಮಿಷನರ್ ಕಚೇರಿಯಲ್ಲಿ ಭಾನುವಾರ ಅಧಿಕಾರಿಗಳ ಸಭೆ ನಡೆಸಿದ ಬಳಿಕ ಸುದ್ದಿಗಾರರ ಜೊತೆ ಅವರು ಮಾತನಾಡಿದರು.

'ಬಾಂಬ್ ಸ್ಫೋಟ ಪ್ರಕರಣದ ತನಿಖೆ ಪ್ರಗತಿ ಹಾಗೂ ಮುಂದೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿದೆ' ಎಂದರು.

'ಎನ್‌ಐಎ (ರಾಷ್ಟ್ರೀಯ ತನಿಖಾ ದಳ), ಎನ್‌ಎಸ್‌ಜಿ (ರಾಷ್ಟ್ರೀಯ ಭದ್ರತಾ ಸಿಬ್ಬಂದಿ) ಅಧಿಕಾರಿಗಳು ತಮ್ಮದೇ ರೀತಿಯಲ್ಲಿ ತನಿಖೆ ನಡೆಸುತ್ತಿದ್ದಾರೆ. ಪರಸ್ಪರ ಮಾಹಿತಿ ವಿನಿಮಯ ಮಾಡಿಕೊಂಡು ಆರೋಪಿಯನ್ನು ಪತ್ತೆ ಹಚ್ಚುತ್ತೇವೆ. ನಗರದ ಜನತೆ ಆತಂಕಪಡುವ ಅಗತ್ಯವಿಲ್ಲ' ಎಂದು ಹೇಳಿದರು.

'ಶಾರೀಕ್ ಮನೆಯಲ್ಲಿದ್ದ ಸಾಮಗ್ರಿಗೆ ಹೋಲಿಕೆ'

'ಕುಕ್ಕರ್ ಬಾಂಬ್ ಸ್ಫೋಟದ ಆರೋಪಿ ಶಾರೀಕ್‌ನ ಮೈಸೂರಿನ ಮನೆಯಲ್ಲಿ ನಟ್, ಬೋಲ್ಟ್‌ಗಳು, ಮೊಬೈಲ್ ಸರ್ಕಿಟ್‌ಗಳು, ಬ್ಯಾಟರಿ, ಮೆಕ್ಯಾನಿಕಲ್ ಟೈಮರ್, ಮೊಬೈಲ್ ಡಿಸ್‌ಪ್ಲೇ, ಟೈಮರ್, ಸಿಮ್ ಕಾರ್ಡ್‌ಗಳು ಸಿಕ್ಕಿದ್ದವು. ಕೆಫೆ ಸ್ಥಳದಲ್ಲೂ ಬ್ಯಾಟರಿ, ಟೈಮರ್, ನಟ್, ಬೋಲ್ಟ್ ಹಾಗೂ ಟೈಮರ್ ಸಿಕ್ಕಿದ್ದವು. ಇದರಲ್ಲಿ ಕೆಲ ವಸ್ತುಗಳು, ಕೆಫೆ ಸ್ಫೋಟದ ಅವಶೇಷಗಳಿಗೆ ಹೋಲಿಕೆಯಾಗುತ್ತಿವೆ' ಎಂದು ತಿಳಿಸಿವೆ.

'ತಮಿಳುನಾಡು ಹಾಗೂ ಕರ್ನಾಟಕದಲ್ಲಿ 'ಅಲ್ ಹಿಂದ್' ಹೆಸರಿನಲ್ಲಿ ಸಂಘಟಿತರಾಗಿ ಭಯೋತ್ಪಾದನಾ ಕೃತ್ಯ ಎಸಗಲು ಸಂಚು ರೂಪಿಸಿದ್ದ ಮೂವರ ವಿರುದ್ಧ ಎನ್‌ಐಎ ಅಧಿಕಾರಿಗಳು ಈಗಾಗಲೇ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ. ಇದೇ ಅಲ್ ಹಿಂದ್ ತಂಡದ ಮೇಲೆಯೂ ಅನುಮಾನವಿದೆ' ಎಂದು ಹೇಳಿವೆ.

ಬಿಜೆಪಿಗೆ ₹2000 ದೇಣಿಗೆ ನೀಡಿದ ಮೋದಿ 09
ಕಣದಿಂದ ಹಿಂದೆ ಸರಿದ ಪವನ್ ಸಿಂಗ್ 09

ಜನಸ್ತೋಮ ಪಟ್ನಾದಲ್ಲಿ ಆರ್‌ಜೆಡಿ ಭಾನುವಾರ ಆಯೋಜಿಸಿದ್ದ 'ಜನ ವಿಶ್ವಾಸ್ ರ್‍ಯಾಲಿ'ಯಲ್ಲಿ ಪಕ್ಷದ ಬೆಂಬಲಿಗರು ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ಮೋದಿ ಪ್ರವಾಸ ಇಂದಿನಿಂದ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರದಿಂದ 10 ದಿನಗಳಲ್ಲಿ 12 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ 29 ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ.

ತೆಲಂಗಾಣ, ತಮಿಳುನಾಡು, ಒಡಿಶಾ, ಪಶ್ಚಿಮ ಬಂಗಾಳ, ಬಿಹಾರ, ಜಮ್ಮು ಮತ್ತು ಕಾಶ್ಮೀರ, ಅಸ್ಸಾಂ, ಅರುಣಾಚಲ ಪ್ರದೇಶ, ಉತ್ತರ ಪ್ರದೇಶ, ಗುಜರಾತ್, ರಾಜಸ್ಥಾನ ಮತ್ತು ದೆಹಲಿಗೆ ಅವರು ಭೇಟಿ ನೀಡಲಿದ್ದಾರೆ. ಲೋಕಸಭಾ ಚುನಾವಣೆ ದಿನಾಂಕ ಘೋಷಣೆ ಸಮೀಪಿಸುತ್ತಿರುವಾಗಲೇ ಪ್ರವಾಸ ಕೈಗೊಂಡಿದ್ದಾರೆ.

ಮುಖ್ಯಾಂಶಗಳು

- ಲೋಕಸಭೆ ಚುನಾವಣೆ ದಿನಾಂಕ ಘೋಷಣೆಗೆ ಮುನ್ನ ಮಿಂಚಿನ ಪ್ರವಾಸ
- 12 ರಾಜ್ಯಗಳು, ಕೇಂದ್ರ ಆಡಳಿತ ಪ್ರದೇಶಗಳಿಗೆ ಭೇಟಿ
- 29 ಕಾರ್ಯಕ್ರಮಗಳಲ್ಲಿ ಭಾಗಿ

ಸೋಮವಾರ ತೆಲಂಗಾಣದ ಅದಿಲಾಬಾದ್‌ನಲ್ಲಿ ಹಲವು ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಲಿದ್ದಾರೆ. ಬಳಿಕ ತಮಿಳುನಾಡಿನ ಕಲ್ಪಕ್ಕಂನಲ್ಲಿರುವ ಭಾರತೀಯ ನಭೀಕಿಯಾ ವಿದ್ಯುತ್ ನಿಗಮಕ್ಕೆ ಭೇಟಿ ನೀಡಲಿದ್ದಾರೆ. ಅದಿಲಾಬಾದ್ ಮತ್ತು ಚೆನ್ನೈ ಎರಡೂ ಕಡೆಗಳಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

4ನೇ ಪುಟ ನೋಡಿ

ದೆಹಲಿಯಲ್ಲಿ 6ರಂದು ರೈತರ ಚಳವಳಿ

ಇದೇ 10ರಂದು ರೈಲು ತಡೆಗೂ ತೀರ್ಮಾನ • ರೈತ ಮುಖಂಡರ ಘೋಷಣೆ

ಪ್ರಜಾವಾಣಿ ವಾರ್ತೆ/ಪಿಟಿಐ

ಚಂಡೀಗಢ: ಕೃಷಿ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಯ (ಎಂಎಸ್‌ಪಿ) ಕಾನೂನು ಖಾತರಿಗಾಗಿ ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತಿರುವ ರೈತರು ಇದೇ 6ರಂದು (ಬುಧವಾರ) ದೆಹಲಿಯಲ್ಲಿ ಪ್ರತಿಭಟನೆ ನಡೆಸುವುದಾಗಿ ಹೇಳಿದ್ದಾರೆ. ಅಲ್ಲದೆ, ಇದೇ 10ರಂದು ದೇಶದಾದ್ಯಂತ ನಾಲ್ಕು ಗಂಟೆ ರೈಲು ತಡೆ ನಡೆಸಲು ನಿರ್ಧರಿಸಿದ್ದಾರೆ.

ಈ ಪ್ರತಿಭಟನೆಗಳಲ್ಲಿ ಹೆಚ್ಚಿನ ಸಂಖ್ಯೆಯ ರೈತರು ಮತ್ತು ರೈತ ಕಾರ್ಮಿಕರು ಪಾಲ್ಗೊಳ್ಳಬೇಕು ಎಂದು ರೈತ ಮುಖಂಡರಾದ ಸರವಣ ಸಿಂಗ್ ಪಂಢೇರ ಮತ್ತು ಜಗಜಿತ್ ಸಿಂಗ್ ದಲ್ಲೆವಾಲ್ ಅವರು ಭಾನುವಾರ ಕರೆ ನೀಡಿದ್ದಾರೆ.

ಖನೌರಿಯಲ್ಲಿ ಹರಿಯಾಣದ ಭದ್ರತಾ ಸಿಬ್ಬಂದಿಯೊಂದಿಗಿನ ಘರ್ಷಣೆಯಲ್ಲಿ ಇತ್ತೀಚೆಗೆ ಮೃತಪಟ್ಟ ರೈತ ಶುಭಕರಣ್ ಸಿಂಗ್ ಅವರ ಸ್ವಗ್ರಾಮವಾದ ಬಠಿಂಡಾ ಜಿಲ್ಲೆಯ ಬಲ್ಲೋಹ್‌ನಲ್ಲಿ ಈ ಇಬ್ಬರೂ ನಾಯಕರು ರೈತರನ್ನು ಉದ್ದೇಶಿಸಿ ಮಾತನಾಡಿದರು.

'ಟ್ರ್ಯಾಕ್ಟರ್ ಟ್ರಾಲಿಗಳಲ್ಲಿ ತಲುಪಲು ಸಾಧ್ಯವಾಗದ ದೂರದ ರಾಜ್ಯಗಳ ರೈತರು, ರೈಲು, ಇತರ ಸಾರಿಗೆ ವ್ಯವಸ್ಥೆಯ ಮೂಲಕ ಇದೇ 6ರಂದು ದೆಹಲಿ ತಲುಪಬೇಕು. ಟ್ರ್ಯಾಕ್ಟರ್ ಟ್ರಾಲಿಗಳಿಲ್ಲದೆ ಬರುವ ರೈತರಿಗೆ ಸರ್ಕಾರವು ದೆಹಲಿ ಪ್ರವೇಶಿಸಲು ಅನುಮತಿ ನೀಡುತ್ತದೆಯೇ ಎಂಬುದು ಆಗ ಸ್ಪಷ್ಟ-ವಾಗಲಿದೆ' ಎಂದರು.

> **ಕೇಂದ್ರ ಸರ್ಕಾರವು ರೈತರ ಪ್ರತಿಭಟನೆಯು ಪಂಜಾಬ್‌ಗೆ ಸೀಮಿತ ಮತ್ತು ಅದನ್ನು ಎರಡು ಸಂಘಟನೆಗಳು ಮಾತ್ರ ನಡೆಸುತ್ತಿವೆ ಎಂದು ಭಾವಿಸಿದೆ. ಆದರೆ ದೇಶದ 200ಕ್ಕೂ ಹೆಚ್ಚು ಸಂಘಟನೆಗಳು ಇದರ ಭಾಗವಾಗಿವೆ**
> **ಸರವಣ ಸಿಂಗ್ ಪಂಢೇರ,** ರೈತ ಮುಖಂಡ

ಶೆಹಬಾಜ್ ಪಾಕ್ ಪ್ರಧಾನಿ

ಇಸ್ಲಾಮಾಬಾದ್ (ಪಿಟಿಐ): ಪಿಎಂಎಲ್– ಎನ್ ಪಕ್ಷದ ನಾಯಕ ಶೆಹಬಾಜ್ ಷರೀಫ್ ಅವರು ಎರಡನೇ ಬಾರಿಗೆ ಪಾಕಿಸ್ತಾನದ ಪ್ರಧಾನಿಯಾಗಿ ಭಾನುವಾರ ಆಯ್ಕೆಯಾದರು. ನವಾಜ್ ಷರೀಫ್ ಅವರ ತಮ್ಮ ಶೆಹಬಾಜ್ ಅವರು ಈ ಹಿಂದೆ 2022ರ ಏಪ್ರಿಲ್‌ನಿಂದ 2023ರ ಆಗಸ್ಟ್‌ವರೆಗೆ ಸಮ್ಮಿಶ್ರ ಸರ್ಕಾರದ ಪ್ರಧಾನಿಯಾಗಿದ್ದರು. 9

'ಸಿಯುಇಟಿ ವೇಳಾಪಟ್ಟಿ ಪರಿಷ್ಕರಣೆ ಸಾಧ್ಯತೆ'

ನವದೆಹಲಿ (ಪಿಟಿಐ): ಲೋಕಸಭಾ ಚುನಾವಣಾ ವೇಳಾಪಟ್ಟಿ ಪ್ರಕಟವಾದ ಬಳಿಕ, ವಿಶ್ವವಿದ್ಯಾಲಯಗಳ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಯುಇಟಿ–ಯುಜಿ) ವೇಳಾಪಟ್ಟಿಯನ್ನು ಪರಿಷ್ಕರಿಸ-ಲಾಗುವುದು ಎಂದು ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಅಧ್ಯಕ್ಷ ಜಗದೀಶ್ ಕುಮಾರ್ ತಿಳಿಸಿದ್ದಾರೆ. 8

ಬಿಜೆಪಿ: ಹೊಸ ಮುಖಗಳಿಗೂ ಮಣೆ 09

ಚಿನಕುರಳಿ

ಪ್ರಕಾಶ್ ಶೆಟ್ಟಿ

ಬಾಂಬ್ ಇಟ್ಟವರು ದೇಶದ್ರೋಹಿಗಳು: ಖಾದರ್

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಬೆಂಗಳೂರಿನಲ್ಲಿ ಬಾಂಬ್ ಇಟ್ಟವರು ದೇಶದ್ರೋಹಿಗಳು. ಇಂಥ ಕೃತ್ಯ ಎಸಗಿದವರು ಮತ್ತು ಈ ಘಟನೆ ಹಿಂದೆ ಸಂಚು ರೂಪಿಸಿದವರನ್ನು ಮಟ್ಟ ಹಾಕಬೇಕು' ಎಂದು ವಿಧಾನಸಭೆ ಅಧ್ಯಕ್ಷ ಯು.ಟಿ. ಖಾದರ್ ಹೇಳಿದರು.

ಯು.ಟಿ. ಖಾದರ್

ಬೆಂಗಳೂರಿನ ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿ, ಇಲ್ಲಿ ಭಾನುವಾರ ಸುದ್ದಿಗಾರರಿಗೆ ಅವರು ಹೀಗೆ ಪ್ರತಿಕ್ರಿಯಿಸಿದರು.

'ನಿರ್ಭಯ ಸಮಾಜವಿದ್ದರೆ ಮಾತ್ರ ಅಭಿವೃದ್ಧಿ ಸಾಧಿಸಬಹುದು. ಜನರು ನೆಮ್ಮದಿಯಿಂದ ಬದುಕು ಸಾಗಿಸಬಹುದು. ಶಾಂತಿಯುತವಾದ ರಾಜ್ಯ ಕೆಡಿಸಲು ಯತ್ನಿಸಿದವರನ್ನು ಮಟ್ಟಹಾಕಲು ಸರ್ಕಾರ ಕ್ರಮ ವಹಿಸಿದೆ.

'ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಇಂಥ ಘಟನೆ ನಡೆಯುತ್ತವೆಯೇ?' ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿದ ಖಾದರ್, 'ಈ ವೇಳೆ ಯಾರೂ ರಾಜಕಾರಣ ಮಾಡಬಾರದು. ನಾವೆಲ್ಲ ಒಗ್ಗಟ್ಟಿನಿಂದ ಇರಬೇಕು. ನಮ್ಮಲ್ಲೇ ಭಿನ್ನಾಭಿಪ್ರಾಯ ಮೂಡಿದರೆ, ದುಷ್ಕರ್ಮಿಗಳು ಅದರ ಲಾಭ ಪಡೆಯುತ್ತಾರೆ. ಕರ್ನಾಟಕದಲ್ಲಿ ಎಲ್ಲರೂ ಸಹೋದರರಂತೆ ಒಂದಾಗಿ ಬಾಳ್ವೆ ನಡೆಸುತ್ತಿದ್ದೇವೆ. ನಮ್ಮನ್ನು ಬೇರ್ಪಡಿಸಲು ಯಾರಿಗೂ ಅವಕಾಶ ಕೊಡಬಾರದು' ಎಂದು ಹೇಳಿದರು.

ಕೃಷಿ ಹೊಂಡದಲ್ಲಿ ಮುಳುಗಿ ಮೂವರು ಸಾವು

ಹೊಸಕೋಟೆ: ಜಡಿಗೇನಹಳ್ಳಿ ಹೋಬಳಿಯ ಕರಿಬೀರನ ಹೊಸಹಳ್ಳಿ ಗ್ರಾಮದಲ್ಲಿ ಭಾನುವಾರ ಕೃಷಿ ಹೊಂಡದಲ್ಲಿ ಕೈತೊಳೆಯಲು ಹೋಗಿ ಜಾರಿ ಬಿದ್ದ ಮಗಳನ್ನು ರಕ್ಷಿಸಲು ಹೋದ ತಾಯಿ–ತಂದೆ ಸೇರಿದಂತೆ ಮೂವರೂ ಮೃತಪಟ್ಟಿದ್ದಾರೆ.

ಮರಿಯಪ್ಪ (70), ಮುನಿಯಮ್ಮ (60) ಮತ್ತು ದಂಪತಿಯ ಪುತ್ರಿ ಭಾರತಿ (40) ಕೆರೆಯಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಕೈತೊಳೆಯಲು ಕೃಷಿ ಹೊಂಡಕ್ಕೆ ಹೋದ ಮಗಳು ಭಾರತಿ ಜಾರಿ ಬಿದ್ದು, ಮುಳುಗುತ್ತಿರುವುದನ್ನು ಗಮನಿಸಿದ ತಂದೆ ಮರಿಯಪ್ಪ, ತಾಯಿ ಮುನಿಯಮ್ಮ ಮಗಳನ್ನು ರಕ್ಷಿಸಲು ಕೃಷಿ ಹೊಂಡಕ್ಕೆ ಇಳಿದಿದ್ದಾರೆ. ಕೆರೆಯಲ್ಲಿ ಹೂಳು ತುಂಬಿದ್ದರಿಂದ ಮೂವರು ಹೊರಬರಲಾಗದೆ ಮೃತಪಟ್ಟಿದ್ದಾರೆ.

ಸ್ಫೋಟ ಪ್ರಕರಣದಲ್ಲಿ ಬಿಜೆಪಿಯವರು ರಾಜಕೀಯ ಮಾಡಬಾರದು: ಸಿ.ಎಂ.

'ಅಗತ್ಯವಾದರೆ ಎನ್‌ಐಎ ತನಿಖೆ'

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: 'ಬೆಂಗಳೂರಿನ ರಾಮೇಶ್ವರಂ ಕೆಫೆಯಲ್ಲಿ ನಡೆದಿರುವ ಸ್ಫೋಟ ವಿಷಯವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, ಅಗತ್ಯ ಬಿದ್ದರೆ ಎನ್‌ಐಎ ತನಿಖೆಗೆ ವಹಿಸಲಾಗುವುದು. ಇದರಲ್ಲಿ ಬಿಜೆಪಿ ರಾಜಕೀಯ ಮಾಡಬಾರದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಸ್ಫೋಟ ಪ್ರಕರಣವನ್ನು ಸರ್ಕಾರ ಹಗುರವಾಗಿ ಪರಿಗಣಿಸಿಲ್ಲ. ಇದು ಗಂಭೀರವಾದ ವಿಷಯ. ಸಿಸಿಬಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಆರೋಪಿಗಳು ಇನ್ನೂ ಸಿಕ್ಕಿಲ್ಲ. ಅಗತ್ಯ ಎನಿಸಿದರೆ ಮಾತ್ರ ಎನ್‌ಐಎಗೆ ವಹಿಸುವ ಬಗ್ಗೆ ಆಲೋಚನೆ ಮಾಡಲಾಗುವುದು' ಎಂದು ಮಾಧ್ಯಮಗಳಿಗೆ ಭಾನುವಾರ ಪ್ರತಿಕ್ರಿಯಿಸಿದರು.

'ಬ್ರ್ಯಾಂಡ್ ಬೆಂಗಳೂರು ಅಲ್ಲ, ಬಾಂಬ್ ಬೆಂಗಳೂರು ಎಂಬ ಬಿಜೆಪಿಯವರ ಟೀಕೆ ಸರಿಯಲ್ಲ. ಅವರು ಅಧಿಕಾರದಲ್ಲಿ ಇದ್ದಾಗ ನಾಲ್ಕು ಬಾರಿ ಬಾಂಬ್ ಸ್ಫೋಟ ಆಗಿದೆ. ಮಂಗಳೂರಿನಲ್ಲಿ ಕುಕ್ಕರ್ ಬಾಂಬ್ ಸ್ಫೋಟ, ಮಲ್ಲೇಶ್ವರದಲ್ಲಿ ಬಿಜೆಪಿ ಕಚೇರಿ ಎದುರೇ ಸ್ಫೋಟವಾಗಿತ್ತು. ಆಗ ಅಧಿಕಾರದಲ್ಲಿ ಇದ್ದವರು ಯಾರು. ಅದನ್ನು ಏನಂತ ಕರೆಯಬೇಕು' ಎಂದು ಪ್ರಶ್ನಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೊಸಪೇಟೆ ತಾಲ್ಲೂಕಿನ ಕಮಲಾಪುರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಗುವಿಗೆ ಪೋಲಿಯೊ ಹನಿ ಹಾಕುವ ಮೂಲಕ ಪಲ್ಸ್ ಪೋಲಿಯೊ ಅಭಿಯಾನಕ್ಕೆ ಭಾನುವಾರ ಚಾಲನೆ ನೀಡಿದರು. ಆರ್‌ಸಿಎಚ್ ಯೋಜನಾ ನಿರ್ದೇಶಕ ಡಾ.ಶ್ರೀನಿವಾಸ್, ಡಿಎಚ್‌ಒ ಡಾ.ಎಲ್‌.ಆರ್‌.ಶಂಕರ್ ನಾಯ್ಕ್, ಜಿಲ್ಲಾ ಪಂಚಾಯಿತಿ ಸಿಇಒ ಸದಾಶಿವ ಪ್ರಭು ಬಿ., ಸಚಿವ ಬಿ.ನಾಗೇಂದ್ರ ಇದ್ದರು –ಪ್ರಜಾವಾಣಿ ಚಿತ್ರ

'ಎನ್‌ಐಎ, ಗುಪ್ತಚರ ಇಲಾಖೆ(ಐ.ಬಿ), ಗೂಢಚರ ಸಂಸ್ಥೆ 'ರಾ' (ಆರ್‌ಎಡಬ್ಲ್ಯು) ಯಾರ ಅಧೀನದಲ್ಲಿವೆ. ಸ್ಫೋಟ ನಡೆದಿದೆ ಎಂದರೆ, ಆ ಸಂಸ್ಥೆಗಳ ವೈಫಲ್ಯವೂ ಕಾರಣ ಅಲ್ಲವೇ? ಹಾಗೆಂದ ಮಾತ್ರಕ್ಕೆ ಸ್ಫೋಟ ಪ್ರಕರಣವನ್ನು ನಾನು ಸಮರ್ಥನೆ ಮಾಡುತ್ತಿಲ್ಲ. ಬಲವಾಗಿ ಖಂಡಿಸುತ್ತೇನೆ' ಎಂದರು.

'ಸಿಸಿಬಿಯಿಂದಲೇ ತನಿಖೆ'

ಹೊಸಪೇಟೆ (ವಿಜಯನಗರ): 'ಬಾಂಬ್ ಸ್ಫೋಟ ಪ್ರಕರಣ ಸದ್ಯ ಸಿಸಿಬಿ ಪೊಲೀಸರ ತನಿಖೆಯಲ್ಲಿದೆ. ಎನ್‌ಐಎಗೆ ತನಿಖೆ ಹೊಣೆ ವಹಿಸುವ ಬಗ್ಗೆ ಇನ್ನೂ ನಿರ್ಧಾರ ಮಾಡಿಲ್ಲ' ಎಂದು ಸಿದ್ದರಾಮಯ್ಯ ಹೇಳಿದರು.

ಇಲ್ಲಿಗೆ ಸಮೀಪದ ಕಮಲಾಪುರದಲ್ಲಿ ಪಲ್ಸ್ ಪೋಲಿಯೊ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಪ್ರಕರಣಕ್ಕೆ ಸಂಬಂಧಿಸಿದಂತೆ ಶನಿವಾರದ ವರೆಗೂ ಯಾರನ್ನೂ ಬಂಧಿಸಿಲ್ಲ' ಎಂದರು. 'ವಿಧಾನಸೌಧದಲ್ಲಿ ಪಾಕಿಸ್ತಾನ ಜಿಂದಾಬಾದ್ ಘೋಷಣೆ ಪ್ರಕರಣ ವಿಚಾರಣೆ ಹಂತದಲ್ಲಿದೆ. ಎಫ್‌ಎಸ್‌ಎಲ್ ವರದಿ ಸರ್ಕಾರದ ಕೈಸೇರಿಲ್ಲ. ವರದಿ ಬಂದ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದರು.

'ಆರೋಪಿ ಜೊತೆ ಶಂಕಿತರಿಗೆ ನಂಟು'

ಒಂದನೇ ಪುಟದಿಂದ...

ಇದೇ ಆಯಾಮದಲ್ಲಿ ವಿಶೇಷ ತಂಡದ ಪೊಲೀಸರು ತನಿಖೆ ಮುಂದುವರಿಸಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಜೈಲಿನಲ್ಲಿರುವ ಶಂಕಿತ ಉಗ್ರರನ್ನು ಸಂದರ್ಶಕರ ರೂಪದಲ್ಲಿ ಯಾರೆಲ್ಲ ಭೇಟಿಯಾಗಿದ್ದಾರೆ? ಶಂಕಿತರನ್ನು ನ್ಯಾಯಾಲಯಕ್ಕೆ ಕರೆದೊಯ್ದು ವಾಪಸು ಕರೆತರುವ ಪೊಲೀಸರು ಯಾರು? ನ್ಯಾಯಾಲಯಕ್ಕೆ ಹೋಗಿ ಬರುವ ಸಂದರ್ಭದಲ್ಲಿ ಯಾರಾದರೂ ಭೇಟಿಯಾಗಿದ್ದಾರೆಯೇ ಎಂಬಿತ್ಯಾದಿ ಮಾಹಿತಿಯನ್ನು ಕಲೆಹಾಕಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

ಇಬ್ಬರ ತೀವ್ರ ವಿಚಾರಣೆ: ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳು ಹಾಗೂ ಕೆಲ ತಾಂತ್ರಿಕ ಸುಳಿವು ಆಧರಿಸಿ ಇಬ್ಬರನ್ನು ತನಿಖಾ ತಂಡಗಳು ವಶಕ್ಕೆ ಪಡೆದಿವೆ. ಅವರಿಬ್ಬರನ್ನೂ ತನಿಖಾ ತಂಡದ ಅಧಿಕಾರಿಗಳು ಭಾನುವಾರ ತೀವ್ರ ವಿಚಾರಣೆಗೆ ಒಳಪಡಿಸಿದ್ದರೆಂದು ಗೊತ್ತಾಗಿದೆ.

'ಬಾಂಬ್ ಸ್ಫೋಟದ ಬಗ್ಗೆ ಎಂಟು ಪ್ರತ್ಯೇಕ ತಂಡಗಳು ತನಿಖೆ ನಡೆಸುತ್ತಿವೆ. ಪ್ರತಿಯೊಂದು ತಂಡಗಳು ಹೊಸ ಹೊಸ ಮಾಹಿತಿ ಕಲೆಹಾಕುತ್ತಿವೆ. ಮಾಹಿತಿ ಆಧರಿಸಿ ಅನುಮಾನಾಸ್ಪದ ವ್ಯಕ್ತಿಗಳನ್ನು ವಿಚಾರಣೆ ನಡೆಸಲಾಗುತ್ತಿದೆ. ಕೆಲವರನ್ನು ಅವರಿದ್ದ ಸ್ಥಳಕ್ಕೆ ಹೋಗಿ ಮಾತನಾಡಿಸಲಾಗುತ್ತಿದೆ. ಕೆಲವರನ್ನು ಕಚೇರಿಗೆ ಕರೆತಂದು ವಿಚಾರಣೆ ಮಾಡಲಾಗುತ್ತಿದೆ' ಎಂದು ಮೂಲಗಳು ಹೇಳಿವೆ.

ಕೆಫೆಯಲ್ಲಿ ಮಹಜರು: ಸ್ಫೋಟ ಪ್ರಕರಣದ ತನಿಖಾಧಿಕಾರಿ ನೇತೃತ್ವದಲ್ಲಿ ರಾಮೇಶ್ವರ ಕೆಫೆಯಲ್ಲಿ ಭಾನುವಾರ ಮಹಜರು ಪ್ರಕ್ರಿಯೆ ನಡೆಯಿತು.

ಕೆಫೆಗೆ ಭೇಟಿ ನೀಡಿದ್ದ ತನಿಖಾಧಿಕಾರಿ ಹಾಗೂ ಸಿಬ್ಬಂದಿ, ವ್ಯವಸ್ಥಾಪಕ ಹಾಗೂ ಕೆಲಸಗಾರರ ಸಮ್ಮುಖದಲ್ಲಿ ಘಟನೆ ವಿವರ ದಾಖಲಿಸಿಕೊಂಡರು. ಕೆಫೆಗೆ ಬಂದಿದ್ದ ಶಂಕಿತನ ಚಲನವಲನಗಳ ಬಗ್ಗೆ ತನಿಖಾಧಿಕಾರಿ ಮಾಹಿತಿ ಪಡೆದರು. ಮಹಜರು ಪ್ರಕ್ರಿಯೆಯ ಫೋಟೊ ಹಾಗೂ ವಿಡಿಯೊ ಚಿತ್ರೀಕರಿಸಿಕೊಂಡರು.

ತಮಿಳುನಾಡು ಪೊಲೀಸರ ಭೇಟಿ: ಕೊಯಮತ್ತೂರು ಕಾರು ಸ್ಫೋಟ ಪ್ರಕರಣದ ತನಿಖಾ ತಂಡದಲ್ಲಿದ್ದ ಪೊಲೀಸರು, ದಿ ರಾಮೇಶ್ವರಂ ಕೆಫೆಗೆ ಭಾನುವಾರ ಭೇಟಿ ನೀಡಿದರು. ಬಾಂಬ್ ನಿಷ್ಕ್ರಿಯ ದಳದ ಸಮೇತ ಬಂದಿದ್ದ ಪೊಲೀಸರು, ಸ್ಫೋಟ ಸಂಭವಿಸಿದ್ದ ಸ್ಥಳದಲ್ಲಿ ಪರಿಶೀಲನೆ ನಡೆಸಿದರು.

ಕೆಫೆಯಲ್ಲಿ ನಡೆದ ಬಾಂಬ್ ಸ್ಫೋಟದ ಬಗ್ಗೆ ಎಚ್‌ಎಎಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಇದರ ತನಿಖೆಯನ್ನು ಸಿಸಿಬಿ ಪೊಲೀಸರು ನಡೆಸುತ್ತಿದ್ದಾರೆ. ರಾಷ್ಟ್ರೀಯ ತನಿಖಾ ದಳ (ಎನ್‌ಐಎ), ರಾಷ್ಟ್ರೀಯ ಭದ್ರತಾ ಸಿಬ್ಬಂದಿ (ಎನ್‌ಎಸ್‌ಜಿ) ಹಾಗೂ ಸಂಶೋಧನೆ ಮತ್ತು ವಿಶ್ಲೇಷಣಾ ವಿಭಾಗ (ರಾ) ಅಧಿಕಾರಿಗಳು ಸಹ ತನಿಖೆಯಲ್ಲಿ ಭಾಗಿಯಾಗಿದ್ದಾರೆ.

'ಸ್ಫೋಟ ಸಂಚು ವಿಫಲಗೊಳಿಸಿದ್ದ ಎನ್‌ಐಎ'

ಐಎಸ್ (ಇಸ್ಲಾಮಿಕ್ ಸ್ಟೇಟ್) ಭಯೋತ್ಪಾದನಾ ಸಂಘಟನೆ ಜೊತೆ ಒಡನಾಟ ಇಟ್ಟುಕೊಂಡು ರಾಜ್ಯದಲ್ಲಿ ಬಾಂಬ್ ಸ್ಫೋಟಿಸಲು ಸಂಚು ರೂಪಿಸಿದ್ದ ಬಳ್ಳಾರಿ ಹಾಗೂ ಬೆಂಗಳೂರಿನ ವ್ಯಕ್ತಿಗಳು ಸೇರಿ ಹಲವರನ್ನು ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳು ಇತ್ತೀಚೆಗೆ ಬಂಧಿಸಿದ್ದರು. ಈ ಪ್ರಕರಣದ ಬಗ್ಗೆಯೂ ತನಿಖಾ ತಂಡಗಳು ಇದೀಗ ಮಾಹಿತಿ ಕಲೆಹಾಕುತ್ತಿವೆ.

'ಬಳ್ಳಾರಿ, ಬೆಂಗಳೂರು ಸೇರಿದಂತೆ ದೇಶದ 19 ಸ್ಥಳಗಳಲ್ಲಿ ಎನ್‌ಐಎ ವಿಶೇಷ ಕಾರ್ಯಾಚರಣೆ ನಡೆಸಿತ್ತು. ಬಳ್ಳಾರಿಯ ಮಿನಾಜ್ ಅಲಿಯಾಸ್ ಮೊಹಮ್ಮದ್ ಸುಲೈಮಾನ್, ಸೈಯದ್ ಸಮೀರ್, ಬೆಂಗಳೂರಿನ ಮೊಹಮ್ಮದ್ ಮುನಿರುದ್ದಿನ್, ಸೈಯದ್ ಸಮೀವುಲ್ಲಾ, ಮೊಹಮ್ಮದ್ ಮುಜಮ್ಮಿಲ್, ಮುಂಬೈನ ಅನಸ್ ಇಕ್ಬಾಲ್ ಶೇಖ್, ದೆಹಲಿಯ ಶಿಯಾನ್ ರಹಮಾನ್ ಅಲಿಯಾಸ್ ಹುಸೇನ್, ಜಾರ್ಖಂಡ್‌ನ ಮೊಹಮ್ಮದ್ ಶಹಬಾಜ್ ಅಲಿಯಾಸ್ ಜುಲ್ಫಿಕರ್ ಅಲಿಯಾಸ್ ಗುಡ್ಡುನನ್ನು ಸೆರೆ ಹಿಡಿದಿತ್ತು' ಎಂದು ಮೂಲಗಳು ವಿವರಿಸಿವೆ.

'ಕಚ್ಚಾ ಬಾಂಬ್ ತಯಾರಿಸಲು ಸಂಗ್ರಹಿಸಿಟ್ಟಿದ್ದ ಸಲ್ಫರ್, ಪೊಟ್ಯಾಶಿಯಂ ನೈಟ್ರೇಟ್, ಗನ್ ಪೌಡರ್, ಇದ್ದಿಲು, ಎಥೆನಾಲ್, ಚೂಪಾದ ಆಯುಧಗಳು, ಎಲೆಕ್ಟ್ರಾನಿಕ್ ಉಪಕರಣಗಳು, ಸ್ಮಾರ್ಟ್ ವಾಚ್‌ಗಳು, ನಗದು ಹಾಗೂ ಕೆಲ ದಾಖಲೆಗಳನ್ನು ಜಪ್ತಿ ಮಾಡಿತ್ತು' ಎಂದು ಪೊಲೀಸ್ ಉನ್ನತ ಮೂಲಗಳು ಮಾಹಿತಿ ನೀಡಿವೆ.

ಕಾಫಿ ತೋಟ ಒತ್ತುವರಿ ಲೀಸ್‌ಗೆ ಶೀಘ್ರವೇ ಅರ್ಜಿ ಆಹ್ವಾನ: ಮುಖ್ಯಮಂತ್ರಿ ಸಿದ್ದರಾಮಯ್ಯ

ಚಿಕ್ಕಮಗಳೂರು: ಕಾಫಿ ಬೆಳೆಗಾರರು ಒತ್ತುವರಿ ಮಾಡಿರುವ ಕಂದಾಯ ಜಾಗವನ್ನು ಹತ್ತು ಎಕರೆ ತನಕ ಲೀಸ್‌ಗೆ ನೀಡಲು ಶೀಘ್ರದಲ್ಲೇ ಅರ್ಜಿ ಆಹ್ವಾನಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಗರದಲ್ಲಿ ಆಯೋಜಿಸಿದ್ದ ಗ್ಯಾರಂಟಿ ಸಮಾವೇಶದಲ್ಲಿ ಮಾತನಾಡಿದ ಅವರು, 'ಒತ್ತುವರಿ ಮಾಡಿ ನಿರ್ಮಿಸಿದ್ದ ತೋಟಗಳನ್ನು ಲೀಸ್‌ಗೆ ನೀಡುವ ಬಗ್ಗೆ 2017–18ನೇ ಸಾಲಿನಲ್ಲಿ ನಮ್ಮ ಸರ್ಕಾರ ತೀರ್ಮಾನಿಸಿತ್ತು. ಬಳಿಕ ಅಧಿಕಾರಕ್ಕೆ ಬಂದ ಬಿಜೆಪಿ ನೇತೃತ್ವದ ಸರ್ಕಾರ ಕಾನೂನು ಜಾರಿಗೆ ತಂದು 25 ಎಕರೆ ತನಕ ಲೀಸ್ ನೀಡಲಾಗುವುದು ಎಂದು ತಿಳಿಸಿತ್ತು. ಆದರೆ, ನಾಲ್ಕು ವರ್ಷ ಏನನ್ನೂ ಮಾಡಲಿಲ್ಲ' ಎಂದರು.

'ಕಾಂಗ್ರೆಸ್ ಮುಖಂಡರಾದ ಮೋಟಮ್ಮ, ಬಿ.ಎಲ್.ಶಂಕರ್ ಅವರನ್ನು ಒಳಗೊಂಡ ನಿಯೋಗ ಬೆಂಗಳೂರಿಗೆ ಬಂದು ಮನವಿ ಮಾಡಿತ್ತು. ಲೀಸ್‌ಗೆ ನೀಡಲು ಸರ್ಕಾರ ತೀರ್ಮಾನಿಸಿದೆ' ಎಂದು ಹೇಳಿದರು.

ಸುದ್ದಿ 2 ನಿಮಿಷ

ಬೀದಿಗೆ ಇಳಿದ ಭಯೋತ್ಪಾದಕರು: ಕೋಟ ಶ್ರೀನಿವಾಸ ಪೂಜಾರಿ

ದಾವಣಗೆರೆ: 'ರಾಷ್ಟ್ರ ವಿರೋಧಿಗಳು, ಭಯೋತ್ಪಾದಕರು ಬೀದಿಗೆ ಇಳಿದು ಕೆಲಸ ಮಾಡುತ್ತಿದ್ದಾರೆ. ರಾಜಾರೋಷವಾಗಿ ಬಾಂಬ್ ಇಟ್ಟು ಹೋದರೂ ಆರೋಪಿಯನ್ನು ಬಂಧಿಸದೇ ಸರ್ಕಾರ ಹೇಳಿಕೆಯನ್ನಷ್ಟೇ ನೀಡುತ್ತಿದೆ' ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಕೋಟ ಶ್ರೀನಿವಾಸ ಪೂಜಾರಿ ಕಿಡಿಕಾರಿದರು.

'7 ಕೋಟಿ ಜನರ ಹೃದಯದಂತಿರುವ ವಿಧಾನ ಸೌಧದಲ್ಲಿಯೇ ರಾಜಾರೋಷವಾಗಿ ಪಾಕಿಸ್ತಾನ ಪರ ಘೋಷಣೆ ಕೂಗಿದ್ದಾರೆ. ಇದರಿಂದ ರಾಜ್ಯದ ಜನರಿಗೆ ನೋವಾಗಿದೆ. ಘೋಷಣೆ ಕೂಗಿದ್ದನ್ನು ಸೆರೆ ಹಿಡಿದಿರುವ ವಿಡಿಯೊ ಅಸಲಿ ಎಂದು ವಿಧಿವಿಜ್ಞಾನ ಪ್ರಯೋಗಾಲಯದಿಂದ ವರದಿ ಬಂದರೂ, ಅದನ್ನು ಒಪ್ಪಿಕೊಳ್ಳುವ ಸ್ಥಿತಿಯಲ್ಲಿ ಕಾಂಗ್ರೆಸ್ ನಾಯಕರು ಇಲ್ಲ' ಎಂದು ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಟೀಕಿಸಿದರು.

'ಪಾಕಿಸ್ತಾನದ ಪರ ಘೋಷಣೆ ವಿಚಾರ ಬಿಟ್ಟು ಉಳಿದ ಪ್ರಶ್ನೆಗೆ ಉತ್ತರ ಕೊಡುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳುತ್ತಾರೆ. ವಿಧಾನಸೌಧದಲ್ಲಿ ಈ ಘಟನೆ ನಡೆದಿದ್ದರೂ, ಅಸಹಾಯಕತೆ ವ್ಯಕ್ತಪಡಿಸುತ್ತಾರೆ. ಇವರು ಹೇಗೆ ಜನರನ್ನು ಕಾಪಾಡುತ್ತಾರೆ' ಎಂದು ಅವರು ಪ್ರಶ್ನಿಸಿದರು.

'ಮಾತೆತ್ತಿದರೆ ಸಂವಿಧಾನದ ರಕ್ಷಣೆ ಎನ್ನುತ್ತಾರೆ. ತುರ್ತು ಪರಿಸ್ಥಿತಿ ಹೊರತುಪಡಿಸಿ ಯಾವತ್ತೂ ಸಂವಿಧಾನಕ್ಕೆ ಧಕ್ಕೆಯಾಗಿಲ್ಲ. ತುರ್ತು ಪರಿಸ್ಥಿತಿ ತಂದವರೇ ಕಾಂಗ್ರೆಸ್‌ನವರು. ಈಗ ಸಂವಿಧಾನಕ್ಕೆ ಧಕ್ಕೆ ಬಂದಿದೆ ಎಂದು ಜಾಗೃತಿ ಜಾಥಾ ಮಾಡುತ್ತಾರೆ. ದೇಶ ವಿರೋಧಿ ಕೃತ್ಯದಲ್ಲಿ ತೊಡಗಿಸಿಕೊಂಡವರನ್ನು ಪಕ್ಷದ ಭಾಷಣ ಮಾಡಲು ಕರೆಯುತ್ತಾರೆ' ಎಂದು ಆರೋಪಿಸಿದರು.



ರಾಜಕೀಯ ಲಾಭಕ್ಕಾಗಿ ರಾಜ್ಯದ ಘನತೆ ಹಾಳು: ಡಿಕೆಶಿ

ಬೆಂಗಳೂರು: 'ಬಿಜೆಪಿಯವರು ತಮ್ಮ ರಾಜಕೀಯ ಲಾಭಕ್ಕಾಗಿ ರಾಜ್ಯದ ಘನತೆ ಹಾಳು ಮಾಡುತ್ತಿದ್ದಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

ರಾಮೇಶ್ವರ ಕೆಫೆ ಹೋಟೆಲ್‌ನಲ್ಲಿ ನಡೆದ ಸ್ಫೋಟ ವಿಚಾರವಾಗಿ ಬಿಜೆಪಿ ನಾಯಕರು ನೀಡುತ್ತಿರುವ ಹೇಳಿಕೆಯ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಬಿಜೆಪಿ ನಾಯಕರು ಈ ವಿಚಾರವಾಗಿ ರಾಜಕೀಯ ಮಾಡಲು ಮುಂದಾಗಿದ್ದಾರೆ. ರಾಜ್ಯ ಹಾಗೂ ಬೆಂಗಳೂರಿನ ಘನತೆಗೆ ಧಕ್ಕೆ ತರುತ್ತಿದ್ದಾರೆ. ಆ ಮೂಲಕ, ತಮ್ಮ ಗೌರವವನ್ನೂ ಹಾಳು ಮಾಡಿಕೊಳ್ಳುತ್ತಿದ್ದಾರೆ' ಎಂದರು.

'ಬಾಂಬ್ ಸ್ಫೋಟ ಪ್ರಕರಣದ ತನಿಖೆಯಲ್ಲಿ ಪೊಲೀಸ್ ಅಧಿಕಾರಿಗಳು ತಮ್ಮ ಕರ್ತವ್ಯ ಮಾಡುತ್ತಿದ್ದಾರೆ. ತನಿಖೆ ವಿಚಾರದಲ್ಲಿ ನಾನು ಯಾವುದೇ ಹೇಳಿಕೆ ನೀಡುವುದಿಲ್ಲ. ಈ ಪ್ರಕರಣವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, ಎಲ್ಲ ಆಯಾಮಗಳಲ್ಲಿ ತನಿಖೆ ನಡೆಸಲಾಗುತ್ತಿದೆ' ಎಂದರು.

'ಇದು ಬ್ರ್ಯಾಂಡ್ ಬೆಂಗಳೂರು ಅಲ್ಲ, ಬಾಂಬ್ ಬೆಂಗಳೂರು' ಎಂಬ ಬಿಜೆಪಿ ಆರೋಪಕ್ಕೆ, 'ಅವರಿಗೆ ಕನಿಷ್ಠ ಪರಿಜ್ಞಾನವೂ ಇಲ್ಲ. ಸಮಯ ಪ್ರಜ್ಞೆ, ತಮ್ಮ ಜವಾಬ್ದಾರಿಯ ಅರಿವು ಇಲ್ಲದವರು ಈ ರೀತಿ ಮಾತನಾಡುತ್ತಾರೆ' ಎಂದು ತಿರುಗೇಟು ನೀಡಿದರು.

ಸುಧಾ, ಮಯೂರ ಓದಿರಿ

ಸೋಮವಾರ, ಮಾರ್ಚ್ 4, 2024 | ₹ 7.00

www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಹುಲಿ ಆಟ
ಮುಂಬೈನ ಬೈಕುಲಾ ಪ್ರಾಣಿ ಸಂಗ್ರಹಾಲಯದಲ್ಲಿ ರಾಯಲ್ ಬೆಂಗಾಲ್ ಹುಲಿ ಕಂಡಿದ್ದು ಹೀಗೆ...

ಪಾನ್, ತಂಬಾಕು ಖರೀದಿ: ಕುಟುಂಬದ ಖರ್ಚು ಏರಿಕೆ 8

ಡಬ್ಲ್ಯುಟಿಸಿ ರ‍್ಯಾಂಕಿಂಗ್: ಅಗ್ರಸ್ಥಾನಕ್ಕೆ ಭಾರತ 10

‘ಇಂಡಿಯಾ’ ಮೈತ್ರಿ ಚುನಾವಣಾ ಕಹಳೆ 9

ರಾಜಕಾರಣಕ್ಕೆ ಹರ್ಷವರ್ಧನ್ ವಿದಾಯ 9



ಆಯ್ದ ಪೊಲೀಸರಿಗೆ ಸಿಐಡಿ–ಸಿಸಿಐಟಿಆರ್ ತರಬೇತಿ ● ತನಿಖೆಗೆ ಮಾರ್ಗದರ್ಶನ

ಹ್ಯಾಕಿಂಗ್ ಮಟ್ಟಹಾಕಲು ತಂಡ

● ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಕಂಪ್ಯೂಟರ್, ಮೊಬೈಲ್ ಹಾಗೂ ಇತರೆ ತಾಂತ್ರಿಕ ವ್ಯವಸ್ಥೆಗಳನ್ನು ಹ್ಯಾಕ್ ಮಾಡಿ ದತ್ತಾಂಶ ದುರುಪಯೋಗಪಡಿಸಿಕೊಳ್ಳುವ ಹ್ಯಾಕರ್‌ಗಳ ಕೃತ್ಯವನ್ನು ಮಟ್ಟಹಾಕಲು ಪೊಲೀಸ್ ಇಲಾಖೆಯ ‘ಸಿಎಚ್‌ಎಫ್‌ಐ (ಕಂಪ್ಯೂಟರ್ ಹ್ಯಾಕಿಂಗ್ ಮತ್ತು ಫೊರೆನ್ಸಿಕ್ ಇನ್ವೆಸ್ಟಿಗೇಟರ್)’ ಪರಿಣತರ ತಂಡ ಕಾರ್ಯಾಚರಣೆಗೆ ಇಳಿದಿದೆ.

ಸೈಬರ್ ಅಪರಾಧಗಳ ಸಂಖ್ಯೆ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿದ್ದು, ಹ್ಯಾಕಿಂಗ್ ಪ್ರಕರಣಗಳೂ ದುಪ್ಪಟ್ಟಾಗುತ್ತಿವೆ. ಆಸ್ಪತ್ರೆಗಳು, ಉದ್ದಿಮೆಗಳು, ಶಾಲೆ– ಕಾಲೇಜು ಸೇರಿದಂತೆ ವಿವಿಧ ಕ್ಷೇತ್ರಗಳ ಸಂಸ್ಥೆಗಳಿಗೆ ಹ್ಯಾಕರ್‌ಗಳ ಉಪಟಳ ಹೆಚ್ಚಾಗಿದೆ. ಇಂಥ ಹ್ಯಾಕಿಂಗ್ ಪ್ರಕರಣಗಳನ್ನು ಭೇದಿಸುವ ಉದ್ದೇಶದಿಂದ ನುರಿತ ಪೊಲೀಸರನ್ನು ಒಳಗೊಂಡ ಸಿಎಚ್‌ಎಫ್‌ಐ ತಂಡ ರಚಿಸಲಾಗಿದೆ.

ಪೊಲೀಸ್ ಇಲಾಖೆಯ ವಿವಿಧ ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಆಯ್ದ ಐಪಿಎಸ್, ಡಿವೈಎಸ್‌ಪಿ/ಎಸಿಪಿ, ಇನ್‌ಸ್ಪೆಕ್ಟರ್ ಹಾಗೂ ಪಿಎಸ್‌ಐಗಳು ತಂಡದಲ್ಲಿದ್ದಾರೆ.

‘ತಂತ್ರಜ್ಞಾನ ಆಧರಿಸಿ ಸೇವೆ ಒದಗಿಸುವ ಸಂಸ್ಥೆಗಳನ್ನು ಗುರಿಯಾಗಿಸಿಕೊಂಡು ಹ್ಯಾಕರ್‌ಗಳು ಕೃತ್ಯ ಎಸಗುತ್ತಿದ್ದಾರೆ. ದತ್ತಾಂಶಗಳನ್ನು ಕದ್ದು ಹಣ ದೋಚುತ್ತಿದ್ದಾರೆ. ಕೆಲ ಹ್ಯಾಕರ್‌ಗಳು, ದತ್ತಾಂಶ ಕದ್ದು ಮಾರಾಟ ಮಾಡುತ್ತಿದ್ದಾರೆ. ಇಂಥ ಪ್ರಕರಣಗಳಲ್ಲಿ ತನಿಖಾಧಿಕಾರಿ ಹಾಗೂ ತನಿಖಾ ತಂಡದಲ್ಲಿರುವ ಪೊಲೀಸರಿಗೆ ಸಿಎಚ್‌ಎಫ್‌ಐ ಪರಿಣತರು ಮಾರ್ಗದರ್ಶನ ಮಾಡಲಿದ್ದಾರೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

‘ಕೆಲ ಆಸ್ಪತ್ರೆ ಸರ್ವರ್‌ಗಳನ್ನು ಹ್ಯಾಕ್ ಮಾಡಿ, ರೋಗಿಗಳ ಮಾಹಿತಿ ಕದ್ದು ಹಣ ದೋಚಿರುವ ಬಗ್ಗೆ ಈ ಹಿಂದೆ ಪ್ರಕರಣಗಳು ದಾಖಲಾಗಿದ್ದವು. ಇಂಥ ಹಲವು ಪ್ರಕರಣಗಳಲ್ಲಿ ಹ್ಯಾಕರ್ ಪತ್ತೆ ಕಷ್ಟವಾಗಿದೆ’ ಎಂದರು.

ಸಿಐಡಿ ಕೇಂದ್ರದಲ್ಲಿ ತರಬೇತಿ ಪಡೆದ ‘ಸಿಎಚ್‌ಎಫ್‌ಐ’ ಪೊಲೀಸರ ತಂಡ

ಸಿಐಡಿ ಕೇಂದ್ರದಲ್ಲಿ ತರಬೇತಿ

ತಾಂತ್ರಿಕ ನೈಪುಣ್ಯ ಹೊಂದಿರುವ ಹಾಗೂ ತಂತ್ರಜ್ಞಾನದಲ್ಲಿ ಪರಿಣತಿ ಹೊಂದಿರುವ ಪೊಲೀಸ್ ಅಧಿಕಾರಿಗಳನ್ನು ಸಿಎಚ್‌ಎಫ್‌ಐ ತಂಡಕ್ಕೆ ಆಯ್ಕೆ ಮಾಡಲಾಗಿದೆ. ಸಿಐಡಿಯಲ್ಲಿರುವ ಸೈಬರ್ ಅಪರಾಧಗಳ ತನಿಖೆ ತರಬೇತಿ ಮತ್ತು ಸಂಶೋಧನಾ ಕೇಂದ್ರದಲ್ಲಿ (ಸಿಸಿಐಟಿಆರ್) ತರಬೇತಿ ಸಹ ನೀಡಲಾಗಿದೆ.

‘ಸುಲಿಗೆ, ಕಳ್ಳತನ ಹಾಗೂ ಇತರೆ ಅಪರಾಧಗಳಿಗಿಂತ, ಸೈಬರ್ ಅಪರಾಧಗಳು ಮುಂದಿನ ದಿನಗಳಲ್ಲಿ ಹೆಚ್ಚಾಗುವ ಸಾಧ್ಯತೆ ಇದೆ. ಹ್ಯಾಕರ್‌ಗಳ ಕೃತ್ಯವನ್ನು ಭೇದಿಸಲು ಹಾಗೂ ಹ್ಯಾಕಿಂಗ್ ಪ್ರಕರಣಗಳನ್ನು ಸುಲಭವಾಗಿ ಪತ್ತೆ ಮಾಡಲು ಅನುಕೂಲವಾಗಲೆಂದು ಸಿಎಚ್‌ಎಫ್‌ಐ ತಂಡ ರಚಿಸಲಾಗಿದೆ. ತಂಡದ ಪ್ರತಿಯೊಬ್ಬರಿಗೂ ಸೈಬರ್ ತಜ್ಞರಿಂದ ಪ್ರಾಯೋಗಿಕ ತರಬೇತಿ ಕೊಡಿಸಲಾಗಿದೆ’ ಎಂದು ಸಿಐಡಿ ಡಿಜಿಪಿ ಎಂ.ಎ. ಸಲೀಂ ತಿಳಿಸಿದರು.

ಕೆಲಸದ ವಿಧಾನ ಹೇಗೆ?

ವೆಬ್ ಅಪ್ಲಿಕೇಶನ್ ಹ್ಯಾಕಿಂಗ್, ಕಂಪ್ಯೂಟರ್ ಹ್ಯಾಕಿಂಗ್, ವೆಬ್ ಸರ್ವರ್ ಹ್ಯಾಕಿಂಗ್ ಹಾಗೂ ವೈರ್‌ಲೆಸ್ ನೆಟ್‌ವರ್ಕ್ ಹ್ಯಾಕಿಂಗ್ ಪ್ರಕರಣಗಳು ಹೆಚ್ಚಾಗಿ ವರದಿಯಾಗುತ್ತಿವೆ. ಇಂಥ ಹ್ಯಾಕಿಂಗ್ ಸಂಬಂಧ ದಾಖಲಾಗುವ ಪ್ರಕರಣಗಳ ತನಿಖೆಯಲ್ಲಿ ಸಿಎಚ್‌ಎಫ್‌ಐ ಸದಸ್ಯರು ಪ್ರಮುಖ ಪಾತ್ರ ವಹಿಸಲಿದ್ದಾರೆ. ಪ್ರತಿ ಜಿಲ್ಲೆ ಹಾಗೂ ಕಮಿಷನರೇಟ್ ವ್ಯಾಪ್ತಿಯಲ್ಲಿ ಸಿಎಚ್‌ಎಫ್‌ಐ ಸದಸ್ಯರಿದ್ದಾರೆ.

> **ಹ್ಯಾಕರ್ ಕೃತ್ಯಗಳನ್ನು ಬಯಲಿಗೆಳೆಯಲು ಆಯ್ದ ಪೊಲೀಸರಿಗೆ ತರಬೇತಿ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಪೊಲೀಸರಿಗೆ ತರಬೇತಿ ನೀಡುವ ಉದ್ದೇಶವಿದೆ**
> **ಎಂ.ಎ. ಸಲೀಂ,** ಸಿಐಡಿ ಡಿಜಿಪಿ

‘ಹ್ಯಾಕಿಂಗ್ ಪ್ರಕರಣ ದಾಖಲಾಗುತ್ತಿದ್ದಂತೆ ಸ್ಥಳಕ್ಕೆ ಸಿಎಚ್‌ಎಫ್‌ಐ ಅಧಿಕಾರಿಗಳು ಭೇಟಿ ನೀಡಲಿದ್ದಾರೆ. ಪ್ರಕರಣದ ಪ್ರಾಥಮಿಕ ಪುರಾವೆಗಳನ್ನು ಸಂಗ್ರಹಿಸಲಿದ್ದಾರೆ. ಚಾಲ್ತಿಯಲ್ಲಿರುವ ಕಾನೂನು ಅನ್ವಯ ಎಲ್ಲ ದಾಖಲೆಗಳನ್ನು ಹೊಂದಿಸಲಿದ್ದಾರೆ. ಯಾವ ರೀತಿ ಹ್ಯಾಕಿಂಗ್ ಆಗಿದೆ? ಏನೆಲ್ಲ ದತ್ತಾಂಶ ಕಳವಾಗಿದೆ? ವ್ಯವಸ್ಥೆಯಲ್ಲಿದ್ದ ಲೋಪಗಳು ಏನು? ಹ್ಯಾಕರ್ ಯಾವ ಅಸ್ತ್ರ ಬಳಸಿ ಹ್ಯಾಕಿಂಗ್ ಮಾಡಿದ್ದಾನೆ? ಎಂಬೆಲ್ಲ ಮಾಹಿತಿಯನ್ನು ಕಲೆಹಾಕಲಿದ್ದಾರೆ. ಅದನ್ನು ಪ್ರಕರಣದ ತನಿಖಾಧಿಕಾರಿ ಜೊತೆ ಹಂಚಿಕೊಳ್ಳಲಿದ್ದಾರೆ’ ಎಂದು ಪೊಲೀಸ್ ಅಧಿಕಾರಿ ಹೇಳಿದರು.

‘ಎಥಿಕಲ್ (ನೈತಿಕ್) ಹ್ಯಾಕಿಂಗ್ ರೀತಿಯಲ್ಲಿ ಸಿಎಚ್‌ಎಫ್‌ಐ ಅಧಿಕಾರಿಗಳು ಕೆಲಸ ಮಾಡಲಿದ್ದಾರೆ. ಯಾವುದಾದರೂ ಸಂಸ್ಥೆಯ ತಾಂತ್ರಿಕ ವ್ಯವಸ್ಥೆಯಲ್ಲಿ ಲೋಪಗಳು ಇದ್ದರೆ, ಅವುಗಳನ್ನು ಪತ್ತೆ ಮಾಡಿ ಸರಿಪಡಿಸಲು ಸಲಹೆ ನೀಡಲಿದ್ದಾರೆ’ ಎಂದು ತಿಳಿಸಿದರು.

‘ಉತ್ತರ ಪತ್ರಿಕೆ’ ಪ್ರತ್ಯಕ್ಷ ಆದಲ್ಲಿಯೂ ‘ಪರೀಕ್ಷಾ ಕೇಂದ್ರ’

ಗೈರಾದ ವಿದ್ಯಾರ್ಥಿಗಳ ಪತ್ರಿಕೆ ಮೌಲ್ಯಮಾಪನದಲ್ಲಿ ಪತ್ತೆ

● ರಾಜೇಶ್ ರೈ ಚಟ್ಲ

ಬೆಂಗಳೂರು: ಡಿ.ಫಾರ್ಮಾ (ಡಿಪ್ಲೊಮಾ ಇನ್ ಫಾರ್ಮಸಿ) ಪರೀಕ್ಷೆಗೆ ಗೈರಾಗಿದ್ದ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳು ಮೌಲ್ಯಮಾಪನ ವೇಳೆಯಲ್ಲಿ ಪತ್ತೆಯಾಗಿದ್ದ ಫಾರ್ಮಸಿ ಕಾಲೇಜುಗಳ ಮೇಲೆ ಕ್ರಮ ತೆಗೆದುಕೊಳ್ಳುವ ಬದಲು, ಈ ಕಾಲೇಜುಗಳಿಗೆ ಔಷಧ ನಿಯಂತ್ರಣ ಇಲಾಖೆಯ ಪರೀಕ್ಷಾ ಪ್ರಾಧಿಕಾರ ಮಂಡಳಿ (ಡಿ. ಫಾರ್ಮಸಿ) ಪರೀಕ್ಷಾ ಕೇಂದ್ರ ನೀಡಿದೆ.

2023ರ ಜನವರಿಯಲ್ಲಿ ನಡೆದ ಪ್ರಥಮ ಡಿ. ಫಾರ್ಮಸಿ ವಾರ್ಷಿಕ ಪರೀಕ್ಷೆಯಲ್ಲಿ 9 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗೆ ಗೈರಾಗಿದ್ದ 104 ವಿದ್ಯಾರ್ಥಿಗಳ 397 ಉತ್ತರ ಪತ್ರಿಕೆಗಳು ಪತ್ತೆಯಾಗಿದ್ದವು. ಈ ಕುರಿತು ತನಿಖೆ ನಡೆಸಿದ್ದ ಆಂತರಿಕ ಸಮಿತಿಯು, ಈ ಹೆಚ್ಚುವರಿ ಪತ್ರಿಕೆಗಳು ತುಮಕೂರು ಜಿಲ್ಲೆಯ ಕೊರಟಗೆರೆಯ ಪ್ರಿಯದರ್ಶಿನಿ ಕಾಲೇಜ್ ಆಫ್ ಫಾರ್ಮಸಿಯ ಪರೀಕ್ಷಾ ಕೇಂದ್ರಕ್ಕೆ ಸಂಬಂಧಿಸಿದ್ದು ಎಂದು ತನ್ನ ವರದಿಯಲ್ಲಿ ತಿಳಿಸಿದೆ.

ಪರೀಕ್ಷೆಗೆ ಗೈರಾದರೂ ಉತ್ತರ ಪತ್ರಿಕೆಗಳು ಪ್ರತ್ಯಕ್ಷವಾದ ಪ್ರಕರಣ ದೃಢಪಟ್ಟ ಫಾರ್ಮಸಿ ಕಾಲೇಜುಗಳಿಗೆ ಮತ್ತೆ ಪರೀಕ್ಷಾ ಕೇಂದ್ರಗಳನ್ನು ನೀಡಿರುವುದರ ಹಿಂದೆ ಅವ್ಯವಹಾರ ನಡೆದಿರುವ ಶಂಕೆ ವ್ಯಕ್ತವಾಗಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪರೀಕ್ಷಾ ಪ್ರಾಧಿಕಾರ ಮಂಡಳಿಯ ಸದಸ್ಯರಾಗಿದ್ದ ಡಾ. ವಿಜಯ ಜಿ. ಜೋಷಿ ಅಧ್ಯಕ್ಷತೆಯ ಸಮಿತಿಯು ಈಗಾಗಲೇ ಅಂತಿಮ ವರದಿ ಸಲ್ಲಿಸಿದೆ. ಈ ವರದಿಯನ್ನು ಔಷಧ ನಿಯಂತ್ರಕರು ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಸಲ್ಲಿಸಿದ್ದಾರೆ.

ಈ ತನಿಖಾ ಸಮಿತಿಯಲ್ಲಿ ಸದಸ್ಯರಾಗಿದ್ದ ನಜೀರ್ ಅಹಮದ್ ಅವರು ಈಗ ಮಂಡಳಿಯ ಸದಸ್ಯ ಕಾರ್ಯದರ್ಶಿ. ಸರ್ಕಾರಿ ಕಾಲೇಜ್ ಆಫ್ ಫಾರ್ಮಸಿಯ ಪ್ರಾಂಶುಪಾಲರಾದ ಡಾ. ಕಲಾಸ್ಕರ್ ಗುರುನಾಥ್ ಅವರು ಮಂಡಳಿಯ ಅಧ್ಯಕ್ಷರಾಗಿದ್ದಾರೆ.

‘ಕೊರಟಗೆರೆಯ ಪರೀಕ್ಷಾ ಕೇಂದ್ರಗಳಲ್ಲಿ ಪತ್ತೆಯಾಗಿದ್ದ ಈ ಹೆಚ್ಚುವರಿ ಉತ್ತರ ಪತ್ರಿಕೆಗಳು, ಈ ಹಿಂದಿನ ಪರೀಕ್ಷೆಗೆ ಪೂರೈಕೆ ಮಾಡಿರುವ ಉತ್ತರ ಪತ್ರಿಕೆಗಳಾಗಿವೆ’ ಎಂದು ಮಂಡಳಿಯ ಹಿಂದಿನ ಸದಸ್ಯ ಕಾರ್ಯದರ್ಶಿಯ ಹೇಳಿಕೆಯನ್ನು ತನಿಖಾ ವರದಿಯಲ್ಲಿ ಉಲ್ಲೇಖಿಸಲಾಗಿದೆ.

4ನೇ ಪುಟ ನೋಡಿ

ಫಲಿತಾಂಶ ವಿಳಂಬ ಬಿ.ಫಾರ್ಮಾ ನೇರ ಪ್ರವೇಶಕ್ಕೆ ಅಡ್ಡಿ

ಇದೇ ಜನವರಿಯಲ್ಲಿ ನಡೆದ ಡಿ. ಫಾರ್ಮಾ ಎರಡನೇ ವರ್ಷದ ವಾರ್ಷಿಕ ಪರೀಕ್ಷೆಯ ಫಲಿತಾಂಶ ಇನ್ನೂ ಪ್ರಕಟವಾಗಿಲ್ಲ.

ಫಲಿತಾಂಶ ವಿಳಂಬ ಕುರಿತು ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಪತ್ರ ಬರೆದಿರುವ ರಾಜ್ಯ ಫಾರ್ಮಸಿ ಕಾಲೇಜುಗಳ ಆಡಳಿತ ಸಂಘ, ‘ಡಿ. ಫಾರ್ಮಾ ಎರಡನೇ ವರ್ಷದ ಪರೀಕ್ಷೆ ಮುಗಿದು 45 ದಿನಗಳು ಕಳೆದರೂ ಫಲಿತಾಂಶ ಪ್ರಕಟಿಸಿಲ್ಲ. ವಿಶ್ವವಿದ್ಯಾಲಯಗಳಲ್ಲಿ ದ್ವಿತೀಯ ಬಿ. ಫಾರ್ಮಾ ನೇರ ಪ್ರವೇಶಕ್ಕೆ (ಲ್ಯಾಟರಲ್ ಎಂಟ್ರಿ) ಫೆ. 29 ಕೊನೆಯ ದಿನ. ಫಲಿತಾಂಶ ಬಾರದೇ ಇರುವುದರಿಂದ ಬಿ. ಫಾರ್ಮಾ ದ್ವಿತೀಯ ವರ್ಷಕ್ಕೆ ನೇರ ಪ್ರವೇಶ ಪಡೆಯುವ ಅವಕಾಶದಿಂದ ವಿದ್ಯಾರ್ಥಿಗಳು ವಂಚಿತರಾಗಿದ್ದಾರೆ. ಹೀಗಾಗಿ ಈ ವಿಷಯದಲ್ಲಿ ಮಧ್ಯಪ್ರವೇಶ ಮಾಡಬೇಕು’ ಎಂದು ಮನವಿ ಮಾಡಿದೆ.

ಚಲಿಸುತ್ತಿದ್ದ ಕಾರಿನಲ್ಲಿ ಬೆಂಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಯಂಡಹಳ್ಳಿ ಮೆಟ್ರೊ ನಿಲ್ದಾಣ ಬಳಿ ಚಲಿಸುತ್ತಿದ್ದ ಕಾರಿನಲ್ಲಿ ಭಾನುವಾರ ಬೆಂಕಿ ಕಾಣಿಸಿಕೊಂಡು ಹೊತ್ತಿ ಉರಿಯಿತು.

'ಟ್ಯಾನರಿ ರಸ್ತೆ ಬಳಿ ವಾಸವಿರುವ ಕುಟುಂಬದ ಸದಸ್ಯರು ಕಾರಿನಲ್ಲಿ ಹೊರಟಿದ್ದರು. ಕಾರಿನ ಹಿಂಬದಿಯಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಬೆಂಕಿ ಕಂಡ ಸದಸ್ಯರು, ಕಾರಿನಿಂದ ಇಳಿದು ಸುರಕ್ಷಿತ ಸ್ಥಳದಲ್ಲಿ ನಿಂತಿದ್ದರು. ಬೆಂಕಿಯಿಂದ ಕಾರು ಹೊತ್ತಿ ಉರಿದು, ಸುಟ್ಟಿದೆ. ಬೆಂಕಿ ಹೊತ್ತಿಕೊಳ್ಳಲು ಕಾರಣ ಗೊತ್ತಾಗಿಲ್ಲ' ಎಂದು ಪೊಲೀಸ್ ಮೂಲಗಳು ಹೇಳಿವೆ.

2 ಆಟೊಗಳಿಗೆ ಬೆಂಕಿ: ಆರೋಪಿ ವಶಕ್ಕೆ

ದುಷ್ಕರ್ಮಿ ಕೃತ್ಯದಿಂದ ಸುಟ್ಟಿರುವ ಆಟೊ

ಹೆಣ್ಣೂರು ಬಳಿಯ ಚಿಕ್ಕಣ್ಣ ಬಡಾವಣೆಯಲ್ಲಿ ಎರಡು ಆಟೊಗಳಿಗೆ ಬೆಂಕಿ ಹಚ್ಚಲಾಗಿದ್ದು, ಕೃತ್ಯ ಎಸಗಿದ್ದ ಆರೋಪಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಶನಿವಾರ ರಾತ್ರಿ 12.45 ಗಂಟೆ ಸುಮಾರಿಗೆ ಎರಡು ಆಟೋಗಳಿಗೆ ಬೆಂಕಿ ಹಚ್ಚಿ ಆರೋಪಿ ಪರಾರಿಯಾಗಿದ್ದ. ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯ ಆಧರಿಸಿ ಆರೋಪಿಯನ್ನು ಪತ್ತೆ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿ ಕೃತ್ಯದಿಂದ ಆಟೊಗಳು ಸುಟ್ಟಿವೆ. ಯಾವ ಕಾರಣಕ್ಕೆ ಬೆಂಕಿ ಹಚ್ಚಿದ್ದನೆಂಬುದು ತನಿಖೆಯಿಂದ ತಿಳಿಯಬೇಕಿದೆ' ಎಂದು ತಿಳಿಸಿವೆ.

PUBLIC NOTICE

ನಮ್ಮ ಕಕ್ಷಿದಾರರು ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಹುಳಿಮಾವು ಗ್ರಾಮದಲ್ಲಿರುವ ಸರ್ವೆ ನಂ. 67/2 ಮತ್ತು 75/1Bಗೆ ಸೇರಿದ ವಾಣಿಜ್ಯ ಜಮೀನಿನ ಭಾಗ, ಪ್ರಸಕ್ತ ಬೆಂಗಳೂರು, ಅರಕೆರೆ ಉಪವಿಭಾಗದ, ಹುಳಿಮಾವು ಮುನಿಸಿಪಲ್ ಸಂಖ್ಯೆಗಳಾದ 483/483/495/75/1/67/2 ಮತ್ತು 710/700/642/67/2/75/1Bಯ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಇನ್ನು ಮುಂದೆ **ಷೆಡ್ಯೂಲ್ ಪ್ರಾಪರ್ಟಿ** ಎಂದು ಕರೆಯಲ್ಪಡುವ ಸಂಪೂರ್ಣ ಸ್ವತ್ತನ್ನು ಈಗಿನ ಮಾಲೀಕರಾದ ನಂ. 392, 11ನೇ ಮೈನ್, 3ನೇ ಬ್ಲಾಕ್, ಜಯನಗರ, ಬೆಂಗಳೂರು–560011 ವಿಳಾಸದಲ್ಲಿ ಕಛೇರಿಯನ್ನು ಹೊಂದಿರುವ ಮೆ॥ ಸರ್ವೀಸ್ ಸೊಸೈಟಿ (**ಮಾಲೀಕರು**) ಅವರಿಗೆ ಸೇರಿದ ದಾಖಲೆ ಪತ್ರಗಳನ್ನು ಪರಿಶೀಲಿಸುತ್ತಿದ್ದಾರೆ.

ಷೆಡ್ಯೂಲ್ ಸ್ವತ್ತಿನ ಮೇಲೆ ಅಥವಾ ಸ್ವತ್ತಿನ ಯಾವುದೇ ಭಾಗದ ಮೇಲೆ ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳು ಹಕ್ಕು, ಮಾಲೀಕತ್ವ, ಹಿತಾಸಕ್ತಿ ಅಥವಾ ಕ್ಲೈಮ್‌ಗಳನ್ನು ಹೊಂದಿದ್ದಲ್ಲಿ ಸದರಿ ಮಾಲೀಕರುಗಳ ವಿರುದ್ಧ ಆಕ್ಷೇಪಣೆಗಳಿದ್ದಲ್ಲಿ ಅಥವಾ ಸದರಿ ಮಾಲೀಕರಿಂದ ನಮ್ಮ ಕಕ್ಷಿದಾರರ ಪರವಾಗಿ ಆಗುವ ವ್ಯವಹಾರದ ಬಗ್ಗೆ ಆಕ್ಷೇಪಣೆ ಇದ್ದಲ್ಲಿ ಅಂತಹವರು ಸದರಿ ಪ್ರಕಟಣೆ ಪ್ರಕಟವಾದ ದಿನಾಂಕದಿಂದ **15 ದಿನಗಳ ಒಳಗಾಗಿ** ತಮ್ಮ ಆಕ್ಷೇಪಣೆಯನ್ನು ದಾಖಲಾತಿಗಳ ಪುರಾವೆಯೊಡನೆ ಕೆಳ ಸಹಿದಾರರಿಗೆ ತಿಳಿಸತಕ್ಕದ್ದು. ಇಲ್ಲದಿದ್ದರೆ ಷೆಡ್ಯೂಲ್ ಸ್ವತ್ತಿನ ಸಂಬಂಧ ಯಾವುದೇ ವ್ಯಕ್ತಿಯು ಯಾವುದೇ ಹಕ್ಕು, ಹಕ್ಕುಬಾಧ್ಯತೆ ಅಥವಾ ಆಸಕ್ತಿ ಹೊಂದಿರುವುದಿಲ್ಲವೆಂದು ತಿಳಿಯಲಾಗುವುದು ಮತ್ತು ಇದರಂತೆ ನಮ್ಮ ಕಕ್ಷಿದಾರರು ಈ ಸ್ವತ್ತಿನ ಮೇಲೆ ಇತರರ ಹಕ್ಕು ಇಲ್ಲವೆಂದು ಭಾವಿಸಿ ಷೆಡ್ಯೂಲ್ ಸ್ವತ್ತಿನ ಬಗ್ಗೆ ವ್ಯವಹರಿಸಲು ಮುಂದಾಗುವರು.

ಷೆಡ್ಯೂಲ್ ಆಸ್ತಿ

ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಹುಳಿಮಾವು ಗ್ರಾಮದಲ್ಲಿರುವ ಸರ್ವೆ ನಂ. 67/2 ಮತ್ತು 75/1Bಗೆ ಸೇರಿದ ವಾಣಿಜ್ಯ ಜಮೀನಿನ ಭಾಗ, ಪ್ರಸಕ್ತ ಬೆಂಗಳೂರು, ಅರಕೆರೆ ಉಪವಿಭಾಗದ, ಹುಳಿಮಾವು ಮುನಿಸಿಪಲ್ ಸಂಖ್ಯೆಗಳಾದ 483/483/495/75/1/67/2 ಮತ್ತು 710/700/642/67/2/75/1Bಯ ಒಟ್ಟು 1 ಎಕರೆ 8 ಗುಂಟೆಗಳ ವಿಸ್ತೀರ್ಣ (8 ಗುಂಟೆಗಳ ಖರಾಬು ಹೊರತುಪಡಿಸಿ) ಹೊಂದಿರುವ ಸಂಪೂರ್ಣ ಸ್ವತ್ತು. ಸದರಿ ವಿವರಗಳು ಕೆಳಕಂಡ ಕೋಷ್ಟಕದಲ್ಲಿ ನಮೂದಿಸಿರುವಂತೆ ಇರುತ್ತದೆ:–

ಐಟಂ ನಂ.	ಸರ್ವೆ ಸಂಖ್ಯೆ	ಮುನಿಸಿಪಲ್ ಸಂಖ್ಯೆ	ಜಮೀನಿನಲ್ಲಿರುವ ಕಟ್ಟಡ	ಚೆಕ್ಕುಬಂದಿ			
				ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1	67/2 & 75/1B	483/483/495/ 75/1/67/2	ಮಿನಿ ಚಿತ್ರಮಂದಿರ	ಬೆಂಗಳೂರು – ಬನ್ನೇರುಘಟ್ಟ ರಸ್ತೆ	ಸರ್ವೆ ನಂ. 67/2 & 75/1Bಯ ಉಳಿದ ಭಾಗ (ಐಟಂ ನಂ. 2)	ಎಂ.ಸುರೇಶ್ ಅವರಿಗೆ ಸೇರಿದ ಸರ್ವೆ ನಂ. 75/1Bಯ ಭಾಗದ ಸ್ವತ್ತು (ಈಗಿನ ಸರ್ವೆ ನಂ. 75/1B1ರ ಭಾಗ)	ರಸ್ತೆ
2	67/2 & 75/1B	710/700/642/ 67/2/75/1B	ತೋಟದ ಮನೆ	ಸರ್ವೆ ನಂ. 67/2 & 75/1Bಯ ಉಳಿದ ಭಾಗ (ಐಟಂ ನಂ. 1)	ಮಳೆ ನೀರಿನ ಕಾಲುವೆ	ಎಂ.ಸುರೇಶ್ ಅವರಿಗೆ ಸೇರಿದ ಸರ್ವೆ ನಂ. 75/1Bಯ ಭಾಗದ ಸ್ವತ್ತು (ಈಗಿನ ಸರ್ವೆ ನಂ. 75/1B1ರ ಭಾಗ)	ರಸ್ತೆ

ಒಟ್ಟು 1 ಎಕರೆ 8 ಗುಂಟೆಗಳ ವಿಸ್ತೀರ್ಣ (8 ಗುಂಟೆಗಳ ಖರಾಬು ಹೊರತುಪಡಿಸಿ)

ಸಹಿ/– (ಆರ್. ಸುನೀತಾ), ವಕೀಲರು, ಇಂಡಸ್‌ಲಾ
ನಂ. 34, 7ನೇ ಅಡ್ಡರಸ್ತೆ, ವಸಂತನಗರ ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು–560001 ದೂ. +91–80–42423000

ಆತಂಕದಲ್ಲಿ ರೈತರು • ರಾತ್ರಿಯಿಡೀ ಕಾವಲು • ಕಡಿಮೆ ಬೆಲೆಗೆ ಮಾರಾಟ

ಹೆಸರಘಟ್ಟ: ಕಾರಿನಲ್ಲಿ ಬಂದು ಮೇಕೆ, ಕುರಿಗಳ ಕಳ್ಳತನ

• ಬೈಲಮೂರ್ತಿ ಜಿ.

ಹೆಸರಘಟ್ಟ: ದಾಸನಪುರ ಹೋಬಳಿಯ ಗೋಪಾಲಪುರ ಮತ್ತು ಹುಸ್ಕೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ರಾತ್ರಿ ವೇಳೆ ಕಾರಿನಲ್ಲಿ ಬಂದು ಕುರಿ ಮತ್ತು ಮೇಕೆಗಳನ್ನು ಕಳ್ಳತನ ಮಾಡುತ್ತಿರುವ ಪ್ರಕರಣಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿದ್ದು, ರೈತರು ಆತಂಕಕ್ಕೀಡಾಗಿದ್ದಾರೆ.

'ಈ ಸಂಬಂಧ ಮಾದನಾಯಕನಹಳ್ಳಿ ಪೊಲೀಸ್ ಠಾಣೆಗೆ ದೂರು ದಾಖಲಿಸಿದ್ದೇವೆ. ಆದರೂ ಕಳ್ಳತನಗಳಿಗೆ ಮಾತ್ರ ಕಡಿವಾಣ ಬಿದ್ದಿಲ್ಲ' ಎಂದು ರೈತರು ಬೇಸರ ವ್ಯಕ್ತಪಡಿಸುತ್ತಿದ್ದಾರೆ. ಈ ಕೃತ್ಯಗಳನ್ನು ತಡೆಯುವುದಕ್ಕಾಗಿ ಕೆಲವು ಕಡೆ ರಾತ್ರಿಯೆಲ್ಲ ರೈತರು ನಿದ್ದೆಗೆಟ್ಟು ಕಾವಲು ಕಾಯುವಂತಾಗಿದೆ.

ರಾತ್ರಿ ವೇಳೆ ಕಳವು: ರಾತ್ರಿ ಸುಮಾರು ಒಂದು ಗಂಟೆಯ ನಂತರ ಇನೋವಾ ಕಾರಿನಲ್ಲಿ ಬರುವ ಕಳ್ಳರ ತಂಡ ಮೊದಲು ಮನೆಗಳಿಗೆ ಹೊರಗಿನಿಂದ ಚಿಲಕ ಹಾಕುತ್ತದೆ. ನಂತರ ಶೆಡ್‌ಗಳ ಬಾಗಿಲು ಒಡೆದು, ಅದರೊಳಗಿದ್ದ ಮೇಕೆ ಕುರಿಗಳನ್ನು ಕಾರಿನೊಳಗೆ ತುಂಬಿಕೊಂಡು ಹೋಗುತ್ತಿದೆ. ಈ ರೀತಿ ಕುರಿ–ಮೇಕೆ ಕಳವು ಮಾಡುವ ದೃಶ್ಯಗಳು ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾಗಿವೆ.

'ಮಕ್ಕಳ ಶಾಲಾ ಶುಲ್ಕ ಕಟ್ಟುವುದಕ್ಕಾಗಿಯೇ ಮೇಕೆಗಳನ್ನು ಸಾಕಿದ್ದೆ. ಸುಮಾರು ₹1.55 ಲಕ್ಷ ಬೆಲೆ ಬಾಳುವಂತಹ ಮೇಕೆಗಳವು. ರಾತ್ರೋರಾತ್ರಿ ಕೊಟ್ಟಿಗೆ (ಶೆಡ್) ಬೀಗ ಒಡೆದು ಅವುಗಳನ್ನು ಕಳವು ಮಾಡಲಾಗಿದೆ. ಈ ಬಗ್ಗೆ ಪೊಲೀಸ್ ಠಾಣೆಗೆ ದೂರು ನೀಡಿದ್ದೇನೆ. ಆದರೂ ಪ್ರಯೋಜನವಾಗಿಲ್ಲ' ಎಂದು ಬೊಮ್ಮಶೆಟ್ಟಿಹಳ್ಳಿ ಗ್ರಾಮದ ರೈತ ಮಹಿಳೆ ಸೌಭಾಗ್ಯ ಬೇಸರದಿಂದ ನುಡಿದರು.

'ನಮ್ಮದು ₹1.60 ಲಕ್ಷ ಮೌಲ್ಯದ ಒಂಬತ್ತು ಮೇಕೆಗಳನ್ನು ಕಳ್ಳತನವಾಗಿದೆ. ಯುಗಾದಿ ಸಮಯದಲ್ಲಿ ಅವುಗಳನ್ನು ಮಾರಾಟ ಮಾಡಬೇಕೆಂದು ಸಾಕಿಕೊಂಡಿದ್ದೆವು' ಎಂದು ಬೆತ್ತನಗೆರೆ ಗ್ರಾಮದ ದೊಡ್ಡಯ್ಯ 'ಪ್ರಜಾವಾಣಿ' ಯೊಂದಿಗೆ ಸಂಕಟ ತೋಡಿಕೊಂಡರು.

ದೂರು ದಾಖಲು: ದೊಡ್ಡಿಪಾಳ್ಯ ಗ್ರಾಮದ ರೈತ ಮುನಿಕುಮಾರ ಅವರಿಗೆ ಸೇರಿದ ₹60 ಸಾವಿರ ಮೌಲ್ಯದ 3 ಹೋತಗಳು, ಹುಸ್ಕೂರು ಗ್ರಾಮದ ರೈತ ಮಹೇಶ ಅವರಿಗೆ ಸೇರಿದ ₹1.10 ಲಕ್ಷ ಮೌಲ್ಯದ 11 ಮೇಕೆಗಳನ್ನು ಹೀಗೆ ರಾತ್ರಿ ವೇಳೆ ಕಳ್ಳತನ ಮಾಡಲಾಗಿದೆ. ಮೇಕೆ ಮತ್ತು ಕುರಿಗಳನ್ನು ಕಳೆದುಕೊಂಡ ಎಲ್ಲ ರೈತರು ಮಾದನಾಯಕನಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಕಳ್ಳತನಕ್ಕೆ ಹೆದರಿ ಗೋಪಾಲಪುರ ಮತ್ತು ಹುಸ್ಕೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿನ ರೈತರು ಕುರಿ ಮೇಕೆಗಳನ್ನು ಸಿಕ್ಕಷ್ಟು ಬೆಲೆಗೆ ಮಾರಾಟ ಮಾಡುತ್ತಿದ್ದಾರೆ. ಆದಷ್ಟು ಬೇಗ ಪೊಲೀಸರು ಕಳ್ಳರನ್ನು ಬಂಧಿಸಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿರುವ ದೃಶ್ಯ

ಪ್ರಕರಣಗಳಿಗೆ ಸಂಬಂಧಿಸಿದಂತೆ ಎಫ್ ಐಆರ್ ದಾಖಲಿಸಲಾಗಿದೆ. ಹಿಂದೆಯೂ ಇದೇ ರೀತಿಯ ಪ್ರಕರಣಗಳು ನಡೆದಿದ್ದು ಅಪರಾಧಿಗಳನ್ನು ಹಿಡಿದಿದ್ದೆವು. ಈಗ ಸಿಸಿಟಿವಿ ದೃಶ್ಯಾವಳಿ ಆಧರಿಸಿ, ತನಿಖೆ ನಡೆಸುತ್ತಿದ್ದೇವೆ. ಶೀಘ್ರದಲ್ಲೇ ಅಪರಾಧಿಗಳನ್ನು ಹಿಡಿಯಲಾಗುವುದು.

ಮುರಳೀಧರ್ ಎಂ.ಕೆ, ಇನ್‌ಸ್ಪೆಕ್ಟರ್, ಮಾದನಾಯಕನಹಳ್ಳಿ ಪೊಲೀಸ್ ಠಾಣೆ

ಗೋಪಾಲಪುರ ಮತ್ತು ಹುಸ್ಕೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಎರಡು ತಿಂಗಳುಗಳಿಂದ ಕುರಿ–ಮೇಕೆ ಕಳವು ಪ್ರಕರಣಗಳು ಹೆಚ್ಚಾಗುತ್ತಿವೆ. ಪೊಲೀಸ್ ಇಲಾಖೆ ಕೂಡಲೇ ಸೂಕ್ತ ಕ್ರಮ ತೆಗೆದು-ಕೊಳ್ಳಬೇಕು.

ಚಂದ್ರಶೇಖರ್ ವಿ. ಅಧ್ಯಕ್ಷ, ಗೋಪಾಲಪುರ ಗ್ರಾಮ ಪಂಚಾಯಿತಿ

ಎಲ್ಲಾ ಮಾಹಿತಿ ತಿಳಿದವರೇ ಇಂಥ ಕೃತ್ಯ ಎಸಗಲು ಸಾಧ್ಯ. ಕುರಿ, ಮೇಕೆ ಕಳೆದುಕೊಂಡ ರೈತರು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಬೇಗ ಕಳ್ಳರನ್ನು ಹಿಡಿಯಬೇಕು.

ಬಿ. ರಮೇಶ್, ಅಧ್ಯಕ್ಷ, ಹುಸ್ಕೂರು ಗ್ರಾಮ ಪಂಚಾಯಿತಿ

ಮನೆಯಲ್ಲಿ ಕೂಡಿಹಾಕಿ ಮಗು ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಿರಿನಗರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಮಗುವನ್ನು ಕೂಡಿಹಾಕಿ ಹಲ್ಲೆ ಮಾಡಲಾಗಿದ್ದು, ಸ್ಥಳೀಯರು ಮಗುವನ್ನು ರಕ್ಷಿಸಿದ್ದಾರೆ.

'ಎರಡೂವರೆ ವರ್ಷದ ಮಗುವಿನ ಮೇಲೆ ತಾಯಿ ಹಲ್ಲೆ ಮಾಡಿದ್ದಾರೆ. ಮಗುವಿನ ಕೂಗಾಟ ಕೇಳಿ ಸ್ಥಳಕ್ಕೆ ಹೋದಾಗ ವಿಷಯ ಗೊತ್ತಾಯಿತು. ಸಂಘಟನೆಯೊಂದರ ನೆರವಿನಿಂದ ಮಗುವನ್ನು ರಕ್ಷಿಸಲಾಗಿದೆ' ಎಂದು ಸ್ಥಳೀಯರೊಬ್ಬರು ಹೇಳಿದರು.

'ಪತಿಗೆ ವಿಚ್ಛೇದನ ನೀಡಿರುವ ಮಹಿಳೆ, ಮಗುವಿನ ಜೊತೆ ವಾಸವಿದ್ದಾರೆ. ಸ್ನೇಹಿತರೊಬ್ಬರ ಜೊತೆ ಸಲುಗೆ ಹೊಂದಿದ್ದಾರೆ. ಮನೆಯಲ್ಲಿ ಮಗುವಿನ ಮೇಲೆ ತಾಯಿ ಹಾಗೂ ಸ್ನೇಹಿತ, ಹಲವು ಬಾರಿ ಹಲ್ಲೆ ಮಾಡಿದ್ದಾರೆ. ಇಬ್ಬರೂ ಹೊರಗೆ ಹೋಗುವಾಗ ಮನೆಯಲ್ಲಿಯೇ ಮಗುವನ್ನು ಕೂಡಿ ಹಾಕುತ್ತಿದ್ದರು' ಎಂದು ತಿಳಿಸಿದರು.

'ತಾಯಿ ಬೆಳಿಗ್ಗೆ ಕೆಲಸಕ್ಕೆ ಹೋಗಿ ಮನೆಗೆ ರಾತ್ರಿ ವಾಪಸು ಬರುತ್ತಿದ್ದರು. ಅಲ್ಲಿಯವರೆಗೂ ಮಗು ಮನೆಯೊಳಗೆ ಇರುತ್ತಿತ್ತು. ಕಿಟಕಿ ಬಳಿ ನಿಂತು ಅಳುತ್ತಿತ್ತು' ಎಂದರು.

'ಮಗುವಿನ ಮೇಲಿನ ಹಲ್ಲೆಯನ್ನು ಸಮರ್ಥಿಸಿಕೊಂಡಿರುವ ತಾಯಿ, 'ಪತಿಗೆ ವಿಚ್ಛೇದನ ನೀಡಿ, ಕಷ್ಟದಲ್ಲಿ ಜೀವನ ಸಾಗಿಸುತ್ತಿದ್ದೇನೆ. ಮಗುವಿಗೆ ಜೀವನ ಪಾಠ ತಿಳಿಯಲೆಂದು ಈ ರೀತಿ ಮಾಡಿದೆ' ಎನ್ನುತ್ತಿದ್ದಾರೆ' ಎಂದು ಸ್ಥಳೀಯರೊಬ್ಬರು ವಿವರಿಸಿದರು.

ಮಗುವಿನ ಮೇಲಿನ ಹಲ್ಲೆ ಬಗ್ಗೆ ಪೊಲೀಸ್ ಠಾಣೆಯಲ್ಲಿ ಯಾವುದೇ ದೂರು ದಾಖಲಾಗಿಲ್ಲ.

ಕೈದಿಗಳಿಗೆ ವೈದ್ಯಕೀಯ ತಪಾಸಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ನಿರ್ದೇಶನದ ಮೇರೆಗೆ ಎಲ್ಲ ಕಾರಾಗೃಹದಲ್ಲಿರುವ ಕೈದಿಗಳಿಗೆ ನಿಯಮಿತವಾಗಿ ವೈದ್ಯಕೀಯ ತಪಾಸಣೆ ಮಾಡಬೇಕು ಎಂದು ಆರೋಗ್ಯ ಇಲಾಖೆ ಸೂಚಿಸಿದೆ.

ಈ ಬಗ್ಗೆ ಇಲಾಖೆ ಆಯುಕ್ತ ಡಿ. ರಂದೀಪ್ ಅವರು ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಸುತ್ತೋಲೆ ಹೊರಡಿಸಿದ್ದಾರೆ. ಸಾಂಕ್ರಾಮಿಕ ರೋಗಗಳ ಜತೆಗೆ ಕ್ಷಯ, ಎಚ್‌ಐವಿ, ಹೆಪಟೈಟಿಸ್, ಲೈಂಗಿಕ ರೋಗಗಳು (ಎಸ್‌ಟಿಡಿ) ಸೇರಿ ವಿವಿಧ ಸಮಸ್ಯೆಗಳಿಗೆ ತಪಾಸಣೆ ನಡೆಸಬೇಕು. ಈ ಬಗ್ಗೆ ಸಂಬಂಧಪಟ್ಟ ಕಾರ್ಯಕ್ರಮ ಅಧಿಕಾರಿಗಳು ಪ್ರತಿ ಮೂರು ತಿಂಗಳಿಗೊಮ್ಮೆ ಪರಿಶೀಲನಾ ಸಭೆ ನಡೆಸಿ, ವರದಿ ಸಲ್ಲಿಸಬೇಕು ಎಂದು ತಿಳಿಸಿದ್ದಾರೆ.

ಸಾಂಕ್ರಾಮಿಕ ರೋಗಗಳ ಸಂದರ್ಭದಲ್ಲಿ ಸಂಬಂಧಪಟ್ಟ ಕಾರ್ಯಕ್ರಮಾಧಿಕಾರಿಗಳು ಜೈಲಿನ ಅಡುಗೆ ಮನೆ, ನೀರು ಸರಬರಾಜು ಸ್ಥಳ, ಕುಡಿಯುವ ನೀರಿನ ಗುಣಮಟ್ಟ, ತ್ಯಾಜ್ಯ ವಿಲೇವಾರಿ ಸ್ಥಳ, ಕೈ ತೊಳೆಯುವ ಸ್ಥಳ, ಶೌಚಾಲಯ ಸೇರಿ ವಿವಿಧೆಡೆ ಪರಿಶೀಲನೆ ನಡೆಸಬೇಕು. ಸೊಳ್ಳೆಯ ಲಾರ್ವ ನಾಶಕ್ಕೆ ಜೈಲು ನಿರ್ವಹಣಾಧಿಕಾರಿಗಳು, ಜೈಲು ಆಸ್ಪತ್ರೆ ಸಿಬ್ಬಂದಿ ಅಥವಾ ಶುಶ್ರೂಷಕರಿಗೆ ಸೂಚನೆ ನೀಡಬೇಕು ಎಂದು ಹೇಳಿದ್ದಾರೆ.

ಸಿಇಟಿ, ನೀಟ್ ಪರೀಕ್ಷೆ: ತರಬೇತಿ

ಬೆಂಗಳೂರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರವು ಸಿಇಟಿ–ನೀಟ್ ಪರೀಕ್ಷೆಗಳಿಗೆ ತರಬೇತಿ ಆಯೋಜಿಸಿದೆ.

ಮೈಸೂರಿನ ವಿಜಯ ವಿಠ್ಠಲ ಶಿಕ್ಷಣ ಸಂಸ್ಥೆ ಸಹಯೋಗದಲ್ಲಿ ಪಿಯುಸಿ ನಂತರದ ವೃತ್ತಿಪರ ಉನ್ನತ ಶಿಕ್ಷಣದ ಸಾಮಾನ್ಯ ಪ್ರವೇಶ ಪರೀಕ್ಷೆಗೆ (ಕೆ-ಸಿಇಟಿ ಮತ್ತು ನೀಟ್) ತರಬೇತಿಯನ್ನು ಮೈಸೂರಿನ ಕೇಂದ್ರ ಕಚೇರಿಯಲ್ಲಿ ನಡೆಸಲು ನಿರ್ಧರಿಸಲಾಗಿದೆ.

ಆಸಕ್ತರು, ವಿ.ವಿ ಆವರಣದ ಪರೀಕ್ಷಾ ತರಬೇತಿ ಕೇಂದ್ರದ ಕಚೇರಿಯಲ್ಲಿ ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ಹೆಸರು ನೊಂದಾಯಿಸಿಕೊಳ್ಳಬಹುದು ಎಂದು ಕೇಂದ್ರದ ಪ್ರಾದೇಶಿಕ ನಿರ್ದೇಶಕಿ ಜೆ.ಶಶಿಕಲಾ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗೆ 0821–2515944 ಸಂಪರ್ಕಿಸಬಹುದು.

Government of India
ಮೋದಿ ಸರ್ಕಾರದ ಗ್ಯಾರಂಟಿ
ಅಂದರೆ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುವ ಗ್ಯಾರಂಟಿ
₹ 32 ಲಕ್ಷ ಕೋಟಿಗೂ ಹೆಚ್ಚು ಹಣವನ್ನು ಡಿಬಿಟಿ ಮೂಲಕ ನೇರವಾಗಿ ಫಲಾನುಭವಿಗಳ ಖಾತೆಗೆ ವರ್ಗಾಯಿಸಲಾಗಿದೆ
ನಮ್ಮ ಸಂಕಲ್ಪ ವಿಕಸಿತ ಭಾರತ
ಹೆಚ್ಚಿನ ಮಾಹಿತಿಗಾಗಿ ಸ್ಕ್ಯಾನ್ ಮಾಡಿ

cbc 22201/13/0325/2324

ಸರ್ಕಾರದ ಯೋಜನೆಗಳು ಅಂಗವಿಕಲರಿಗೆ ತಲುಪಲಿ: ಬಸವರಾಜ ಬೊಮ್ಮಾಯಿ

‘ಜಿಡಿಪಿಗೆ ಕೊಡುಗೆ: ಸಮೀಕ್ಷೆ ಆಗಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಗವಿಕಲರಿಗೆ ಅವಕಾಶ ನೀಡಿದರೆ ಅವರು ಸ್ವಾಭಿಮಾನದಿಂದ ಬದುಕುತ್ತಾರೆ. ಅವರು ನಿಜವಾದ ಯೋಗಿಗಳು ಎಂದು ಶಾಸಕ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದ ಚಾಮರಾಜಪೇಟೆಯ ಕುವೆಂಪು ಕಲಾಕ್ಷೇತ್ರದಲ್ಲಿ ಸಕ್ಷಮ ಸಂಸ್ಥೆ ಆಯೋಜಿಸಿದ್ದ ವಿಶೇಷಚೇತನರ ದಕ್ಷಿಣ ಪ್ರಾಂತ ಅಧಿವೇಶನ ಉದ್ಘಾಟಿಸಿ ಅವರು ಮಾತನಾಡಿದರು.

‘ಅವರನ್ನು ವಿಶೇಷಚೇತನರು ಎಂದು ಕರೆಯುತ್ತೇವೆ. ಅವರಿಗೆ ಕೆಲವು ಅಂಗ ಊನವಿದ್ದರೂ ಛಲದಿಂದ ಬದುಕುತ್ತಾರೆ’ ಎಂದು ಹೇಳಿದರು.

‘ನಾವು ಕೆಲವು ಸಾರಿ ಭಿಕ್ಷುಕ ರಾಗುತ್ತೇವೆ. ರಾಜಕಾರಣಿಗಳು ಟಿಕೆಟ್ ಭಿಕ್ಷೆ ಬೇಡುತ್ತಾರೆ. ವ್ಯಾಪಾರಿ ಹಣಕ್ಕಾಗಿ ಬೇಡಿಕೆ ಇಡುತ್ತಾರೆ. ಆದರೆ, ಅಂಗವಿಕಲರು ಸ್ವಾಭಿಮಾನದಿಂದ ಬದುಕುತ್ತಾರೆ’ ಎಂದರು.

‘ದೇಶದ ಜಿಡಿಪಿಗೆ ಅಂಗವಿಕಲರ ಕೊಡುಗೆ ಏನು ಎಂದು ರಾಷ್ಟ್ರ ಮಟ್ಟದಲ್ಲಿ ಸಮೀಕ್ಷೆಯಾಗಬೇಕು. ಆಗ ಅವರ ಸೇವೆ ಏನಿದೆ ಅಂತ ಎಲ್ಲರಿಗೂ ಗೊತ್ತಾಗುತ್ತದೆ. ಅವರು ಎಲ್ಲ ರಂಗದಲ್ಲಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಅವರಿಗೆ ಕಲ್ಪನಾ ಶಕ್ತಿ ಬಹಳ ವಿಸ್ತಾರವಾಗಿರುತ್ತದೆ. ಸಾಮಾನ್ಯ ಮನುಷ್ಯರಿಗಿಂತ ಮಿಗಿಲಾದ ಕಲ್ಪನಾ ಶಕ್ತಿಯನ್ನು ಅಂಗವಿಕಲರು ಹೊಂದಿರುತ್ತಾರೆ’ ಎಂದರು.

‘ಅಂಗವಿಕಲ ಮಕ್ಕಳಲ್ಲಿ ಯಾವಾಗಲೂ ಮುಗ್ಧತೆ ಇರುತ್ತದೆ. ನಮ್ಮದು ವಯಸ್ಸಾದಂತೆ ಮುಗ್ಧತೆ ಕಡಿಮೆಯಾಗುತ್ತದೆ. ಅಂಗವಿಕಲರಿಗೆ ಅನುಕಂಪ ಬೇಡ ಅವಕಾಶ ಕೊಡಬೇಕು. ಅವಕಾಶ ನೀಡಿದರೆ ಸಾಧಿಸುವ ಛಲ ಅವರಿಗಿದೆ’ ಎಂದರು.

‘ಸರ್ಕಾರಗಳು ಅನೇಕ ಯೋಜನೆಗಳನ್ನು ಅಂಗವಿಕಲರಿಗಾಗಿ ಜಾರಿಗೊಳಿಸುತ್ತಿವೆ. ಆದರೆ, ಅವರಿಗೆ ಸರಿಯಾಗಿ ಮುಟ್ಟಿಸುವ ಕೆಲಸ ಆಗುವುದಿಲ್ಲ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಯಾವುದೇ ಯೋಜನೆ ಅಂತಿಮ ವ್ಯಕ್ತಿಗೆ ತಲುಪುವಂತೆ ಮಾಡುತ್ತಾರೆ. ನಾವು ಅಧಿಕಾರದಲ್ಲಿದ್ದಾಗ ಸಕ್ಷಮ ಸಂಸ್ಥೆಯ ಸೇವೆ ನೋಡಿ ಪ್ರಶಸ್ತಿ ನೀಡಿದ್ದೆವು. ಉತ್ತಮ ಕೆಲಸ ಮಾಡುವವರನ್ನು ಗೌರವಿಸುವುದರಲ್ಲಿ ತಪ್ಪಿಲ್ಲ’ ಎಂದು ಬಸವರಾಜ ಬೊಮ್ಮಾಯಿ ಹೇಳಿದರು.

ಶಾಸಕ ಉದಯ ಗರುಡಾಚಾರ್, ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಮತ್ತಿತರರು ಹಾಜರಿದ್ದರು.

ನಗರದಲ್ಲಿ ‘ಸಕ್ಷಮ’ ಸಂಸ್ಥೆ ಆಯೋಜಿಸಿದ್ದ ವಿಶೇಷಚೇತನರ ದಕ್ಷಿಣ ಪ್ರಾಂತ ಅಧಿವೇಶನದಲ್ಲಿ ಶಾಸಕ ಬಸವರಾಜ ಬೊಮ್ಮಾಯಿ ಅವರು ಅಂಗವಿಕಲರನ್ನು ಗೌರವಿಸಿದರು.

ಮುಖ್ಯಾಂಶಗಳು
- ವಿಶೇಷಚೇತನರ ದಕ್ಷಿಣ ಪ್ರಾಂತ ಅಧಿವೇಶನ
- ಸಕ್ಷಮ ಸಂಸ್ಥೆ ಆಯೋಜಿಸಿದ್ದ ಕಾರ್ಯಕ್ರಮ
- ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನ

ಕರ್ಲಾನ್ ಫ್ಯಾಕ್ಟರಿ ಆಡಳಿತ ಮಂಡಳಿ ವಿರುದ್ಧ ಕಾರ್ಮಿಕರು ಪ್ರತಿಭಟನೆ ನಡೆಸಿದರು

ಕಾರ್ಖಾನೆ ಸ್ಥಳಾಂತರ: ಕಾರ್ಮಿಕರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ‘ಪೀಣ್ಯಾ ಕೈಗಾರಿಕಾ ಪ್ರದೇಶದಲ್ಲಿದ್ದ ಕರ್ಲಾನ್ ಎಂಟರ್‌ಪ್ರೈಸಸ್ ಲಿಮಿಟೆಡ್ ಕಾರ್ಖಾನೆಯನ್ನು ಏಕಾಏಕಿ ಆಂಧ್ರಪ್ರದೇಶದ ಚಿತ್ತೂರಿಗೆ ಸ್ಥಳಾಂತರಿಸಿ, 75ಕ್ಕೂ ಹೆಚ್ಚು ಕಾರ್ಮಿಕರನ್ನು ಕೆಲಸದಿಂದ ತೆಗೆದಿರುವುದನ್ನು ವಿರೋಧಿಸಿ ಕಾರ್ಮಿಕರು ಭಾನುವಾರ ಆಡಳಿತ ಮಂಡಳಿ ವಿರುದ್ಧ ಪ್ರತಿಭಟನೆ ನಡೆಸಿದರು.

’ಎರಡೂವರೆ ದಶಕಗಳಿಗೂ ಹೆಚ್ಚು ಕಾಲದಿಂದ ಈ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದೆವು. ಈಗ ದಿಢೀರನೆ ಕಾರ್ಖಾನೆಯನ್ನು ಆಂಧ್ರಪ್ರದೇಶದ ಚಿತ್ತೂರಿಗೆ ಸ್ಥಳಾಂತರಿಸಿ, ಇಲ್ಲಿ ಕೆಲಸ ಮಾಡುತ್ತಿದ್ದ 75 ಕ್ಕೂ ಕಾರ್ಮಿಕರನ್ನು ತೆಗೆದು ಹಾಕಿದ್ದಾರೆ’ ಪ್ರತಿಭಟನಾಕಾರರು ದೂರಿದರು.

ಕಾರ್ಮಿಕ ನಾಗರಾಜ್ ನಾಯಕ್ ಮಾತನಾಡಿ 'ಯಾವುದೇ ಸೂಚನೆ ನೀಡದೇ ಫ್ಯಾಕ್ಟರಿಯನ್ನು ಚಿತ್ತೂರಿಗೆ ದಿಢೀರನೆ ಸ್ಥಳಾಂತರಿಸಿದ್ದಾರೆ. ಮಾಲೀಕರ ಈ ನಿಲುವಿನಿಂದ ನಮಗೆ ತೀವ್ರ ಕಷ್ಟ ಎದುರಾಗಿದೆ. ಕಾರ್ಖಾನೆಯಲ್ಲಿ ಮಹಿಳೆಯರು ಮತ್ತು ಪುರುಷರು ಸೇರಿ 75ಕ್ಕೂ ಹೆಚ್ಚು ಕಾರ್ಮಿಕರಿದ್ದೇವೆ. ಫ್ಯಾಕ್ಟರಿ ಸ್ಥಳಾಂತರದಿಂದ ಕಂಗಾಲಾಗಿದ್ದೇವೆ. ನಮಗೆ ಬೇರೆ ಯಾವುದೇ ಆದಾಯವಿಲ್ಲ, ಇದನ್ನೇ ನಂಬಿ ಜೀವನ ಮಾಡುತ್ತಿದ್ದೇವೆ. ನಮಗೆ ಕಲಸದ ಅವಶ್ಯಕತೆಯಿದ್ದು ಉದ್ಯೋಗ ನೀಡಬೇಕು'ಎಂದು ಆಕ್ರೋಶ ಆಗ್ರಹಿಸಿದರು.

'ಕಾರ್ಮಿಕ ಇಲಾಖೆಯಲ್ಲಿ ದೂರು ದಾಖಲಿಸಿದ್ದೇವೆ. ಆದರೆ ಮಾಲೀಕರು ವಿಚಾರಣೆಗೆ ಗೈರಾಗುತ್ತಿದ್ದಾರೆ' ಎಂದು ದೂರಿದರು.

ಮಹಿಳಾ ಕಾರ್ಮಿಕರೊಬ್ಬರು ಮಾತನಾಡಿ 'ಇದೇ ಕೆಲಸ ಅವಲಂಬಿಸಿ ಜೀವನ ಸಾಗಿಸುತ್ತಿದ್ದೆವು. ನನ್ನ ಪತಿ ಅನಾರೋಗ್ಯದಿಂದ ಆಸ್ಪತ್ರೆ ಸೇರಿದ್ದಾರೆ. ಇಲ್ಲಿ ದಿಢೀರ್ ಅಂತ ಫ್ಯಾಕ್ಟರಿ ಮುಚ್ಚಿದ್ದಾರೆ. ಮಂದೆ ಜೀವನ ಸಾಗಿಸುವುದಾದರೂ ಹೇಗೆ? ಮನೆ ಬಾಡಿಗೆ, ಮಕ್ಕಳ ಶಾಲಾ ಶುಲ್ಕ, ದಿನನಿತ್ಯದ ಖರ್ಚುನಿಭಾಯಿಸುವುದು ಹೇಗೆ? ನಮಗೆ ಕೆಲಸಬೇಕು, ನ್ಯಾಯಬೇಕು‘ ಎಂದು ಅಳಲು ತೋಡಿಕೊಂಡರು.

‘ರೈಲು ನಿಲ್ದಾಣ: ಜನರ ಬಯಕೆ ಈಡೇರಿಕೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸ್ಥಳೀಯ ಸಾಂಸ್ಕೃತಿಕ ಸೊಗಡಿನ ಮಾದರಿಯಲ್ಲಿ ಚನ್ನಪಟ್ಟಣ ರೈಲು ನಿಲ್ದಾಣವನ್ನು ₹ 20.93 ಕೋಟಿ ವೆಚ್ಚದಲ್ಲಿ ಹಾಗೂ ರಾಮನಗರ ರೈಲು ನಿಲ್ದಾಣವನ್ನು ₹ 20.96 ಕೋಟಿ ವೆಚ್ಚದಲ್ಲಿ ಉನ್ನತೀಕರಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಆ ಮೂಲಕ, ಈ ಭಾಗದ ಜನರ ಆಶೋತ್ತರಗಳನ್ನು ಈಡೇರಿಸುವ ಬೃಹತ್ ಪ್ರಯತ್ನ ಮಾಡಿದೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

ಈ ಬಗ್ಗೆ ‘X’ ಮಾಡಿರುವ ಅವರು, ‘ಸಾಂಸ್ಕೃತಿಕ ನಗರ ಮೈಸೂರು ಹಾಗೂ ರಾಜಧಾನಿ ಬೆಂಗಳೂರು ನಡುವಿನ ಐತಿಹಾಸಿಕ, ಪಾರಂಪರಿಕ ಮಹತ್ವ ಇರುವ ರಾಮನಗರ, ಚನ್ನಪಟ್ಟಣ ರೈಲು ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸಲು ಪ್ರಧಾನಿ ನರೇಂದ್ರ ಮೋದಿ ಸಂಕಲ್ಪ ಮಾಡಿರುವುದು ಅತೀವ ಸಂತಸ ಉಂಟು ಮಾಡಿದೆ’ ಎಂದಿದ್ದಾರೆ.

‘ನಿತ್ಯವೂ ಉದ್ಯೋಗ, ವ್ಯವಹಾರಕ್ಕಾಗಿ ಎರಡೂ ನಗರಗಳ ನಡುವೆ ಸಂಚರಿಸುವ ಜಿಲ್ಲೆಯ ಜನರಿಗೆ ಇದರಿಂದ ಅನುಕೂಲವೂ ಆಗಲಿದೆ’ ಎಂದೂ ಹೇಳಿದ್ದಾರೆ.

‘ಕಸಾಪ ದತ್ತಿ ಪ್ರಶಸ್ತಿ’ ಪ್ರದಾನ

ಪಂಚಾಯತ್‌ರಾಜ್ ಅನುಷ್ಠಾನಕ್ಕೆ ಕೊಡುಗೆ: ಡಿ.ಆರ್.ಪಾಟೀಲಗೆ ಶ್ಲಾಘನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಡಿ.ಆರ್.ಪಾಟೀಲ ಅವರಿಗೆ 2023ನೇ ಸಾಲಿನ ‘ಲಿಂಗಮ್ಮ ಮತ್ತು ಡಾ.ಚಿಕ್ಕಕೊಮಾರಿಗೌಡ ಹಾರೋಕೊಪ್ಪ ದತ್ತಿ ಪ್ರಶಸ್ತಿ’ ಪ್ರದಾನ ಮಾಡಲಾಯಿತು.

ಈ ಪ್ರಶಸ್ತಿಯು ₹10 ಸಾವಿರ ನಗದು ಒಳಗೊಂಡಿದೆ. ಕರ್ನಾಟಕ ಪಂಚಾಯತ್ ರಾಜ್ ವ್ಯವಸ್ಥೆಗೆ ನೀಡಿದ ಕೊಡುಗೆಯನ್ನು ಪರಿಗಣಿಸಿ ಅವರಿಗೆ ಈ ಪ್ರಶಸ್ತಿ ನೀಡಲಾಗಿದ್ದು, ಚಿಕ್ಕಕೊಮಾರಿಗೌಡ ಅವರು ಈ ಪ್ರಶಸ್ತಿಯನ್ನು ಪರಿಷತ್ತಿನಲ್ಲಿ ಸ್ಥಾಪಿಸಿದ್ದಾರೆ.

ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಮಾಜಿ ಕೇಂದ್ರ ಸಚಿವ ಮಣಿ ಶಂಕರ್ ಅಯ್ಯರ್, ‘ದೇಶದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತಂದ ರಾಜ್ಯಗಳಲ್ಲಿ ಕರ್ನಾಟಕ ಮಂಚೂಣಿಯಲ್ಲಿದೆ. ಇದಕ್ಕೆ ಕಾರಣವಾದವರಲ್ಲಿ ಡಿ.ಆರ್. ಪಾಟೀಲ ಪ್ರಮುಖರು. ಈ ಹಿಂದೆ ಕರ್ನಾಟಕದಲ್ಲಿ ನೇಮಕಗೊಂಡಿದ್ದ ‘ರಮೇಶ್ ಕುಮಾರ್ ಸಮಿತಿ’ಗೆ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು 38 ಸಲಹೆಗಳನ್ನು ನೀಡಿದ್ದೆ. ಎಲ್ಲವೂ ಅಂಗೀಕಾರವಾಗಲು ಡಿ.ಆರ್. ಪಾಟೀಲರೇ ಕಾರಣ. ಇಂತಹವರ ಸಮರ್ಪಣಾ ಭಾವದಿಂದಲೇ ಮುಂದಿನ ಕಾಲು ಶತಮಾನದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ದೇಶದಲ್ಲಿ ಪರಿಣಾಮಕಾರಿಯಾಗಿ ಜಾರಿಗೆ ಬರಲಿದೆ’ ಎಂದು ಹೇಳಿದರು.

ಕಾನೂನು ಸಚಿವ ಎಚ್.ಕೆ.ಪಾಟೀಲ, ‘ಡಿ.ಆರ್.ಪಾಟೀಲ ಅವರು ಬಸವಣ್ಣನ ವಚನಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸಾಗುತ್ತಿದ್ದಾರೆ. ಕಡ್ಡಾಯ ಮತದಾನ ಜಾರಿಯಾದಾಗ ಪ್ರಜಾಪ್ರಭುತ್ವ ನಿಜಕ್ಕೂ ಅರ್ಥಪಡೆದುಕೊಳ್ಳುತ್ತದೆ ಎನ್ನುವುದನ್ನು ಅವರು ಅರಿತಿದ್ದರು. ಹೀಗಾಗಿಯೇ ಅಧಿಕಾರ ವಿಕೇಂದ್ರೀಕರಣಕ್ಕೆ ಪ್ರಯತ್ನಿಸಿದರು’ ಎಂದರು.

ಕಸಾಪ ಅಧ್ಯಕ್ಷ ಮಹೇಶ ಜೋಶಿ, ‘ಪ್ರಶಸ್ತಿಗೆ ಆದರ್ಶ ಜನಪ್ರತಿನಿಧಿಗಳನ್ನು ಆಯ್ಕೆಮಾಡಬೇಕು ಅಂದುಕೊಂಡಾಗ ನಮ್ಮೆದುರು ದೊಡ್ಡ ಸವಾಲೇ ಬಂದಿತು. ಪ್ರಜಾಪ್ರಭುತ್ವದ ಕುರಿತು ಮುಂದಿನ ಪೀಳಿಗೆಗೆ ನಂಬಿಕೆ ಉಳಿಯುವಂತಹ ಆಯ್ಕೆಯನ್ನು ನಾವು ಮಾಡಬೇಕಿತ್ತು. ಅದಕ್ಕೆ ಡಿ.ಆರ್.ಪಾಟೀಲ ಅವರು ಅತ್ಯಂತ ಸೂಕ್ತರೆನ್ನಿಸಿದರು’ ಎಂದು ಹೇಳಿದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಡಿ.ಆರ್.ಪಾಟೀಲ, ‘ಪಂಚಾಯತ್ ರಾಜ್ ವ್ಯವಸ್ಥೆ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ಬಂದರೆ ನಾನು ಪ್ರಶಸ್ತಿ ಒಪ್ಪಿಕೊಂಡಿದ್ದಕ್ಕೂ ಸಾರ್ಥಕವಾಗುತ್ತದೆ’ ಎಂದರು.

ಕಾರ್ಯಕ್ರಮದಲ್ಲಿ ಡಿ.ಆರ್.ಪಾಟೀಲ ಅವರಿಗೆ ‘ಲಿಂಗಮ್ಮ ಮತ್ತು ಡಾ.ಚಿಕ್ಕಕೊಮಾರಿಗೌಡ ಹಾರೋಕೊಪ್ಪ ದತ್ತಿ ಪ್ರಶಸ್ತಿ’ ನೀಡಿ ಗೌರವಿಸಲಾಯಿತು. ಮಾಜಿ ಸಂಸದ ಸಿ. ನಾರಾಯಣಸ್ವಾಮಿ, ಮಹೇಶ ಜೋಶಿ, ಎಚ್.ಕೆ. ಪಾಟೀಲ, ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷ ನಿರ್ಭಯಾನಂದ ಸರಸ್ವತಿ ಸ್ವಾಮೀಜಿ, ಮಣಿ ಶಂಕರ್ ಅಯ್ಯರ್ ಮತ್ತು ದತ್ತಿ ದಾನಿ ಚಿಕ್ಕಕೊಮಾರಿಗೌಡ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ನೀರಿನ ಅಭಾವ: ಪಿಡಿಒ ಜೊತೆ ಸಭೆ ನಡೆಸಿ– ಪ್ರಿಯಾಂಕ್ ಖರ್ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ಅಭಾವ ಹೆಚ್ಚುತ್ತಿದೆ. ಮುಂದಿನ ಮೂರು ತಿಂಗಳ ಕಾಲ ಪ್ರತಿ ಎರಡನೆ ಹಾಗೂ ನಾಲ್ಕನೆ ಸೋಮವಾರ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ (ಪಿಡಿಒ) ಜೊತೆ ಸಭೆ ನಡೆಸಿ ಕುಡಿಯುವ ನೀರಿನ ಪರಿಸ್ಥಿತಿ ಅವಲೋಕಿಸಬೇಕು. ನೀರಿನ ಅಭಾವ ಎದುರಿಸುವ ಗ್ರಾಮಗಳಿಗೆ ಪರ್ಯಾಯ ನೀರಿನ ವ್ಯವಸ್ಥೆ ಮಾಡಬೇಕು’ ಎಂದು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಸೂಚನೆ ನೀಡಿದರು.

ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಜೊತೆ ವಿಡಿಯೋ ಸಂವಾದ ನಡೆಸಿದ ಅವರು, ‘ಬರ ಪರಿಸ್ಥಿತಿಯನ್ನು ಸಮರ್ಪಕವಾಗಿ ನಿರ್ವಹಿಸಲು ಎಲ್ಲಾ ಜಿಲ್ಲಾ ಪಂಚಾಯತಿಗಳಲ್ಲಿ 24x7 ನಿಯಂತ್ರಣ ಕೊಠಡಿ ಆರಂಭಿಸಬೇಕು. ತಾಲ್ಲೂಕು ಮಟ್ಟದಲ್ಲಿ ಕಾರ್ಯಾನಿರ್ವಾಹಕ ಅಧಿಕಾರಿಗಳ ಮುಖಾಂತರ ಕ್ಷಿಪ್ರ ಕಾರ್ಯಪಡೆ ರಚಿಸಿ ಬರ ಪರಿಸ್ಥಿತಿಯನ್ನು ಸಮರ್ಪಕವಾಗಿ ನಿರ್ವಹಿಸಬೇಕು’ ಎಂದೂ ನಿರ್ದೇಶನ ನೀಡಿದರು.

ಗ್ರಾಮಗಳಲ್ಲಿನ ನೀರಿನ ಲಭ್ಯತೆ ಹಾಗೂ ಕೊರತೆಯ ಬಗ್ಗೆ ಮಾಹಿತಿ ಸಂಗ್ರಹಿಸಲು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸೂಚಿಸಿದ ಸಚಿವರು, ‘ಮುಂದಿನ ಮೂರು ತಿಂಗಳ ಕಾಲ ಪ್ರತಿ 15 ದಿನಗಳಿಗೊಮ್ಮೆ ಪತ್ರಿಕಾಗೋಷ್ಠಿ ಕರೆದು ನೀರಿನ ಅಭಾವ ಎದುರಿಸಲು ಜಿಲ್ಲೆಯಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ನೀಡಬೇಕು’ ಎಂದರು.

‘ಕಳೆದ ವರ್ಷ ಏಪ್ರಿಲ್ 1ರಿಂದ 2024ರ ಫೆ. 27ರವರೆಗೆ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ 2.12 ಲಕ್ಷ ನೀರಿನ ಮಾದರಿಗಳನ್ನು ಸಂಗ್ರಹಿಸಿ ಪರೀಕ್ಷೆಗೆ ಒಳಪಡಿಸಲಾಗಿದೆ, ಗ್ರಾಮೀಣ ನೀರು ಕಲುಷಿತವಾಗದಂತೆ ಎಚ್ಚರಿಕೆ ವಹಿಸಲಾಗಿದೆ. ಬೇಸಿಗೆ ಅವಧಿಯಲ್ಲಿ ಕುಡಿಯುವ ನೀರು ಕಲುಷಿತ ಆಗದಂತೆ ನಿಗಾ ವಹಿಸಬೇಕು’ ಎಂದೂ ಸಲಹೆ ನೀಡಿದರು.

‘ಪ್ರತಿ ಸೋಮವಾರ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಮಟ್ಟದಲ್ಲಿ ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಮಟ್ಟದಲ್ಲಿ ಪ್ರವಾಸ ಮಾಡಿ ಸಾರ್ವಜನಿಕರ ಸಮಸ್ಯೆಗಳನ್ನು ಪರಿಹರಿಸಲು ಕ್ರಮ ತೆಗೆದುಕೊಳ್ಳಬೇಕು. ಪ್ರವಾಸ ಸಮಯದಲ್ಲಿ ನರೇಗಾ ಕಾಮಗಾರಿಗಳ ವೀಕ್ಷಣೆ, ಕೂಸಿನ ಮನೆ ಹಾಗೂ ಅರಿವು ಕೇಂದ್ರಗಳ ತಪಾಸಣೆ ನಡೆಸಬೇಕು’ ಎಂದರು.

‘ಗುಣಮಟ್ಟ ಹೆಚ್ಚಿಸುವ ಉದ್ದೇಶದ ಸಮಾವೇಶ’

ಪ್ರಜಾವಾಣಿ ವಾರ್ತೆ

ಯಲಹಂಕ: ಸಹಕಾರ ನಗರದ ಲೈಫ್‌ಕೇರ್ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಆಶ್ರಯದಲ್ಲಿ ಮಧುಮೇಹ ಹಾಗೂ ಹೃದ್ರೋಗಕ್ಕೆ ಸಂಬಂಧಿಸಿದಂತೆ ‘ಐಲೆಟ್-2024’ ಸಮಾವೇಶ ನಡೆಯಿತು.

ಸಮಾವೇಶದಲ್ಲಿ ಕರ್ನಾಟಕದ 500 ವೈದ್ಯರೂ ಸೇರಿದಂತೆ ವಿವಿಧ ತಜ್ಞರು ಹಾಗೂ ಆರೋಗ್ಯ ವಲಯದ ಪ್ರತಿನಿಧಿಗಳು ಪಾಲ್ಗೊಂಡಿದ್ದರು.

ಹೃದ್ರೋಗ ಸಮಸ್ಯೆಯೂ ಸೇರಿದಂತೆ ಇತರೆ ಆರೋಗ್ಯ ಸೇವೆಗಳ ಕುರಿತು ವಿಚಾರ ವಿನಿಮಯ, ಪ್ರಬಂಧ ಮಂಡನೆ ಹಾಗೂ ಕಾರ್ಯಾಗಾರಗಳು ನಡೆದವು. ಅಲ್ಲದೆ ಹೃದ್ರೋಗ ವಲಯದಲ್ಲಿನ ಇತ್ತೀಚಿನ ಬೆಳವಣಿಗೆಗಳ ಕುರಿತು ಚರ್ಚಿಸಲಾಯಿತು.

ಸಮಾವೇಶದ ಸಂಘಟನಾ ಕಾರ್ಯದರ್ಶಿ ಎಲ್.ಶ್ರೀನಿವಾಸಮೂರ್ತಿ ಮಾತನಾಡಿ, ವೈದ್ಯಕೀಯ ಲೋಕದಲ್ಲಿ ಆಗುತ್ತಿರುವ ಇತ್ತೀಚಿನ ಬೆಳವಣಿಗೆಗಳು ಮತ್ತು ಮಾರ್ಪಾಡುಗಳು, ನೂತನ ಚಿಕಿತ್ಸಾ ಕ್ರಮಗಳು, ಹೊಸದಾಗಿ ಆವಿಷ್ಕಾರ ಆಗುತ್ತಿರುವ ಔಷಧಿಗಳು, ಹೃದಯ, ಕಿಡ್ನಿ, ಮಧುಮೇಹ ಹಾಗೂ ಸ್ಥೂಲಕಾಯಕ್ಕೆ ಸಂಬಂಧಿಸಿದಂತೆ ಚರ್ಚಿಸಿ, ರೋಗಿಗಳ ಚಿಕಿತ್ಸಾ ಗುಣಮಟ್ಟವನ್ನು ಹೆಚ್ಚಿಸುವ ಉದ್ದೇಶದಿಂದ ಈ ಸಮಾವೇಶವನ್ನು ಏರ್ಪಡಿಸಲಾಗಿದೆ ಎಂದು ತಿಳಿಸಿದರು.

ಇಂಡಿಯನ್ ಕಾಲೇಜ್ ಆಫ್ ಫಿಸಿಷಿಯನ್ಸ್‌ನ ಡೀನ್ ಜ್ಯೋತಿರ್ ಮೆ ಪಾಲ್, ಡಾ.ಶಶಾಂಕ್ ಜೋಶಿ, ಆದಿಚುಂಚನಗಿರಿ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಂ.ಎ.ಶೇಖರ್ ಉಪಸ್ಥಿತರಿದ್ದರು.

ಸಮಾವೇಶದ ಸಂಘಟನಾ ಕಾರ್ಯದರ್ಶಿ ಎಲ್. ಶ್ರೀನಿವಾಸಮೂರ್ತಿ ಸಮಾವೇಶವನ್ನು ಉದ್ಘಾಟಿಸಿದರು. ಇಂಡಿಯನ್ ಕಾಲೇಜ್ ಆಫ್ ಫಿಸಿಷಿಯನ್ಸ್ ಡೀನ್ ಜ್ಯೋತಿರ್ ಮೆ ಪಾಲ್, ಶಶಾಂಕ್ ಜೋಶಿ, ಆದಿಚುಂಚನಗಿರಿ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಂ.ಎ.ಶೇಖರ್ ಇದ್ದರು.

ಬಿಜೆಪಿ ಕೋರ್ ಕಮಿಟಿ ಸಭೆ ಇಂದು

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ತಾಲ್ಲೂಕಿನ ಕಾಕತಿಯ ಹೋಟೆಲ್‌ನಲ್ಲಿ ಮಾರ್ಚ್ 4ರಂದು ರಾತ್ರಿ 9ಕ್ಕೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ನೇತೃತ್ವದಲ್ಲಿ ಬೆಳಗಾವಿ, ಚಿಕ್ಕೋಡಿ, ವಿಜಯಪುರ ಮತ್ತು ಬಾಗಲಕೋಟೆ ಲೋಕಸಭೆ ಕ್ಷೇತ್ರಗಳ ಕೋರ್ ಕಮಿಟಿ ಸಭೆ ನಡೆಯಲಿದೆ’ ಎಂದು ಪಕ್ಷದ ಗ್ರಾಮೀಣ ಜಿಲ್ಲಾ ಘಟಕದ ಅಧ್ಯಕ್ಷ ಸುಭಾಷ ಪಾಟೀಲ ಹೇಳಿದರು.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ಪಕ್ಷದ ಶಾಸಕರು, ಮಾಜಿ ಶಾಸಕರು, ಮುಖಂಡರು, ಟಿಕೆಟ್ ಆಕಾಂಕ್ಷಿಗಳು ಪಾಲ್ಗೊಳ್ಳುವರು’ ಎಂದರು.

ಬಿಜೆಪಿ ವಕ್ತಾರ ಎಂ.ಬಿ.ಝಿರಲಿ, ‘ಮಾ.5ರಂದು ಬೆಳಿಗ್ಗೆ 10ಕ್ಕೆ ಚಿಕ್ಕೋಡಿ ಯಲ್ಲಿ ಬಿಜೆಪಿ ಬೂತ್ ಮಟ್ಟದ ಕಾರ್ಯಕರ್ತರ ಸಭೆ ನಡೆಯಲಿದೆ. ಸಂಜೆ 4.30ಕ್ಕೆ ಬೆಳಗಾವಿಯಲ್ಲಿ ಪ್ರಬುದ್ಧರ ಸಭೆ ಆಯೋಜಿಸಿದ್ದು, ವೈದ್ಯರು, ಉದ್ಯಮಿಗಳು, ಗಣ್ಯರು ಭಾಗವಹಿಸುವರು’ ಎಂದರು.

ನಗರದಲ್ಲಿ ಇಂದು

ಕರ್ನಾಟಕ ರಾಜ್ಯ ಗುತ್ತಿಗೆದಾರರ ರಾಜ್ಯಮಟ್ಟದ ಸಮ್ಮೇಳನ: ಉದ್ಘಾಟನೆ: ಸಿದ್ದರಾಮಯ್ಯ, ಅತಿಥಿಗಳು: ಡಿ.ಕೆ. ಶಿವಕುಮಾರ್, ಸತೀಶ್ ಜಾರಕಿಹೊಳಿ, ದಿನೇಶ್ ಗುಂಡೂರಾವ್, ಜಮೀರ್ ಅಹಮದ್ ಖಾನ್, ಪ್ರಿಯಾಂಕ್ ಖರ್ಗೆ, ಎನ್.ಎಸ್. ಬೋಸರಾಜು, ಅಧ್ಯಕ್ಷತೆ: ಡಿ. ಕೆಂಪಣ್ಣ, ಆಯೋಜನೆ: ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘ, ಸ್ಥಳ: ಗಾಯತ್ರಿ ಗ್ರ್ಯಾಂಡ್, ಗೇಟ್ ಸಂಖ್ಯೆ-4, ಅರಮನೆ ಮೈದಾನ, ಬೆಳಿಗ್ಗೆ 10

‘ಮೌಢ್ಯ, ಮೂಢನಂಬಿಕೆ ಮತ್ತು ಮಾಧ್ಯಮ’ ಸಂವಾದ: ಭಾಗವಹಿಸುವವರು: ಸತೀಶ್ ಜಾರಕಿಹೊಳಿ, ಅಧ್ಯಕ್ಷತೆ: ಶಿವಾನಂದ ತಗಡೂರು, ಆಯೋಜನೆ ಮತ್ತು ಸ್ಥಳ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಸಭಾಂಗಣ, ಕೆ.ಜಿ. ರಸ್ತೆ, ಬೆಳಿಗ್ಗೆ 10.30

ಘಟಿಕೋತ್ಸವ: ಅಧ್ಯಕ್ಷತೆ: ಥಾವರಚಂದ್ ಗೆಹಲೋತ್, ಅತಿಥಿ: ಎನ್. ಚಲುವರಾಯಸ್ವಾಮಿ, ಮುಖ್ಯಭಾಷಣಕಾರರು: ಹಿಮಾಂಶು ಪಾಠಕ್, ಆಯೋಜನೆ: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಸ್ಥಳ: ಡಾ.ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಭವನ, ಜಿಕೆವಿಕೆ, ಬೆಳಿಗ್ಗೆ 11.30

ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

pfrda
18–70 ವರ್ಷ ಪ್ರಾಯದಲ್ಲಿ ಆರಂಭಿಸಿ + ಜೀವನಪೂರ್ತಿ ಭದ್ರತೆ ಆನಂದಿಸಿ

ಎನ್‌ಪಿಎಸ್ ಮೂಲಕ ಹೆಚ್ಚು ಪಡೆಯಿರಿ
ಭದ್ರ ಭವಿಷ್ಯಕ್ಕಾಗಿ ಹೂಡಿಕೆ ಮಾಡಿರಿ
ಇದರಲ್ಲಿ ಯಾರು ಸೇರಿಕೊಳ್ಳಬಹುದು?
• 18 ರಿಂದ 70 ವರ್ಷದೊಳಗಿನ ಯಾವುದೇ ಭಾರತೀಯ ನಾಗರಿಕ (ಎನ್‌ಆರ್‌ಐ/ಒಸಿಐ ಸೇರಿದಂತೆ) ಮತ್ತು ಕಾರ್ಪೊರೇಟ್ ಉದ್ಯೋಗಿಗಳು ಸೇರಿಕೊಳ್ಳಬಹುದು.
ಹೇಗೆ ನೋಂದಾಯಿಸಿಕೊಳ್ಳಬೇಕು?
• ಬ್ಯಾಂಕ್/ಎನ್‌ಬಿಎಫ್‌ಸಿ ಗಳಂತಹ ಪಿಒಪಿ ಮುಖಾಂತರ ಖುದ್ದಾಗಿ ಅಥವಾ ಆನ್‌ಲೈನ್ ವಿಧಾನದಲ್ಲಿ ನೋಂದಾಯಿಸಿಕೊಳ್ಳಬಹುದು.
• ಎನ್‌ಪಿಎಸ್ ಟ್ರಸ್ಟ್‌ನ (npstrust.org.in) ಆನಲೈನ್ ವೇದಿಕೆಯಲ್ಲಿ ಅಥವಾ ಫಿನ್‌ಟೆಕ್ ಆ್ಯಪ್‌ಗಳ ಮೂಲಕ.
ಪರಿಪಕ್ವತೆಯ ಸಮಯದಲ್ಲಿ:
• 60ನೇ ವಯಸ್ಸಿನಲ್ಲಿ ಅಥವಾ ನಿವೃತ್ತಿ ಪ್ರಾಯದಲ್ಲಿ, ಒಟ್ಟಾರೆ ಕಾರ್ಪಸ್ ಮೊತ್ತದಲ್ಲಿ 60% ಹಿಂಪಡೆದುಕೊಳ್ಳಬಹುದು ಅಥವಾ ಕಂತುಗಳಲ್ಲಿ ಸಿಸ್ಟೆಮ್ಯಾಟಿಕ್ ಲಂಪ್ಸಮ್ ವಿಡ್ರಾವಲ್ ಮೂಲಕ ಮತ್ತು ಇನ್ನುಳಿದ ಮೊತ್ತವನ್ನು ನಿಯಮಿತ ಪಿಂಚಣಿಯ ಅನ್ಯುಯಿಟಿಯಲ್ಲಿ ಪಡೆದುಕೊಳ್ಳಬಹುದು.
nps national pension system #Zaruri Hai
@PFRDAOfficial NPS-National Pension System @PFRDAOfficial /company/pfrda/
ಹೆಚ್ಚಿನ ಮಾಹಿತಿಗೆ ಅಥವಾ ನೋಂದಣಿಗಾಗಿ ಸ್ಕ್ಯಾನ್ ಮಾಡಿ

ಇದೇ 6ರವರೆಗೆ ಅಭಿಯಾನ; ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿಕೆ

‘ಪೋಲಿಯೊ ಮುಕ್ತ ಸ್ಥಿತಿ ಕಾಯ್ದುಕೊಳ್ಳಬೇಕು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಐದು ವರ್ಷದೊಳಗಿನ ಎಲ್ಲ ಮಕ್ಕಳಿಗೂ ಪೋಲಿಯೊ ಲಸಿಕೆ ಹಾಕಿಸುವ ಮೂಲಕ ಪೋಲಿಯೊ ಮುಕ್ತ ಸ್ಥಿತಿಯನ್ನು ಕಾಯ್ದುಕೊಳ್ಳಬೇಕು’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಇಲ್ಲಿನ ಕೋದಂಡರಾಮಪುರದ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಭಾನುವಾರ ಮಕ್ಕಳಿಗೆ ಪಲ್ಸ್ ಪೋಲಿಯೊ ಎರಡು ಹನಿ ಹಾಕುವ ಮೂಲಕ ನಗರದಲ್ಲಿ ಲಸಿಕೆ ಅಭಿಯಾನಕ್ಕೆ ಚಾಲನೆ ನೀಡಿದರು.

‘ದೇಶವು ಪೋಲಿಯೊ ಮುಕ್ತ ರಾಷ್ಟ್ರವಾಗಿದೆ. ಈ ಸ್ಥಿತಿ ಕಾಯ್ದುಕೊಳ್ಳಲು ಐದು ವರ್ಷದೊಳಗಿನ ಮಕ್ಕಳಿಕೆ ಪೋಲಿಯೊ ಹನಿ ಹಾಕಲಾಗುತ್ತಿದೆ. ಭಾನುವಾರ ನಡೆದ ಅಭಿಯಾನದಲ್ಲಿ ಲಸಿಕೆ ಹಾಕಿಸಿಕೊಳ್ಳದ, ಬಿಟ್ಟು ಹೋದ ಮಕ್ಕಳಿಗೆ ಪೋಲಿಯೊ ಹನಿ ಹಾಕಲು ಇದೇ 6ರವರೆಗೆ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಆರೋಗ್ಯ ಕಾರ್ಯಕರ್ತೆಯರು ಮನೆಗಳಿಗೆ ತೆರಳಿ ಪೋಲಿಯೊ ಹನಿ ಹಾಕಲಿದ್ದಾರೆ’ ಎಂದು ಹೇಳಿದರು.

ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕ ನವೀನ್ ಭಟ್, ‘ವಲಸಿಗ ಸಮುದಾಯ, ಹೆಚ್ಚು ಅಪಾಯದಂಚಿನಲ್ಲಿರುವ ಪ್ರದೇಶಗಳಲ್ಲಿ ವಾಸಿಸುತ್ತಿರುವವರು ಹಾಗೂ ನಗರ ಪ್ರದೇಶದ ಕೊಳೆಗೇರಿಗಳಲ್ಲಿ ವಾಸಿಸುವ ಮಕ್ಕಳಿಗೆ ಹೆಚ್ಚಿನ ಆದ್ಯತೆ ನೀಡಿ, ಪೋಲಿಯೊ ಹನಿ ಹಾಕಲಾಗಿದೆ. 2011ರಲ್ಲಿ ಪಶ್ಚಿಮ ಬಂಗಾಳದಲ್ಲಿ ಕೊನೆಯ ಪೋಲಿಯೊ ಪ್ರಕರಣ ವರದಿಯಾಗಿತ್ತು. ಬಳಿಕ ದೇಶದಲ್ಲಿ ಈವರೆಗೆ ಯಾವುದೇ ಪೋಲಿಯೊ ಪ್ರಕರಣ ವರದಿಯಾಗಿಲ್ಲ’ ಎಂದು ತಿಳಿಸಿದರು.

ದಿನೇಶ್ ಗುಂಡೂರಾವ್ ಅವರು ಮಗುವೊಂದಕ್ಕೆ ಪೋಲಿಯೊ ಹನಿ ಹಾಕುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿದರು. ನವೀನ್ ಭಟ್ ಪಾಲ್ಗೊಂಡಿದ್ದರು

60.41 ಲಕ್ಷ ಮಕ್ಕಳಿಗೆ ಪೋಲಿಯೊ ಹನಿ

ಬೆಂಗಳೂರು: ಆರೋಗ್ಯ ಇಲಾಖೆಯು ರಾಜ್ಯದಾದ್ಯಂತ ಭಾನುವಾರ ಹಮ್ಮಿಕೊಂಡಿದ್ದ ಪಲ್ಸ್ ಪೋಲಿಯೊ ಲಸಿಕೆ ವಿತರಣೆ ಅಭಿಯಾನಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ನಿಗದಿಪಡಿಸಲಾಗಿದ್ದ 5 ವರ್ಷದೊಳಗಿನ ಮಕ್ಕಳಲ್ಲಿ 60.41 ಲಕ್ಷ ಮಕ್ಕಳು ಪೋಲಿಯೊ ಹನಿ ಹಾಕಿಸಿಕೊಂಡಿದ್ದಾರೆ.

ಇಲಾಖೆಯು ಈ ಬಾರಿ 62.85 ಲಕ್ಷ ಮಕ್ಕಳಿಗೆ ಲಸಿಕೆ ವಿತರಿಸುವ ಗುರಿ ಹಾಕಿಕೊಂಡಿತ್ತು. ಶೇ 96 ರಷ್ಟು ಗುರಿ ತಲುಪಿದ್ದು, ಬಿಟ್ಟು ಹೋದ ಹಾಗೂ ಅಭಿಯಾನದಿಂದ ಹೊರಗುಳಿದ ಮಕ್ಕಳಿಗೆ ಇದೇ 6ರವರೆಗೆ ಮನೆ ಮನೆಗೆ ತೆರಳಿ ಪೋಲಿಯೊ ಹನಿ ಹಾಕಲಾಗುತ್ತದೆ. ಆರೋಗ್ಯ ಕೇಂದ್ರಗಳ ಜತೆಗೆ ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ, ಮೆಟ್ರೊ ನಿಲ್ದಾಣ ಸೇರಿ ವಿವಿಧ ಸಾರ್ವಜನಿಕ ಪ್ರದೇಶಗಳಲ್ಲಿಯೂ ಲಸಿಕೆ ವಿತರಣೆಗೆ ವ್ಯವಸ್ಥೆ ಮಾಡಲಾಗಿತ್ತು. ಲಸಿಕೆ ವಿತರಣೆಗೆ 1.11 ಲಕ್ಷ ಸಿಬ್ಬಂದಿಯನ್ನು ಬಳಸಿಕೊಳ್ಳಲಾಗಿತ್ತು.

ಪೋಲಿಯೊ ಲಸಿಕೆ ವಿತರಣೆಯಲ್ಲಿ ವಿಜಯನಗರ ಜಿಲ್ಲೆ ಅಗ್ರ ಸ್ಥಾನ ಪಡೆದಿದೆ. ಅಲ್ಲಿ 1.33 ಲಕ್ಷ ಮಕ್ಕಳಿಗೆ ಲಸಿಕೆ ಹಾಕುವ ಗುರಿ ನೀಡಲಾಗಿತ್ತು. 1.43 ಲಕ್ಷ ಮಕ್ಕಳಿಗೆ ಲಸಿಕೆ ಒದಗಿಸಲಾಗಿದ್ದು, ಶೇ 108 ಸಾಧನೆಯಾಗಿದೆ. ಮಂಡ್ಯ, ಚಿಕ್ಕಮಗಳೂರು ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯೂ ಶೇ 100 ಹಾಗೂ ಅದಕ್ಕಿಂತ ಹೆಚ್ಚಿನ ಸಾಧನೆ ಮಾಡಿದೆ. ಕೋಲಾರ ಕಡೆಯ ಸ್ಥಾನದಲ್ಲಿದ್ದು, ಅಲ್ಲಿ 1.61 ಲಕ್ಷ ಮಕ್ಕಳಿಗೆ ಪೋಲಿಯೊ ಹನಿ ಹಾಕುವ ಗುರಿ ನೀಡಲಾಗಿತ್ತು. ಆದರೆ, 1.43 ಲಕ್ಷ ಮಕ್ಕಳಿಗೆ ಲಸಿಕೆ ಹಾಕಿದ್ದು, ಶೇ 92 ರಷ್ಟು ಗುರಿ ತಲುಪಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 10.61 ಲಕ್ಷ ಮಕ್ಕಳಿಗೆ (ಶೇ 95) ಪೋಲಿಯೊ ಹನಿ ಹಾಕಲಾಗಿದೆ.

ಬೆಂಗಳೂರು ನಗರ: ಶೇ 94.33 ಮಕ್ಕಳಿಗೆ ಲಸಿಕೆ

ಬೆಂಗಳೂರು: ಆರೋಗ್ಯ ಇಲಾಖೆಯು 5 ವರ್ಷದೊಳಗಿನ ಮಕ್ಕಳಿಗೆ ಭಾನುವಾರ ಹಮ್ಮಿಕೊಂಡಿದ್ದ ಪೋಲಿಯೊ ಲಸಿಕೆ ಅಭಿಯಾನದಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಶೇ 94.33 ಮಕ್ಕಳಿಗೆ ಲಸಿಕೆ ಹಾಕಲಾಗಿದೆ.

ನಗರ ವ್ಯಾಪ್ತಿಯಲ್ಲಿ 5 ವರ್ಷದೊಳಗಿನ ಮಕ್ಕಳ ಸಂಖ್ಯೆ 11,13,617 ಎಂದು ಗುರುತಿಸಲಾಗಿತ್ತು. ಅದರಲ್ಲಿ 10,50,348 ಮಕ್ಕಳಿಗೆ ಪೋಲಿಯೊ ಲಸಿಕೆ ಹಾಕಲಾಗಿದೆ. ದಾಸರಹಳ್ಳಿ ವಲಯದಲ್ಲಿ ಶೇ 97, ಬೊಮ್ಮನಹಳ್ಳಿ ವಲಯದಲ್ಲಿ ಶೇ 96.1, ಮಹದೇವಪುರ ವಲಯದಲ್ಲಿ ಶೇ 95.4, ಬೆಂಗಳೂರು ಪೂರ್ವದಲ್ಲಿ ಶೇ 95, ಆರ್.ಆರ್. ನಗರ ವಲಯದಲ್ಲಿ ಶೇ 95, ಯಲಹಂಕ ವಲಯದಲ್ಲಿ ಶೇ 93.9, ಬೆಂಗಳೂರು ಪಶ್ಚಿಮ ವಲಯದಲ್ಲಿ ಶೇ 92.8 ಹಾಗೂ ಬೆಂಗಳೂರು ದಕ್ಷಿಣ ವಲಯದಲ್ಲಿ ಶೇ 92 ಸಾಧನೆಯಾಗಿದೆ. ಲಸಿಕೆ ಹಾಕಿಸಿಕೊಳ್ಳದೇ ಹೊರಗುಳಿದಿರುವ ಮಕ್ಕಳಿಗೆ ಇನ್ನು ಮೂರು ದಿನಗಳ ಕಾಲ ಮನೆ ಮನೆಗೆ ಭೇಟಿ ನೀಡಿ ಲಸಿಕೆ ನೀಡಲಾಗುವುದು ಎಂದು ಪಾಲಿಕೆಯ ಪ್ರಕಟಣೆ ತಿಳಿಸಿದೆ.

ಆಯುಷ್ಮಾನ್ ಭಾರತ: 77 ಲಕ್ಷ ಮಂದಿಗೆ ಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ‘ಆಯುಷ್ಮಾನ್ ಭಾರತ ಪ್ರಧಾನಮಂತ್ರಿ ಜನಾರೋಗ್ಯ ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ ಯೋಜನೆ’ಯಡಿ ಈವರೆಗೆ 77 ಲಕ್ಷ ಮಂದಿ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಯೋಜನೆಯಡಿ ಎಲ್ಲ ಅರ್ಹ ಫಲಾನುಭವಿಗಳು ಚಿಕಿತ್ಸೆ ಪಡೆಯುವಂತಾಗಲು ಎಲ್ಲ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಕಿಯೋಸ್ಕ್‌ಗಳನ್ನು ಸ್ಥಾಪಿಸುವ ಬಗ್ಗೆ ಇಲಾಖೆ ಆಯುಕ್ತ ಡಿ. ರಂದೀಪ್ ಸುತ್ತೋಲೆ ಹೊರಡಿಸಿದ್ದಾರೆ.

ಸೌಲಭ್ಯ ವಂಚಿತ ದುರ್ಬಲ ಕುಟುಂಬಗಳಿಗೂ ಯೋಜನೆಯಡಿ ವೈದ್ಯಕೀಯ ಸೇವೆ ಸಿಗುವಂತಾಗಬೇಕು. ಆದ್ದರಿಂದ ಪ್ರತಿ ಜಿಲ್ಲಾಸ್ಪತ್ರೆ, ಸಾರ್ವಜನಿಕ ಮತ್ತು ತಾಲ್ಲೂಕು ಆಸ್ಪತ್ರೆ, ವೈದ್ಯಕೀಯ ಮಹಾವಿದ್ಯಾಲಯದ ಆಸ್ಪತ್ರೆಗಳಲ್ಲಿ ಯೋಜನೆಯ ಕಿಯೋಸ್ಕ್ ಸ್ಥಾಪಿಸುವಂತೆ ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರ ಆದೇಶಿಸಿದೆ. ಆಸ್ಪತ್ರೆಗಳ ಹೊರರೋಗಿಗಳ ವಿಭಾಗದಲ್ಲಿ ಕಿಯೋಸ್ಕ್‌ಗಳನ್ನು ಸ್ಥಾಪಿಸಬೇಕಿದೆ. ಅದಕ್ಕೆ ವಿದ್ಯುತ್ ಹಾಗೂ ಅಂತರ್ಜಾಲ ಸಂಪರ್ಕ ಇರಬೇಕು ಎಂದು ಹೇಳಿದ್ದಾರೆ.

ಕಿಯೋಸ್ಕ್ ಮೂಲಕ ಯೋಜನೆಯ ಬಗ್ಗೆ ಮಾಹಿತಿ ಒದಗಿಸಬೇಕು. ಕಿಯೋಸ್ಕ್ ಸ್ಥಾಪನೆಗೆ ಅಗತ್ಯವಿರುವ ವೆಚ್ಚವನ್ನು ಯೋಜನೆಯಡಿ ಮರುಪಾವತಿಯಾದ ಚಿಕಿತ್ಸಾ ನಿಧಿಯಿಂದ ಭರಿಸಬೇಕು. ಎಲ್ಲ ಆಸ್ಪತ್ರೆಗಳಲ್ಲೂ ಮಾರ್ಚ್15ರೊಳಗೆ ಕಿಯೋಸ್ಕ್‌ಗಳು ಕಾರ್ಯಾರಂಭ ಮಾಡಬೇಕು ಎಂದು ಅವರು ತಿಳಿಸಿದ್ದಾರೆ.

ಇಂದಿನಿಂದ ನೊಣವಿನಕೆರೆ ಕಾಡಸಿದ್ಧೇಶ್ವರ ಜಾತ್ರೆ

ಪ್ರಜಾವಾಣಿ ವಾರ್ತೆ

ತಿಪಟೂರು: ತಾಲ್ಲೂಕಿನ ನೊಣವಿನಕೆರೆ ಕಾಡಸಿದ್ದೇಶ್ವರ ಮಠದಲ್ಲಿ ಮಾರ್ಚ್ 4ರಿಂದ 6ರವರೆಗೆ ಜಾತ್ರಾ ಮಹೋತ್ಸವ ನಡೆಯಲಿದೆ ಎಂದು ಕರಿವೃಷಭದೇಶಿಕೇಂದ್ರ ಶಿವಯೋಗಿಶ್ವರ ಸ್ವಾಮೀಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

4ರಂದು ಬೆಳಿಗ್ಗೆ 8ಕ್ಕೆ ತೆವಡೀಹಳ್ಳಿ ಮಠದ ಗೋಸಲ ಚನ್ನಬಸವೇಶ್ವರ ಶಿವಾಚಾರ್ಯ ಸ್ವಾಮೀಜಿ ಧ್ವಜಾರೋಹಣ ನೆರವೇರಿಸುವುದರೊಂದಿಗೆ ಕಾರ್ಯಕ್ರಮ ಆರಂಭವಾಗಲಿದೆ.

5ರಂದು ವಿವಿಧ ಧಾರ್ಮಿಕ ಕಾರ್ಯಕ್ರಮ ನಡೆಯಲಿದೆ. ಸಂಜೆ ಜನಪದ ಗಾಯಕ ಶಿವರ ಉಮೇಶ್ ತಂಡದಿಂದ ಜನಪದ ಝೇಂಕಾರ, ಜಗನ್ಮಾತೆ ನೃತ್ಯ ರೂಪಕ, ಎಂಎಸ್ ಶಾಂತಲಾ ತಂಡದವರಿಂದ ‘ಪುಣ್ಯಕೋಟಿ ಗೋವಿನ ಕಥೆ’ ಪ್ರಸ್ತುತಿ ಇರಲಿದೆ. ಪದ್ಮಶ್ರೀ ಪುರಸ್ಕೃತ ಹರೇಕಳ ಹಾಜಬ್ಬ ಭಾಗವಹಿಸಲಿದ್ದು, ಸಂಜೆ ರಥೋತ್ಸವ ಜರುಗಲಿದೆ.

4 ಹಾಗೂ 5ರಂದು ಜಿಲ್ಲಾಮಟ್ಟದ ವಾಲಿಬಾಲ್ ಪಂದ್ಯಾವಳಿ ನಡೆಯಲಿದೆ. 6ರಂದು ಉಚಿತ ಆರೋಗ್ಯ ತಪಾಸಣೆ, ರಕ್ತದಾನ ಶಿಬಿರ ಇರಲಿದೆ. 11 ಗಂಟೆಗೆ ಧಾರ್ಮಿಕ ಸಮಾರಂಭ ನಡೆಯಲಿದ್ದು, ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಉದ್ಘಾಟಿಸಲಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164

9845114560 / 9731810277/ 9886213331

PUBLIC NOTICE

PUBLIC NOTICE

This is inform the general public that, our client is intending to purchase the Schedule Property hereunder from **Mrs P.B. Prema** @Prema Unnikrishnan W/o Mr K Unnikrishnan.

If any person/s, financial institutions, banks, public or private company claiming to have any rights, title, interest in the Schedule Property may lodge their claim/s and objections with documentary proof to the undersigned **within 07 days** in writing from the date of this Notice, failing which, our client will proceed with the sale and objection received thereafter will not be binding on our client.

SCHEDULE

Immovable property bearing No.38/1, Meanee Avenue Road (earlier part of Property No.6, then No.38, Tank Road, Civil Station), Bangalore-560042, measuring East: 40Ft, 5 Inches; West: 44 Ft, 9 Inches; North: 31 Ft, 3 Inches; & South: 35 Ft, 10 Inches; having a total area of 1428 Sq. Ft, and bounded on the **East by:** Assaye Road; **West by:** Property No.38/1B; **North by:** Property No.38/13; and **South by:** Meanee Avenue Road (Tank Road).

K.M.A.PERES, Advocate
No 46/1-1, Wheeler Road,
1st floor, Cox Town,
Bangalore-560 005
Office: 25485917.
Mobile: 9845000414
Email: peresoffice@gmail.com

BUSINESS

Business Offers

Finance

NRI'S INVESTMENT
And Finance Available On Low Interest Against Properties,Land& Building,Sites,Flats, Converted&, Agriculture Lands Call:7204995189

BUILDERS ESSENTIAL

Water Proofing

BUILDING SOLUTIONS
Waterproofing Roof, Sump, Bathroom, Skylight,Swimming pool, Heat resistant coating, House painting. 9448572697

DH DECCAN HERALD
To Place your ad in Deccan Herald & Prajavani Classifieds
For details contact :
9845114560 : 9731810277
9901641752 : 9886213331
080 - 45557163 / 164

EDUCATION CORNER ಕ್ಲಾಸಿಫೈಡ್ಸ್

THE BIGGEST MEDICAL UNIVERSITY IN THE REGION
جامعة الخليج الطبية
GULF MEDICAL UNIVERSITY
ACADEMIC HEALTH CENTER
ADMISSIONS OPEN 2024-25
PATHWAY TO INTERNATIONAL MEDICINE PROGRAM-MD
(Twinning Program) Duration: 6 Years Program
Higher Diploma in Preclinical Sciences
3 years study in Gulf Medical University, UAE
+ 3 years study in selected International Universities Pathforward
Americas | UK | Malaysia | Poland | Italy | Egypt | Ghana
GUS Medical Schools: USA
SABA University School of Medicine
St. Mathews University School of Medicine
Medical University of the Americas
Medical University of Lublin - Poland
Vita-Salute San Raffaele University, Italy
University of Ghana Accra - Ghana
Misr University for Science and Technology, Egypt
International Islamic University Malaysia
UK
GMU
THE IMPACT RANKINGS 2023 | QAA | THUMBAY
Benefits of the program:
• Join a Medical School with Recognized Accreditation
• Opportunity for clinical practices in various international countries
• Learning in diverse Healthcare setup benchmarked with International standards
• Access to Cutting-Edge Research and Technology
• Global career opportunities
Start your Global Journey today !!!
25 YEARS OF INNOVATION
WHY STUDY AT GULF MEDICAL UNIVERSITY
Academic Health Centre combining Academia, Research and Healthcare
An-Award wining University in Quality & Excellence
25 years of Excellence in Education, Healthcare and Research
Students from more than 91 Nationalities
3000+ Alumni
70+ Collaborations with International Universities
Ajman - United Arab Emirates | +971 6 7431333 | +971 50 5413825
raj@gmu.ac.ae | admissions@gmu.ac.ae | www.gmu.ac.ae

CONNECT ಕ್ಲಾಸಿಫೈಡ್ಸ್

ಶ್ರೇಯಾ ಹಿಯರಿಂಗ್ ಕ್ಲಿನಿಕ್ Dr. Sathya Ranna's
SHRÉYA HEARING CLINIC
SHREYA SURE SERVICE SAFE !
25 ANNIVERSARY 1997-2023
Never Before offer
Purchase between 04th to 11th March
Additional two years
Shreya Active Free Extended warranty (SAFE)
1800 425 3435
25ನೇ ವರ್ಷದ ಆಚರಣೆಯ ಕೊಡುಗೆಗಳು ಬನ್ನಿ ನಮ್ಮ ಕುಟುಂಬದ ಭಾಗವಾಗಿರಿ
ಉಚಿತ ಶ್ರವಣ ಪರೀಕ್ಷೆ ಸ್ಮಾರ್ಟ್ ಶ್ರವಣ ಸಾಧನ ಡೆಮೋ
HOME VISITS 9945633115
We believe in sound relationship...
Indiranagar 2521 4746 /47/48 | Jayanagar 2653 3055 /56/ 57 | Koramangala 2563 4411 /12/13 | Bannerghatta Road 2648 6033 /34
Sadashivanagar 2361 8037 /38/ 39 | Vijayanagar 9900044214 /23180011 | Kammanahalli 2545 5078 /79 | Marathalli 9686449392
ReSound GN Made for iPhone
Centers at Hyderabad , Mangaluru and Mysuru
sathya@shreyahearingclinic.com www.shreyahearingclinic.com
signia Life sounds brilliant.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ವಿಶ್ವವಿಖ್ಯಾತ ಕೇರಳ ಜೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ,ಮದುವೆಯೋಗ, ಪ್ರೇಮ–ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ಹೋಟೆಲ್ ಸಬರ್‌ವಾಲ್ ಪ್ಯಾಲೆಸ್‌ರಾಯ್, ರೂಂ ನಂ. 102, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು) ಬೆಂಗಳೂರು-04.
ನಂ. 24, 1ನೇ ಅಡ್ಡರಸ್ತೆ, ಕಮ್ಮನಹಳ್ಳಿ, ಕುಳ್ಳಪ್ಪ ವೃತ್ತ, ಬಾಣಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಹತ್ತಿರ, ಬೆಂಗಳೂರು-84.
Ph: 98441 65272 / 99727 41083
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನಗರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಗಾರ್ಡನ್ ಸಿಟಿ ವಿಶ್ವವಿದ್ಯಾಲಯದ ಕುಲಪತಿ ವಿ.ಜಿ. ಜೋಸೆಫ್ ಅವರಿಗೆ ‘ಕೆಂಗಲ್ ಹನುಮಂತಯ್ಯ ದತ್ತಿ ಪ್ರಶಸ್ತಿ’ ನೀಡಿ ಗೌರವಿಸಲಾಯಿತು. ಬಿಜಿಎಸ್ ಸಮೂಹ ಸಂಸ್ಥೆಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎನ್.ಎಸ್. ರಾಮೇಗೌಡ, ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ, ಲೇಖಕ ಯೋಗಣ್ಣ ಎಸ್.ಪಿ. ಮತ್ತು ಚಿತ್ರ ಸಾಹಿತಿ ನಾಗೇಂದ್ರ ಪ್ರಸಾದ್ ಪಾಲ್ಗೊಂಡಿದ್ದರು. ಈ ಪ್ರಶಸ್ತಿಯು ₹25 ಸಾವಿರ ನಗದು ಒಳಗೊಂಡಿದೆ –ಪ್ರಜಾವಾಣಿ ಚಿತ್ರ

ಇಬ್ಬರು ಮಕ್ಕಳೊಂದಿಗೆ ಮಹಿಳೆ ಆತ್ಮಹತ್ಯೆ

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ತಾಲ್ಲೂಕಿನ ಹೊರೆಯಾಲ ಗ್ರಾಮದಲ್ಲಿ ಮಹಿಳೆಯೊಬ್ಬರು ಭಾನುವಾರ ತನ್ನ ಇಬ್ಬರು ಮಕ್ಕಳನ್ನು ನೇಣು ಹಾಕಿ, ತಾನೂ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಗ್ರಾಮದ ಜ್ಯೋತಿ (28), ಮಕ್ಕಳಾದ ಬಾಂಧವ್ಯ(7) ಹಾಗೂ ಮಾನಸ(3) ಮೃತರು.ಇದಕ್ಕೆ ನಿಖರ ಕಾರಣ ತಿಳಿದುಬಂದಿಲ್ಲ. ತನಿಖೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬೇಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗೂಗಲ್ ರೇಟಿಂಗ್ ಹೆಸರಿನಲ್ಲಿ ₹ 23 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಗೂಗಲ್ ರೇಟಿಂಗ್ ನೀಡಿ ಹಣ ಸಂಪಾದನೆ ಮಾಡಬಹುದು ಎಂದು ನಂಬಿಸಿ ಆನ್‌ಲೈನ್ ವಂಚಕರು ₹ 23 ಲಕ್ಷ ವಂಚಿಸಿದ್ದಾರೆ ಎಂದು ಶಿಡ್ಲಘಟ್ಟ ತಾಲ್ಲೂಕಿನ ಎನ್.ಹೊಸಹಳ್ಳಿಯ ಸಂದೀಪ್ ಕುಮಾರ್ ನಗರದ ಸಿಇಎನ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ನನ್ನ ತಂಗಿ ಹೆರಿಗೆ ಸಲುವಾಗಿ ಮನೆಗೆ ಬಂದಿದ್ದಾರೆ. ಅವರ ನಂಬರ್‌ಗೆ ಸಂದೇಶವೊಂದು ಬಂದಿತ್ತು ಗೂಗಲ್ ರಿವ್ಯೂ ಮಾಡಿ ಹಣ ಗಳಿಸಬಹುದು ಎಂದು ಹೇಳಿದರು. ಅದಕ್ಕೆ ನಾನು ಮನೆಯಲ್ಲಿ ಬಿಡುವಿನ ಸಮಯದಲ್ಲಿ ಗೂಗಲ್ ರಿವ್ಯೂ ಮಾಡಿ ಹಣ ಸಂಪಾದನೆ ಮಾಡಬಹುದು ಎಂದು ಯೋಚಿಸಿದೆ.

ಟೆಲಿಗ್ರಾಮ್ ಗ್ರೂಪ್‌ಗೆ ಸೇರಿಸಿದರು. ಟಾಸ್ಕ್‌ಗಳನ್ನು ಪೂರ್ಣಗೊಳಿಸಿದ ನಂತರ ಹಣ ಕ್ರೆಡಿಟ್ ಆಗುತ್ತಿದ್ದ ಬಗ್ಗೆ ಸ್ಕ್ರೀನ್ ಶಾಟ್‌ಗಳನ್ನು ಆ ಗುಂಪಿನಲ್ಲಿ ಹಾಕುತ್ತಿದ್ದರು. ನಾನು ಇದನ್ನು ನಂಬಿದೆ. ಮೊದಲಿಗೆ ನನ್ನ ತಂಗಿಯ ಬ್ಯಾಂಕ್ ಖಾತೆಯಿಂದ ₹ 1 ಸಾವಿರ ಕಳುಹಿಸಿದೆ.

ಗೂಗಲ್‌ರಿವ್ಯೂ ಮಾಡಿಸ್ಕ್ರೀನ್‌ಶಾಟ್‌ಗಳನ್ನು ಹಾಕಿದ ನಂತರ ನನ್ನ ಖಾತೆಗೆ ಅವರು ₹ 1,300 ಕ್ರೆಡಿಟ್ ಮಾಡಿದರು. ನಂತರ ವಿವಿಧ ಖಾತೆಗಳಿಗೆ ಒಟ್ಟು ₹ 23.32 ಲಕ್ಷ ಹೂಡಿಕೆ ಮಾಡಿದೆ. ಹೀಗೆ ಆನ್‌ಲೈನ್ ವಂಚಕರು ಹೂಡಿಕೆ ಮಾಡಿಸಿಕೊಂಡು ವಂಚಿಸಿದ್ದಾರೆ ಎಂದು ದೂರಿನಲ್ಲಿ ವಿವರಿಸಿದ್ದಾರೆ.

ಕಾಡಾನೆ ದಾಳಿ: ನಿವೃತ್ತ ಅಧಿಕಾರಿ ಸಾವು

ಚನ್ನಪಟ್ಟಣ: ಕಾಡಾನೆ ದಾಳಿಯಿಂದ ತೀವ್ರವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿವೃತ್ತ ಅಧಿಕಾರಿ ಚಿಕಿತ್ಸೆಗೆ ಸ್ಪಂದಿಸದೆ ಭಾನುವಾರ ಸಾವನ್ನಪ್ಪಿದ್ದಾರೆ.

ತಾಲ್ಲೂಕಿನ ಬೆಳಕೆರೆ ಗ್ರಾಮದ ಎಂ.ರಾಜು (63) ಮೃತರು. ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಮನಗರ ಜಿಲ್ಲಾ ಉಪ ನಿರ್ದೇಶಕರಾಗಿ ಕೆಲಸ ಮಾಡಿದ್ದರು. ಸದ್ಯ ತಾಲ್ಲೂಕಿನ ಮತ್ತೀಕೆರೆ ಶೆಟ್ಟಹಳ್ಳಿಯಲ್ಲಿ ವಾಸವಿದ್ದರು. ಫೆ.29ರಂದು ಬೆಳಿಗ್ಗೆ ಮುದಗೆರೆ ಸಸ್ಯ ಕ್ಷೇತ್ರದ ಕಡೆಗೆ ವಾಕಿಂಗ್ ಹೋಗಿದ್ದ ವೇಳೆ ನಾಲ್ಕು ಕಾಡಾನೆಗಳು ಹಠಾತ್ ದಾಳಿ ನಡೆಸಿದ್ದವು.

ಚಿಕ್ಕಬಳ್ಳಾಪುರ: ಅಭ್ಯರ್ಥಿ ಗೆಲುವಿಗೆ ಪ್ರಯತ್ನ

ಪ್ರಜಾವಾಣಿ ವಾರ್ತೆ

ಯಲಹಂಕ: ‘ನಮೋ ವಿಜಯ ಸಂಕಲ್ಪಯಾತ್ರೆ’ ಅಂಗವಾಗಿ ಕಾರು ರ‍್ಯಾಲಿಗೆ ಉಪನಗರದಲ್ಲಿ ಭಾನುವಾರ ಚಾಲನೆ ನೀಡಲಾಯಿತು.

ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿ ಅಲೋಕ್ ವಿಶ್ವನಾಥ್ ಅಭಿಮಾನಿಗಳು ಹಾಗೂ ಬಿಜೆಪಿ ಕಾರ್ಯಕರ್ತರು 600ಕ್ಕೂ ಹೆಚ್ಚು ಕಾರುಗಳ ಸಮೇತ ರ‍್ಯಾಲಿಯಲ್ಲಿ ಪಾಲ್ಗೊಂಡಿದ್ದರು. ಚಿಕ್ಕಬಳ್ಳಾಪುರ ಕ್ಷೇತ್ರದ ಬಿಜೆಪಿ ಚುನಾವಣಾ ಉಸ್ತುವಾರಿ ಕಟ್ಟಾ ಸುಬ್ರಮಣ್ಯನಾಯ್ಡು ಸೇರಿ ಬಿಜೆಪಿ ಮುಖಂಡರು ಸಾಥ್ ನೀಡಿದರು.

ವಿಶ್ವನಾಥ್ ಮಾತನಾಡಿ, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಚಿಕ್ಕಬಳ್ಳಾಪುರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಬಾವುಟವನ್ನು ಹಾರಿಸುವ ಮೂಲಕ ನರೇಂದ್ರ ಮೋದಿ ಅವರು ಮತ್ತೊಮ್ಮೆ ದೇಶದ ಪ್ರಧಾನಿಯಾಗಬೇಕೆಂಬ ಸಂಕಲ್ಪದೊಂದಿಗೆ ಪ್ರಚಾರ ಆರಂಭಿಸಲಾಗಿದೆ. ಹತ್ತು ದಿನಗಳ ಒಳಗೆ ಅಭ್ಯರ್ಥಿಗಳ ಪಟ್ಟಿ ಅಂತಿಮವಾಗಲಿದೆ. ಚಿಕ್ಕಬಳ್ಳಾಪುರ ಕ್ಷೇತ್ರದ ಟಿಕೆಟ್ ಯಾರಿಗೆ ಸಿಕ್ಕರೂ ಅಭ್ಯರ್ಥಿ ಗೆಲುವಿಗಾಗಿ ಶ್ರಮಿಸಲಾಗುವುದು. ಸುಮಾರು 3 ಲಕ್ಷ ಮತಗಳ ಅಂತರದಿಂದ ಗೆಲುವು ಸಾಧಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಯಲಹಂಕದಿಂದ ಆರಂಭವಾದ ಕಾರು ರ‍್ಯಾಲಿ ದೊಡ್ಡಬಳ್ಳಾಪುರ, ಟಿ.ಬಿ. ಸರ್ಕಲ್, ತೊಂಡೇಬಾವಿ, ಗೌರಿಬಿದನೂರು, ಹುದುಗೂರು, ಗುಡಿಬಂಡೆ, ಬಾಗೇಪಲ್ಲಿ, ಚಿಕ್ಕಬಳ್ಳಾಪುರ, ದೇವನಹಳ್ಳಿ ಹಾಗೂ ಹೊಸಕೋಟೆ ಮಾರ್ಗವಾಗಿ ಸಾಗಿ ಬೂದಿಗೆರೆಯಲ್ಲಿ ಅಂತ್ಯಗೊಂಡಿತು.

ಬಿಜೆಪಿ ಮುಖಂಡರಾದ ದಿಬ್ಬೂರು ಜಯಣ್ಣ, ಎಸ್.ಎನ್.ರಾಜಣ್ಣ, ಎಚ್. ಬಿ.ಹನುಮಯ್ಯ, ಎಂ.ಸತೀಶ್, ಸತೀಶ್ ಕಡತನಮಲೆ, ಚೊಕ್ಕನಹಳ್ಳಿ ವೆಂಕಟೇಶ್, ಎಸ್. ಜಿ. ನರಸಿಂಹಮೂರ್ತಿ, ಟಿ.ಮುನಿರೆಡ್ಡಿ, ಎಸ್.ಜಿ. ಪ್ರಶಾಂತ್‌ರೆಡ್ಡಿ, ಮಂಜುನಾಥ ರೆಡ್ಡಿ, ಎ.ಸಿ.ಮುನಿಕೃಷ್ಣಪ್ಪ ಉಪಸ್ಥಿತರಿದ್ದರು.

‘ನಮೋ ವಿಜಯ ಸಂಕಲ್ಪ ಯಾತ್ರೆ’ ಅಂಗವಾಗಿ ಕಾರು ರ‍್ಯಾಲಿಗೆ ಶಾಸಕ ಎಸ್.ಆರ್. ವಿಶ್ವನಾಥ್ ಹಾಗೂ ಚಿಕ್ಕಬಳ್ಳಾಪುರ ಕ್ಷೇತ್ರದ ಬಿಜೆಪಿ ಚುನಾವಣಾ ಉಸ್ತುವಾರಿ ಕಟ್ಟಾ ಸುಬ್ರಮಣ್ಯನಾಯ್ಡು ಚಾಲನೆ ನೀಡಿದರು

ತೋಟದಲ್ಲಿ ಬೆಂಕಿ ನಂದಿಸುವಾಗ ರೈತ ಸಾವು

ಪ್ರಜಾವಾಣಿ ವಾರ್ತೆ

ತುರುವೇಕೆರೆ: ತಾಲ್ಲೂಕಿನ ಮಾಯಸಂದ್ರ ಹೋಬಳಿಯ ದೊಡ್ಡಮಾರ್ಗೋನಹಳ್ಳಿ ಗ್ರಾಮದ ರೈತ ಸಿದ್ದಯ್ಯ(90) ತೆಂಗಿನ ಸಸಿಗೆ ತಗುಲಿದ್ದ ಬೆಂಕಿ ನಂದಿಸುವಾಗ ಆಕಸ್ಮಿಕವಾಗಿ ಬೆಂಕಿ ಅವಘಡಕ್ಕೆ ತುತ್ತಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಸಿದ್ದಯ್ಯ ಭಾನುವಾರ ಸಂಜೆ ದೊಡ್ಡಮಾರ್ಗೋನಹಳ್ಳಿ ಹೊರ ವಲಯದ ತೋಟಕ್ಕೆ ತೆರಳಿದ್ದಾರೆ. ಬದುವಿನಲ್ಲಿದ್ದ ಹುಲ್ಲಿಗೆ ಬೆಂಕಿ ಹಾಕಿದ್ದಾರೆ. ಬೆಂಕಿ ಕ್ರಮೇಣ ಬದುವಿನ ಪಕ್ಕದಲ್ಲಿದ್ದ ತೆಂಗಿನ ಸಸಿಗೆ ಆವರಿಸಿದೆ. ನಂದಿಸುವಾಗ ಸಿದ್ದಯ್ಯ ಅವರಿಗೂ ಬೆಂಕಿಯ ಜ್ವಾಲೆ ರಾಚಿದೆ ಎಂದು ಪೊಲೀಸರು ಶಂಕಿಸಿದ್ದಾರೆ.

ಅಕ್ಕಪಕ್ಕದ ತೋಟದವರು ಸಿದ್ದಯ್ಯ ಬೆಂಕಿಯಲ್ಲಿ ಬಿದ್ದಿರುವುದನ್ನು ಕಂಡು ಅಗ್ನಿಶಾಮಕ ಸಿಬ್ಬಂದಿ ಮತ್ತು ಪೊಲೀಸರಿಗೆ ತಿಳಿಸಿದ್ದಾರೆ. ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಉಪನ್ಯಾಸದಲ್ಲಿ ಸಂಶೋಧಕಿ ಸಹನಾ ಸಿಂಗ್ ಅಭಿಮತ

‘ಭಾರತೀಯ ದೃಷ್ಟಿಕೋನದ ಶಿಕ್ಷಣ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆಧುನಿಕ ಜ್ಞಾನದ ಜೊತೆಗೆ ಪ್ರಾಚೀನ ಜ್ಞಾನವನ್ನು ಸಮ್ಮಿಳಿಸಿ, ಭಾರತೀಯ ದೃಷ್ಟಿಕೋನದಿಂದ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವುದು ಇಂದಿನ ಅವಶ್ಯಕತೆಯಾಗಿದೆ’ ಎಂದು ಸಂಶೋಧಕಿ ಸಹನಾ ಸಿಂಗ್ ತಿಳಿಸಿದರು.

ದಿ ಮಿಥಿಕ್ ಸೊಸೈಟಿ ನಗರದಲ್ಲಿ ಭಾನುವಾರ ಹಮ್ಮಿಕೊಂಡ ರಾವ್ ಬಹದ್ದೂರ್ ಸಿ. ಹಯವದನರಾವ್ ದತ್ತಿ ಉಪನ್ಯಾಸದಲ್ಲಿ ‘ಭಾರತೀಯ ಶೈಕ್ಷಣಿಕ ಪರಂಪರೆಯ ಘನತೆ’ ಎಂಬ ವಿಷಯದ ಬಗ್ಗೆ ಮಾತನಾಡಿದರು.

‘ಭಾರತೀಯ ಶಿಕ್ಷಣ ಪರಂಪರೆಯು ಜೀವನದಲ್ಲಿ ಶೈಕ್ಷಣಿಕ ಮತ್ತು ಬೌದ್ಧಿಕ ಶಿಸ್ತನ್ನು ಬೆಳಸಲು ಆದ್ಯತೆ ನೀಡಿದೆ. ಪ್ರಾಚೀನ ಕಾಲದ ಶೈಕ್ಷಣಿಕ ಕೇಂದ್ರಗಳಾದ ತಕ್ಷಶಿಲಾ, ವಲ್ಲಭಿ, ಉಜ್ಜಯಿನಿ ಮುಂತಾದವುಗಳು ಭಾರತೀಯ ಶಿಕ್ಷಣ ಪರಂಪರೆಯಲ್ಲಿ ಹೆಸರುವಾಸಿಯಾಗಿವೆ. ಭಾಷಾಧ್ಯಯನವು ಒಂದು ವಿಜ್ಞಾನವಾಗಿದ್ದು, ಹಿಂದಿನ ಕಾಲದಲ್ಲಿ ಇದಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿತ್ತು. ಆದರೆ, ಆಧುನಿಕ ಶಿಕ್ಷಣ ಪದ್ಧತಿಯಲ್ಲಿ ವಿದ್ಯಾರ್ಥಿಗಳ ಕೌಶಲಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿಲ್ಲ. ಈ ಅವಧಿಯಲ್ಲಿ ಭಾರತೀಯ ಸಂಸ್ಕೃತಿಯ ಬಗ್ಗೆ ಮಕ್ಕಳಲ್ಲಿ ಶಿಕ್ಷಣದ ಮೂಲಕ ಗೌರವ ಮತ್ತು ಹೆಮ್ಮೆಯನ್ನು ಬೆಳೆಸುವುದು ಅತ್ಯವಶ್ಯಕ. ನಮ್ಮ ಬೌದ್ಧಿಕ ರಂಗದಲ್ಲಿ ನಮ್ಮ ಮನಸ್ಸುಗಳನ್ನು ವಸಾಹತುಶಾಹಿತ್ವದ ಮನಸ್ಥಿತಿಯಿಂದ ಹೊರತರಬೇಕು’ ಎಂದರು.

ಸಹನಾ ಸಿಂಗ್ ಮಾತನಾಡಿದರು

ರಾವ್ ಬಹದ್ದೂರ್ ಆರ್. ನರಸಿಂಹಾಚಾರ್ ಸ್ಮಾರಕ ದತ್ತಿ ಉಪನ್ಯಾಸದಲ್ಲಿ ‘ಭಾರತೀಯ ನಾಗರೀಕತೆಯ ಬುನಾದಿ:ಜ್ಞಾನದ ಅನ್ವೇಷಣೆ’ ಎಂಬ ವಿಷಯದ ಬಗ್ಗೆ ಮಾತನಾಡಿದ ವಿದ್ವಾಂಸ ಸಂಪದಾನಂದ ಮಿಶ್ರ, ‘ಈ ದೇಶದ ಪರಂಪರೆಯು ಜ್ಞಾನದಾಹಿ ಪರಂಪರೆಯಾಗಿದ್ದು, ಜ್ಞಾನಾರ್ಜನೆಯಲ್ಲಿ ಭಾರತೀಯರು ಹೊಸ ಸವಾಲುಗಳನ್ನು ಎದುರಿಸುವುದರ ಜೊತೆಗೆ ಹೊಸ ಮಾರ್ಗೋಪಾಯಗಳನ್ನು ಕಂಡುಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ. ಈ ಜ್ಞಾನ ಪರಂಪರೆಯ ಕಾರಣದಿಂದಲೇ ಭಾರತೀಯ ಸಂಸ್ಕೃತಿಯು ಇಂದಿಗೂ ನಿತ್ಯನೂತನವಾಗಿದೆ’ ಎಂದರು.

‘ಕೇಂದ್ರ ಸರ್ಕಾರ ಜಾರಿ ಮಾಡಿರುವ ರಾಷ್ಟ್ರೀಯ ಶಿಕ್ಷಣ ನೀತಿಯು ಭಾರತೀಯ ಪರಂಪರೆಯನ್ನು ಹೆಚ್ಚು ಪ್ರತಿಪಾದಿಸುತ್ತಿದೆ. ರಾಷ್ಟ್ರ ಧರ್ಮವನ್ನು ಪ್ರತಿಪಾದಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಇಂತಹ ಉದಾತ್ತ ಮೌಲ್ಯಗಳನ್ನು ಶಿಕ್ಷಣದ ಮೂಲಕ ವಿದ್ಯಾರ್ಥಿಗಳಿಗೆ ತಿಳಿಸುವುದು ಅತ್ಯವಶ್ಯಕ’ ಎಂದು ಹೇಳಿದರು.

ದಿ ಮಿಥಿಕ್ ಸೊಸೈಟಿಯ ಕೋಶಾಧ್ಯಕ್ಷ ಕೆ.ಎನ್. ಹಿರಿಯಣ್ಣಯ್ಯ, ‘ಪ್ರಾಥಮಿಕ ಶಿಕ್ಷಣ ಹಂತದಿಂದಲೇ ಸಂಸ್ಕೃತ ಭಾಷಾಧ್ಯಯನವನ್ನು ಜಾರಿಗೊಳಿಸುವುದು ಅತ್ಯವಶ್ಯಕ’ ಎಂದರು.

ಮಾಹಿತಿ ಹಕ್ಕಿನಲ್ಲಿ ಅರ್ಜಿ ಸಲ್ಲಿಸಿದರೆ ಪ್ರತಿ ಪೊಲೀಸ್ ಠಾಣೆಯಲ್ಲಿ ಮಾಹಿತಿ ಕೇಳಲು ಸಲಹೆ

‘ಗೋಲಿಬಾರ್: ಸತ್ತ ರೈತರ ವಿವರ ಲಭ್ಯವಿಲ್ಲ’

• ಬಾಲಕೃಷ್ಣ ಪಿ.ಎಚ್.

ಪ್ರಜಾವಾಣಿ ವಿಶೇಷ

ಬೆಂಗಳೂರು: ಗೋಲಿಬಾರ್‌ನಿಂದ ಎಷ್ಟು ರೈತರು ಮೃತಪಟ್ಟಿದ್ದಾರೆ ಎಂಬ ಮಾಹಿತಿಯೇ ಪೊಲೀಸ್ ಇಲಾಖೆಯಲ್ಲಿ ಇಲ್ಲ. ರೈತ ಹೋರಾಟಗಾರರು ಮಾಹಿತಿ ಹಕ್ಕು ನಿಯಮದ ಅಡಿ ಅರ್ಜಿ ಸಲ್ಲಿಸಿದಾಗ ಈ ವಿಚಾರ ಬಹಿರಂಗಗೊಂಡಿದೆ.

ರಾಜ್ಯದಲ್ಲಿ ಈವರೆಗೆ ಪೊಲೀಸ್ ಗೋಲಿಬಾರ್‌ನಿಂದ ಮಡಿದ ರೈತರ ವಿವರವನ್ನು ಕಬ್ಬು ಬೆಲೆ ಮಂಡಳಿ ಮಾಜಿ ಸದಸ್ಯ ತೇಜಸ್ವಿ ವಿ. ಪಟೇಲ್ ಕೇಳಿದ್ದರು. ಯಾವ ಪೊಲೀಸ್ ಠಾಣೆ ವ್ಯಾಪ್ತಿ? ಯಾವ ವರ್ಷ? ರೈತನ ಹೆಸರು ಮತ್ತು ವಿಳಾಸ, ಬೀದಿಗಿಳಿದ ಕಾರಣ, ಸರ್ಕಾರ ಪರಿಹಾರ ನೀಡಿದೆಯೇ? ನೀಡಿದ್ದರೆ ಎಷ್ಟು ಎಂಬ ಮಾಹಿತಿಗಳನ್ನು ಕೇಳಿ ರಾಜ್ಯ ಪೊಲೀಸ್ ಮಹಾ ನಿರ್ದೇಶಕರಿಗೆ ಅರ್ಜಿ ಸಲ್ಲಿಸಿದ್ದರು.

ನಿಯಮಾನುಸಾರ ಕ್ರಮ ಕೈಗೊಳ್ಳಲು ಅಲ್ಲಿಂದ ಕಾನೂನು ಮತ್ತು ಸುವ್ಯವಸ್ಥೆ ಶಾಖೆಗೆ ಅರ್ಜಿ ವರ್ಗಾಯಿಸಲಾಗಿತ್ತು.

‘ನೀವು ಕೋರಿರುವ ಮಾಹಿತಿ ಲಭ್ಯ ಇರುವುದಿಲ್ಲ. ಸಂಬಂಧಪಟ್ಟ ಘಟಕಗಳಿಗೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಿ ಮಾಹಿತಿ ಪಡೆಯಬಹುದು’ ಎಂದು ಕಾನೂನು ಸುವ್ಯವಸ್ಥೆ ಶಾಖೆಯ ಸಹಾಯಕ ಆಡಳಿತಾಧಿಕಾರಿಯು ಅರ್ಜಿದಾರರಿಗೆ ಉತ್ತರಿಸಿದ್ದಾರೆ.

‘ಘಟಕಗಳಲ್ಲಿ ಮಾಹಿತಿ ಕೇಳುವುದು ಅಂದರೆ ಪ್ರತಿ ಪೊಲೀಸ್ ಠಾಣೆಗೂ ತೆರಳಿ ಅರ್ಜಿ ಸಲ್ಲಿಸಬೇಕು. ಅದು ಸುಲಭದ ಕೆಲಸವಲ್ಲ. ನ್ಯಾಯಬೆಲೆ ಅಂಗಡಿಗಳಲ್ಲಿ ಎಷ್ಟು ಪಡಿತರ ವಿತರಣೆಯಾಗಿದೆ ಎಂಬ ಮಾಹಿತಿ ಆಹಾರ ಇಲಾಖೆಯಲ್ಲಿ ಇರುತ್ತದೆ. ಅದೇ ರೀತಿ ಗೋಲಿಬಾರ್ ಸಹಿತ ಎಲ್ಲ ಮಾಹಿತಿ ಪೊಲೀಸ್ ಇಲಾಖೆಯಲ್ಲಿ ಇರಬೇಕು’ ಎಂದು ತೇಜಸ್ವಿ ವಿ. ಪಟೇಲ್ ಪ್ರತಿಕ್ರಿಯಿಸಿದ್ದಾರೆ.

‘ನೀರಿನ ತೆರಿಗೆಗೆ ಸಂಬಂಧಿಸಿದಂತೆ ನರಗುಂದ–ನವಲಗುಂದದಲ್ಲಿ 1980ರಲ್ಲಿ ರೈತರು ಪ್ರತಿಭಟನೆ ನಡೆಸಿದಾಗ ಪೊಲೀಸರು ಗೋಲಿಬಾರ್ ನಡೆಸಿದ್ದರು. ರೈತರಾದ ಈರಪ್ಪ ಕಡ್ಲಿಕೊಪ್ಪ, ಬಸಪ್ಪ ಲಕ್ಕುಂಡಿ ಅಗಳವಾಡಿ ಮೃತಪಟ್ಟಿದ್ದರು. ಗೊಬ್ಬರ ವಿತರಣೆ ವಿಳಂಬ ಆಗಿರುವುದನ್ನು ವಿರೋಧಿಸಿ ಬಾಡದಲ್ಲಿ ರೈತರು 1992 ರಲ್ಲಿ ಪ್ರತಿಭಟನೆ ನಡೆಸಿದಾಗ ಪೊಲೀಸರು ಗೋಲಿಬಾರ್ ಮಾಡಿದ್ದರಿಂದ ಕರಿಲಿಂಗಪ್ಪ, ನಾಗಲಿಂಗಾಚಾರ್ ಎಂಬ ರೈತರು ಮೃತಪಟ್ಟಿದ್ದರು. 1998ರಲ್ಲಿ ಶಿರಾ ಎಪಿಎಂಸಿಯಲ್ಲಿ ನಡೆದ ಶೇಂಗಾ ಹಗರಣಕ್ಕೆ ಸಂಬಂಧಿಸಿ ಪ್ರತಿಭಟನೆ ನಡೆಸುತ್ತಿದ್ದ ರೈತರ ಮೇಲೆ ಗುಂಡು ಹಾರಿಸಲಾಗಿತ್ತು. ಆರು ರೈತರು ಸಾವಿಗೀಡಾಗಿದ್ದರು. 2008 ರಲ್ಲಿ ಗೊಬ್ಬರ ಮತ್ತು ಬಿತ್ತನೆ ಬೀಜಕ್ಕಾಗಿ ರೈತರು ಪ್ರತಿಭಟನೆ ನಡೆಸಿದಾಗ ರೈತರ ಮೇಲೆ ಗೋಲಿಬಾರ್ ಮಾಡಲಾಗಿತ್ತು. ರೈತ ಸಿದ್ದಲಿಂಗಪ್ಪ ಅಸುನೀಗಿದ್ದರು. ಇವು ನೆನಪಿನಲ್ಲಿ ಇರುವಂಥದ್ದು. ಇದೇ ರೀತಿ ಇನ್ನೆಷ್ಟು ರೈತರು ಪೊಲೀಸರ ಗುಂಡಿಗೆ ಬಲಿಯಾಗಿದ್ದಾರೆ ಎಂಬುದು ಗೊತ್ತಿಲ್ಲ. ಇಲಾಖೆಯಲ್ಲಿಯೂ ಮಾಹಿತಿ ಇಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

‘ಗಲಭೆಯಲ್ಲಿ ಸತ್ತರೆ ₹ 25 ಲಕ್ಷ !; ರೈತರಿಗಿಲ್ಲ’

ತೇಜಸ್ವಿ ವಿ. ಪಟೇಲ್

ಕೋಮುಗಲಭೆಯಲ್ಲಿ ಶಿವಮೊಗ್ಗ ಮತ್ತು ಸುಳ್ಯ ತಾಲ್ಲೂಕುಗಳಲ್ಲಿ ಮೃತಪಟ್ಟವರಿಗೆ ಹಿಂದಿನ ಸರ್ಕಾರ ತಲಾ ₹ 25 ಲಕ್ಷ ಪರಿಹಾರ ನೀಡಿತ್ತು. ಆ ಸರ್ಕಾರ ಪರಿಹಾರ ನೀಡದೇ ಬಿಟ್ಟಿದ್ದವರಿಗೆ ಈಗಿನ ಸರ್ಕಾರ ನೀಡಿತ್ತು. ಆದರೆ, ಹೋರಾಟದಲ್ಲಿ ಮೃತಪಟ್ಟ ರೈತರಿಗೆ ಪರಿಹಾರ ನೀಡಬೇಕಿದ್ದರೆ ಸರ್ಕಾರಗಳು ಹಿಂದೆ ಮುಂದೆ ನೋಡುತ್ತವೆ. ನ್ಯಾಯಾಂಗ ತನಿಖೆ ಸಹಿತ ಅನೇಕ ಕಾರಣಗಳನ್ನು ಒಡ್ಡುತ್ತಾ ಮುಂದಕ್ಕೆ ಹಾಕುತ್ತವೆ. ಗುಂಡಿಗೆ ಬಲಿಯಾದ ರೈತರ ಕುಟುಂಬಗಳ ಈಗಿನ ಸ್ಥಿತಿ ಹೇಗಿದೆ? ಅವರಿಗೆ ಪರಿಹಾರ ಎಷ್ಟು ಸಿಕ್ಕಿದೆ ಎಂದು ತಿಳಿಯಲು ಮಾಹಿತಿ ಹಕ್ಕಿನಲ್ಲಿ ಅರ್ಜಿ ಸಲ್ಲಿಸಿದ್ದೆ. ರೈತರ ಕುಟುಂಬಗಳ ವಿಳಾಸ ಸಿಕ್ಕಿದ್ದರೆ ಆ ಮನೆಗಳಿಗೆ ಭೇಟಿ ನೀಡಿ ಪರಿಶೀಲಿಸುವ ಉದ್ದೇಶ ಕೂಡ ಇತ್ತು. ಆದರೆ, ಮಾಹಿತಿ ಇಲ್ಲ ಎಂದು ಪೊಲೀಸ್ ಇಲಾಖೆ ಕೈತೊಳೆದುಕೊಂಡಿದೆ ಎಂದು ರೈತ ಹೋರಾಟಗಾರರೂ ಆಗಿರುವ ತೇಜಸ್ವಿ ವಿ. ಪಟೇಲ್ ‘ಪ್ರಜಾವಾಣಿ’ಗೆ ತಿಳಿಸಿದರು.

ಚಿತ್ರಾವಳಿ

ನಗರದಲ್ಲಿ ನಡೆಯುತ್ತಿರುವ 15ನೇ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಅಂಗವಾಗಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಲೇಖಕ ಕೆ.ಪುಟ್ಟಸ್ವಾಮಿ, ನಿರ್ದೇಶಕ ಟಿ.ಎಸ್‌.ನಾಗಾಭರಣ, ನಟಿ ಗಿರಿಜಾ ಲೋಕೇಶ್, ಸಿನಿಮಾ ವಿತರಕ ವಿ.ಎಸ್‌.ಸುರೇಶ್, ನಿರ್ದೇಶಕ ಪಿ.ಶೇಷಾದ್ರಿ ಅವರು ‘90 ವರ್ಷದ ಕನ್ನಡ ಚಲನಚಿತ್ರದ ಸಾಧನೆಗಳ ಪರ್ವ’ ಕೃತಿಯನ್ನು ಬಿಡುಗಡೆ ಮಾಡಿದರು
– ಪ್ರಜಾವಾಣಿ ಚಿತ್ರ

ಸಿನಿಮೋತ್ಸವಕ್ಕೆ ಬಂದಿದ್ದ ಸಿನಿ ಪ್ರೇಮಿಗಳು – ಪ್ರಜಾವಾಣಿ ಚಿತ್ರ

ಗೌರವ ಡಾಕ್ಟರೇಟ್ ಪ್ರದಾನ

ಮೈಸೂರು ವಿಶ್ವವಿದ್ಯಾಲಯದ ಕ್ರಾಫರ್ಡ್ ಭವನದಲ್ಲಿ ಭಾನುವಾರ ನಡೆದ 104ನೇ ವಾರ್ಷಿಕ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರು ಕ್ರಿಕೆಟಿಗ ಜಾವಗಲ್ ಶ್ರೀನಾಥ್ (ಹೋದ ವರ್ಷ ಘೋಷಿಸಿದ್ದು), ಬೆಂಗಳೂರಿನ ಗೋಕುಲ ಶಿಕ್ಷಣ ಪ್ರತಿಷ್ಠಾನದ ಉಪಾಧ್ಯಕ್ಷ ಎಂ.ಆರ್. ಸೀತಾರಾಂ, ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಮತ್ತು ಸುದರ್ಶನ ನರಸಿಂಹ ಕ್ಷೇತ್ರದ ಪೀಠಾಧಿಪತಿ ಭಾಷ್ಯಂ ಸ್ವಾಮೀಜಿ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಿದರು. ಕುಲಸಚಿವೆ ವಿ.ಆರ್. ಶೈಲಜಾ, ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಹೃದ್ರೋಗ ತಜ್ಞ ಡಾ.ಸಿ.ಎನ್.ಮಂಜುನಾಥ್, ಪರೀಕ್ಷಾಂಗ ಕುಲಸಚಿವ ಪ್ರೊ.ಕೆ.ಎಂ.ಮಹಾದೇವನ್ ಪಾಲ್ಗೊಂಡಿದ್ದರು
-ಪ್ರಜಾವಾಣಿ ಚಿತ್ರ

ಮೂವರು ಯುವಕರು ಸಮುದ್ರಪಾಲು

ಪ್ರಜಾವಾಣಿ ವಾರ್ತೆ

ಸುರತ್ಕಲ್: ನಗರದ ಪಣಂಬೂರು ಕಡಲ ಕಿನಾರೆ ಬಳಿ ವಿಹಾರಕ್ಕೆ ತೆರಳಿದ್ದ ಮೂವರು ಯುವಕರು ಭಾನುವಾರ ಸಂಜೆ ಸಮುದ್ರಪಾಲಾಗಿದ್ದಾರೆ.

ಮಿಲನ್ (20 ವರ್ಷ), ಲಿಖಿತ್ (18) ಹಾಗೂ ನಾಗರಾಜ (24) ಸಮುದ್ರಪಾಲಾದವರು. ಅವರಿಗಾಗಿ ಸಮುದ್ರದಲ್ಲಿ ಹುಡುಕಾಟ ನಡೆಯುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮಿಲನ್ ನಗರದಲ್ಲಿ ಮೀಷೊ ಕಂಪನಿಯ ಸರಕು ವಿತರಕನಾಗಿ ದುಡಿಯುತ್ತಿದ್ದರು. ಲಿಖಿತ್ ಕೈಕಂಬದ ರೋಸಾ ಮಿಸ್ಟಿಕಾ ಕಾಲೇಜಿನ ಪ್ರಥಮ ಪಿ.ಯು. ವಿದ್ಯಾರ್ಥಿ. ನಾಗರಾಜ್ ಅವರು ಬೈಕಂಪಾಡಿ ಕೈಗಾರಿಕಾ ಅಭಿವೃದ್ಧಿ ಪ್ರದೇಶದಲ್ಲಿರುವ ಎಂಎಂಆರ್ ಕಂಪನಿಯಲ್ಲಿ ಮೇಲ್ವಿಚಾರಕರಾಗಿ ದ್ದರು ಎಂದೂ ಪೊಲೀಸರು ಮಾಹಿತಿ ನೀಡಿದರು.

ಪಣಂಬೂರು ಕಡಲಕಿನಾರೆಯಲ್ಲಿ ಶುಕ್ರವಾರದಿಂದ ಜಾನಪದ ಕಡಲೋತ್ಸವ ಆಯೋಜನೆಗೊಂಡಿದೆ. ಈ ಉತ್ಸವದಲ್ಲಿ ಪಾಲ್ಗೊಳ್ಳಲು ಪ್ರತಿನಿತ್ಯ ಸಾವಿರಾರು ಮಂದಿ ಕಿನಾರೆಗೆ ಭೇಟಿ ನೀಡುತ್ತಿದ್ದರು. ಭಾನುವಾರದಂದು ಈ ಉತ್ಸವದ ಕೊನೆಯ ದಿನವಾಗಿತ್ತು. ವಾರಾಂತ್ಯದ ದಿನವಾದ್ದರಿಂದ ಹೆಚ್ಚಿನ ಜನಸಂದಣಿ ಇತ್ತು. ಸಮುದ್ರದಲ್ಲಿ ಅಲೆಗಳ ಅಬ್ಬರ ಹೆಚ್ಚಾಗಿದ್ದುದರಿಂದ ಸಾಹಸಿ ಕ್ರೀಡೆಗಳನ್ನು ಸ್ಥಗಿತಗೊಳಿಸಲಾಗಿತ್ತು. ಅಲ್ಲದೇ ಸಮುದ್ರಕ್ಕೆ ಇಳಿಯದಂತೆ ಪ್ರವಾಸಿಗರಿಗೆಎಚ್ಚರಿಕೆ ನೀಡಲಾಗಿತ್ತು.

ಆದರೆ ಯುವಕರು ಭದ್ರತಾ ಸಿಬ್ಬಂದಿಯ ಕಣ್ಣುತಪ್ಪಿಸಿ ವೀಕ್ಷಣಾ ವೇದಿಕೆ ನಿರ್ಮಿಸಿದ್ದ ಸ್ಥಳದಿಂದ ದೂರದಲ್ಲಿ ಸಮುದ್ರಕ್ಕೆ ಇಳಿದು ಈಜಾಡುತ್ತಿದ್ದರು. ಈ ವೇಳೆ ಭಾರಿ ಅಲೆಯೊಂದು ಅವರನ್ನು ಕಡಲ ಒಡಲೊಳಗೆ ಎಳೆದೊಯ್ದಿತ್ತು ಎಂದು ಸ್ಥಳದಲ್ಲಿದ್ದವರು ಮಾಹಿತಿ ನೀಡಿದರು.

ಘಟನಾ ಸ್ಥಳಕ್ಕೆ ಪಣಂಬೂರು ಠಾಣೆಯ ಪೊಲಿಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸಮುದ್ರಪಾಲಾದವರ ಶೋಧಕಾರ್ಯ ಮುಂದುವರಿದಿದೆ. ಪಣಂಬೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯಶ್– ದರ್ಶನ್ ಪ್ರಚಾರಕ್ಕೆ ಬಂದರೆ ಸ್ವಾಗತ: ಸುಮಲತಾ

ಪ್ರಜಾವಾಣಿ ವಾರ್ತೆ

ಸುಮಲತಾ

ಮಂಡ್ಯ: ‘ಬಿಜೆಪಿ–ಜೆಡಿಎಸ್ ಮೈತ್ರಿ ಟಿಕೆಟ್ ಶೇ 100ರಷ್ಟು ನನಗೇ ಸಿಗುತ್ತದೆ ಎಂಬ ವಿಶ್ವಾಸವಿದೆ. ನಟರಾದ ಯಶ್–ದರ್ಶನ್ ನನ್ನ ಪರವಾಗಿ ಪ್ರಚಾರಕ್ಕೆ ಈ ಬಾರಿಯೂ ಬಂದರೆ ಹೃದಯಪೂರ್ವಕವಾಗಿ ಸ್ವಾಗತಿಸುತ್ತೇನೆ’ ಎಂದು ಸಂಸದೆ ಸುಮಲತಾ ತಿಳಿಸಿದರು.

ಇಲ್ಲಿ ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು ‘ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಅವರನ್ನು ಭೇಟಿಯಾಗಿ ಆಶೀರ್ವಾದ ಪಡೆದಿದ್ದೇನೆ. ಭಾನುವಾರವಾಗಿದ್ದ ಕಾರಣ ಅವರನ್ನು ಮಠದಲ್ಲೇ ಭೇಟಿಯಾಗಿ ಮಾತುಕತೆ ನಡೆಸಿದೆ. ಚುನಾವಣೆ ಉದ್ದೇಶದಿಂದ ಭೇಟಿಯಾಗಿಲ್ಲ’ ಎಂದರು.

‘ಕರ್ನಾಟಕದ ಅಭ್ಯರ್ಥಿಗಳ ಪಟ್ಟಿ ಬಿಡುಗಡೆಯಾದಾಗ ನನ್ನ ಹೆಸರೂ ಇರಲಿದೆ ಎಂಬ ವಿಶ್ವಾಸವಿದೆ. ಟಿಕೆಟ್‌ಗಾಗಿ ದೆಹಲಿಗೆ ಹೋಗುವ ಅವಶ್ಯಕತೆ ಇಲ್ಲ. ಕಳೆದ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದೆ, ಈ ಬಾರಿ ಬಿಜೆಪಿ ಚಿಹ್ನೆ ಅಡಿ ಸ್ಪರ್ಧಿಸುತ್ತಿರುವ ಕಾರಣ ಹೆಚ್ಚು ಬಲ ಬರಲಿದೆ’ ಎಂದರು.

‘ಯಶ್– ದರ್ಶನ್ ಅವರು ಕಳೆದ ಬಾರಿ ನನಗಾಗಿ 25 ದಿನ ತ್ಯಾಗ ಮಾಡಿದ್ದರು. ಪದೇ ಪದೇ ಎಲ್ಲಾ ಕೆಲಸ ಬಿಟ್ಟು ಬನ್ನಿ ಎಂದು ಕರೆಯಲು ಮನಸ್ಸು ಒಪ್ಪುತ್ತಿಲ್ಲ. ಅವರು ಈ ಬಾರಿಯೂ ಬಂದರೆ ನನಗೆ ದೊಡ್ಡ ಶಕ್ತಿಯಾಗುತ್ತದೆ. ಅವರಿಬ್ಬರೂ ನನ್ನ ಮನೆಯ ಮಕ್ಕಳ ರೀತಿಯಲ್ಲಿ ಓಡಾಡಿ ಪ್ರಚಾರ ಮಾಡಿದ್ದರು’ ಎಂದರು.

ದೊಡ್ಡಬಳ್ಳಾಪುರ ತಾಲ್ಲೂಕಿನ ನಾಗದೇನಹಳ್ಳಿ, ಕೊನಘಟ್ಟ ರೈತರ ಕೆಐಎಡಿಬಿ ಭೂಸ್ವಾಧೀನದ ವಿರುದ್ಧ ಅನಿರ್ದಿಷ್ಟಾವಧಿ ಧರಣಿ ಸ್ಥಳದಲ್ಲಿ ಸರ್ವೆ ನಡೆಸಲು ತರಲಾಗಿದ್ದ ಡ್ರೋನ್ ಹಾಗೂ ಇತರೆ ಉಪಕರಣಗಳನ್ನು ರೈತರು ವಶಕ್ಕೆ ಪಡೆದರು

ರೈತರಿಂದ ಸರ್ವೆ ಉಪಕರಣ ವಶ

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ಕೆಐಎಡಿಬಿ ಭೂಸ್ವಾಧೀನದ ವಿರುದ್ಧ ಅನಿರ್ದಿಷ್ಟಾವಧಿ ಧರಣಿ ನಡೆಸುತ್ತಿರುವ ನಾಗದೇನಹಳ್ಳಿ, ಕೊನಘಟ್ಟ ಗ್ರಾಮದ ರೈತರು, ಭಾನುವಾರ ಸರ್ವೆ ನಡೆಸಲು ಬಂದಿದ್ದ ಸಿಬ್ಬಂದಿಯ ಡ್ರೋಣ್ ಸೇರಿದಂತೆ ಇತರೆ ಉಪಕರಣಗಳನ್ನು ವಶಕ್ಕೆ ಪಡೆದರು.

ಹೋರಾಟ ಸಮಿತಿ ಮುಖಂಡ ಕೊನಘಟ್ಟ ಆನಂದ್ ಮಾತನಾಡಿ, ಬಜೆಟ್ ಅಧಿವೇಶನದ ನಂತರ ಕೆಐಎಡಿಬಿ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸುವವರೆಗೆ ಭೂಸ್ವಾಧಿನಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಕ್ರಿಯೆ ನಡೆಸುವುದಿಲ್ಲ ಎಂದು ಭರವಸೆ ನೀಡಿದ್ದರು. ಆದರೆ, ಸ್ವಾಧೀನಕ್ಕೆ ಒಳಪಡುತ್ತಿರುವ ರೈತರ ಜಮೀನುಗಳನ್ನು ಭಾನುವಾರ ಏಕಾಏಕಿ ಡ್ರೋಣ್ ಸರ್ವೆ ನಡೆಸಲು ಅಧಿಕಾರಿಗಳು ಮುಂದಾಗಿದ್ದಾರೆ. ಹಾಗಾಗಿ ಡ್ರೋನ್ ಹಾಗೂ ಇತರೆ ಉಪಕರಣಗಳನ್ನು ವಶಕ್ಕೆ ಪಡೆದು ಧರಣಿ ಸ್ಥಳದಲ್ಲಿ ಸಂಜೆವರೆಗೆ ಇಟ್ಟುಕೊಳ್ಳಲಾಗಿತ್ತು. ಆ ಬಳಿಕ ಉಪಕರಣಗಳನ್ನು ಹಿಂದಕ್ಕೆ ನೀಡಲಾಗಿದೆ ಎಂದರು.

ಕೆಐಎಡಿಬಿ ಭೂಸ್ವಾಧೀನದ ವಿರುದ್ಧ ಹಲವಾರು ಹಂತಗಳಲ್ಲಿ ಹೋರಾಟ ನಡೆಸುತ್ತಲೇ ಬರುತ್ತಿದ್ದೇವೆ. ಅಂತಿಮವಾಗಿ ಅನಿರ್ದಿಷ್ಟಾವಧಿ ಧರಣಿ ನಡೆಸುತ್ತಿದ್ದೇವೆ. ಧರಣಿ ಸ್ಥಳಕ್ಕೆ ಭೇಟಿ ನೀಡಿರುವ ಕೆಐಎಡಿಬಿ ಅಧಿಕಾರಿಗಳು ಭರವಸೆ ನೀಡುವುದಕ್ಕೆ ಸೀಮಿತರಾಗಿದ್ದಾರೆ. ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಸಿದ್ಧರಾಗಿರುವಂತೆ ಬಿಜೆಪಿ ಕಾರ್ಯಕರ್ತರಿಗೆ ಜೈರಾಮ್ ಠಾಕೂರ್ ಕರೆ

‘ಹಿಮಾಚಲ: ಸರ್ಕಾರ ಪತನ ಸನ್ನಿಹಿತ?’

ಶಿಮ್ಲಾ(ಪಿಟಿಐ): ‘ರಾಜ್ಯ ರಾಜಕೀಯದಲ್ಲಿ ಬರುವ ದಿನಗಳಲ್ಲಿ ಏನಾದರೂ ಆಗಬಹುದು. ಹೀಗಾಗಿ, ಪಕ್ಷದ ಕಾರ್ಯಕರ್ತರು ಸಿದ್ಧರಾಗಿರಬೇಕು’ ಎಂದು ಬಿಜೆಪಿ ಮುಖಂಡ ಹಾಗೂ ವಿಧಾನಸಭೆ ವಿರೋಧ ಪಕ್ಷದ ನಾಯಕ ಜೈರಾಮ್ ಠಾಕೂರ್ ಭಾನುವಾರ ಹೇಳಿದ್ದಾರೆ.

ಈ ಮೂಲಕ, ಅವರು ಹಿಮಾಚಲ ಪ್ರದೇಶದಲ್ಲಿ ಸರ್ಕಾರ ಬದಲಾಗಬಹುದು ಎಂಬ ಸುಳಿವು ನೀಡಿದ್ದಾರೆ ಎಂದು ವಿಶ್ಲೇಷಿಸಲಾಗುತ್ತಿದೆ.

‘ರಾಜ್ಯದಲ್ಲಿನ ಪ್ರಸಕ್ತ ರಾಜಕೀಯ ಪರಿಸ್ಥಿತಿ ಕಾಂಗ್ರೆಸ್ ಪಕ್ಷಕ್ಕೆ ಅನುಕೂಲಕರವಾಗಿಲ್ಲ. ಸಚಿವರೇ ಸಂಪುಟದಿಂದ ಹೊರಗೆ ಹೋಗುತ್ತಿದ್ದಾರೆ. ಹೀಗಾಗಿ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿ ಮುಂದುವರಿಯುವುದು ಕಷ್ಟ’ ಎಂದು ಠಾಕೂರ್ ಹೇಳಿದ್ದಾರೆ.

ಸಚಿವ ಸಂಪುಟ ಸಭೆಯು ಶನಿವಾರ ನಡೆಯುತ್ತಿದ್ದಾಗಿನ ನಾಟಕೀಯ ಬೆಳವಣಿಗೆಗಳ ಕಾರಣಕ್ಕೆ ಜೈರಾಮ್ ಠಾಕೂರ್ ಈ ಹೇಳಿಕೆ ನೀಡಿದ್ದಾರೆ.

ಸಭೆ ನಡೆಯುತ್ತಿದ್ದಾಗಲೇ ಕಂದಾಯ ಸಚಿವ ಜಗತ್ ನೇಗಿ ಹೊರ ನಡೆದಿದ್ದರು. ಸಭೆ ವೇಳೆ ನಡೆದ ವಾಗ್ವಾದದ ಕಾರಣದಿಂದ ಶಿಕ್ಷಣ ಸಚಿವ ರೋಹಿತ್ ಠಾಕೂರ್ ಸಭೆಯಿಂದ ಹೊರ ಹೋಗಿದ್ದರು.

‘ಪೂರ್ವ ನಿಗದಿತ ಕಾರ್ಯಕ್ರಮಗಳ ಕಾರಣದಿಂದ ಸಭೆಯಿಂದ ಅರ್ಧಕ್ಕೆ ಹೊರ ನಡೆದೆವು’ ಎಂದು ಈ ಇಬ್ಬರು ಸಚಿವರು ನಂತರ ಹೇಳಿದ್ದರು. ಉಪಮುಖ್ಯಮಂತ್ರಿ ಮುಕೇಶ್ ಅಗ್ನಿಹೋತ್ರಿ ಅವರು ರೋಹಿತ್ ಠಾಕೂರ್ ಅವರ ಮನವೊಲಿಸಿದ್ದರಿಂದಾಗಿ ಅವರು ಸಂಪುಟ ಸಭೆಗೆ ಮರಳಿದ್ದರು ಎಂದು ಹೇಳಲಾಗಿದೆ.

9 ಶಾಸಕರು ರಾಜ್ಯಸಭಾ ಚುನಾವಣೆಯಲ್ಲಿ ಬಿಜೆಪಿಗೆ ಮತ ಚಲಾಯಿಸಿರುವ ಕಾರಣ ಕಾಂಗ್ರೆಸ್‌ಗೆ ಅಧಿಕಾರದಲ್ಲಿ ಮುಂದುವರಿಯುವ ನೈತಿಕತೆ ಇಲ್ಲ
ಜೈರಾಮ್ ಠಾಕೂರ್
ವಿಧಾನಸಭೆ ವಿರೋಧ ಪಕ್ಷ ನಾಯಕ

ಕೇಂದ್ರ ಸರ್ಕಾರಕ್ಕೆ ಎನ್‌ಜಿಟಿ ನೋಟಿಸ್

ನವದೆಹಲಿ (ಪಿಟಿಐ): ಉತ್ತರಾಖಂಡದ ಜಿಮ್ ಕಾರ್ಬೆಟ್ ರಾಷ್ಟ್ರೀಯ ಉದ್ಯಾನವನ್ನು ಪರಿಸರ ಸೂಕ್ಷ್ಮ ವಲಯ ಎಂದು ಘೋಷಿಸಲು ನಿರ್ದೇಶನ ನೀಡಬೇಕು ಎಂದು ಕೋರಿದ್ದ ಅರ್ಜಿ ಕುರಿತು ಕೇಂದ್ರ ಸರ್ಕಾರ ಪ್ರತಿಕ್ರಿಯೆ ನೀಡಬೇಕು ಎಂದು ರಾಷ್ಟ್ರೀಯ ಹಸಿರು ನ್ಯಾಯಪೀಠವು (ಎನ್‌ಜಿಟಿ) ಸೂಚಿಸಿದೆ.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಪೀಠವು, ಪರಿಸರ, ವನ್ಯಜೀವಿ, ಜೀವವೈವಿಧ್ಯಗಳ ಸಂರಕ್ಷಣೆಗೆ ಇಂಥ ಘೋಷಣೆಯು ಅಗತ್ಯ ಎಂದು ಅಭಿಪ್ರಾಯಪಟ್ಟಿತು.

ಎನ್‌ಜಿಟಿ ನ್ಯಾಯಪೀಠದ ಮುಖ್ಯಸ್ಥ ನ್ಯಾಯಮೂರ್ತಿ ಪ್ರಕಾಶ್ ಶ್ರೀವಾತ್ಸವ ಮತ್ತು ತಜ್ಞ ಸದಸ್ಯ ಎ. ಸೆಂಥಿಲ್ ವೆಲ್ ಅವರು, ‘ಮೂಲ ಅರ್ಜಿಯು ಪರಿಸರ ನಿಯಮಗಳ ಅನುಸರಣೆಗೆ ಸಂಬಂಧಿಸಿದ ಅನೇಕ ವಿಷಯಗಳ ಕುರಿತು ಧ್ವನಿ ಎತ್ತುತ್ತದೆ’ ಎಂದು ಹೇಳಿದರು.

ಈ ಸಂಬಂಧ ಪ್ರತಿಕ್ರಿಯೆ ನೀಡಲು ಪ್ರತಿವಾದಿಗಳಿಗೆ ನೋಟಿಸ್ ರವಾನಿಸಲಾಗಿದೆ ಎಂದು ತಿಳಿಸಿದರು.

ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ, ರಾಷ್ಟ್ರೀಯ ವನ್ಯಜೀವಿ ಮಂಡಳಿ, ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ ಮತ್ತು ಉತ್ತರಾಖಂಡ, ಉತ್ತರ ಪ್ರದೇಶ ಸರ್ಕಾರ ಪ್ರತಿವಾದಿಗಳಾಗಿವೆ.

ಅರ್ಜಿಯ ವಿಚಾರಣೆಯನ್ನು ಮೇ 8ಕ್ಕೆ ಮುಂದೂಡಲಾಗಿದೆ.

ಅಗ್ನಿಪಥ ಯೋಜನೆಯಿಂದ ದೇಶದ ಭದ್ರತೆಗೆ ಧಕ್ಕೆ: ಕಾಂಗ್ರೆಸ್ ಆರೋಪ

ನವದೆಹಲಿ (ಪಿಟಿಐ): ಅಗ್ನಿಪಥ ಯೋಜನೆಗೆ ಸಂಬಂಧಿಸಿದಂತೆ ಕಾಂಗ್ರೆಸ್ ಪಕ್ಷವು ಕೇಂದ್ರ ಸರ್ಕಾರ ವಿರುದ್ಧ ಭಾನುವಾರ ವಾಗ್ದಾಳಿ ನಡೆಸಿದೆ.

‘ಅಗ್ನಿಪಥ ಯೋಜನೆಯಿಂದ ದೇಶದ ಭದ್ರತೆಗೆ ತೊಡಕುಂಟಾಗಿದೆ. ಅಲ್ಲದೇ ಸಶಸ್ತ್ರಪಡೆಗಳಿಗೂ ಇದರಿಂದ ತೀವ್ರ ಅಡಚಣೆಯುಂಟಾಗಿದೆ’ ಎಂದು ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್ ‘ಎಕ್ಸ್’ನಲ್ಲಿ ಹೇಳಿದ್ದಾರೆ.

ಮಧ್ಯಪ್ರದೇಶಲ್ಲಿ ‘ಭಾರತ್ ಜೋಡೊ ನ್ಯಾಯ ಯಾತ್ರೆ’ ಸಂದರ್ಭದಲ್ಲಿ ರಾಹುಲ್ ಗಾಂಧಿ ಅವರು ಮಾಜಿ ಸೈನಿಕರೊಬ್ಬರೊಂದಿಗೆ ಸಂವಾದ ನಡೆಸಿದ ಬೆನ್ನಲ್ಲೇ ಜೈರಾಮ್ ಅವರು, ‘ಸಶಸ್ತ್ರ ಪಡೆಗಳಿಗೆ ಸೇರಬಯಸುವ ಯುವಜನತೆಯು ಅಗ್ನಿಪಥ ಯೋಜನೆಯಿಂದ ಅಡಚಣೆಯನ್ನು ಅನುಭವಿಸುತ್ತಿದ್ದಾರೆ’ ಎಂದಿದ್ದಾರೆ.

‘ಈ ಯೋಜನೆಯ ಮೂಲಕ ಸೇನೆಗೆ ಸೇರುವ ಸೈನಿಕರಿಗೆ ಕೇವಲ ಆರು ತಿಂಗಳ ತರಬೇತಿಯನ್ನು ನೀಡುವ ಮೂಲಕ ಸಶಸ್ತ್ರ ಪಡೆಗಳ ಸ್ಥೈರ್ಯವನ್ನು ಕುಗ್ಗಿಸಿ ದೇಶದ ಭದ್ರತೆಗೆ ಧಕ್ಕೆಯುಂಟುಮಾಡಲಾಗುತ್ತಿದೆ ಎಂದು ಮಾಜಿ ಸೈನಿಕರೊಬ್ಬರು ತಿಳಿಸಿದ್ದಾರೆ’ ಎಂದು ಜೈರಾಮ್ ಅವರು ಆರೋಪಿಸಿದ್ದಾರೆ.

ಮಹಿಳೆ ಮೇಲೆ ಹಲ್ಲೆ ಪ್ರಕರಣ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಕಾಗವಾಡ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಐನಾಪೂರ ಪಟ್ಟಣದ ಉಗಾರ ರಸ್ತೆಗೆ ಹೊಂದಿಕೊಂಡ ಭೂ ಒತ್ತುವರಿ ಪ್ರಶ್ನಿಸಿದ ಮಹಿಳೆಯೊಬ್ಬರನ್ನು ವಿವಸ್ತ್ರಗೋಳಿಸಿ ಅವಮಾನಿಸಿದ ಪ್ರಕರಣಕ್ಕೆ ಸಂಬಂಧಿಸಿ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ.

ಸಂತ್ರಸ್ತೆಯು ಸರ್ವೆ ನಂ.237/‘ಎ’ ಸರ್ಕಾರದಿಂದ ಜಮೀನು ಮಂಜೂರು ಪಡೆದಿದ್ದರು. ಈ ಹಿನ್ನೆಲೆಯಲ್ಲಿ ಆರೋಪಿತರು ಜಮೀನಿನ ಒತ್ತುವರಿ ಹಾಗೂ ರಸ್ತೆ ಬಂದ್ ಮಾಡಿದರಿಂದ ಕೇಳಲು ಹೊದ ಸಂತ್ರಸ್ತೆಯನ್ನು ವಿವಸ್ತ್ರಗೊಳಿಸಿದ್ದಲ್ಲದೆ ಹಲ್ಲೆಯನ್ನೂ ನಡೆಸಿದ್ದರು ಎನ್ನಲಾಗಿತ್ತು. ಘಟನೆಯ ವಿಡಿಯೊ ಸಾಮಾಜಿಕ ಜಾಲತಾಣ ದೃಶ್ಯ ಮಾಧ್ಯಮಗಳಲ್ಲಿ ಹರಿದಾಡಿದ್ದರಿಂದ, ಬೆಳಗಾವಿ ಜಿಲ್ಲಾ ಎಸ್‌ಪಿ ಹಾಗೂ ತಾಲ್ಲೂಕು ಆಡಳಿತ ಗಂಭೀರವಾಗಿ ಪರಿಗಣಿಸಿ ಸ್ಥಳ ಪರಿಶೀಲನೆ ನಡೆಸಿ ಜಮೀನು ಹಾಗೂ ರಸ್ತೆ ಸರಿಪಡಿಸುವ ಕಾರ್ಯ ಮಾ.1ರಂದು ಆರಂಭಿಸಿದ್ದರು.

ಪ್ರಕರಣದಲ್ಲಿ ಮಹಿಳೆ 13 ಜನರ ವಿರುದ್ಧ ದೂರು ನೀಡಿದ್ದು, ಅದರಲ್ಲಿ ಶುಕ್ರವಾರ ತಡ ರಾತ್ರಿ ಬೀರಪ್ಪ ನಾಗನೂರ, ಆನಂದ ಹಾದಿಮನಿ ಎಂಬ ಇಬ್ಬರನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದೆ. ಉಳಿದ ಆರೋಪಿಗಳ ಬಂಧನಕ್ಕಾಗಿ ಪೋಲಿಸರು ಹುಡುಕಾಟ ನಡೆಸಿದ್ದಾರೆ ಎಂದು ಪೊಲೀಸ್ ಮೂಲಗಳಿಂದ ತಿಳಿದು ಬಂದಿದೆ.

ಶ್ರೀನಿವಾಸಮೂರ್ತಿಗೆ ‘ಯತೀಂದ್ರಶ್ರೀ’ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಮಂಡ್ಯ: ಮಂಡ್ಯ ವಿಶ್ವವಿದ್ಯಾಲಯ ಹಾಗೂ ಕೈವಾರ ಸದ್ಗುರು ನಾರೇಯಣಯತೀಂದ್ರ ಪ್ರಚಾರ ಸಭಾ ವತಿಯಿಂದ ನಗರದ ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ರಾಜ್ಯ ಸರ್ಕಾರದ ನಿವೃತ್ತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಂ.ಆರ್.ಶ್ರೀನಿವಾಸಮೂರ್ತಿ ಅವರಿಗೆ ‘ಯತೀಂದ್ರಶ್ರೀ’ ಪ್ರಶಸ್ತಿ ಪ್ರದಾನ ಮಾಡಲಾಯತು.

ನಂತರ ಮಾತನಾಡಿದ ಅವರು, ‘ಯಾವುದೇ ದೇಶ ಅಭಿವೃದ್ಧಿ ಹೊಂದಬೇಕಾದರೆ ಮಾನವ ಸಂಪನ್ಮೂಲ ಅತ್ಯಂತ ಅವಶ್ಯವಾಗಿದೆ. ಹೆಚ್ಚು ವಿದ್ಯಾವಂತರಾದ ಜನರು ಆ ದೇಶದ ಖನಿಜ ಸಂಪತ್ತಿಗಿಂತಲೂ ಅತ್ಯಮೂಲ್ಯ’ ಎಂದರು.

‘ಪ್ರತಿಯೊಬ್ಬರಿಗೂ ಅವಕಾಶಗಳು ಅರಸಿ ಬರುತ್ತವೆ. ಅವುಗಳನ್ನು ಬಳಸಿಕೊಂಡು ದೇಶಕ್ಕಾಗಿ ಸೇವೆ ಮಾಡಲು ಸಿದ್ಧರಾಗಬೇಕು. ಕೆಲಸ ಮಾಡುವಾಗ ಯಾರೂ ಅಸಹಾಯಕರಾಗಬಾರದು. ಉತ್ತಮ ಕೆಲಸ ಮಾಡುವವರಿಗೆ ದೇವರು ಸೇರಿದಂತೆ ಇಡೀ ಸಮಾಜ ಅವರ ಪರವಾಗಿ ನಿಲ್ಲುತ್ತದೆ. ವಿದ್ಯೆ, ಬುದ್ಧಿ ಹಾಗೂ ನಡತೆಯಿಂದ ಉತ್ತಮ ಸಮಾಜ ನಿರ್ಮಾಣ ಮಾಡಬಹುದು’ ಎಂದು ತಿಳಿಸಿದರು.

‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಅವರು ಪ್ರಶಸ್ತಿ ಪ್ರದಾನ ಮಾಡಿದರು. ಕೈವಾರ ಯೋಗಿನಾರೇಯಣ ಕ್ಷೇತ್ರದ ಧರ್ಮಾಧಿಕಾರಿ ಎಂ.ಆರ್.ಜಯರಾಂ ಆಶೀರ್ವಚನ ನೀಡಿದರು. ಮಂಡ್ಯ ವಿವಿ ಕುಲಪತಿ ಪುಟ್ಟರಾಜು, ಕೈವಾರ ಸದ್ಗುರು ನಾರೇಯಣಯತೀಂದ್ರ ಪ್ರಚಾರ ಸಭಾ ಪ್ರಧಾನ ಸಂಚಾಲಕ ಎಚ್.ಎ.ವೆಂಕಟೇಶ್, ಉಪ ವಿಭಾಗಾಧಿಕಾರಿ ಆರ್. ಶೋಭಿತಾ, ಪಿಡಬ್ಲ್ಯುಡಿ ಮುಖ್ಯ ಎಂಜಿನಿಯರ್ ಕೆ.ಟಿ.ರವಿಕುಮಾರ್ ಮತ್ತು ಲೆಕ್ಕಪರಿಶೋಧಕ ಸುರೇಂದ್ರ ಹೆಗ್ಡೆ ಪಾಲ್ಗೊಂಡಿದ್ದರು.

ಮಂಡ್ಯ ವಿಶ್ವವಿದ್ಯಾಲಯ ಹಾಗೂ ಕೈವಾರ ಸದ್ಗುರು ನಾರೇಯಣಯತೀಂದ್ರ ಪ್ರಚಾರ ಸಭಾ ವತಿಯಿಂದ ರಾಜ್ಯ ಸರ್ಕಾರದ ನಿವೃತ್ತ ಹೆಚ್ಚುರಿ ಕಾರ್ಯದರ್ಶಿ ಎಂ.ಆರ್.ಶ್ರೀನಿವಾಸಮೂರ್ತಿ ಅವರಿಗೆ ‘ಯತೀಂದ್ರಶ್ರೀ’ ಪ್ರಶಸ್ತಿ ಪ್ರದಾನ ಮಾಡಲಾಯತು. ರಮೇಶ್ ಬಾಬು, ಗೋಪಾಲ್, ಎಚ್.ಎ.ವೆಂಕಟೇಶ್, ಆರ್.ಶೋಭಿತಾ, ಪುಟ್ಟರಾಜು, ಎಂ.ಆರ್.ಜಯರಾಂ ಪಾಲ್ಗೊಂಡಿದ್ದರು
–ಪ್ರಜಾವಾಣಿ ಚಿತ್ರ

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ 9606038256

‘ಪಾದಚಾರಿ ಮಾರ್ಗ ಸರಿಪಡಿಸಿ’

ರಾಜಾಜಿನಗರ ವಿಧಾನಸಭೆ ಕ್ಷೇತ್ರದ ಮಂಜುನಾಥ ನಗರದ ವಾರ್ಡ್ ಸಂಖ್ಯೆ 99ರ 16ನೇ ಅಡ್ಡರಸ್ತೆಯ ಪಾದಚಾರಿ ಮಾರ್ಗದ ಕಾಮಗಾರಿ ಅರ್ಧಕ್ಕೆ ಸ್ಥಗಿತಗೊಳಿಸಲಾಗಿದೆ. ಪಾದಚಾರಿ ಮಾರ್ಗದ ಪಕ್ಕದಲ್ಲಿರುವ ಮನೆಗಳಿಗೆ ತೆರಳಲು ಆಗದ ಕಾರಣ ಮಕ್ಕಳು ಹಾಗೂ ವೃದ್ಧರು ಬಿದ್ದು ಅನಾಹುತ ಸಂಭವಿಸುವ ಮುನ್ನ ಅರ್ಧಕ್ಕೆ ನಿಂತ ಕಾಮಗಾರಿಯನ್ನು ಪೂರ್ಣಗೊಳಿಸಬೇಕು. ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಗಮನಹರಿಸಬೇಕು.

ಕೆ.ವಿ. ನಾರಾಯಣ, ಮಂಜುನಾಥನಗರ



‘ನಾಗರಬಾವಿ: ರಸ್ತೆ ದುರಸ್ತಿಗೊಳಿಸಿ’

ನಾಗರಬಾವಿ ಹೊರವರ್ತುಲ ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆ ಗುಂಡಿಗಳಿಂದ ಕೂಡಿದ್ದು, ಸಂಪೂರ್ಣ ಹಾಳಾಗಿದೆ. ಇದರಿಂದ, ವಾಹನ ಸಂಚಾರವೇ ದುಸ್ತರವಾಗಿದೆ. ಇದರಿಂದ ಸಂಚಾರ ದಟ್ಟಣೆ ಆಗುತ್ತಿದ್ದು, ಕೆಲವರು ಗುಂಡಿಗಳಲ್ಲಿ ಬಿದ್ದು ಮೂಳೆ ಮುರಿದುಕೊಂಡಿರುವ ಘಟನೆಗಳು ನಡೆದಿವೆ. ಈ ರಸ್ತೆಯಲ್ಲಿ ಸಂಚರಿಸುವ ವಾಹನ ಸವಾರರು ಪ್ರತಿನಿತ್ಯವೂ ಸರ್ಕಸ್ ಮಾಡಿಕೊಂಡು ಸಂಚರಿಸುವ ಪರಿಸ್ಥಿತಿ ಎದುರಾಗಿದೆ. ಈ ಬಗ್ಗೆ ಬಿಬಿಎಂಪಿಗೆ ಹಲವಾರು ಬಾರಿ ಮನವಿ ಸಲ್ಲಿಸಿದರೂ, ಯಾರೂ ಸ್ಪಂದಿಸುತ್ತಿಲ್ಲ. ಕೂಡಲೇ ರಸ್ತೆ ದುರಸ್ತಿಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಶಿವಪ್ರಸಾದ್ ಎಸ್., ನಾಗರಬಾವಿ

‘ಕಲ್ಯಾಣಿ ಅಭಿವೃದ್ಧಿಗೊಳಿಸಿ’

ಹನುಮಂತನಗರದ ಕುಮಾರಸ್ವಾಮಿ ದೇವಸ್ಥಾನದ ಆವರಣದಲ್ಲಿರುವ ದಶಕಗಳಷ್ಟು ಹಳೆಯದಾದ ಕಲ್ಯಾಣಿ ಪಾಳು ಬಿದ್ದಿದೆ. ಕಲ್ಯಾಣಿಯಲ್ಲಿರುವ ನೀರನ್ನು ಶುಚಿಕೊಳಿಸಿ, ಸುತ್ತಲಿನ ಜಾಗವನ್ನೂ ಸ್ವಚ್ಛಗೊಳಿಸಬೇಕು. ಇದರಿಂದ, ಉದ್ಯಾನಕ್ಕೂ ನೀರಿನ ಪೂರೈಕೆಯಾಗುವ ಜೊತೆಗೆ, ಸೌಂದರ್ಯವೂ ಹೆಚ್ಚಲಿದೆ. ಕಲ್ಯಾಣಿಯಲ್ಲಿರುವ ಜಲಚರಗಳಿಗೂ ಅನುಕೂಲವಾಗುತ್ತದೆ. ಆದ್ದರಿಂದ, ಸಂಬಂಧಪಟ್ಟ ಅಧಿಕಾರಿಗಳು ಇಲ್ಲಿನ ಕಲ್ಯಾಣಿ ಅಭಿವೃದ್ಧಿಗೆ ಕ್ರಮ ಕೈಗೊಳ್ಳಬೇಕು.

ಕೆ.ಎಸ್. ನಾಗರಾಜ್, ಹನುಮಂತನಗರ



‘ಕಸ ತೆರವುಗೊಳಿಸಿ’

ಕುಮಾರಸ್ವಾಮಿ ಬಡಾವಣೆಯ 32ನೇ ಮುಖ್ಯರಸ್ತೆಯಲ್ಲಿ ಕಸ ಹಾಕಲಾಗಿದ್ದು, ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ತ್ಯಾಜ್ಯವನ್ನು ಪ್ಲಾಸ್ಟಿಕ್ ಚೀಲದಲ್ಲಿ ತುಂಬಿಕೊಂಡು ಬಂದು ಇಲ್ಲಿ ಎಸೆದು ಹೋಗುತ್ತಿದ್ದಾರೆ. ಇದರಿಂದ, ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದೆ. ಸೊಳ್ಳೆಗಳ ಉತ್ಪತ್ತಿ ತಾಣವಾಗಿ ಮಾರ್ಪಟ್ಟಿದೆ. ಜೊತೆಗೆ ನಗರದ ಸೌಂದರ್ಯಕ್ಕೂ ಧಕ್ಕೆ ಬರುತ್ತಿದೆ. ಬಿಬಿಎಂಪಿ ಕೂಡಲೇ ಇಲ್ಲಿನ ಕಸ ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕು.

ಕೆ.ಎಚ್. ರಾಮಣ್ಣಗೌಡ, ಕುಮಾರಸ್ವಾಮಿ ಬಡಾವಣೆ

ಮೈಸೂರು ವಿಶ್ವವಿದ್ಯಾಲಯದ 104ನೇ ಘಟಿಕೋತ್ಸವ • ಪದಕ ಪಡೆದು ಸಂಭ್ರಮಿಸಿದ ವಿದ್ಯಾರ್ಥಿನಿಯರು

ತಬ್ಬಲಿ ಹುಡುಗಿಗೆ ಕನ್ನಡದಲ್ಲಿ 10 ಚಿನ್ನ

• ಮೋಹನ್‌ಕುಮಾರ ಸಿ.

ಮೈಸೂರು: ತಂದೆ–ತಾಯಿ ಇಬ್ಬರನ್ನೂ ಕಳೆದುಕೊಂಡು, ವಿದ್ಯಾರ್ಥಿನಿಲಯಗಳಲ್ಲಿ ಓದಿದ 'ತಬ್ಬಲಿ' ಹುಡುಗಿ ವಿ.ತೇಜಸ್ವಿನಿ ಎಂ.ಎ. ಕನ್ನಡದಲ್ಲಿ 10 ಚಿನ್ನದ ಪದಕ ಹಾಗೂ 4 ನಗದು ಬಹುಮಾನ ಪಡೆದು ಸಾಧನೆ ಮಾಡಿದ್ದಾರೆ.

ಭಾನುವಾರ ನಡೆದ ಮೈಸೂರು ವಿಶ್ವವಿದ್ಯಾಲಯದ 104ನೇ ಘಟಿಕೋತ್ಸವದಲ್ಲಿ ಪದಕ ಪಡೆದ ಸಂಭ್ರಮವನ್ನು ದಾರಿ ತೋರಿದ ಶಿಕ್ಷಕರೊಂದಿಗೆ ಹಂಚಿಕೊಂಡರು.

ಗಡಿಜಿಲ್ಲೆ ಚಾಮರಾಜನಗರದ ಕೊಳ್ಳೇಗಾಲ ತಾಲ್ಲೂಕಿನ ಸತ್ತೇಗಾಲ ಗ್ರಾಮದ ತೇಜಸ್ವಿನಿ, 4ನೇ ತರಗತಿ ಓದುವಾಗ ತಾಯಿ ನಾಗಮ್ಮ, ದ್ವಿತೀಯ ಪಿಯು ಪರೀಕ್ಷೆಗೆ ತಯಾರಿ ನಡೆಸುತ್ತಿದ್ದಾಗ ತಂದೆ ಎಚ್.ವೆಂಕಟೇಶ್ ಅವರನ್ನು ಕಳೆದುಕೊಂಡರು. ಉನ್ನತ ಶಿಕ್ಷಣ ಪಡೆಯುವ ಕನಸು ಕಮರಿದ್ದಾಗ ಅವರಿಗೆ ಶಿಕ್ಷಕರು–ಉಪನ್ಯಾಸಕರು ನೆರವಾದರು.

ಪ್ರಾಥಮಿಕ – ಪ್ರೌಢ ಶಾಲಾ ಶಿಕ್ಷಣವನ್ನು ತಲಕಾಡಿನ ಸರ್ಕಾರಿ ಶಾಲೆಗಳಲ್ಲಿ ಪೂರೈಸಿದ ಅವರು, ಮಳವಳ್ಳಿ ಸರ್ಕಾರಿ ಬಾಲಕಿಯರ ಪಿಯು ಕಾಲೇಜಿನಲ್ಲಿ ಓದಿ, ಮೈಸೂರಿನ ಮಹಾರಾಣಿ ಕಲಾ ಕಾಲೇಜಿನಲ್ಲಿ ಬಿ.ಎ ಪದವಿಯನ್ನು 9 ಚಿನ್ನದ ಪದಕ ಹಾಗೂ 10 ನಗದು ಬಹುಮಾನದೊಂದಿಗೆ ಉತ್ತೀರ್ಣರಾಗಿದ್ದರು.

'ಶಿಕ್ಷಕರು– ಸ್ನೇಹಿತರ ಪ್ರೋತ್ಸಾಹದಿಂದ ಸಾಧನೆ ಸಾಧ್ಯವಾಗಿದೆ. ವಿದ್ಯಾರ್ಥಿನಿಲಯಗಳಲ್ಲಿ ಸಲಹಿದ, ದಾರಿ ತೋರಿದ ಎಲ್ಲರನ್ನೂ ನೆನೆಯುವೆ. ಪಿಎಚ್‌ಡಿ ಮಾಡಬೇಕು, ಉಪನ್ಯಾಸಕಿಯಾಗಿ ಕನ್ನಡ ಭಾಷೆ–ಸಾಹಿತ್ಯವನ್ನು ಮಕ್ಕಳಿಗೆ ಕಲಿಸುವುದು ನನ್ನ ಆಸೆಯಾಗಿದೆ' ಎಂದು ತೇಜಸ್ವಿನಿ ನುಡಿದರು.

ಅನಘಾ ಸಾಧನೆ: ಹುಟ್ಟಿನಿಂದಲೇ ದೃಷ್ಟಿದೋಷ ಹೊಂದಿರುವ ಎಸ್. ಅನಘಾ, ಕನ್ನಡ ಎಂ.ಎ. ಪದವಿಯಲ್ಲಿ ಚಿನ್ನದ ಪದಕ ಪಡೆದಿದ್ದಾರೆ. ಕರ್ನಾಟಕ ಶಾಸ್ತ್ರೀಯ ಸಂಗೀತದ ಸೀನಿಯರ್ ಪರೀಕ್ಷೆ ಪಾಸ್ ಮಾಡಿರುವ ಅವರು, ವಿದ್ವತ್ ಪರೀಕ್ಷೆ ತೆಗೆದುಕೊಂಡಿದ್ದಾರೆ. ಅನಿವಾಸಿ ಭಾರತೀಯರಿಗೆ ಆನ್‌ಲೈನ್‌ನಲ್ಲಿ ಸಂಗೀತ ಪಾಠ ಮಾಡುತ್ತಾ ಈ ಸಾಧನೆ ತೋರಿದ್ದಾರೆ.

ಪೋಷಕರಾದ ಪುಷ್ಪಲತಾ– ಕೆ.ಸತೀಶ್ ದಂಪತಿ ಮಗಳಿಗೆ ಆತ್ಮವಿಶ್ವಾಸ ತುಂಬಿದ್ದಾರೆ. ಕನ್ನಡ ಸಂಶೋಧನಾ ಕ್ಷೇತ್ರದಲ್ಲಿ ಕೆಲಸ ಮಾಡುವ ಆಸೆ ಅನಘಾ ಅವರದ್ದು.

'ದೃಷ್ಟಿದೋಷ ಇರುವುದು ಬದುಕಿಗೆ ತೊಡಕಲ್ಲ. ಇತರ ಇಂದ್ರಿಯಗಳ ಸಾಮರ್ಥ್ಯ ಹೆಚ್ಚೇ ಇದೆ. ಸ್ವಾವಲಂಬಿಯಾಗಿ ಬದುಕಲು ಶಿಕ್ಷಣ ಪಡೆಯಬೇಕು. ಹೀಗಾಗಿಯೇ ಸಂಗೀತ– ಸಾಹಿತ್ಯ ಕ್ಷೇತ್ರದಲ್ಲಿ ಹೆಚ್ಚು ಕೆಲಸ ಮಾಡುವ, ಕಲಿಯುವ ಆಸೆ ಇದೆ. ಪಿಎಚ್‌ಡಿ ಮಾಡಿ ಉಪನ್ಯಾಸಕಿಯಾಗುವೆ' ಎಂದು ಅನಘಾ ಅವರು ತಮ್ಮ ಮುಂದಿನ ಗುರಿಯ ಬಗ್ಗೆ ತಿಳಿಸಿದರು..

ಮೈಸೂರು ವಿಶ್ವವಿದ್ಯಾಲಯದಲ್ಲಿ ಭಾನುವಾರ ನಡೆದ 104ನೇ ಘಟಿಕೋತ್ಸವದಲ್ಲಿ ಹೆಚ್ಚು ಚಿನ್ನದ ಪದಕ ಪಡೆದ ಜೈನಾ ಎಂ.ಹರನ್, ಪೂಜಾ, ಅಜಿತಾ ಗುಲೇರಿಯಾ, ಜಿ.ಆರ್. ಸಂಯಮ ಹಾಗೂ ವಿ. ತೇಜಸ್ವಿನಿ ಶುಭಾಶಯ ವಿನಿಮಯ ಮಾಡಿಕೊಂಡರು – ಪ್ರಜಾವಾಣಿ ಚಿತ್ರ/ಅನೂಪ್ ರಾಘ ಟಿ.

ಪೂಜಾಗೆ 16, ಮೇಘನಾಗೆ 15 ಚಿನ್ನ

ತುಮಕೂರಿನ ತುರುವೇಕೆರೆಯ ಮೇಘನಾ, ಮೈಸೂರು ವಿಶ್ವವಿದ್ಯಾಲಯದ ಎಂ.ಎಸ್ಸಿ. (ಇನ್ ಆರ್ಗ್ಯಾನಿಕ್ ಕೆಮಿಸ್ಟ್ರಿ) ವಿಭಾಗದಲ್ಲಿ 15 ಚಿನ್ನದ ಪದಕ ಹಾಗೂ 5 ನಗದು ಬಹುಮಾನ ಪಡೆದರು. ತಂದೆ ಸುಂದರ್ ರಾವ್ ಶಿಕ್ಷಕರಾಗಿದ್ದು, ತಾಯಿ ಸುಧಾರಾಣಿ ಅವರ ಪ್ರೋತ್ಸಾಹವನ್ನು ನೆನೆಯುವ ಅವರಿಗೆ ಸ್ಪರ್ಧಾತ್ಮಕ ಪರೀಕ್ಷೆ ಬರೆದು ಸರ್ಕಾರಿ ಸೇವೆ ಸೇರುವ ಗುರಿ ಇದೆ.

ಎಂ.ಟೆಕ್. ನಗರ ಮತ್ತು ಪ್ರಾದೇಶಿಕ ಯೋಜನೆಯಲ್ಲಿ (ಯುಆರ್‌ಪಿ) 16 ಚಿನ್ನದ ಪದಕ ಪಡೆದಿರುವ ಬಳ್ಳಾರಿಯ ಎನ್.ಪೂಜಾ, ಪೋಷಕರಾದ ಎನ್.ಮೋಹನ್‌ಕುಮಾರ್, ಎನ್.ನಾಗವೇಣಿ ಪ್ರೋತ್ಸಾಹವನ್ನು ನೆನೆದರು. ನಗರ ಯೋಜನಾ ಇಲಾಖೆ ಸೇರುವ ಕನಸು ಅವರದು.

ಹಿಮಾಚಲದ ಧರ್ಮಶಾಲಾದಿಂದ ನಗರಕ್ಕೆ ಯೋಗ ಶಿಕ್ಷಕಿಯಾಗಿ ಬಂದ ಅಜಿತಾ ಗುಲೇರಿಯಾ, ಶಿಕ್ಷಕಿಯಾಗಿ ಕೆಲಸ ಮಾಡುತ್ತಾ, ಎಂ.ಎ. ತತ್ವಶಾಸ್ತ್ರದಲ್ಲಿ 7 ಚಿನ್ನದ ಪದಕ, 4 ನಗದು ಬಹುಮಾನ ಪಡೆದಿದ್ದಾರೆ. ಎಂ.ಎ. ಅರ್ಥಶಾಸ್ತ್ರದಲ್ಲಿ ಜೈನಾ ಎಂ.ಹರನ್ 8 ಚಿನ್ನ, ಎಂ.ಎಸ್ಸಿ. ಜೀವ ವಿಜ್ಞಾನದಲ್ಲಿ ಜಿ.ಆರ್. ಸಂಯಮ 12 ಚಿನ್ನ ಪಡೆದಿದ್ದು, ನಾಗರಿಕಾ ಸೇವಾ ಪರೀಕ್ಷೆ ಬರೆಯಲು ತಯಾರಿ ನಡೆಸಿದ್ದಾರೆ.

ನೀಲವ್ವಗೆ ಎರಡು ಚಿನ್ನದ ಪದಕ

• ಆರ್. ಜಿತೇಂದ್ರ

ಮೈಸೂರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ 19ನೇ ಘಟಿಕೋತ್ಸವದಲ್ಲಿ ಎರಡು ಬಂಗಾರದ ಪದಕಕ್ಕೆ ಕೊರಳೊಡ್ಡಿದ ನೀಲವ್ವ ಶಿವಪ್ಪ ಪಾಟೀಲರಿಗೆ ಪೋಷಕರಾದ ಕೂಲಿ ಕಾರ್ಮಿಕ ದಂಪತಿಯ ಬದುಕಿನ ಕಷ್ಟಗಳೇ ಓದಿಗೆ ಪ್ರೇರಣೆಯಾಗಿದೆ.

ಕೆಎಸ್‌ಒಯು ಘಟಿಕೋತ್ಸವ ಭವನದಲ್ಲಿ ಭಾನುವಾರ ನಡೆದ ಘಟಿಕೋತ್ಸವ ದಲ್ಲಿ ಚಿನ್ನದ ಪದಕ ಪಡೆದ ಅವರು, ಹಲವು ಕಷ್ಟಗಳ ನಡುವೆಯ ಉತ್ತಮ ಬದುಕು ಕಟ್ಟಿಕೊಂಡ ಬಗೆಯನ್ನು ವಿವರಿಸಿದರು.

ಬೆಳಗಾವಿ ಜಿಲ್ಲೆಯ ರಾಯಬಾಗ ತಾಲ್ಲೂಕಿನ ಮಾಡಲಗಿ ಗ್ರಾಮದ ಶಿವಪ್ಪ–ಗಂಗಪ್ಪ ದಂಪತಿ ಕೂಲಿ ಮಾಡುತ್ತಲೆ ಮಗಳನ್ನು ಬಿ.ಇಡಿವರೆಗೆ ಓದಿಸಿದರು. ಬಿ.ಇಡಿಯಲ್ಲಿ ಕೇವಲ ಒಂದು ಅಂಕದಿಂದ ಚಿನ್ನದ ಪದಕ ಕೈ ತಪ್ಪಿದರೂ ಶಾಲೆ ಶಿಕ್ಷಕಿ ಹುದ್ದೆ ಕೈ ಹಿಡಿಯಿತು. ಮದುವೆಯೂ ಆಯಿತು. ಓದುವ ಕನಸು ಬಿಡದ ನೀಲವ್ವ, ಇದೀಗ ಮುಕ್ತ ವಿವಿಯಲ್ಲಿ ಎಂ.ಎ. ಕನ್ನಡ ವಿಷಯದಲ್ಲಿ ಅತಿ ಹೆಚ್ಚು ಅಂಕದೊಂದಿಗೆ ಎರಡು ಚಿನ್ನದ ಪದಕ ಗಳಿಸಿ ಸಂಭ್ರಮಿಸಿದ್ದಾರೆ.

'ಓದಬೇಕು ಎಂದು ಮನಸ್ಸು ಮಾಡಿದರೆ ದೂರ ಶಿಕ್ಷಣವಾದರೂ ಉತ್ತಮ ಸಾಧನೆ ಮಾಡಬಹುದು' ಎಂದರು.

ತುಮಕೂರು ಜಿಲ್ಲೆಯ ಮಧುಗಿರಿಯ ಜಿ.ಎನ್. ಭವ್ಯಾ ಎಂ.ಎಸ್ಸಿ. ಪರಿಸರ ವಿಜ್ಞಾನ ವಿಷಯದಲ್ಲಿ ಶೇ 90ರಷ್ಟು ಅಂಕಗಳೊಂದಿಗೆ ಮೊದಲ ರ‍್ಯಾಂಕ್ ಪಡೆದಿದ್ದು, 2 ಬಂಗಾರದ ಪದಕಕ್ಕೆ ಕೊರಳೊಡ್ಡಿದರು. ಸ್ನಾತಕೋತ್ತರ ವಿಭಾಗದಲ್ಲೇ ಎಲ್ಲ ವಿಷಯಗಳ ಪೈಕಿ ಅತಿ ಹೆಚ್ಚು ಅಂಕ ಗಳಿಸಿದ ಸಾಧನೆ ಅವರದ್ದು.

'ಗೃಹಿಣಿ ಆಗಿದ್ದುಕೊಂಡೇ ಓದುವ ನಿರ್ಧಾರ ಕೈಗೊಂಡಿದ್ದು, ಪತಿ ಅನಿಲ್‌ಕುಮಾರ್ ಸಹಕಾರದಿಂದ ಇದು ಸಾಧ್ಯವಾಯಿತು' ಎಂದು ಅವರು ಪತಿಗೆ ಕೃತಜ್ಞತೆ ಸಲ್ಲಿಸಿದರು.

ಬೆಳಗಾವಿ ಜಿಲ್ಲೆಯ ಸದಲಗಾದವರಾದ ಗೀತಾಂಜಲಿ ರಾಮನಕಟ್ಟಿ ವೃತ್ತಿಯಲ್ಲಿ ಸಮಾಜ ವಿಜ್ಞಾನ ಶಿಕ್ಷಕಿ ಆಗಿದ್ದರೂ ಎಂ.ಎ.ನಲ್ಲಿ ಹಿಂದಿ ವಿಷಯ ತೆಗೆದುಕೊಂಡು ರ‍್ಯಾಂಕ್ ಹಾಗೂ 2 ಚಿನ್ನದ ಪದಕದ ಸಾಧನೆ ಮಾಡಿದ್ದಾರೆ. ಮೈಸೂರಿನ ಜಯಲಕ್ಷ್ಮಿ–ಪುರಂನವರಾದ ಎಂ. ಸಂಜನಾ ಎಂ.ಎ. ಸ್ನಾತಕೋತ್ತರ ಇಂಗ್ಲಿಷ್‌ನಲ್ಲಿ ಚಿನ್ನದ ಪದಕ ಪಡೆದಿದ್ದಾರೆ. ಸದ್ಯ ಖಾಸಗಿ ಕಂಪನಿಯೊಂದರ ಉದ್ಯೋಗಿಯಾಗಿ–ದ್ದು, ಸ್ವಂತ ಸಂಪಾದನೆಯಿಂದ ಪಿಎಚ್‌ಡಿ ಮಾಡಿ, ಪ್ರಾಧ್ಯಾಪಕಿ ಆಗುವ ಕನಸನ್ನು ಹಂಚಿಕೊಂಡರು. ಮೂವರಿಗೆ ಪಿಎಚ್.ಡಿ (ಕನ್ನಡ, ಇತಿಹಾಸ, ರಾಜ್ಯಶಾಸ್ತ್ರ), 30 ಚಿನ್ನದ ಪದಕ ಹಾಗೂ 37 ನಗದು ಬಹುಮಾನ ವಿತರಿಸಲಾಯಿತು. ಒಟ್ಟು 7,869 ಮಂದಿಗೆ ಪದವಿ ಪ್ರದಾನ ಮಾಡಲಾಯಿತು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ 19ನೇ ಘಟಿಕೋತ್ಸವದಲ್ಲಿ ಎಂ. ಸಂಜನಾ (1), ಗೀತಾಂಜಲಿ ರಾಮನಕಟ್ಟಿ (2), ಜಿ.ಎನ್. ಭವ್ಯಾ (2) ಹಾಗೂ ನೀಲವ್ವ ಶಿವಪ್ಪ ಪಾಟೀಲ (2) ಚಿನ್ನದ ಪದಕದೊಂದಿಗೆ ಸಂಭ್ರಮಿಸಿದರು – ಪ್ರಜಾವಾಣಿ ಚಿತ್ರ

'ಭ್ರಷ್ಟಾಚಾರ ತೊಲಗಲು ಶ್ರಮಿಸಿ'

ಮೈಸೂರು: 'ಸರ್ಕಾರಿ ಆಡಳಿತದಲ್ಲಿ ಭ್ರಷ್ಟಾಚಾರ ಹಾಸುಹೊಕ್ಕಾಗಿದ್ದು, ನೂತನ ಪದವೀಧರರು ಅದನ್ನು ತೊಡೆದು ಹಾಕುವತ್ತ ಶ್ರಮಿಸಬೇಕು' ಎಂದು ಲೋಕಾಯುಕ್ತ ನ್ಯಾ. ಬಿ.ಎಸ್. ಪಾಟೀಲ ಕಿವಿಮಾತು ಹೇಳಿದರು.

ರಾಜ್ಯ ಮುಕ್ತ ವಿಶ್ವವಿದ್ಯಾಲಯದ 19ನೇ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, 'ಕೆಲವು ಅಧಿಕಾರಿಗಳು ಸಾವಿರ ರೂಪಾಯಿಗಳ ಲೆಕ್ಕದಲ್ಲಿ ಆಸ್ತಿ ಘೋಷಣೆ ಮಾಡಿಕೊಂಡಿರುತ್ತಾರೆ. ಆದರೆ, ನಾವು ದಾಳಿ ನಡೆಸಿದಾಗ ಕೋಟಿಗಟ್ಟಲೆ ಆಸ್ತಿ ಸಿಗುತ್ತದೆ. ಹಾಗಿದ್ದರೆ ಇಷ್ಟೊಂದು ಹಣ ಬಂದಿದ್ದಾದರೂ ಎಲ್ಲಿಂದ? ಕಚೇರಿಗಳಿಗೆ ಬರುವ ಜನರನ್ನು ನೂರು, ಸಾವಿರಕ್ಕೆ ಪೀಡಿಸಿ ಹಣ ಸಂಪಾದನೆ ಮಾಡುತ್ತಾರೆ. ಸರ್ಕಾರ ತನ್ನ ನೌಕರರಿಗೆ ಉತ್ತಮ ವೇತನ ನೀಡು–ತ್ತಿದ್ದಾಗ್ಯೂ ಲಂಚದ ಆಸೆ ಮಾತ್ರ ಕಡಿಮೆ ಆಗಿಲ್ಲ' ಎಂದು ವಿಷಾದ ವ್ಯಕ್ತಪಡಿ–ಸಿದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಧ್ಯಕ್ಷತೆ ವಹಿಸಿದ್ದರು. ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್, ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಶರಣಪ್ಪ ಹಲಸೆ ಪಾಲ್ಗೊಂಡರು.

ಸುದ್ದಿ 2 ನಿಮಿಷ

ಎಷ್ಟು ಹಣ ನೀಡಿದ್ದಾರೆ ಸ್ಪಷ್ಟಪಡಿಸಿ: ಹೆಬ್ಬಾರ ಸವಾಲು

ಶಿರಸಿ: 'ರಾಜ್ಯಸಭಾ ಚುನಾವಣೆಯಲ್ಲಿ ನನಗೆ ಕಾಂಗ್ರೆಸ್ ಹಣ ನೀಡಿದೆ ಎಂಬುದಾದರೆ, ಉತ್ತರ ಪ್ರದೇಶ, ಹಿಮಾಚಲ ಪ್ರದೇಶದಲ್ಲಿ ಬಿಜೆಪಿಯು ಕಾಂಗ್ರೆಸ್‌ನವರಿಗೆ ಎಷ್ಟು ಹಣ ನೀಡಿದೆ ಎಂಬುದನ್ನು ಕೆ.ಎಸ್. ಈಶ್ವರಪ್ಪ ಸ್ಪಷ್ಟಪಡಿಸಲಿ' ಎಂದು ಶಾಸಕ ಶಿವರಾಮ ಹೆಬ್ಬಾರ ಸವಾಲೆಸೆದರು.

ರಾಜ್ಯಸಭಾ ಚುನಾವಣೆ ವೇಳೆ ಹಣ ಪಡೆದಿರುವ ಆರೋಪ ಮಾಡಿರುವ ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಹೇಳಿಕೆಗೆ ನಗರದಲ್ಲಿ ಪ್ರತಿಕ್ರಿಯಿಸಿದ ಅವರು, 'ಬೇರೆ ರಾಜ್ಯದಲ್ಲಿ ಅಡ್ಡ ಮತದಾನ, ಗೈರು ಆಗಿಲ್ಲವೇ? ಅಲ್ಲಿ ಬಿಜೆಪಿ ಎಷ್ಟೆಷ್ಟು ಹೂಡಿಕೆ ಮಾಡಿದೆ ಎಂಬುದನ್ನೂ ಹೇಳಬೇಕು' ಎಂದು ತಿರುಗೇಟು ನೀಡಿದರು.

'ಈಶ್ವರಪ್ಪ ಅವರ ಮಾತನ್ನು ರಾಜ್ಯ ಬಿಜೆಪಿಯೇ ಗಂಭೀರವಾಗಿ ಪರಿಗಣಿಸುವುದಿಲ್ಲ. ಅವರು ಏನೆಲ್ಲಾ ಮಾಡಿಕೊಂಡು ರಾಜೀನಾಮೆ ನೀಡುವ ಸ್ಥಿತಿ ಬಂದಿತು ಎಂಬುದು ನಾಡಿನ ಜನಕ್ಕೆ ಹಾಗೂ ಸ್ವತಃ ಅವರಿಗೂ ತಿಳಿದಿದೆ. ಅಲ್ಲದೇ, ರಾಜ್ಯದಲ್ಲಿ ಬಿಜೆಪಿ ಸರ್ಕಾರ ಬರುವಾಗ ಈಶ್ವರಪ್ಪ ನಮಗೆ ಎಷ್ಟು ಕೋಟಿ ಕೊಟ್ಟಿದ್ದರು? ಎಂಬುದನ್ನು ಹೇಳ–ಬೇಕಾಗುತ್ತದೆ' ಎಂದರು.

'ಈಶ್ವರಪ್ಪನವರು ಗಾಜಿನ ಮನೆಯಲ್ಲಿ ಕುಳಿತುಕೊಂಡು ಕಲ್ಲು ಹೊಡೆಯುವಾಗ ಎಚ್ಚರಿಕೆಯಿಂದ ಇರಬೇಕು. ಹಾಗಿರುವುದು ಅವರ ಹಿರಿತನಕ್ಕೂ ಗೌರವ' ಎಂದರು.

ಇದೇ ವೇಳೆ, ಲೋಕಸಭಾ ಚುನಾವಣೆಗೆ ಸ್ಪರ್ಧೆಯ ಕುರಿತಂತೆ 'ಇದು ಕೇವಲ ಮಾಧ್ಯಮ ಸೃಷ್ಟಿ' ಎಂದು ಶಿವರಾಮ ಹೆಬ್ಬಾರ ಪ್ರತಿಕ್ರಿಯಿಸಿದರು.

ಸಂಸದ ರಮೇಶ ಜಿಗಜಿಣಗಿಗೆ ಬೆಳಗಾವಿಯಲ್ಲಿ ಶಸ್ತ್ರ ಚಿಕಿತ್ಸೆ

ವಿಜಯಪುರ: ಸಂಸದ ರಮೇಶ ಜಿಗಜಿಣಗಿ ಅವರು ಮಿದುಳಿನಲ್ಲಿ ರಕ್ತಸ್ರಾವ ಸಮಸ್ಯೆಯಿಂದಾಗಿ ಬೆಳಗಾವಿಯ ಕೆಎಲ್‌ಇ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾರೆ.

ಎರಡು ದಿನಗಳ ಹಿಂದೆ ಆರೋಗ್ಯದಲ್ಲಿ ಏರುಪೇರಾದ ಕಾರಣ ಅವರನ್ನು ಕೆಎಲ್‌ಇ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಶನಿವಾರ ಅವರಿಗೆ ವೈದ್ಯರು ಶಸ್ತ್ರ ಚಿಕಿತ್ಸೆ ಮಾಡಿದ್ದಾರೆ. ಸದ್ಯ ಐಸಿಯುನಲ್ಲಿ ಇದ್ದು, ಚೇತ–ರಿಸಿಕೊಳ್ಳುತ್ತಿದ್ದಾರೆ ಎಂದು ಆಸ್ಪತ್ರೆ ಮೂಲಗಳು ಭಾನುವಾರ ತಿಳಿಸಿವೆ.

'ಸಂಸದ ಜಿಗಜಿಣಗಿ ಅವರು ಶಸ್ತ್ರ ಚಿಕಿತ್ಸೆ ಬಳಿಕ ಚೇತರಿಸಿ–ಕೊಳ್ಳುತ್ತಿದ್ದಾರೆ. ಒಂದೆರಡು ದಿನಗಳಲ್ಲಿ ಆಸ್ಪತ್ರೆಯಿಂದ ಬಿಡುಗಡೆಯಾಗಲಿದ್ದಾರೆ. ರಾಜಕೀಯ ಉದ್ದೇಶದಿಂದ ಕೆಲವರು ಸುಳ್ಳು ಸುದ್ದಿ ಹರಡುತ್ತಿದ್ದಾರೆ. ಯಾವುದೇ ಊಹಾಪೋಹಗಳಿಗೆ ಜನರು ಕಿವಿಗೊಡಬಾರದು' ಎಂದು ಕುಟುಂಬದವರು ತಿಳಿಸಿದ್ದಾರೆ.

ಈ ಹಿಂದೆ ಜ.28ರಂದು ಅನಾರೋಗ್ಯಕ್ಕೆ ಒಳಗಾಗಿದ್ದ ಅವರನ್ನು ಬಾಗಲಕೋಟೆಯ ಹಾನಗಲ್ ಕುಮಾರೇಶ್ವರ ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ನೀಡಿದ ಬಳಿಕ ಗುಣಮುಖರಾಗಿದ್ದರು.

ಜಿಲ್ಲಾಧಿಕಾರಿಗಳ ಕಾರ್ಯಾಲಯ ರಾಯಚೂರು
ಜಿಲ್ಲಾ ನಗರಾಭಿವೃದ್ಧಿ ಕೋಶ, ರಾಯಚೂರು ಜಿಲ್ಲೆ
ರಾಯಚೂರು–584101 ಇ–ಮೇಲ್:: dud_rcr@yahoo.co.in
Comp No 33601DCRAI-PDOENGG/1/2023_PD(UD)_RAICHUR ದಿನಾಂಕ:01–03–2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ರಾಯಚೂರು ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಿಂದ ವಿವಿಧ ಅನುದಾನಗಳಡಿ ಮತ್ತು ಅವರ ಸ್ವಂತ ಸಂಪನ್ಮೂಲಗಳಲ್ಲಿ ಅನುಷ್ಠಾನಗೊಳಿಸುವ ಕಾಮಗಾರಿಗಳ ಹಾಗೂ ಸರಬರಾಜು ಮಾಡಿಕೊಳ್ಳುವ ಸರಕುಗಳ 3 ನೇ ವ್ಯಕ್ತಿ (3rd Party) ತಪಾಸಣೆಯನ್ನು ಮಾಡಿ ವರದಿಗಳನ್ನು ನೀಡಲು ಮೂರನೇ ವ್ಯಕ್ತಿ ತಪಾಸಣಾ ಏಜೆನ್ಸಿಯ ಆಯ್ಕೆಗಾಗಿ ಅರ್ಹ ಹಾಗೂ ನುರಿತ ಕನ್ಸಲ್ಟಂಟ್ಸ್/ಇಂಜಿನಿಯರ್ಸ್ ಮತ್ತು ಇಂಜಿನಿಯರಿಂಗ್ ಕನ್ಸಲ್ಟಂಟ್ಸ್ ಏಜೆನ್ಸಿಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಗಳ ವೇದಿಕೆಯ (https://kpp.karnataka.gov.in) ಮೂಲಕ ಟೆಂಡರನ್ನು ಆಹ್ವಾನಿಸಲಾಗಿದ್ದು, ಆಸಕ್ತ ಏಜೆನ್ಸಿಗಳು ತಮ್ಮ ಟೆಂಡರ್ ಗಳನ್ನು ಕೆಪಿಪಿ ಪೋರ್ಟಲಲ್ಲಿ ಟೆಂಡರ್ ಷರತ್ತುಗಳಿಗೆ ಒಳಪಟ್ಟು ವಿದ್ಯುನ್ಮಾನವಾಗಿ ಸಲ್ಲಿಸಬಹುದಾಗಿದೆ. (1) ಟೆಂಡರ್ ಸಂಖ್ಯೆ: DMA/2023-24/SE1884 (ಸೇವೆಯ ಅಂದಾಜು ಮೊತ್ತ ರೂ. 55.00 ಲಕ್ಷ) ಟೆಂಡರ್‌ಗಿಟ್ಟ ಮೊತ್ತ ರೂ. 53.73 ಲಕ್ಷ,(ಜಿ ಎಸ್.ಟಿ ಒಳಗೊಂಡಂತೆ) ಆನ್‌ಲೈನ್ ನಲ್ಲಿ ಪಾವತಿಸಬೇಕಾದ ಇಎಂಡಿ ಮೊತ್ತ: ರೂ 1,07,460.00 ಗಳು (2) ಕೆಪಿಪಿ ಪೋರ್ಟಲ್‌ನಲ್ಲಿ ಟೆಂಡರನ್ನು ಅಪ್ ಲೋಡ್ ಮಾಡುವ ದಿನಾಂಕ ಮತ್ತು ಸಮಯ :01–03–2024, ಸಂಜೆ : 5:00 ಗಂಟೆಗೆ. (3) ಕೆಪಿಪಿ ಪೋರ್ಟಲ್‌ನಲ್ಲಿ ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 12–03–2024 ಸಂಜೆ: 5:00 ಗಂಟೆಗೆ. (4) ಕೆಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ನ ತಾಂತ್ರಿಕ ಬಿಡ್ ಅನ್ನು ತೆರೆಯುವ ದಿನಾಂಕ 13–03–2024 ಸಂಜೆ 5:15 ಗಂಟೆಗೆ (5) ಟೆಂಡರ್ ಆರ್ಥಿಕ ಬಿಡ್ ಅನ್ನು ತೆರೆಯುವ ದಿನಾಂಕ: 15–03–2024 ಬೆಳಿಗ್ಗೆ: 11:00 ಗಂಟೆಗೆ. ವಿವರವಾದ ಟೆಂಡರ್ ಪ್ರಕಟಣೆಗಾಗಿ ಜಿಲ್ಲಾ ನಗರಾಭಿವೃದ್ಧಿ ಕೋಶದ ಜಾಲತಾಣವಾದ www.raichurdudc.mrc.gov.in. ನ್ನು ವೀಕ್ಷಿಸಬಹುದಾಗಿದೆ.

ಸಹಿ/– ಯೋಜನಾ ನಿರ್ದೇಶಕರು
ಜಿಲ್ಲಾ ನಗರಾಭಿವೃದ್ಧಿ ಕೋಶ ರಾಯಚೂರು
DIP/RCR/568/KSMC&A/565/2023-24

ಕರ್ನಾಟಕ ಸರಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ
ಜಿಲ್ಲಾ ನಗರಾಭೀವೃದ್ಧಿ ಕೋಶ, ಜಿ: ಬೆಳಗಾವಿ.
ದೂರವಾಣಿ ಸಂಖ್ಯೆ: 0831-2407279 ಇ–ಮೇಲ್ : dudc_bgm@yahoo.co.in
ಕ್ರಸಂ: ಬಿಜಿಎಂ:ಡಿಯುಡಿಸಿ:5:ಸಿಆರ್–25:2021–22 ದಿನಾಂಕ: 02.03.2024

ಅಲ್ಪಾವಧಿ ಟೆಂಡರ್ ಅಧಿಸೂಚನೆ

ಬೆಳಗಾವಿ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ನಗರೋತ್ಥಾನ (ಮುನಿಸಿಪಾಲಿಟಿ) ಹಂತ–4 ಯೋಜನೆಯಡಿ ಈ ಕೆಳಕಂಡ ಕಾಮಗಾರಿಗಳಿಗೆ KW–2,3&4 ಡಾಕುಮೆಂಟ್ ಉಪಯೋಗಿಸಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಗಿನಂತಿದೆ.
(ರೂ. ಲಕ್ಷಗಳಲ್ಲಿ)

ಕ್ರ ಸಂ	ಕಾಮಗಾರಿಗಳ ವಿವರ	ಟೆಂಡರ್‌ಗಿಟ್ಟ ಮೊತ್ತ (GST ಹೊರತುಪಡಿಸಿ)	ಇ.ಎಂ.ಡಿ ಮೊತ್ತ	ಕರೆ ನಂ.
1.	ಅಥಣಿ ಪುರಸಭೆ ವ್ಯಾಪ್ತಿಯಲ್ಲಿ ಸಿಸಿ ರಸ್ತೆ ಮತ್ತು ಪುಟಪಾತ್ ನಿರ್ಮಾಣ ಮಾಡುವುದು (ಪ್ರೋತ್ಸಾಹಧನ) Tender No. DMA/2023-24/RD/WORK_INDENT16078)	190.67	3.38	1st
2.	ಅಥಣಿ ಪುರಸಭೆ ವ್ಯಾಪ್ತಿಯಲ್ಲಿ ಅಲಂಕಾರಿಕ ವಿದ್ಯುತ್ ಕಂಬ & ದೀಪ ಅಳವಡಿಸುವುದು. (ಪ್ರೋತ್ಸಾಹಧನ) (Tender No. DMA/2023-24/EL/WORK_INDENT16068)	21.17	0.50	1st
3.	ಕಿತ್ತೂರ ಪ.ಪಂ. ವ್ಯಾಪ್ತಿಯಲ್ಲಿ ಚರಂಡಿ ನಿರ್ಮಾಣ ಮಾಡುವುದು (ಪ್ರೋತ್ಸಾಹಧನ) (Tender No. DMA/2023-24/RD/WORK_INDENT16271)	84.73	1.69	1st
4.	ಮುನವಳ್ಳಿ ಪುರಸಭೆಯ ಕಛೇರಿ ಕಟ್ಟಡ ನಿರ್ಮಾಣ ಮಾಡುವುದು (Tender No. DMA/2023-24/BD/WORK_INDENT15397)	80.50	1.61	2nd
5.	ಮೂಡಲಗಿ ಪುರಸಭೆ ವ್ಯಾಪ್ತಿಯಲ್ಲಿ ಪೌರಾಕಾರ್ಮಿಕರ ವಸತಿಗೃಹ ನವೀಕರಿಸುವುದು. (ಪ್ರೋತ್ಸಾಹ ಧನ) (Tender No. DMA/2023-24/BD/WORK_INDENT15400)	9.97	0.25	1st
6.	ಕಲ್ಲೋಳಿ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ರಸ್ತೆ ಚರಂಡಿ ಮತ್ತು ಶೌಚಾಲಯ ನಿರ್ಮಿಸುವುದು. (Tender No. DMA/2023-24/OW/WORK_INDENT15385)	66.33	1.33	3rd
7.	ಕಲ್ಲೋಳಿ ಪ. ಪಂ. ವ್ಯಾಪ್ತಿಯ ವಾರ್ಡ್ ಸಂಖ್ಯೆ 10ರ ಫಿಲ್ಟರ್ ಹೌಸ್ ಅಭಿವೃದ್ಧಿ ಪಡಿಸುವುದು. (Tender No. DMA/2023-24/WS/WORK_INDENT15395)	16.60	0.35	1st
8.	ಕಲ್ಲೋಳಿ ಪ. ಪಂ. ವ್ಯಾಪ್ತಿಯ ವಿದ್ಯುತ್ ಕಂಬ ಮತ್ತು ಟಿ.ಸಿ ಅಳವಡಿಸುವುದು. (Tender No. DMA/2023-24/EL/WORK_INDENT15392)	7.50	0.16	1st
9.	ಕಬ್ಬೂರ ಪ.ಪಂ ವ್ಯಾಪ್ತಿಯಲ್ಲಿ ಓವರ್ ಹೆಡ್ ವಾಟರ್ ಟ್ಯಾಂಕ್ (ಓ.ಹೆಚ್.ಟಿ) ನಿರ್ಮಿಸುವುದು. (Tender No. DMA/2023-24/WS/WORK_INDENT15384)	16.90	0.42	3rd
10.	ಯಕ್ಸಂಬಾ ಪ.ಪಂ. ವ್ಯಾಪ್ತಿಯಲ್ಲಿ ಭೂಗತ ಕೇಬಲ್ ಹಾಗೂ ವಿದ್ಯುತ್ ಬೀದಿ ದೀಪ ಅಳವಡಿಸುವುದು (Tender No.DMA/2023-24/EL/WORK_INDENT15748)	225.50	3.38	1st
11.	ನಿಪ್ಪಾಣಿ ನಗರಸಭೆ ವ್ಯಾಪ್ತಿಯಲ್ಲಿ ಮಟಣ ಮಾರುಕಟ್ಟೆ ಮೀನು ಮಾರುಕಟ್ಟೆ ಅಂಗನವಾಡಿ, ತಿನಿಸು ಕಟ್ಟೆ ಮತ್ತು ಶೌಚಾಲಯ ನಿರ್ಮಿಸುವುದು. (24.10%, 7.25%, 5% & ಇತರೆ ಅನುದಾನ) (Tender No. DMA/2023-24/BD/WORK_INDENT16117)	272.29	4.91	2nd

ಗುತ್ತಿಗೆದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ http://kppp.karnataka.gov.in/#/portal/portal-home. ಮೂಲಕ ಟೆಂಡರ್ ಡೌನ್‌ಲೋಡ್ ಹಾಗೂ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ ಹಾಗೂ ಟೆಂಡರ್ ಪ್ರೋಸೆಸಿಂಗ್ ಫೀಯನ್ನು ಸಹ ವಿದ್ಯುನ್ಮಾನ ಮೂಲಕ ಸಲ್ಲಿಸುವುದು. ಟೆಂಡರ್ ವೇಳಾಪಟ್ಟಿ ಮತ್ತು ಇತರೆ ಮಾಹಿತಿಯು ಈ ಕೆಳಗಿನಂತಿರುತ್ತದೆ.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	: 11.03.2024 ರಂದು 17.30 ಘಂಟೆವರೆಗೆ
ಟೆಂಡರ್ ತೆರೆಯುವ ದಿನಾಂಕ (ತಾಂತ್ರಿಕ ಬಿಡ್)	: 13.03.2024 ರಂದು 10.30 ಘಂಟೆ ನಂತರ

ಅವಧಿ ವಿಸ್ತರಣೆ ಇದ್ದಲ್ಲಿ ಇ–ಪೋರ್ಟಲ್ ಮೂಲಕ ಮಾತ್ರ ತಿಳಿಸಲಾಗುವುದು. ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಳಗಾವಿ.
DIPO/RO No.1294/2023-24

ಕೇಸರಿ ಧ್ವಜ ತೆರವಿನ ಆಡಿಯೊ ಸ್ವಯಂಪ್ರೇರಿತ ದೂರು ದಾಖಲು

ಪ್ರಜಾವಾಣಿ ವಾರ್ತೆ

ಸವಣೂರು (ಹಾವೇರಿ ಜಿಲ್ಲೆ): ತಾಲ್ಲೂಕಿನ ಕಾರಡಗಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಬಳಿ ಕೇಸರಿ ಧ್ವಜ ತೆರವುಗೊಳಿಸುವ ಕುರಿತ ಆಡಿಯೊ ಭಾನುವಾರ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣಗೊಂಡು ಸ್ಥಳದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪ–ಡಿಸಲಾಗಿದೆ.

'ಕೇಸರಿ ಧ್ವಜ ತೆರವಿನ ಕುರಿತು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ಆಡಿಯೊ ದೊರಕಿದ ಹಿನ್ನೆಲೆಯಲ್ಲಿ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿ, ತನಿಖೆ ಕೈಗೊಳ್ಳಲಾಗಿದೆ' ಎಂದು ಹುಲಗೂರ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಪರಶುರಾಮ ಕಟ್ಟಿಮನಿ ತಿಳಿಸಿದ್ದಾರೆ.

'ಗ್ರಾಮದ ಅಂಜುಮನ್ ಸಂಸ್ಥೆಯ ಅಧ್ಯಕ್ಷ ರಬ್ಬಾನಿ ಸವಣೂರ ನೇತೃತ್ವದ ತಂಡ ಗ್ರಾಮದಲ್ಲಿರುವ ಕೇಸರಿ ಧ್ವಜ ತೆರವಿಗಾಗಿ ರಾಜಕೀಯ ನಾಯಕರ ಸಹಕಾರವನ್ನು ಕೇಳಿಕೊಂಡು ಹೋಗಿದೆ. ಮಾಜಿ ಶಾಸಕ ಸೈಯದ್ ಅಜ್ಜಂಪೀರ್ ಖಾದ್ರಿ, ಕಾಂಗ್ರೆಸ್ ನಾಯಕ ಯಾಸೀರಖಾನ್ ಪಠಾಣ ಅವರ ಸಹಕಾರದಿಂದ ಕಾರಡಗಿ ಗ್ರಾಮದಲ್ಲಿ ಕೋಮು ಗಲಭೆಗೆ ಸಂಚು ರೂಪಿಸಲಾಗುತ್ತಿದೆ. ಈ ಕುರಿತ ಆಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ. ಈ ಬಗ್ಗೆ ಕೂಡಲೇ ಸೂಕ್ತ ತನಿಖೆ ಕೈಗೊಂಡು ತಪ್ಪಿಸ್ಥರಿಗೆ ಕಠಿಣ ಶಿಕ್ಷೆ ನೀಡಬೇಕು' ಎಂದು ಶ್ರೀರಾಮ ಸೇನೆ ಪದಾಧಿಕಾರಿಗಳು ಪೊಲೀಸ್ ಠಾಣೆಗೆ ಮನವಿ ಸಲ್ಲಿಸಿದ್ದಾರೆ.

'ಇಂತಹ ಕೃತ್ಯಕ್ಕೆ ಪೊಲೀಸರು ಕಡಿವಾಣ ಹಾಕಬೇಕು. ತಪ್ಪಿದಲ್ಲಿ ಶ್ರೀರಾಮ ಸೇನೆ ಹೋರಾಟ ಕೈಗೊಳ್ಳಲಿದೆ' ಎಂದು ಶ್ರೀರಾಮ ಸೇನೆ ಧಾರವಾಡ ವಿಭಾಗದ ಅಧ್ಯಕ್ಷ ಗದಿಗೆಪ್ಪ ಕುರವತ್ತಿ ತಿಳಿಸಿದ್ದಾರೆ.

'ಉತ್ತರ ಪತ್ರಿಕೆ' ಪ್ರತ್ಯಕ್ಷ ಆದಲ್ಲಿಯೂ 'ಪರೀಕ್ಷಾ ಕೇಂದ್ರ'

ಎರಡು ಎ ಪುಟದಿಂದ...

ಅಲ್ಲದೆ, ಮಂಡಳಿಯ ಸದಸ್ಯ ಕಾರ್ಯದರ್ಶಿ ಮತ್ತು ಅವರ ಸಿಬ್ಬಂದಿ ಹಾಗೂ ಚೀಫ್ ಕಸ್ಟೋಡಿಯನ್ ಮತ್ತು ಅವರ ಸಿಬ್ಬಂದಿ ಕರ್ತವ್ಯಲೋಪದಿಂದ ಅನಧಿಕೃತ ಉತ್ತರ ಪತ್ರಿಕೆಗಳ ಸೇರ್ಪಡೆ ಸಾಧ್ಯವಾಗಿರುತ್ತದೆ. ಇದನ್ನು ಯಾರು ಮಾಡಿರಬಹುದೆಂದು ನಿಖರವಾಗಿ ತಿಳಿಸಲು ಸಾಧ್ಯವಾಗದೇ ಇರುವುದರಿಂದ ಈ ಪ್ರಕರಣವನ್ನು ಹೆಚ್ಚಿನ ತನಿಖೆಗೆ ವಹಿಸಬಹುದಾಗಿದೆ' ಎಂದೂ ಸಮಿತಿಯು ಶಿಫಾರಸು ಮಾಡಿದೆ. ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿಯ ಯೋಜನಾ ನಿರ್ದೇಶಕ ಎನ್.ಎಂ. ನಾಗರಾಜ ನೇತೃತ್ವದ ಸಮಿತಿಯು ಉನ್ನತ ತನಿಖೆ ನಡೆಸುತ್ತಿದೆ.

ದ್ವಿತೀಯ ಪಿಯು ವಿಜ್ಞಾನ ವಿಷಯದಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು ಎರಡು ವರ್ಷಗಳ ಡಿ.ಫಾರ್ಮಾ ಕೋರ್ಸ್‌ಗೆ ಪ್ರವೇಶ ಪಡೆಯುತ್ತಾರೆ. ಕೋರ್ಸ್ ಮುಗಿದ ಬಳಿಕ ಔಷಧ ಮೇಲ್ವಿಚಾರಕ–ರಾಗಿ (ಫಾರ್ಮಸಿಸ್ಟ್) ಕಾರ್ಯನಿರ್ವಹಿಸುತ್ತಾರೆ. ಮಂಡಳಿಯು ಫಾರ್ಮಸಿ ಕಾಲೇಜುಗಳ ಮಾನ್ಯತೆ, ಪ್ರವೇಶ ಪ್ರಕ್ರಿಯೆ, ಪರೀಕ್ಷೆಯ ಮೇಲುಸ್ತುವಾರಿ ನಡೆಸುತ್ತದೆ. ಗೈರಾಗಿದ್ದ ವಿದ್ಯಾರ್ಥಿಗಳಿಗೆ ಪರೀಕ್ಷೆಯ ಪ್ರವೇಶ ಪತ್ರಗಳನ್ನೂ ನೀಡಿಲ್ಲ. ಹೊರಗಿನಿಂದ ಉತ್ತರ ಬರೆಸಿ, ಮೌಲ್ಯಮಾಪನದ ಸಂದರ್ಭದಲ್ಲಿ ಸೇರ್ಪಡೆ ಮಾಡಿರುವ ಶಂಕೆಯನ್ನು ಸಮಿತಿ ವ್ಯಕ್ತಪಡಿಸಿದೆ.

ಸೌಲಭ್ಯಗಳಿಲ್ಲದ ಕೇಂದ್ರಗಳಲ್ಲಿ ಪರೀಕ್ಷೆ?: 'ಮಂಡಳಿಯ ಅಡಿಯಲ್ಲಿ ಸುಮಾರು 300 ಫಾರ್ಮಸಿ ಕಾಲೇಜುಗಳಿದ್ದು, ಇಲ್ಲಿ ಡಿಪ್ಲೊಮಾ ಇನ್ ಫಾರ್ಮಸಿ ಕೋರ್ಸ್ ಇದೆ. ಈ ಪೈಕಿ, ಬೀದರ್, ಕಲಬುರಗಿ, ಬಾಗಲಕೋಟೆ ಭಾಗದಲ್ಲಿರುವ ಕೆಲವು ಫಾರ್ಮಸಿ ಕಾಲೇಜುಗಳ ಪರೀಕ್ಷಾ ಕೇಂದ್ರಗಳಲ್ಲಿ ಸೌಲಭ್ಯವೇ ಇಲ್ಲ. ಆದರೂ ಪರೀಕ್ಷಾ ಕೇಂದ್ರಗಳಿಗೆ ಮಂಡಳಿಯು ಅನುಮತಿ ನೀಡಿದೆ. ಪರೀಕ್ಷಾ ಕೇಂದ್ರಗಳಿಗೆ ಅನುಮತಿ ನೀಡುವ ವಿಚಾರದಲ್ಲೂ ಅವ್ಯವಹಾರ ನಡೆದಿರುವ ಸಾಧ್ಯತೆಗಳಿವೆ' ಎಂದು ಸರ್ಕಾರಿ ಫಾರ್ಮಸಿ ಕಾಲೇಜೊಂದರ ಬೋಧಕ ಸಿಬ್ಬಂದಿ ತಿಳಿಸಿದರು.

ಈ ಕುರಿತು ಪ್ರತಿಕ್ರಿಯೆ ಪಡೆಯಲು ಮಂಡಳಿಯ ಸದಸ್ಯ ಕಾರ್ಯದರ್ಶಿಯನ್ನು ಸಂಪರ್ಕಿಸಲು ಯತ್ನಿಸಿದರೂ ಅವರು ಲಭ್ಯರಾಗಲಿಲ್ಲ.

2,022 ಹುದ್ದೆ ತುಂಬುವ ಪ್ರಕ್ರಿಯೆ ಆರಂಭ – ಪ್ರಿಯಾಂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಲ್ಲಿ ಖಾಲಿ ಇರುವ 2,022 ಹುದ್ದೆಗಳನ್ನು ತುಂಬುವ ಪ್ರಕ್ರಿಯೆ ವಿವಿಧ ಹಂತಗಳ–ಲ್ಲಿದ್ದು, ಶೀಘ್ರದಲ್ಲಿಯೇ ಅಭ್ಯರ್ಥಿಗಳಿಗೆ ನೇಮಕಾತಿ ಪತ್ರ ನೀಡಲಾಗುವುದು' ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಲ್ಲಿ 136 ಕಿರಿಯ ಎಂಜಿನಿಯರ್, 288 ಸಹಾಯಕ ಎಂಜನಿಯರ್ ಮತ್ತು 24 ಸಹಾಯಕ ಕಾರ್ಯಪಾಲಕ ಎಂಜನಿಯರ್ ಹುದ್ದೆಗಳ ಭರ್ತಿಗೆ ಕೆಪಿಎಸ್‌ಸಿ ಜ. 31ರಂದು ಅಂತಿಮ ಪಟ್ಟಿಯ ಅಧಿಸೂಚನೆ ಹೊರಡಿಸಿದೆ. ಈ ಪೈಕಿ, 24 ಸಹಾಯಕ ಕಾರ್ಯಪಾಲಕ ಎಂಜನಿಯರ್‌ಗಳ ನೇಮಕಾತಿ ಆದೇಶವನ್ನು ಕೆಪಿಎಸ್‌ಸಿ ತಡೆ ಹಿಡಿದಿದ್ದು, ಉಳಿದ ಅಭ್ಯರ್ಥಿಗಳ ಮೂಲ ದಾಖಲೆಗಳ ಪರಿಶೀಲನೆ ನಡೆಯುತ್ತಿದೆ' ಎಂದರು.

'ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಮೀಸಲಾದ ವಿವಿಧ 91 ಹುದ್ದೆಗಳನ್ನು ನೇರ ನೇಮಕಾತಿ ಕೋಟಾದಡಿ ಆನ್‌ಲೈನ್ ಮೂಲಕ ಭರ್ತಿ ಮಾಡಲು ಕೆಪಿಎಸ್‌ಸಿಗೆ ತಿಳಿಸಲಾಗಿದೆ. ಈ ಹುದ್ದೆಗಳಲ್ಲಿ 20 ಕಿರಿಯ ಎಂಜನಿಯರ್, 18 ಪ್ರಥಮ ದರ್ಜೆ ಸಹಾಯಕರು. 3 ಪ್ರಥಮ ದರ್ಜೆ ಲೆಕ್ಕ ಸಹಾಯಕರು, 42 ದ್ವಿತೀಯ ದರ್ಜೆ ಸಹಾಯಕರು ಹಾಗೂ 8 ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ಹುದ್ದೆಗಳು' ಎಂದು ಅವರು ಮಾಹಿತಿ ನೀಡಿದರು.

'ಪಂಚಾಯತ್ ರಾಜ್ ಎಂಜಿನಿಯರಿಂಗ್ ಇಲಾಖೆಯಲ್ಲಿ ಐವರು ಸಹಾಯಕ ಕಾರ್ಯಪಾಲಕ ಎಂಜನಿಯರ್‌ಗಳ ನೇರ ನೇಮಕಾತಿ ಮಾಡಲು ಕಳೆದ 24ರಂದು ಕೆಪಿಎಸ್‌ಸಿಗೆ ಸೂಚಿಸಲಾಗಿದೆ. ಇದೇ ಇಲಾಖೆಯಲ್ಲಿನ 2 ಪ್ರಥಮ ದರ್ಜೆ ಲೆಕ್ಕ ಸಹಾಯಕ, 49 ದ್ವಿತೀಯ ದರ್ಜೆ ಸಹಾಯಕ ಮತ್ತು 6 ದ್ವಿತೀಯ ದರ್ಜೆ ಲೆಕ್ಕ ಸಹಾಯಕ ಹುದ್ದೆಗಳನ್ನು ತುಂಬುವ ಪ್ರಕ್ರಿಯೆ ನಡೆಯುತ್ತಿದೆ' ಎಂದೂ ಅವರು ವಿವರಿಸಿದರು.

ಮೋದಿ ಪ್ರವಾಸ ಇಂದಿನಿಂದ

ಒಂದನೇ ಪುಟದಿಂದ...

ಇದೇ 5ರಂದು ತೆಲಂಗಾಣದ ಸಂಗಾರೆಡ್ಡಿಯಲ್ಲಿ ಹಲವು ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡಿ, ನಂತರ ಒಡಿಶಾಕ್ಕೆ ತೆರಳಲಿದ್ದಾರೆ.

6ರಂದು ಕೋಲ್ಕತ್ತದಲ್ಲಿ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಲಿದ್ದಾರೆ. ನಂತರ ಬಿಹಾರಕ್ಕೆ ತೆರಳಲಿದ್ದಾರೆ. 7ರಂದು ಜಮ್ಮು ಮತ್ತು ಕಾಶ್ಮೀರಕ್ಕೆ ಭೇಟಿ ನೀಡಲಿದ್ದಾರೆ. 8ರಂದು ಅಸ್ಸಾಂಗೆ ತೆರಳಲಿದ್ದಾರೆ.

10ರಂದು ಉತ್ತರ ಪ್ರದೇಶಕ್ಕೆ ಹಾಗೂ ಮಾರನೇ ದಿನ ದೆಹಲಿಯಲ್ಲಿ ನಡೆಯುವ 'ನಮೋ ಡ್ರೋನ್ ದೀದಿ', 'ಲಖ್ಪತಿ ದೀದಿ' ಕಾರ್ಯಕ್ರಮದಗಳ–ಲ್ಲಿ ಭಾಗಿಯಾಗಲಿದ್ದಾರೆ. 12ರಂದು ಸಾಬರಮತಿ ಮತ್ತು ರಾಜಸ್ಥಾನದ ಪೋಖರಣ್‌ಗೆ ಭೇಟಿ ನೀಡಲಿದ್ದಾರೆ.

ಶ್ರಮಜೀವಿಗಳ ಸಮಾವೇಶದಲ್ಲಿ ಬೃಂದಾ ಕಾರಟ್ ಆಕ್ರೋಶ

ರೈತರ ಮೇಲೆ ಡ್ರೋನ್ ದಾಳಿ ಖಂಡನೀಯ

ಪ್ರಜಾವಾಣಿ ವಾರ್ತೆ

ಮಂಡ್ಯ: 'ರಕ್ಷಣಾ ಕಾರ್ಯಕ್ಕೆ ಬಳಸುವ ಡ್ರೋನ್‌ಗಳಿಂದ ಪ್ರತಿಭಟನನಿರತ ರೈತರ ಮೇಲೆ ಕೇಂದ್ರ ಸರ್ಕಾರ ಅಶ್ರುವಾಯು ಶೆಲ್ ದಾಳಿ ನಡೆಸಿರುವುದು ಖಂಡನೀಯ. ಸ್ವತಂತ್ರ ಭಾರತದಲ್ಲಿ ಯಾವ ಸರ್ಕಾರವೂ ಇಂತಹ ಕೆಟ್ಟ ಕೆಲಸ ಮಾಡಿಲ್ಲ' ಎಂದು ಹೋರಾಟಗಾರ್ತಿ ಬೃಂದಾ ಕಾರಟ್ ಆಕ್ರೋಶ ವ್ಯಕ್ತಪಡಿ–ಸಿದರು.

ಸಿಪಿಎಂ ವತಿಯಿಂದ ನಗರದ ಸಿಲ್ವರ್ ಜ್ಯೂಬಿಲಿ ಉದ್ಯಾನದಲ್ಲಿ ಭಾನುವಾರ ನಡೆದ 'ಶಾಂತಿ–ಸೌಹಾರ್ದ–ಸಹಬಾಳ್ವೆಗಾಗಿ ಶ್ರಮಜೀವಿಗಳ ಸಮಾ–ವೇಶ'ದಲ್ಲಿ ಅವರು ಮಾತನಾಡಿದರು.

'ಕನಿಷ್ಠ ಬೆಂಬಲ ಬೆಲೆಗೆ ಕಾನೂನು ಗ್ಯಾರಂಟಿ ಪಡೆಯಲು ರೈತರು ದೆಹಲಿ ಗಡಿಯಲ್ಲಿ ಹೋರಾಟ ನಡೆಸುತ್ತಿದ್ದರೆ ಕೇಂದ್ರ ಸರ್ಕಾರ ಅವರ ಮೇಲೆ ದಾಳಿ ನಡೆಸುತ್ತಿದೆ. ಎರಡೂವರೆ ವರ್ಷಗಳ ಹಿಂದೆ ನೀಡಿದ್ದ ಭರವಸೆಯನ್ನು ಈಡೇರಿಸುವಲ್ಲಿ ಮೋದಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದ್ದು ರೈತರನ್ನು ವಂಚಿಸಿದೆ' ಎಂದರು.

'ಎಡಪಕ್ಷಗಳ ಬೆಂಬಲದೊಂದಿಗೆ ಯುಪಿಎ ಸರ್ಕಾರ ಜಾರಿಗೊಳಿಸಿದ್ದ ನರೇಗಾ ಯೋಜನೆ ಗ್ರಾಮೀಣ ಭಾರತದ ಜೀವಸೆಲೆಯಾಗಿತ್ತು. ಆದರೆ, ನರೇಂದ್ರ ಮೋದಿ ಸರ್ಕಾರ ಆ ಸೆಲೆಯನ್ನು ಕತ್ತರಿಸಿ ಹಾಕಿದೆ. 100 ದಿನ ಕೆಲಸ ಕೊಡಬೇಕು ಎಂಬ ನಿಯಮವನ್ನು ಬುಲ್ಡೋಜ್ ಮಾಡಿದೆ. ವರ್ಷದಿಂದ ವರ್ಷಕ್ಕೆ ನರೇಗಾ ಯೋಜನೆಯ ಅನುದಾನ ಕಡಿತಗೊಳಿ–ಸುತ್ತಿದೆ' ಎಂದು ದೂರಿದರು.

'ದೇಶದ ಕೋಟ್ಯಂತರ ಹೆಣ್ಣು ಮಕ್ಕಳು ನರೇಗಾ ಯೋಜನೆ ಮೂಲಕ ಬದುಕು ಕಟ್ಟಿಕೊಂಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರಿಗೆ ನಾರಿ ಶಕ್ತಿಯ ಬಗ್ಗೆ ಏನೂ ಗೊತ್ತಿಲ್ಲ. ಅವರಿಗೆ ಗೊತ್ತಿರುವುದು ಕಾರ್ಪೊರೇಟ್ ಶಕ್ತಿ ಮಾತ್ರ. ನಾರಿ ಶಕ್ತಿ ಬಗ್ಗೆ ಮಾತನಾಡಲು ನೈತಿಕ ಹಕ್ಕು ಅವರಿಗಿಲ್ಲ' ಎಂದರು.

'ಅಂಗನವಾಡಿ, ಆಶಾ, ಬಿಸಿಯೂಟ ಯೋಜನೆ ಸೇರಿದಂತೆ ಸ್ಕೀಂ ನೌಕರರ ವೇತನವನ್ನು ಒಂದು ರೂಪಾಯಿಯೂ ಹೆಚ್ಚಿಸಿಲ್ಲ. ಆದರೆ, ಉದ್ಯಮಪತಿಗಳ ಸಾವಿರಾರು ಕೋಟಿ ರೂಪಾಯಿ ಸಾಲ ಮನ್ನಾ ಮಾಡುತ್ತಿದೆ. ರಾಜಕೀಯ ಲಾಭಕ್ಕಾಗಿ ದೇಶದ ಜನರ ಮೇಲೆ ಧರ್ಮದ ಅಸ್ತ್ರ ಬಳಸುತ್ತಿದೆ' ಎಂದು ಆರೋಪಿಸಿದರು.

ಶ್ರಮಜೀವಿಗಳ ಸಮಾವೇಶದಲ್ಲಿ ಹೋರಾಟಗಾರ್ತಿ ಬೃಂದಾ ಕಾರಟ್ ಮಾತನಾಡಿದರು. ದೇವಿ, ಮೀನಾಕ್ಷಿ ಸುಂದರಂ, ಜಗದೀಶ್ ಸೂರ್ಯ, ಗುರುಪ್ರಸಾದ್ ಕೆರಗೋಡು, ಎಂ.ಪುಟ್ಟಮಾದು, ಭರತ್‌ರಾಜ್ ಇದ್ದರು

'ಜೆಡಿಎಸ್ ಬಿಜೆಪಿಯ ಸ್ಟೆಪ್ನಿ'

'ಜಾತ್ಯತೀತ ತತ್ವಗಳ ಮೇಲೆ ರಾಜಕಾರಣ ಮಾಡುತ್ತಿದ್ದ ಎಚ್.ಡಿ.ದೇವೇಗೌಡ ಅವರ ನೇತೃತ್ವದ ಜೆಡಿಎಸ್ ಪಕ್ಷ ಈಗ ಕೋಮುವಾದಿ ಬಿಜೆಪಿಗೆ ಸ್ಟೆಪ್ನಿ–ಯಾಗಿರುವುದು ನಾಚಿಕೆಗೇಡಿನ ಸಂಗತಿ. ಧರ್ಮಾಧಾರಿತ ರಾಜಕಾರಣಕ್ಕೆ ಬೆಂಬಲ ನೀಡುತ್ತಿರುವ ಜೆಡಿಎಸ್‌ಗೆ ಯಾವುದೇ ಸಿದ್ಧಾಂತ ಇಲ್ಲ' ಎಂದು ಬೃಂದಾ ಕಾರಟ್ ಟೀಕಿಸಿದರು.

'ಜಿಲ್ಲೆಯ ಕೆರಗೋಡು ಗ್ರಾಮದ ಸರ್ಕಾರಿ ಜಾಗದಲ್ಲಿ ಹನುಮ ಧ್ವಜ ಹಾರಿಸುವ ಮೂಲಕ ಜೆಡಿಎಸ್ ಹಾಗೂ ಸಂಘ ಪರಿವಾರದ ಮುಖಂಡರು ಸಂವಿಧಾನದ ತತ್ವಗಳನ್ನು ಉಲ್ಲಂಘಿಸಿದ್ದಾರೆ. ಮನೆಯ ದೇವರ ಕೋಣೆಯಲ್ಲಿ ಯಾವುದೇ ಧ್ವಜ ಹಾರಿಸಿಕೊಳ್ಳಲಿ, ಸಾರ್ವಜ–ನಿಕವಾಗಿ ಕೇಸರಿ ಧ್ವಜ ಹಾರಿಸಿದ್ದು ಏಕೆ' ಎಂದು ಪ್ರಶ್ನಿಸಿದರು.

28 ಕ್ಷೇತ್ರಗಳ ಅಭ್ಯರ್ಥಿ ಆಕಾಂಕ್ಷಿಗಳ ಪಟ್ಟಿ ವರಿಷ್ಠರಿಗೆ

ಬೆಂಗಳೂರು:ರಾಜ್ಯದ 28 ಲೋಕಸಭಾ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸುವ ಸಂಬಂಧ ಪಕ್ಷದ ಪ್ರಮುಖ ನಾಯಕರ ಸಭೆಯಲ್ಲಿ ಚರ್ಚೆ ನಡೆದಿದ್ದು, ಚರ್ಚೆಗೆ ಬಂದ ಎಲ್ಲ ಆಕಾಂಕ್ಷಿಗಳ ಹೆಸರುಗಳನ್ನು ಇನ್ನು 2–3 ದಿನಗಳಲ್ಲಿ ವರಿಷ್ಠರಿಗೆ ಕಳುಹಿಸಲಾಗುವುದು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದರು.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ಇಬ್ಬರು ವೀಕ್ಷಕರು ಕಳೆದ 2– 3 ದಿನಗಳಿಂದ ಎಲ್ಲಾ ಲೋಕಸಭಾ ಕ್ಷೇತ್ರಗಳಿಗೆ ಹೋಗಿ ಕಾರ್ಯಕರ್ತರು ಮತ್ತು ನಾಯಕರ ಜತೆ ಚರ್ಚಿಸಿ, ಆಕಾಂಕ್ಷಿಗಳ ಹೆಸರುಗಳನ್ನು ಸಂಗ್ರಹಿಸಿಕೊಂಡು ಬಂದಿದ್ದಾರೆ. ಆ ಹೆಸರುಗಳ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು ಎಂದರು. ಯಾರನ್ನೆಲ್ಲ ಕಣಕ್ಕೆ ಇಳಿಸಬೇಕು ಎಂಬ ತೀರ್ಮಾನವನ್ನು ವರಿಷ್ಠರೇ ತೆಗೆದುಕೊಳ್ಳುತ್ತಾರೆ ಎಂದು ವಿಜಯೇಂದ್ರ ತಿಳಿಸಿದರು.

ಶಿಕ್ಷಣ

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ–ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ www.exammastermind.comಗೆ ಭೇಟಿ ಕೊಡಿ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜ ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ

19) ಪೂರ್ವ ಘಟ್ಟ ಮತ್ತು ಪಶ್ಚಿಮ ಘಟ್ಟಗಳಿಗಿರುವ ಹೋಲಿಕೆ ವ್ಯತ್ಯಾಸಗಳನ್ನು ತಿಳಿಸಿ.

ಉತ್ತರ:– ಪೂರ್ವ ಘಟ್ಟ ಮತ್ತು ಪಶ್ಚಿಮ ಘಟ್ಟಗಳಿಗಿರುವ ಹೋಲಿಕೆ

1) ಎರಡೂ ಘಟ್ಟಗಳು ದಕ್ಷಿಣ ಭಾರತದಲ್ಲಿವೆ
2) ಎರಡೂ ಘಟ್ಟಗಳು ಕರಾವಳಿ ದಂಡೆಯ ಸಮೀಪದಲ್ಲಿವೆ
3) ವಿವಿಧ ಜೀವ ಮತ್ತು ಸಸ್ಯ ಪ್ರಬೇಧಗಳನ್ನು ಎರಡೂ ಘಟ್ಟಗಳಲ್ಲಿ ನೋಡಬಹುದಾಗಿದೆ.
4) ಎರಡೂ ಘಟ್ಟಗಳು ಕಾಡು ಮತ್ತು ಆಯುರ್ವೇದ ಸಸ್ಯಗಳ ಆಗರಗಳಾಗಿವೆ ಇತ್ಯಾದಿ

ಪೂರ್ವ ಘಟ್ಟ ಮತ್ತು ಪಶ್ಚಿಮ ಘಟ್ಟಗಳಿಗಿರುವ ವ್ಯತ್ಯಾಸಗಳು

1) ಪಶ್ಚಿಮ ಘಟ್ಟ ಎತ್ತರವಾಗಿದೆ ಆದರೆ ಪಶ್ಚಿಮ ಘಟ್ಟಕ್ಕೆ ಹೋಲಿಸಿದರೆ ಪೂರ್ವ ಘಟ್ಟಗಳು ಅಷ್ಟು ಎತ್ತರವಾಗಿಲ್ಲ
2) ಪಶ್ಚಿಮ ಘಟ್ಟ ನಿರಂತರವಾಗಿದೆ ಆದರೆ ಪಶ್ಚಿಮ ಘಟ್ಟಕ್ಕೆ ಹೋಲಿಸಿದರೆ ಪೂರ್ವ ಘಟ್ಟಗಳು ಅಷ್ಟು ನಿರಂತರವಾಗಿಲ್ಲ
3) ಪಶ್ಚಿಮ ಘಟ್ಟದಲ್ಲಿ ಬಹಳಷ್ಟು ನದಿಗಳು ಹುಟ್ಟುತ್ತವೆ ಆದರೆ ಪೂರ್ವ ಘಟ್ಟದ ಮೂಲಕ ಬಹಳಷ್ಟು ನದಿಗಳು ಸಮುದ್ರವನ್ನು ಸೇರುತ್ತವೆ.
4) ಆಣೈಮಲೆ ಪಶ್ಚಿಮ ಘಟ್ಟದಲ್ಲಿ ಅತಿದೊಡ್ಡ ಶಿಖರವಾದರೆ ಅರ್ಮಕೊಂಡ ಎಂಬುದು ಪೂರ್ವ ಘಟ್ಟಗಳಲ್ಲೇ ಎತ್ತರವಾದ ಶಿಖರವಾಗಿದೆ
5) ಪಶ್ಚಿಮ ಘಟ್ಟಗಳಲ್ಲಿ ತಾಪಿನದಿ ಕಣಿವೆಯಿಂದ ಕನ್ಯಾಕುಮಾರಿ ಭೂಶಿರದವರೆಗೆ ಪಶ್ಚಿಮ ಕರಾವಳಿಗೆ (ಅರಬ್ಬಿ ಸಮುದ್ರತೀರ) ಸಮಾಂತರವಾಗಿ ಹಬ್ಬಿವೆ. ಆದರೆ ಪೂರ್ವದಲ್ಲಿ ಉತ್ತರದಲ್ಲಿ ಮಹಾನದಿ ಕಣಿವೆಯಿಂದ ದಕ್ಷಿಣದಲ್ಲಿ ನೀಲಗಿರಿ ಬೆಟ್ಟಗಳವರೆಗೆ ವಿಸ್ತರಿಸಿದೆ

(**ಗಮನಿಸಿ:–** ನಿಮ್ಮ ಹೆಚ್ಚಿನ ಅಧ್ಯಯನದ ದೃಷ್ಟಿಯಿಂದ ಪಠ್ಯ ಪುಸ್ತಕದಲ್ಲಿರುವ ಮಾಹಿತಿಗಿಂತ ಸ್ವಲ್ಪ ಹೆಚ್ಚಿನ ಮಾಹಿತಿಯನ್ನು ಈ ಪ್ರಶ್ನೆಯ ಉತ್ತರದಲ್ಲಿ ಸೇರಿಸಲಾಗಿದೆ)

20) ಅಸ್ಪೃಶ್ಯತಾ ನಿವಾರಣೆಯಲ್ಲಿ ಪಾತ್ರವಹಿಸಿದ ಸಮಾಜ ಸುಧಾರಕರನ್ನು ಹೆಸರಿಸಿ

ಉತ್ತರ:– ಸುಧಾರಣಾವಾದಿಗಳು, ಧಾರ್ಮಿಕ ನೇತಾರರು, ಬರಹಗಾರರು ಮತ್ತು ವಿಚಾರವಾದಿಗಳು ಅಸ್ಪೃಶ್ಯತೆಯ ವಿರುದ್ಧ ಹೋರಾಡುತ್ತಲೇ ಬಂದಿದ್ದಾರೆ. ಸ್ವಾಮಿ ವಿವೇಕಾನಂದ, ಡಾ॥ ಬಿ. ಆರ್. ಅಂಬೇಡ್ಕರ್, ಜ್ಯೋತಿಬಾ ಫುಲೆ, ಗಾಂಧೀಜಿ, ಮೊದಲಾದವರು ಅಸ್ಪೃಶ್ಯತೆ ಹಾಗೂ ಅಸಮಾನತೆಯ ವಿರುದ್ಧ ಹೋರಾಟ ನಡೆಸಿದರು.

21) ಪೆಟ್ರೋಲಿಯಂ ದ್ರವರೂಪದ ಚಿನ್ನ ಎಂದು ಕರೆಯಲು ಕಾರಣವೇನು?

ಉತ್ತರ: ಪೆಟ್ರೋಲಿಯಂ ಪ್ರಮುಖವಾದ ಶಕ್ತಿ ಸಂಪನ್ಮೂಲ ಮಾತ್ರವಾಗಿರದೇ ಒಂದು ಮುಖ್ಯ ಕಚ್ಚಾ ವಸ್ತುವೂ ಸಹ ಆಗಿದೆ. ಇದನ್ನು ಕಚ್ಚಾ ವಸ್ತುವನ್ನಾಗಿ ಅವಲಂಬಿಸಿದ ಅನೇಕ ಕೈಗಾರಿಕೆಗಳು ಅಭಿವೃದ್ಧಿ ಹೊಂದಿವೆ. ವ್ಯವಸಾಯ, ಕೈಗಾರಿಕೆ ಹಾಗೂ ಸಾರಿಗೆ ಕ್ಷೇತ್ರಗಳಲ್ಲಿ ಪೆಟ್ರೋಲಿಯಂ ಅಮೂಲ್ಯ ಶಕ್ತಿ ಸಂಪನ್ಮೂಲ. ಇದು ಶಾಂತಿ ಹಾಗೂ ಯುದ್ಧ ಕಾಲಗಳೆರಡರಲ್ಲೂ ಅಮೂಲ್ಯವಾದುದು. ಆದುದರಿಂದ ಇದನ್ನು 'ದ್ರವರೂಪದ ಚಿನ್ನ' ಎಂದು ಕರೆಯಲಾದಿದೆ.

22) ಮಹಿಳಾ ಸಬಲೀಕರಣದ ಅರ್ಥ ತಿಳಿಸಿ.

ಉತ್ತರ: ಮಹಿಳೆಯರನ್ನು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನಿರ್ಧಾರಗಳನ್ನು ತೆಗೆದುಕೊಳ್ಳುವಂತೆ ಸಬಲರನ್ನಾಗಿ ಮಾಡುವುದನ್ನೇ ಮಹಿಳಾ ಸಬಲೀಕರಣ ಎನ್ನುತ್ತೇವೆ.

23) ಜನಮಂದೆ ಎಂದರೇನು? ಉದಾಹರಣೆ ಕೊಡಿ.

ಉತ್ತರ:– ಯಾವುದೇ ಪೂರ್ವ ಯೋಜನೆ ಇಲ್ಲದೇ ಅನಿಶ್ಚಿತವಾಗಿರುವ ಒಂದು ಆಸಕ್ತಿಯ ಸುತ್ತ ನೆರೆದಿರುವ ಜನರಾಶಿಯೇ ಜನಮಂದೆ.

ಉದಾಹರಣೆ: ಚಲನ ಚಿತ್ರ ಮಂದಿರದ ಹತ್ತಿರ ಟಿಕೆಟ್ ಪಡೆಯಲು ಮುತ್ತಿಗೆ ಹಾಕಿದಂತೆ ಸೇರಿರುವ ಜನಸ್ತೋಮ.

24) ದಯಾನಂದ ಸರಸ್ವತಿಯವರು ಭಾರತೀಯರಿಗೆ 'ವೇದಗಳಿಗೆ ಹಿಂದಿರುಗಿ' ಎಂದು ಕರೆ ನೀಡಲು ಕಾರಣವೇನು?

ಉತ್ತರ: ಆರ್ಯ ಸಮಾಜವನ್ನು ದಯಾನಂದ ಸರಸ್ವತಿಯವರು ಸ್ಥಾಪಿಸಿ ಅದರ ಮೂಲಕ ವೇದಗಳು ಸತ್ಯ ಮತ್ತು ಜ್ಞಾನದ ಮೂಲವಾಗಿರುವ ಹಿನ್ನೆಲೆಯಲ್ಲಿ "ವೇದಗಳಿಗೆ ಹಿಂದಿರುಗಿ" ಎನ್ನುವ ಘೋಷಣೆ ಮಾಡಿದರು.

25) ಯಾವುದನ್ನು ಮೊದಲನೇ ಕರ್ನಾಟಿಕ್ ಕದನವೆಂದು ಕರೆಯಲಾಗಿದೆ?

ಉತ್ತರ:– ಬ್ರಿಟಿಷ್ ಮತ್ತು ಫ್ರೆಂಚರ ನಡುವಿನ ಸೆಣಸಾಟದಲ್ಲಿ ಕರ್ಕಾಟಿಕ್ ಪ್ರದೇಶದ ನವಾಬ ಅನ್ವರುದ್ದೀನನನ್ನು ಬ್ರಿಟಿಷರು ದಾಳವಾಗಿ ಬಳಸಿಕೊಂಡಿದ್ದರು. ಈ ಸಂದರ್ಭದಲ್ಲಿ ಫ್ರೆಂಚರು ಮದ್ರಾಸನ್ನು ವಶಪಡಿಸಿಕೊಂಡರು. ನಂತರ ಆದ ಒಪ್ಪಂದವೊಂದರ ಪ್ರಕಾರ ಫ್ರೆಂಚರು ಮದ್ರಾಸನ್ನು ಬ್ರಿಟಿಷರಿಗೆ ಹಿಂತಿರುಗಿಸಿದರು. ಈ ಘಟನೆಯನ್ನು ಮೊದಲನೇ ಕರ್ನಾಟಿಕ್ ಕದನವೆಂದು ಕರೆಯಲಾಗಿದೆ.

26) ಎರಡನೇ ಆಂಗ್ಲೋ–ಮೈಸೂರು ಯುದ್ಧವು ಯಾವ ಒಪ್ಪಂದದೊಂದಿಗೆ ಅಂತ್ಯವಾಯಿತು?

ಉತ್ತರ:– ಈ ಯುದ್ಧವು ಮಂಗಳೂರಿನ ಶಾಂತಿ ಒಪ್ಪಂದದೊಂದಿಗೆ 1784ರಲ್ಲಿ ಕೊನೆಗೊಂಡಿತು

27) ಪೂರ್ವಾಗ್ರಹ ಎಂದರೇನು?

ಉತ್ತರ:– ವ್ಯಕ್ತಿ ಇಲ್ಲವೇ ಸಮೂಹವು ಸಮಾಜದ ಬಗ್ಗೆ (ಇಲ್ಲವೇ ಸಮೂಹ/ವ್ಯಕ್ತಿಯ ಬಗ್ಗೆ) ದುರಾಭಿಪ್ರಾಯ ಹೊಂದಿರುವ ಭಾವನೆಯನ್ನು ಹೊಂದುವುದಕ್ಕೆ ಪೂರ್ವಾಗ್ರಹ ಎನ್ನುವರು.

28) ಸಹಾಯಕ ಸೈನ್ಯ ಪದ್ಧತಿ ಮೊದಲು ಒಪ್ಪಿದವರು ಯಾರು?

ಉತ್ತರ:– ಸಹಾಯಕ ಸೈನ್ಯ ಪದ್ಧತಿ ಮೊದಲು ಒಪ್ಪಿದವರು ಹೈದರಾಬಾದಿನ ನಿಜಾಮ.

29) ಎಲೆ ಉದುರುವ ಮಾನ್ಸೂನ್ ಅರಣ್ಯಗಳನ್ನು ಯಾಕೆ ಹಾಗೆ ಕರೆಯುತ್ತಾರೆ?

ಉತ್ತರ:– ಉಷ್ಣವಲಯದ ಎಲೆ ಉದುರಿಸುವ ಮಾನ್ಸೂನ್ ಕಾಡುಗಳಲ್ಲಿ ಮರಗಳು ನಿರ್ದಿಷ್ಟ ಒಣ ಹವೆಯ ಋತುವಿನಲ್ಲಿ (ವಸಂತ ಋತು ಮತ್ತು ಬೇಸಿಗೆಯ ಆರಂಭದಲ್ಲಿ) ತಮ್ಮ ಎಲೆಗಳನ್ನು ಉದುರಿಸುತ್ತವೆ. ಹೀಗಾಗಿ ಇವುಗಳನ್ನು ಎಲೆ ಉದುರುವ 'ಮಾನ್ಸೂನ್ ಅರಣ್ಯಗಳು' ಎಂದು ಕರೆಯುವರು

30) ಬ್ರಿಟಿಷ್ ಏಕರೂಪದ ಆಡಳಿತ ವ್ಯವಸ್ಥೆಯು ಭಾರತೀಯರಲ್ಲಿ ಹೇಗೆ ರಾಷ್ಟ್ರೀಯತೆಯನ್ನು ಬೆಳೆಸಿತು?

ಉತ್ತರ : ದೇಶದಲ್ಲಿ ಹಲವಾರು ಸಂಸ್ಥಾನಗಳು ಅಸ್ತಿತ್ವದಲ್ಲಿದ್ದರೂ ಅವುಗಳ ಮೇಲೆ ಬ್ರಿಟಿಷರು ನಿಯಂತ್ರಣ ಹೊಂದಿದ್ದರು. ಇದರಿಂದ ಆಡಳಿತ ವ್ಯವಸ್ಥೆಯಲ್ಲಿ ಏಕರೂಪತೆಯನ್ನು ಕಾನೂನು ಸುವ್ಯವಸ್ಥೆಯನ್ನು ಸಂರಕ್ಷಿಸುವಲ್ಲಿ ಬ್ರಿಟಿಷರು ಸಫಲರಾಗಿದ್ದರು. ಇದರಿಂದ ದೇಶದಲ್ಲಿ ಸಮಾನತೆ ಏಕರೂಪದ ಅಧಿಕಾರಶಾಹಿತ್ವ ಅಸ್ತಿತ್ವಕ್ಕೆ ಬಂದಿತು ಇದರಿಂದ ಭಾರತೀಯರಲ್ಲಿ ರಾಷ್ಟ್ರೀಯತೆಯನ್ನು ಬೆಳೆಸಿತು

(ಮುಂದಿನ ಸಂಚಿಕೆಗೆ ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

II PUC BIOLOGY

1) Natural killer lymphocytes are an example of
a) Cytokine barrier b) Physiological barrier
c). Physical barrier d). Cellular barrier
Ans: d
Expln:- Innate immune System is a non-Specific type of defence i.e., present at the time of birth. They are providing different types of barriers to the entry of the foreign agents into our body. It consists of 4 types of barriers:-
(A) Cytokine to cellular barrier: Virus-infected cells secrete proteins called interferons which protect non-infected cells from further viral infection.
(B) Physiological barriers: Acid in the stomach, saliva in the mouth tears from eyes all prevents microbial growth.
(C) Physical barriers: Skin is the main barrier which prevents entry of the micro-organism.
(D) Cellular barriers: Leukocytes (WBC) acts like polymorphonuclear leukocytes (PMNL-neutrophils), Single-celled organism i.e. Cellular barriers. It also includes monocytes, natural killer cells in the blood, as well as Macrophages in tissue can phagocytose and destroy microbes.

2) The free-living fungus Trichoderma can be used for –
a) Killing insects
b) Biological control of plant diseases
c) Controlling butterfly caterpillars
d) Producing antibiotics
Ans:- b

3) What would happen if oxygen availability to activated sludge flocs is reduced?
a) It will slow down the rate of degradation of organic matter
b) The centre of flocs will become anoxic, which would cause death of bacteria and eventually breakage of flocs.
c) Flocs would increase in size as anaerobic bacteria would grow around flocs.
d) Protozoa would grow in large numbers.
Ans:- b

4) Mycorrhiza does not help the host plant in –
a) Enhancing its phosphorus uptake capacity
b) Increasing its tolerance to drought
c) Enhancing its resistance to root pathogens
d) Increasing its resistance to insects
Ans:- d

5) Big holes in Swiss cheese are made by a –
a) A machine
b) A bacterium that produces methane gas
c) A bacterium producing la large amount of carbon dioxide
d) A fungus that releases a lot of gases during it s metabolic activities.
Ans:- c

6) The residue left after methane production from cattle dung is -
a) burnt b) buried in land fills
c) used as manure
d) used in civil construction
Ans:- c

7) The residue left after methane production from cattle dung is:
a) Burnt b) burried in land fills
c) used as manure
d) used in civil construction.
Ans:- C

8) Activated sludge should have the ability to settle quickly so that it can:
a) be rapidly pumped back from sedimentation tank to aeration tank
b) absorb pathogenic bacteria present in waste water while sinking to the bottom of the settling tank
c) be discarded and anaerobically digested
d) absorb colloidal organic matter.
Ans:-a

9) With respect to Eichhornia:
Statement X: It drains off oxygen from water and is seen growing in standing water.
Statement Y: It is indigenous species of our country.
a) Both statement X and Y are correct
b) Both statement X and Y are wrong
c) Only statement X is correct and Y is wrong
d) Only statement Y is correct and X is wrong
Ans: c
Expln:- Eichhornia is an alien or exotic species. These plants are introduced in India because of its beautiful flowers and shape of leaves. Since it can propagate vegetatively at a phenomenal rate and spread all over the water body in a short period of time. It is the most invasive weeds found growing wherever there is standing water. It drains oxygen from the water, which leads to the death of fishes. It adversely affects aquatic life and increases the biological oxygen demand.

A species is defined as indigenous to a given region or ecosystem, if its presence in that region is the result of the only natural process, with no human intervention. Indigenous Species include those that are endemic i.e., naturally occurring in an area and restricted entirely to that area. So, Eichhornia is not an indigenous species of our country.

ಮೌಲ್ಯಾಂಕನವೆಂಬ ಮೌಲ್ಯಮಾಪನ

ಭಾರತಿ ಕೊಪ್ಪ



ಶೈಕ್ಷಣಿಕ ವರ್ಷದ ಕೊನೆಯ ತಿಂಗಳು ಮಾರ್ಚ್‌ನಲ್ಲಿ ಕಲಿಕೆಯ ಮೌಲ್ಯಮಾಪನ ಮಾಡುವ ಕಾರ್ಯಕ್ಕೆ ಶಿಕ್ಷಣ ಕ್ಷೇತ್ರ ಅಣಿಗೊಳ್ಳುತ್ತದೆ. ಪರೀಕ್ಷೆಯ ದಿನಗಳು ಸಮೀಪಿಸುತ್ತಿದ್ದಂತೆ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಸಮರ ವೀರರಂತೆ ಸಿದ್ಧತೆ ನಡೆಸುವುದು ಸರ್ವೇಸಾಮಾನ್ಯ. ಕೇವಲ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯು ಪರೀಕ್ಷೆಗಳಿಗೆ ಮಕ್ಕಳು ನೇರವಾಗಿ ಪಬ್ಲಿಕ್ ಪರೀಕ್ಷೆ ಎದುರಿಸುತ್ತಿಲ್ಲ. ರಾಜ್ಯ ಪಠ್ಯಕ್ರಮದ 5, 8 ಮತ್ತು 9 ನೇ ತರಗತಿ ವಿದ್ಯಾರ್ಥಿಗಳು ಏಕಕಾಲದಲ್ಲಿ ಪರೀಕ್ಷೆ ಬರೆಯುವ ಮೌಲ್ಯಾಂಕನ ಪರೀಕ್ಷೆಯ ತಯಾರಿಯಲ್ಲಿದ್ದಾರೆ. ಮಾರ್ಚ್ 11ರಿಂದ ಪರೀಕ್ಷೆ ನಡೆಯುವ ವೇಳಾಪಟ್ಟಿ ಕೂಡ ಪ್ರಕಟವಾಗಿದೆ.ಮಕ್ಕಳು ಆತಂಕರಹಿತವಾಗಿ ಪರೀಕ್ಷೆ ಎದುರಿಸಿದರೆ ಯಶಸ್ವಿ ಫಲಿತಾಂಶ ಪಡೆಯಬಹುದು.

ಪರೀಕ್ಷಾ ತಯಾರಿ ಹೀಗಿರಲಿ: ಮಕ್ಕಳನ್ನು ಉತ್ತೀರ್ಣ / ಅನುತ್ತೀರ್ಣ ಮಾಡುವುದು ಮುಖ್ಯವಲ್ಲ. ವಯಸ್ಸು ಮತ್ತು ತರಗತಿಗೆ ಅನುಗುಣವಾಗಿ ಮಕ್ಕಳ ಕಲಿಕೆಯ ಪ್ರಗತಿಯಾಗುತ್ತಿದೆಯೇ ತಿಳಿಯುವುದು ಈ ಪರೀಕ್ಷೆಯ ಉದ್ದೇಶ. 5ನೇ ತರಗತಿಯ ಮಕ್ಕಳಿಗೆ ಈವರೆಗೆ ಕೇವಲ ಶಾಲಾ ಹಂತದ ಪರೀಕ್ಷೆಗಳನ್ನು ಮಾತ್ರ ಎದುರಿಸಿದ ಅನುಭವ ಇರುತ್ತದೆ. ಮಾದರಿ ಪ್ರಶ್ನೆಪತ್ರಿಕೆಗಳನ್ನು ಅಭ್ಯಾಸ ಮಾಡುವುದರಿಂದ ಮೊದಲ ಬಾರಿ ರಾಜ್ಯಮಟ್ಟದ ಪರೀಕ್ಷೆ ಎದುರಿಸುವ ಭಯ ದೂರ ಮಾಡಬಹುದು. ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯ ವೆಬ್‌ಸೈಟ್‌ನಿಂದ ಮಾದರಿ ಪ್ರಶ್ನೆ ಪತ್ರಿಕೆಗಳನ್ನು ಡೌನ್‌ಲೋಡ್ ಮಾಡಿಕೊಂಡು ಅಭ್ಯಾಸ ಮಾಡಬಹುದು. ಬಹುಆಯ್ಕೆ ಮಾದರಿಯಲ್ಲಿ ಪ್ರಶ್ನೆಗಳು ಇರುವುದರಿಂದ ಯಾವುದೇ ಗೊಂದಲವಿಲ್ಲದೆ ನಿಖರವಾದ ಉತ್ತರವನ್ನು ಆರಿಸುವಷ್ಟು ಕಲಿಕೆ ಮನನವಾಗಿರಬೇಕು. ಭಾಷಾ ವಿಷಯದಲ್ಲಿ ವ್ಯಾಕರಣಾಂಶಗಳ ಕರಾರುವಕ್ಕಾದ ಅಭ್ಯಾಸವು ಹೆಚ್ಚು ಅಂಕ ಗಳಿಕೆಗೆ ಸಹಕಾರಿಯಾಗುತ್ತದೆ. ಕುರುಡು ಕಂಠಪಾಠದ ಸುದೀರ್ಘ ಪ್ರಶ್ನೋತ್ತರಗಳ ಕಲಿಕೆಗೆ ಗಮನ ನೀಡುವುದಕ್ಕಿಂತ, ವಿಷಯಾಂಶವನ್ನು ಅರ್ಥೈಸಿಕೊಂಡು ಉತ್ತರಿಸುವ, ಮಾದರಿ ಪ್ರಶ್ನೆಗಳನ್ನು ಬಿಡಿಸುವ ಸಾಮರ್ಥ್ಯ ಇಲ್ಲಿ ಅತ್ಯಗತ್ಯ.

ಭವಿಷ್ಯದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಡಿಗಲ್ಲು: ಇತ್ತೀಚಿನ ವರ್ಷಗಳಲ್ಲಿ ಅನೇಕ ಸರ್ಕಾರಿ ಹಾಗೂ ಸರ್ಕಾರೇತರ ಕೆಲವು ಉದ್ಯೋಗಗಳಿಗೂ ಲಿಖಿತ ಪರೀಕ್ಷೆ ಸಾಮಾನ್ಯ. ಇದರಲ್ಲಿ ಬಹುಆಯ್ಕೆ ಮಾದರಿಯ ಲಿಖಿತ ಪರೀಕ್ಷೆ ಇದ್ದೇ ಇರುತ್ತದೆ. ಬಹುಆಯ್ಕೆ ಪ್ರಶ್ನೆ ಅಧಿಕವಾಗಿರುವ 5, 8 ಮತ್ತು 9ನೇ ತರಗತಿಯ ಮೌಲ್ಯಾಂಕನ ಪರೀಕ್ಷೆಗಳು ಭವಿಷ್ಯದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಡಿಗಲ್ಲು. ವಿದ್ಯಾರ್ಥಿ ಜೀವನದಲ್ಲಿ ಉನ್ನತ ಶಿಕ್ಷಣ ಪಡೆಯಲು ಅಗತ್ಯವಿರುವ ಸಿಇಟಿ, ನೀಟ್, ಜೆಇಇಯಂತಹ ಪರೀಕ್ಷೆಗಳನ್ನೂ ಆತ್ಮವಿಶ್ವಾಸದಿಂದ ಎದುರಿಸಲು ರಾಜ್ಯ ಮಟ್ಟದ ಮೌಲ್ಯಾಂಕನ ಪರೀಕ್ಷೆ ಉತ್ತಮ ಅನುಭವ ನೀಡುತ್ತದೆ.

ಪರೀಕ್ಷಾ ದಿನ ಗಾಬರಿ ಬೇಡ: ಪರೀಕ್ಷಾ ಮೇಲ್ವಿಚಾರಕರಾಗಿ ಬೇರೆ ಶಾಲೆಯ ಶಿಕ್ಷಕರು ಪರೀಕ್ಷಾ ಕೊಠಡಿಗೆ ಬರುತ್ತಾರೆ. 5ನೇ ತರಗತಿ ತನಕ ತಮ್ಮದೇ ಶಾಲಾ ಶಿಕ್ಷಕರ ಮೇಲ್ವಿಚಾರಣೆಯಲ್ಲಿ ಪರೀಕ್ಷೆ ಬರೆದ ಪುಟ್ಟ ಮಕ್ಕಳು ಒಮ್ಮೆಲೇ ಗಾಬರಿಯಾಗುವ ಅಗತ್ಯವಿಲ್ಲ. ನಿರಾತಂಕವಾಗಿ ಬರೆಯಲು ಆತ್ಮವಿಶ್ವಾಸ ಬೆಳೆಸಿಕೊಳ್ಳಬೇಕಿದೆ.

ಪೋಷಕರ ಕಾಳಜಿ: ಮೌಲ್ಯಾಂಕನ ಪರೀಕ್ಷೆಯ ಬಗೆಗೆ ಪೋಷಕರು ತಮ್ಮ ಮಕ್ಕಳಿಗೆ ಯಾವುದೇ ರೀತಿಯ ಒತ್ತಡ ಹೇರುವ ಅಗತ್ಯವಿಲ್ಲ. ನವೆಂಬರ್ ನಂತರದ ದ್ವಿತೀಯ ಸೆಮಿಸ್ಟರ್ ಅವಧಿಯ ಪಾಠಗಳನ್ನು ಪ್ರತಿನಿತ್ಯ ಅಭ್ಯಾಸ ಮಾಡಲು ಮಕ್ಕಳಿಗೆ ಪ್ರೇರೇಪಿಸಬೇಕು. ಮಾದರಿ ಪ್ರಶ್ನೆ ಪತ್ರಿಕೆಯ ಆಧಾರದಲ್ಲಿ ಮಕ್ಕಳು ಪೂರ್ವ ತಯಾರಿ ಮಾಡಿಕೊಳ್ಳಲು ಮಾರ್ಗದರ್ಶನ ನೀಡಬೇಕಿದೆ. ಪರೀಕ್ಷಾ ದಿನದಂದು ಬರೆಯಲು ಅಗತ್ಯವಿರುವ ಲೇಖನ ಸಾಮಗ್ರಿಗಳನ್ನು ಪೂರೈಸಿ, ಮಕ್ಕಳಿಗೆ ಸಹಕರಿಸಬೇಕು. ಪೋಷಕರ ಕಾಳಜಿಯುಕ್ತ ನಡೆ ಮಕ್ಕಳನ್ನು ಪರೀಕ್ಷೆ ಬರೆಯಲು ಇನ್ನಷ್ಟು ಹುರಿದುಂಬಿಸುತ್ತದೆ.

ಶಿಕ್ಷಕರ ಸಹಕಾರವೂ ಮುಖ್ಯ: ಶಾಲಾ ಹಂತದಲ್ಲಿ ರೂಪಣಾತ್ಮಕ ಮೌಲ್ಯಮಾಪನ ಮತ್ತು ಒಂದನೇ ಸಂಕಲನಾತ್ಮಕ ಮೌಲ್ಯಮಾಪನ ಎದುರಿಸಿದ 5,8,9ನೇ ತರಗತಿಯ ಮಕ್ಕಳು, ಎರಡನೇ ಸಂಕಲನಾತ್ಮಕ ಮೌಲ್ಯಮಾಪನಕ್ಕಾಗಿ ರಾಜ್ಯ ಮಟ್ಟದ ಮೌಲ್ಯಾಂಕನ ಪರೀಕ್ಷೆ ಎದುರಿಸುವಾಗ ಶಿಕ್ಷಕರು ಮಕ್ಕಳಿಗೆ ಆತ್ಮವಿಶ್ವಾಸ ಮೂಡಿಸಬೇಕು. ತರಗತಿಯಲ್ಲಿ ಸತತ ಪುನರ್ ಮನನ, ಸ್ವಕಲಿಕೆ, ಅಣಕು ಪರೀಕ್ಷೆ ನಡೆಸಿ, ಅವುಗಳ ಮೂಲಕ ಉತ್ತಮ ಫಲಿತಾಂಶ ಸಿಗಲು ಪ್ರೋತ್ಸಾಹ ನೀಡಿದಂತಾಗುತ್ತದೆ. ಮೌಲ್ಯಾಂಕನದ ದಿನದಂದು ಪರೀಕ್ಷಾ ಪಾರದರ್ಶಕತೆ ಮತ್ತು ಗೊಂದಲರಹಿತ ಪರೀಕ್ಷೆ ನಡೆಸುವುದು ಅತ್ಯಗತ್ಯವಾಗಿದೆ.

ಪರೀಕ್ಷೆ ಎಂಬುದು ಮಕ್ಕಳಿಗೆ ಶಿಕ್ಷೆಯಾಗದೆ ಮಕ್ಕಳು ಪರೀಕ್ಷೆಯನ್ನು ಕಲಿಕೆಯ ಭಾಗವಾಗಿ ಸಂಭ್ರಮಿಸಬೇಕು. ಆ ನಿಟ್ಟಿನಲ್ಲಿ ಪೋಷಕರು ಮತ್ತು ಶಿಕ್ಷಕರು ಮಕ್ಕಳಿಗೆ ಪೂರ್ಣ ಪ್ರಮಾಣದ ಸಹಕಾರ ಮತ್ತು ಪ್ರೋತ್ಸಾಹ ನೀಡಿ ಗುಣಮಟ್ಟದ ಫಲಿತಾಂಶ ಪಡೆಯಲು ಪ್ರೇರೇಪಿಸೋಣ.

IIBS BENGALURU
Redefining Leading Talents
International Institute of Business Studies
Approved by AICTE | Affiliated to Bangalore City University
Ministry of Education, Government of India
NAAC A GRADE
Highest CGPA 3.20 in 4-Point Scale
16 YEARS OF ACADEMIC EXCELLENCE
ADMISSIONS OPEN FOR PGDM / MBA
BATCH (2024-26)
CAMPUS PLACEMENT 2021-23
HIGHEST SALARY PACKAGE OFFERED
PGDM ₹51 LAKHS per Annum
MBA ₹48 LAKHS per Annum
MERIT SCHOLARSHIP*
FEMALE CANDIDATES UPTO ₹2.30 LAKHS
MALE CANDIDATES UPTO ₹2.10 LAKHS
*TO AVAIL MERIT SCHOLARSHIP APPLY ON OR BEFORE 4TH MARCH 2024
www.iibs.edu.in | www.iibsonline.com
Near International Airport, Bengaluru-562 157.
9986415333
9620248214

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಒಬ್ಬರ ಹುದ್ದೆಯನ್ನು ಆಧರಿಸಿ, ಅವರ ಮಾತುಗಳನ್ನು ಕೇಳಬೇಕು ಎಂದುಕೊಳ್ಳುವುದು ಮೂರ್ಖತನ. ಆ ಮಾತುಗಳಲ್ಲಿ ಏನಾದರೂ ಹುರುಳಿದೆಯೇ ಎಂಬುದಕ್ಕೆ ಪ್ರಾಮುಖ್ಯ ನೀಡಬೇಕು.

–ನೋಮ್ ಚೋಮ್‌ಸ್ಕಿ

ಬೆಂಗಳೂರಿನ ಕೆಫೆಯೊಂದರಲ್ಲಿ ಸ್ಫೋಟ ಜನರನ್ನು ಗುರಿಯಾಗಿಸಿದ್ದ ದಾಳಿ

ಬೆಂಗಳೂರಿನ ಜನಪ್ರಿಯ ಹೋಟೆಲ್‌ಗಳಲ್ಲಿ ಒಂದಾಗಿರುವ ರಾಮೇಶ್ವರಂ ಕೆಫೆಯಲ್ಲಿ ಸ್ಫೋಟ ಸಂಭವಿಸಿ ಮೂರು ದಿನಗಳು ಕಳೆದಿವೆ. ಈ ಸ್ಫೋಟದಲ್ಲಿ 10 ಜನರಿಗೆ ಗಾಯಗಳಾಗಿವೆ. ಆದರೆ, ಸ್ಫೋಟಕ್ಕೆ ಕಾರಣನಾದ ವ್ಯಕ್ತಿಯ ಬಗ್ಗೆ, ಕೆಫೆಯಲ್ಲಿ ಸ್ಫೋಟಕವನ್ನು ತಂದು ಇರಿಸಿದ್ದ ವ್ಯಕ್ತಿಯ ಬಗ್ಗೆ ಖಚಿತವಾದ ಸುಳಿವು ದೊರೆತಂತೆ ಕಾಣುತ್ತಿಲ್ಲ. ಸ್ಫೋಟದ ಹಿಂದಿನ ಉದ್ದೇಶ ಏನಿತ್ತು ಎಂಬ ವಿಚಾರವಾಗಿ ಕೂಡ ಸ್ಪಷ್ಟ ಸುಳಿವು ಲಭ್ಯವಾಗಿಲ್ಲ. ಅದೃಷ್ಟವಶಾತ್, ಈ ಸ್ಫೋಟವು ಕಡಿಮೆ ತೀವ್ರತೆಯನ್ನು ಹೊಂದಿತ್ತು. ಹೀಗಾಗಿ ಜನರ ಜೀವಹಾನಿ ಆಗಿಲ್ಲ. ಆದರೆ, 10 ಜನರಿಗೆ ಗಾಯಗಳಾಗಿವೆ. ಅವರ ಪೈಕಿ ಒಬ್ಬರಿಗೆ ಶೇಕಡ 40ರಷ್ಟು ಸುಟ್ಟ ಗಾಯಗಳಾಗಿವೆ. ಇನ್ನೊಬ್ಬರು ಒಂದು ಕಣ್ಣಿನ ದೃಷ್ಟಿಯನ್ನು ಕಳೆದುಕೊಳ್ಳುವ ಅಪಾಯ ಇದೆ. ಈ ಸ್ಫೋಟವು ರಾಜ್ಯ ಅದರಲ್ಲೂ ಬೆಂಗಳೂರಿನ ಶಾಂತಿಗೆ ಭಂಗ ತಂದಿದೆ. ಲಭ್ಯವಿರುವ ಮಾಹಿತಿ ಹಾಗೂ ಸ್ಫೋಟ ಸಂಭವಿಸಿದ ಸಂದರ್ಭವನ್ನು ಗಮನಿಸಿ ಹೇಳುವುದಾದಲ್ಲಿ, ಸಾರ್ವಜನಿಕ ಸ್ಥಳದಲ್ಲಿ ಜನರನ್ನು ಗುರಿಯಾಗಿಸಿಕೊಂಡ ದಾಳಿ ಇದಾಗಿತ್ತು. ಅಚಾನಕ್ ಆಗಿ ಇಂತಹ ಸ್ಫೋಟ ಸಂಭವಿಸಿರಬಹುದು, ಹೋಟೆಲ್ ಉದ್ಯಮದಲ್ಲಿನ ವೈಷಮ್ಯವು ಇದಕ್ಕೆ ಕಾರಣವಾಗಿರಬಹುದು ಎಂಬ ವಾದಗಳನ್ನು ಪೊಲೀಸರು ಅಲ್ಲಗಳೆದಿದ್ದಾರೆ ಎಂದು ವರದಿಯಾಗಿದೆ. ಸ್ಫೋಟಕ್ಕೆ ಸಂಬಂಧಿಸಿದಂತೆ ಅಪರಿಚಿತ ವ್ಯಕ್ತಿಗಳ ವಿರುದ್ಧ 'ಕಾನೂನುಬಾಹಿರ ಚಟುವಟಿಕೆಗಳ ನಿಯಂತ್ರಣ ಕಾಯ್ದೆ'ಯ ಅಡಿಯಲ್ಲಿ, ಭಾರತೀಯ ದಂಡ ಸಂಹಿತೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಜನರ ಜೀವಕ್ಕೆ ಹಾಗೂ ಆಸ್ತಿಪಾಸ್ತಿಗೆ ಯಾವ ಅಪಾಯವೂ ಎದುರಾಗದಂತೆ ಸರ್ಕಾರ ಕಾಳಜಿ ವಹಿಸಬೇಕು

ರಾಮೇಶ್ವರಂ ಕೆಫೆಯಲ್ಲಿ ನಡೆದ ಸ್ಫೋಟಕ್ಕೂ ಮಂಗಳೂರಿನಲ್ಲಿ 2022ರಲ್ಲಿ ನಡೆದ ಕುಕ್ಕರ್ ಬಾಂಬ್ ಸ್ಫೋಟಕ್ಕೂ ನಂಟು ಇರಬಹುದು ಎಂದು ಪೊಲೀಸರು ಹೇಳಿದ್ದಾರೆ. ಏಕೆಂದರೆ ಎರಡೂ ಪ್ರಕರಣಗಳಲ್ಲಿ ಬಳಕೆಯಾದ ಸಾಧನಗಳಲ್ಲಿ ಸಾಮ್ಯತೆ ಇದೆ ಎಂದು ಅವರು ಹೇಳಿದ್ದಾರೆ. 2022ರಲ್ಲಿ ಮಂಗಳೂರಿನಲ್ಲಿ ಆಟೊರಿಕ್ಷಾದಲ್ಲಿ ಕುಕ್ಕರ್ ಬಾಂಬ್ ಆಕಸ್ಮಿಕವಾಗಿ ಸ್ಫೋಟಿಸಿತ್ತು. ಆ ಪ್ರಕರಣದ ತನಿಖೆ ನಡೆಸಿದ್ದ ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಹಿಂದೆ ಕೊಯಮತ್ತೂರಿನಲ್ಲಿ ನಡೆದ ಸ್ಫೋಟಗಳಿಗೂ ಮಂಗಳೂರಿನ ಸ್ಫೋಟಕ್ಕೂ ನಂಟು ಇದೆ ಎಂದು ಹೇಳಿತ್ತು. ಆರೋಪಿಗಳು ಇಸ್ಲಾಮಿಕ್ ಸ್ಟೇಟ್ ಸಂಘಟನೆಯಿಂದ ಪ್ರೇರಣೆ ಪಡೆದಿರಬಹುದು ಎಂದು ದೋಷಾರೋಪ ಪಟ್ಟಿಯಲ್ಲಿ ಎನ್‌ಐಎ ಹೇಳಿತ್ತು. ಆದರೆ ಬೆಂಗಳೂರಿನ ರಾಮೇಶ್ವರಂ ಕೆಫೆಯಲ್ಲಿ ನಡೆದಿರುವ ಸ್ಫೋಟಕ್ಕೆ ಐಎಸ್ ಜೊತೆಗಿನ ನಂಟು ಇದೆಯೇ ಎಂಬ ಆಯಾಮದಲ್ಲಿಯೂ ತನಿಖೆ ನಡೆಯುತ್ತಿದೆ, ಅದು ತನಿಖೆಯ ಒಂದು ಆಯಾಮ ಮಾತ್ರ ಎಂದು ಪೊಲೀಸರು ಹೇಳಿದ್ದಾರೆ. ಇತರ ಹಲವು ಆಯಾಮಗಳಲ್ಲಿಯೂ ಪೊಲೀಸರು ತನಿಖೆ ಮುಂದುವರಿಸಿದ್ದಾರೆ. ಬೆಂಗಳೂರಿನ ಪ್ರಕರಣದ ಶಂಕಿತನನ್ನು ಇನ್ನೂ ಗುರುತಿಸಲಾಗಿಲ್ಲ. ಕೆಲವರನ್ನು ಪೊಲೀಸರು ವಿಚಾರಣೆಗೆ ಒಳಪಡಿಸಿದ್ದಾರೆ.

ಅಪೂರ್ಣ ಮಾಹಿತಿ ಆಧರಿಸಿ ಈ ಹಂತದಲ್ಲಿ ಯಾವುದೇ ತೀರ್ಮಾನಕ್ಕೆ ಬರುವುದು ಸೂಕ್ತವಾಗುವುದಿಲ್ಲ. ಆ ರೀತಿ ಮಾಡುವುದು ಸಮಸ್ಯೆಗಳನ್ನಷ್ಟೇ ಸೃಷ್ಟಿಸಬಲ್ಲದು, ಜನರ ಮನಸ್ಸಿನಲ್ಲಿ ಭೀತಿಯನ್ನು ಸೃಷ್ಟಿಸಬಲ್ಲದು. ಸಾರ್ವಜನಿಕ ಸ್ಥಳಗಳಲ್ಲಿನ ಭದ್ರತೆಯ ಬಗ್ಗೆ ಜನರು ಸಹಜವಾಗಿಯೇ ಕಳವಳ ಹೊಂದಿರುತ್ತಾರೆ. ಜನರ ಜೀವಕ್ಕೆ ಹಾಗೂ ಆಸ್ತಿಪಾಸ್ತಿಗೆ ಯಾವ ಅಪಾಯವೂ ಎದುರಾಗದಂತೆ ಸರ್ಕಾರ ಕಾಳಜಿ ವಹಿಸಬೇಕು. ಜನರ ಜೀವ ರಕ್ಷಿಸಲು ಪೊಲೀಸರು, ಸರ್ಕಾರದ ಇತರ ಭದ್ರತಾ ಸಂಸ್ಥೆಗಳು ಹೆಚ್ಚು ಜಾಗರೂಕತೆ ವಹಿಸಬೇಕು. ಲೋಕಸಭೆಗೆ ಇನ್ನೇನು ಚುನಾವಣೆ ಘೋಷಣೆ ಆಗಲಿದೆ. ಹೀಗಾಗಿ, ಮುಂಬರುವ ಕೆಲವು ವಾರಗಳು ಬಹಳ ಸೂಕ್ಷ್ಮ ಕೂಡ ಹೌದು. ಇಂತಹ ಘಟನೆಗಳನ್ನು ರಾಜಕೀಯಕ್ಕೆ ಬಳಸಿಕೊಳ್ಳುವ ಹವಣಿಕೆಯನ್ನು ಕೆಲವರು ಇಂತಹ ಸಂದರ್ಭಗಳಲ್ಲಿ ತೋರುತ್ತಾರೆ. ಈ ಬಗೆಯ ಪ್ರವೃತ್ತಿ ಹಾನಿಯನ್ನಲ್ಲದೆ ಬೇರೆ ಏನನ್ನೂ ಉಂಟುಮಾಡುವುದಿಲ್ಲ. ಸ್ಫೋಟ ಪ್ರಕರಣದ ತನಿಖೆಯನ್ನು ಸ್ವತಂತ್ರವಾಗಿ ನಡೆಸುವ ಹೊಣೆಯನ್ನು ಪೊಲೀಸರಿಗೆ ಹಾಗೂ ಅದಕ್ಕೆ ಸಂಬಂಧಿಸಿದ ಸಂಸ್ಥೆಗಳಿಗೆ ಬಿಡಬೇಕು, ಈ ಕೆಲಸದಲ್ಲಿ ರಾಜಕೀಯ ಹಸ್ತಕ್ಷೇಪ ಇರಬಾರದು.

ದಿನದ ಟ್ವೀಟ್

ಮತ ಚಲಾವಣೆಗೆ ಮುನ್ನ...

ನೀವು ಮತ ಚಲಾಯಿಸುವುದಕ್ಕೆ ಎರಡು ದಿನಗಳ ಮೊದಲು 'ಎಕ್ಸ್' ವೇದಿಕೆಯಿಂದ ದೂರ ಇರಿ. ಅತ್ಯುತ್ತಮವಾದವರ ಆಯ್ಕೆ ಕುರಿತು ಯೋಚಿಸುವುದರಲ್ಲಿ ಹೆಚ್ಚಿನ ಸಮಯ ಕಳೆಯಿರಿ ಮತ್ತು ವಿವೇಚನೆಯಿಂದ ಮತ ಚಲಾಯಿಸಿ.

ದೀಪಕ್ ಪ್ರಭು

ಕಿಡಿನುಡಿ

ಈ ಘಟನೆ ಹಿಂದೆ ಯಾರ ಕೈವಾಡವಿದೆ, ಅವರ ಉದ್ದೇಶವೇನು ಎಂಬುದು ತಿಳಿಯಬೇಕಿದೆ. ಮುಂದೆ ಇಂಥ ಕೃತ್ಯ ಮಾಡಲು ಬೇರೆಯವರೂ ಭಯಪಡುವಂತೆ, ಆರೋಪಿಗೆ ಶಿಕ್ಷೆ ವಿಧಿಸಬೇಕಿದೆ. ಮನುಷ್ಯತ್ವ ಹಾಗೂ ಕರುಣೆ ಇಲ್ಲದವರನ್ನು ಯಾರೂ ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ.

(ಬೆಂಗಳೂರಿನ ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣಕ್ಕೆ ಪ್ರತಿಕ್ರಿಯೆ)

ಯು.ಟಿ.ಖಾದರ್, ವಿಧಾನಸಭೆ ಅಧ್ಯಕ್ಷ

25 ವರ್ಷಗಳ ಹಿಂದೆ

ಗುರುವಾರ, 4-3-1999

● **ವರದೇಗೌಡ ರಾಜೀನಾಮೆ**

ಬೆಂಗಳೂರು, ಮಾರ್ಚ್ 3– ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರ ಖಾತೆ ಮರು ಹಂಚಿಕೆ ಕಾರ್ಯಾಚರಣೆಗೆ ಗುರಿಯಾದ ಉದ್ಯೋಗ ಮತ್ತು ತರಬೇತಿ ರಾಜ್ಯ ಸಚಿವ ವರದೇಗೌಡ ಅವರು ಅತೃಪ್ತಗೊಂಡು ಇಂದು ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದರು.

ತಮಗೆ ಸಂಪುಟ ದರ್ಜೆಗೆ ಬಡ್ತಿ ಕೊಡಲಿಲ್ಲ ಎಂದು ಡಿ.ಟಿ.ಜಯಕುಮಾರ್ ಅವರು ತಮ್ಮ ಸಚಿವ ಸ್ಥಾನಕ್ಕೆ ಕೊಟ್ಟ ರಾಜೀನಾಮೆ ಈಗಾಗಲೇ ಅಂಗೀಕೃತವಾಗಿದೆ.

ಸಚಿವ ಸಂಪುಟ ವಿಸ್ತರಣೆ ಹಾಗೂ ಖಾತೆಗಳ ಮರುಹಂಚಿಕೆಯಿಂದ ಅತೃಪ್ತಿಗೊಂಡಿರುವ ಕೆಲವು ಸಚಿವರು ತಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಡುವ ಪ್ರಕ್ರಿಯೆ ಈಗಾಗಲೇ ಪ್ರಾರಂಭವಾಗಿದ್ದು, ಒಂದೆರಡು ದಿನಗಳಲ್ಲಿ ನಿರ್ಣಾಯಕ ಹಂತ ತಲುಪುವ ಸಾಧ್ಯತೆಗಳಿವೆ.

ಕೆ.ವೆಂಕಟೇಶ್, ತಿಪ್ಪೇಸ್ವಾಮಿ, ಬಿ.ಸತ್ಯನಾರಾಯಣ, ಎಚ್.ಡಿ.ರೇವಣ್ಣ ಅವರೂ ಸೇರಿದಂತೆ ಒಟ್ಟು 10 ಮಂದಿ ಸಚಿವರು ರಾಜೀನಾಮೆ ಕೊಡುವ ಸಾಧ್ಯತೆಯಿದೆ ಎಂದು ಹೇಳಲಾಗಿದೆ.

● **ಬಿಹಾರ: ನಕ್ಸಲೀಯರ ಗುಂಡಿಗೆ ನಾಲ್ವರು ರಣವೀರರ ಬಲಿ**

ಜೆಹಾನಾಬಾದ್, ಮಾರ್ಚ್ 3 (ಪಿಟಿಐ)– ಒಂದೇ ಕುಟುಂಬದ ಮೂವರು ಸದಸ್ಯರು ಸೇರಿದಂತೆ ನಾಲ್ವರನ್ನು ಗುಂಡಿಕ್ಕಿ ಕೊಂದಿರುವ ಘಟನೆ ಜಿಲ್ಲೆಯ ಭೀಮ್‌ಪುರ ಗ್ರಾಮದಲ್ಲಿ ಮಂಗಳವಾರ ರಾತ್ರಿ ನಡೆದಿದೆ.

ಶಂಕಿತ 'ಪೀಪಲ್ಸ್ ವಾರ್ ಗ್ರೂಪ್'ಗೆ ಸೇರಿದ ನಕ್ಸಲೀಯರು ಈ ಕೃತ್ಯ ಎಸಗಿದ್ದು, ಸತ್ತವರೆಲ್ಲರೂ ಭೂಮಾಲೀಕರ ರಣವೀರ ಸೇನೆಯ ಬೆಂಬಲಿಗರು ಎಂದು ಪೊಲೀಸರು ತಿಳಿಸಿದ್ದಾರೆ.

50 ವರ್ಷಗಳ ಹಿಂದೆ

ಸೋಮವಾರ, 4-3-1974

● **ಕೊಟ್ಟಿಗೆಯಲ್ಲಿ ತರಗತಿ: ಅವ್ಯವಸ್ಥೆಯ ಆಗರ– ಹೆಸರು ಫಾರ್ಮಸಿ ಕಾಲೇಜು**

ಬೆಂಗಳೂರು, ಮಾರ್ಚ್ 3– ಹಿಂದೆ ಸೀರಂ ಇನ್‌ಸ್ಟಿಟ್ಯೂಟ್‌ಗಾಗಿ ಇದ್ದ ಕೊಟ್ಟಿಗೆಗಳೇ ತರಗತಿಯ ಕೊಠಡಿಗಳು. ಪ್ರಯೋಗಶಾಲೆಯ ಅವ್ಯವಸ್ಥೆ ಹೇಳುವಂತೆಯೇ ಇಲ್ಲ. ವಿದ್ಯಾರ್ಥಿನಿಲಯ ಅಪ್ಪೇಕೆ, ಕ್ಯಾಂಟೀನ್ ಸೌಕರ್ಯವೂ ಇಲ್ಲ. ಸಂಶೋಧನೆ ಮತ್ತಿತರ ಅಗತ್ಯ ವಿಚಾರಗಳಿಗೆ ಅವಕಾಶವೇ ಇಲ್ಲ.

ಇದು ರಾಜಧಾನಿಯಾದ ಬೆಂಗಳೂರಿನಲ್ಲೇ ಸರ್ಕಾರ ನಡೆಸುತ್ತಿರುವ ಫಾರ್ಮಸಿ ಕಾಲೇಜಿನ ವೈಖರಿ. ಪ್ರತಿ ಬಾರಿ ಮಂತ್ರಿಮಂಡಲ ರಚಿತವಾದಾಗಲೂ ಸಂಬಂಧಿಸಿದ ಆರೋಗ್ಯ ಮಂತ್ರಿಗಳು ಭೇಟಿ ಕೊಟ್ಟಾಗಲೆಲ್ಲಾ ಕಾಲೇಜಿನ ಪರಿಸ್ಥಿತಿಯ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸಿ ಭರವಸೆ ಕೊಟ್ಟದ್ದುಂಟು. ಆದರೆ ಅದು ಮಾತಿನ ಭರವಸೆ ತಾನೆ.

ವಿಶ್ವವಿದ್ಯಾನಿಲಯಗಳಲ್ಲಿ ಹೆಚ್ಚು ಅಂಕಗಳನ್ನು ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ ಸಿಕ್ಕುವಷ್ಟು ಸ್ಪರ್ಧಾಯುತವಾದ ಕೋರ್ಸ್. ದೂರದ ಬೆಟ್ಟವನ್ನು ನೋಡಿ ಮರುಳಾಗಿ ಪ್ರವೇಶ ಪಡೆದ ಮೇಲೆ ನಿಜಸ್ಥಿತಿ ನೋಡಿದಾಗ ಭ್ರಮನಿರಸನ.

● **ಮಂಡ್ಯ ಆಸ್ಪತ್ರೆಗೆ ಆಹಾರ ಸಚಿವರ ಅನಿರೀಕ್ಷಿತ ಭೇಟಿ**

ಮಂಡ್ಯ, ಮಾರ್ಚ್ 3– ಆಹಾರ ಸಚಿವ ಕೆ.ಎಚ್.ಪಾಟೀಲರು ಇಂದು ಇಲ್ಲಿನ ಜನರಲ್ ಆಸ್ಪತ್ರೆಗೆ ಅನಿರೀಕ್ಷಿತ ಭೇಟಿ ನೀಡಿ, ನಿನ್ನೆ ವಿಷಪೂರಿತ ತಿಂಡಿ ತಿಂದು ಆಸ್ಪತ್ರೆಗೆ ಸೇರಿದ ಸರ್ಕಾರಿ ಮಹಿಳಾ ಕಾಲೇಜಿನ ವಿದ್ಯಾರ್ಥಿನಿಯರ ಪ್ರಕರಣದ ಬಗ್ಗೆ ವಿಚಾರಿಸಿಕೊಂಡರು.

ಕಾಲೇಜಿನ ಸಮಾರಂಭವೊಂದರಲ್ಲಿ ತಿಂಡಿ, ಪಾನೀಯ ಸೇವಿಸಿದ ಸುಮಾರು 100 ಮಂದಿ ವಿದ್ಯಾರ್ಥಿನಿಯರು ತಲೆಸುತ್ತುವಿಕೆ, ವಾಂತಿ–ಭೇದಿಯಿಂದ ಅಸ್ವಸ್ಥರಾದ ಪ್ರಸಂಗವನ್ನು ಇಲ್ಲಿ ಸ್ಮರಿಸಬಹುದು.

ಇಶಾನ್ ಪ್ರಕರಣ: ರಣಜಿ ರಂಗು ಮಾಸದಿರಲಿ, ನಿಯಮ ಎಲ್ಲರಿಗೂ ಅನ್ವಯವಾಗಲಿ

ಐಪಿಎಲ್ ಮೋಹ: ಬಿಸಿಸಿಐಗೆ ಪಾಠ

ವಿಶ್ಲೇಷಣೆ

ಗಿರೀಶ ದೊಡ್ಡಮನಿ

ಆಗುವುದೆಲ್ಲ ಒಳಿತಿಗೆ ಎನ್ನುವಂತೆ, ಇಶಾನ್ ಕಿಶನ್ ಅವರು ದಕ್ಷಿಣ ಆಫ್ರಿಕಾ ಪ್ರವಾಸದ ಮಧ್ಯದಲ್ಲಿಯೇ ಭಾರತ ತಂಡವನ್ನು ಬಿಟ್ಟು ಬಂದಿದ್ದು ದೇಶದ ಕ್ರಿಕೆಟ್‌ಗೆ ಒಂದು ರೀತಿಯಿಂದ ಒಳ್ಳೆಯದೇ ಆಯಿತು. ವೈಯಕ್ತಿಕ ಕಾರಣಕ್ಕೆ 'ವಿರಾಮ' ಪಡೆಯುವುದಾಗಿ ಇಶಾನ್ ಆಗ ಹೇಳಿದ್ದರು. ಆದರೆ ಆ ಕಾರಣಗಳು ಸುಳ್ಳು. ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಂತಹ ಫ್ರ್ಯಾಂಚೈಸಿ ಲೀಗ್‌ಗಳ ಆಕರ್ಷಣೆಯೇ ಇಂತಹ ಸುಳ್ಳುಗಳ ಸೃಷ್ಟಿಗೆ ಮೂಲವೆಂಬುದು ಈಗ ಜಗಜ್ಜಾಹೀರಾಗಿದೆ.

ಅಷ್ಟೇ ಅಲ್ಲ, ಇವತ್ತಿನ ಕ್ರಿಕೆಟ್‌ನಲ್ಲಿ ಆಟಗಾರರ ಭವಿಷ್ಯ ನಿರ್ಧರಿಸುವ ತಾಕತ್ತು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಕೈಯಲ್ಲಿ ಮಾತ್ರವಿಲ್ಲ. ಮಂಡಳಿಯ ಕೇಂದ್ರ ಗುತ್ತಿಗೆಯಿಂದ ಸಿಗುವುದಕ್ಕಿಂತಲೂ ದುಪ್ಪಟ್ಟು ಮೊತ್ತವನ್ನು ಕೊಟ್ಟು ಆಡಿಸುವ 'ಮಾಲೀಕರು' ಇದ್ದಾರೆ ಎಂಬುದನ್ನು ಜಾರ್ಖಂಡ್ ರಾಜ್ಯದ ಈ 25 ವರ್ಷದ ಎಡಗೈ ಆಟಗಾರ ಇಶಾನ್ ತೋರಿಸಿಕೊಟ್ಟಿದ್ದಾರೆ. ಅದಕ್ಕಾಗಿಯೇ, ರಣಜಿ ಟೂರ್ನಿಯಲ್ಲಿ ಪ್ರತಿನಿಧಿಸುವಂತೆ ಬಿಸಿಸಿಐ ನೀಡಿದ್ದ ಸೂಚನೆಗೂ ಈ ಹುಡುಗ ಕ್ಯಾರೆ ಅನ್ನಲಿಲ್ಲ.

ಇದರಿಂದ ಬಿಸಿಸಿಐಗೆ ಮುಖಭಂಗವಾದಂತೆ ಆಗಿದೆ. ತತ್‌ಕ್ಷಣದ ಕ್ರಮವಾಗಿ, ಐಪಿಎಲ್ ಆಡಬೇಕೆಂದರೆ ರಣಜಿ ಟ್ರೋಫಿ ಟೂರ್ನಿಯಲ್ಲಿ ಆಡಲೇಬೇಕು ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಘೋಷಿಸಿದ್ದಾರೆ. ಇದಕ್ಕೂ ಇಶಾನ್ ಸೊಪ್ಪು ಹಾಕಲಿಲ್ಲ. ಇಲ್ಲಿ ಇಶಾನ್ ಈಗ ಕೇಂದ್ರಬಿಂದು ಆಗಿರಬಹುದು. ಆದರೆ ಈ ಬಗೆಯ ಧೋರಣೆಯನ್ನು ಅನುಸರಿಸುತ್ತಿರುವ ಹಲವು ಆಟಗಾರರು ಇವತ್ತಿನ ಕ್ರಿಕೆಟ್‌ನಲ್ಲಿದ್ದಾರೆ. ಆದರೆ ಅವರಿಗೆ ಕಡಿವಾಣ ಹಾಕುವತ್ತ ಯೋಚಿಸದ ಮಂಡಳಿ, ಈಗ ತನ್ನ ಕೈಯಿಂದ ಹಿಡಿತ ಜಾರುವ ಸೂಚನೆ ಕಾಣುತ್ತಿದ್ದಂತೆ ಎದ್ದು ಕುಳಿತಂತಿದೆ. ಐಪಿಎಲ್‌ನಿಂದ ಬರುವ ಸಾವಿರಾರು ಕೋಟಿ ಹಣವೇ ಸರ್ವಸ್ವ ಎಂಬಂತೆ ವರ್ತಿಸುತ್ತಿದ್ದ ಮಂಡಳಿಗೆ ಈ ಪ್ರಕರಣ ಬಿಸಿ ಮುಟ್ಟಿಸಿರುವುದು ಸುಳ್ಳಲ್ಲ.

ಹಾಗೆ ನೋಡಿದರೆ, ಆಟಗಾರರು ದೇಶಿ ಕ್ರಿಕೆಟ್‌ನಿಂದ ವಿಮುಖರಾಗಿ ಹಣದ ಹೊಳೆ ಹರಿಸುವ ಟಿ20 ಲೀಗ್‌ಗಳತ್ತ ಹೆಚ್ಚು ಆಕರ್ಷಿತರಾಗುತ್ತಿರುವುದು ಹೊಸದೇನಲ್ಲ. ಗಾಯ, ಕಾರ್ಯದೊತ್ತಡ, ಮಾನಸಿಕ ಒತ್ತಡ ಮತ್ತು ಕೌಟುಂಬಿಕ ಕಾರಣಗಳನ್ನು ನೀಡಿ ದೇಶಿ ಕ್ರಿಕೆಟ್‌ನಿಂದ ದೂರ ಉಳಿದು, ಐಪಿಎಲ್ ಬಿಡ್ ಪ್ರಕ್ರಿಯೆ ಅಥವಾ ಟೂರ್ನಿಯ ಹೊತ್ತಿನಲ್ಲಿ ಪ್ರತ್ಯಕ್ಷರಾಗುವ ಪರಿಪಾಟ ಇದೆ. ಆಯ್ಕೆಗಾರರ ಗಮನ ಸೆಳೆಯಲೆಂದೇ ದೇಶಿ ಪಂದ್ಯಗಳಲ್ಲಿ ಆಡುವ ಆಟಗಾರರೂ ಇದ್ದಾರೆ. ಆಗೆಲ್ಲ ಜಾಣಮೌನ ತೋರಿದ್ದ ಮಂಡಳಿಯು ಈಗ ಇಶಾನ್ ಮತ್ತು ಶ್ರೇಯಸ್ ಅಯ್ಯರ್ ಅವರ ಕೇಂದ್ರ ಗುತ್ತಿಗೆಯನ್ನು ಮೊಟಕುಗೊಳಿಸಿದೆ.

ಬ್ಯಾಟರ್ ಅಯ್ಯರ್ ಬೆನ್ನುನೋವಿನ ಕಾರಣ ನೀಡಿ ಟೆಸ್ಟ್ ಸರಣಿಯಿಂದ ಹಿಂದೆ ಸರಿದರು. ಆದರೆ ಎನ್‌ಸಿಎ (ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ) ವೈದ್ಯರು ತಪಾಸಣೆ ನಡೆಸಿ, ಅಯ್ಯರ್ ಪೂರ್ಣ ಫಿಟ್ ಆಗಿದ್ದಾರೆಂದು ಹೇಳಿದರು. ಇದು ಮಂಡಳಿಯ ಕಣ್ಣು ಕೆಂಪಗಾಗಿಸಿತು. ಆದ್ದರಿಂದಲೇ ಅಯ್ಯರ್ ಗುತ್ತಿಗೆ ಕಳೆದುಕೊಂಡರು. ಇದೀಗ ರಣಜಿ ಸೆಮಿಫೈನಲ್‌ನಲ್ಲಿ ಆಡುತ್ತಿರುವ ಮುಂಬೈ ತಂಡದಲ್ಲಿ ಕಣಕ್ಕಿಳಿದಿದ್ದಾರೆ.

ಆದರೆ ಇಂತಹದೇ ಕ್ರಮವನ್ನು ಹಾರ್ದಿಕ್ ಪಾಂಡ್ಯ ಅವರ ವಿರುದ್ಧ ಯಾಕೆ ಜರುಗಿಸಲಿಲ್ಲ ಎಂದು ಕೇಳಿರುವ ಮಾಜಿ ಕ್ರಿಕೆಟಿಗ ಇರ್ಫಾನ್ ಪಠಾಣ್ ಅವರ ಪ್ರಶ್ನೆಯನ್ನೂ ತಳ್ಳಿಹಾಕುವಂತಿಲ್ಲ. ಕಪಿಲ್ ದೇವ್ ಅವರಂತಹ ಆಲ್‌ರೌಂಡರ್ ಎಂದೇ ಬಿಂಬಿತವಾಗಿದ್ದ ಹಾರ್ದಿಕ್ 2018ರಿಂದ ಇಲ್ಲಿಯವರೆಗೆ ಒಂದೂ ಟೆಸ್ಟ್ ಆಡಿಲ್ಲ. ಹೋದ ವರ್ಷ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಬಾಂಗ್ಲಾ ಎದುರಿನ ಪಂದ್ಯದಲ್ಲಿ ಕಾಲು ಉಳುಕಿಸಿಕೊಂಡು ಚಿಕಿತ್ಸೆ ಮತ್ತು ವಿಶ್ರಾಂತಿ ಪಡೆದ ನಂತರ ಅವರು ಕಣಕ್ಕಿಳಿದಿದ್ದು ಈಚೆಗೆ ಆರಂಭವಾದ ಡಿ.ವೈ. ಪಾಟೀಲ ಟ್ರೋಫಿ ಟಿ20 ಟೂರ್ನಿಯಲ್ಲಿ. 2019ರಿಂದ 2023ರ ವಿಶ್ವಕಪ್ ಟೂರ್ನಿಯವರೆಗಿನ ಅವಧಿಯಲ್ಲಿ ಭಾರತ ತಂಡವು 66 ಏಕದಿನ ಪಂದ್ಯಗಳಲ್ಲಿ ಆಡಿದೆ. ಅದರಲ್ಲಿ ಹಾರ್ದಿಕ್ 28ರಲ್ಲಿ ಮಾತ್ರ ಕಾಣಿಸಿಕೊಂಡಿದ್ದರು. ಅಂತರ ರಾಷ್ಟ್ರೀಯ ಪಂದ್ಯಗಳಲ್ಲಿಯೇ ಹೊರಗುಳಿಯುವ ಅವರು ತಮ್ಮ ತವರು ಬರೋಡಾ ತಂಡದಲ್ಲಿ ಕಾಣಿಸಿಕೊಂಡಿದ್ದೇ ಕಡಿಮೆ.

ಆದರೆ ಕಳೆದ ಎರಡು ಐಪಿಎಲ್ ಆವೃತ್ತಿಗಳಲ್ಲಿ ಗುಜರಾತ್ ಟೈಟನ್ಸ್ ತಂಡದ ನಾಯಕತ್ವವನ್ನು ನಿಭಾಯಿಸಿದ್ದರು. ಅವರ ನೇತೃತ್ವದಲ್ಲಿ ತಂಡವು ಎರಡೂ ಸಲ ಫೈನಲ್ ತಲುಪಿತ್ತು. ಆಗ ಅವರು ಹೆಚ್ಚು ಬೌಲಿಂಗ್ ಮಾಡಿರಲಿಲ್ಲ. ಆದರೆ ಯಾವುದೇ ಪಂದ್ಯವನ್ನೂ ತಪ್ಪಿಸಿಕೊಂಡಿರಲಿಲ್ಲ. ಈ ಬಾರಿ ಅವರನ್ನು ಮುಂಬೈ ಇಂಡಿಯನ್ಸ್ ಫ್ರ್ಯಾಂಚೈಸಿಯು ತನ್ನ ತೆಕ್ಕೆಗೆ ಸೆಳೆದುಕೊಂಡು ನಾಯಕತ್ವ ನೀಡಿದೆ. ತಂಡವನ್ನು ಐದು ಬಾರಿ ಟ್ರೋಫಿ ಜಯದತ್ತ ಕೊಂಡೊಯ್ದಿದ್ದ ರೋಹಿತ್ ಅವರನ್ನು ನಾಯಕ ಸ್ಥಾನದಿಂದ ಕೆಳಗಿಳಿಸಲಾಗಿದೆ.

ಈ ಎಲ್ಲ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಐಪಿಎಲ್ ಫ್ರ್ಯಾಂಚೈಸಿಗಳು ದೇಶದ ಕ್ರಿಕೆಟ್ ಮೇಲೆ 'ನಿಯಂತ್ರಣ' ಸಾಧಿಸುತ್ತಿರುವ ಅನುಮಾನ ಕಾಡದೇ ಇರದು. ದಶಕಗಳ ಹಿಂದೆ ರಾಜಮನೆತನಗಳಿಗೆ ಸೀಮಿತವಾಗಿದ್ದ ಕ್ರಿಕೆಟ್ ಈಗ ಶ್ರೀಮಂತ ಉದ್ಯಮಿಗಳ ಹಿಡಿತಕ್ಕೊಳಪಡುತ್ತಿರುವ ಸಂಶಯ ತಲೆ ಎತ್ತುತ್ತಿದೆ. ಆದರೆ ಆಸ್ಟ್ರೇಲಿಯಾ, ಇಂಗ್ಲೆಂಡ್, ವೆಸ್ಟ್ ಇಂಡೀಸ್, ನ್ಯೂಜಿಲೆಂಡ್ ದೇಶಗಳನ್ನೂ ಮೀರಿಸುವಂತೆ ಭಾರತಕ್ಕೆ ಬೆಳೆಯಲು ಸಾಧ್ಯವಾಗಿದ್ದು ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯು ನೀಡಿದ ಕೊಡುಗೆಗಳಿಂದಾಗಿ ಎಂಬುದರಲ್ಲಿ ಅನುಮಾನವೇ ಇಲ್ಲ.

ಒಂಬತ್ತು ದಶಕಗಳ ಇತಿಹಾಸವಿರುವ ಈ ರಣಜಿ ಟೂರ್ನಿಯಿಂದಲೇ ಹಲವಾರು ಖ್ಯಾತನಾಮ ಕ್ರಿಕೆಟಿಗರು ಬೆಳೆದರು. ಭಾರತ ತಂಡವು ವಿದೇಶದಲ್ಲಿಯೂ ಮಿಂಚುವಂತೆ ಮಾಡಿದರು. 1983ರ ವಿಶ್ವಕಪ್ ಜಯಿಸಿದ ತಂಡದಲ್ಲಿದ್ದವರೆಲ್ಲರೂ ದೇಶಿ ಕ್ರಿಕೆಟ್ ತೊಟ್ಟಿಲಲ್ಲಿ ಆಡಿ ಬಂದವರೇ. ಈಚೆಗೆ ಇಂಗ್ಲೆಂಡ್ ವಿರುದ್ಧದ ಸರಣಿಯಲ್ಲಿ ಮಿಂಚಿದ ನವಪ್ರತಿಭೆಗಳಾದ ಸರ್ಫರಾಜ್ ಖಾನ್, ಧ್ರುವ ಜುರೇಲ್, ಆಕಾಶ್ ದೀಪ್, ಯಶಸ್ವಿ ಜೈಸ್ವಾಲ್ ಕೂಡ ದೇಶಿ ಟೂರ್ನಿಗಳಿಂದಲೇ ಬೆಳಕಿಗೆ ಬಂದವರು.

ಅಷ್ಟೇ ಅಲ್ಲ, ಸಚಿನ್ ತೆಂಡೂಲ್ಕರ್, ರಾಹುಲ್ ದ್ರಾವಿಡ್, ವೀರೇಂದ್ರ ಸೆಹ್ವಾಗ್, ಜಹೀರ್ ಖಾನ್, ಯುವರಾಜ್ ಸಿಂಗ್ ಮತ್ತು ಮಹೇಂದ್ರಸಿಂಗ್ ಧೋನಿ ಅವರಂತಹ ಖ್ಯಾತನಾಮರು ಐಪಿಎಲ್‌ನಲ್ಲಿಯೂ ಯಶಸ್ವಿಯಾದರು. ಆದರೆ ತಮ್ಮ ತವರು ರಾಜ್ಯ ತಂಡಗಳ ನಂಟು ಬಿಟ್ಟುಕೊಟ್ಟರಲಿಲ್ಲ. ಧೋನಿ ಅವರಂತೂ ಎಲ್ಲ ಮಾದರಿಗಳ ಪಂದ್ಯಗಳಲ್ಲಿ ಸತತವಾಗಿ ಆಡಿದವರು. ಗಾಯದ ಕಾರಣ ನೀಡಿ ಹೆಚ್ಚು ವಿರಾಮ ಪಡೆದವರಲ್ಲ. ಪ್ರಥಮ ದರ್ಜೆ ಕ್ರಿಕೆಟ್‌ನಿಂದ ನಿವೃತ್ತಿ ಆದ ಮೇಲೂ ವರ್ಷಕ್ಕೊಮ್ಮೆ ಐಪಿಎಲ್‌ನಲ್ಲಿ ಆಡುತ್ತಾರೆ. ಅಷ್ಟೇ ಅಲ್ಲ, ತಮ್ಮ ತಂಡವನ್ನು ಪ್ರಶಸ್ತಿ ಜಯದತ್ತ ಮುನ್ನಡೆಸುತ್ತಾರೆ. ಅವರೆಲ್ಲರ ಫಿಟ್‌ನೆಸ್ ಈಗಿನ ಅತ್ಯಾಧುನಿಕ ತರಬೇತಿ ಪಡೆಯುವ ಆಟಗಾರರಿಗೆ ಯಾಕೆ ಬರುತ್ತಿಲ್ಲ? ವಿರಾಟ್ ಕೊಹ್ಲಿ, ರೋಹಿತ್, ರವೀಂದ್ರ ಜಡೇಜ, ಜಸ್‌ಪ್ರೀತ್ ಬೂಮ್ರಾ ಅವರೂ ದೇಶಿ ಟೂರ್ನಿಗಳಲ್ಲಿ ಆಡಬೇಕು ಎಂಬ ಕೂಗು ಕೂಡ ಈಗ ಕೇಳಿಬರುತ್ತಿದೆ. ಆಟಗಾರ ಎಷ್ಟೇ ದೊಡ್ಡವನಿರಲಿ ಆ ಕ್ರೀಡೆಗಿಂತ ದೊಡ್ಡವನಲ್ಲ ಎಂಬುದು ಆಟಗಾರರಿಗೂ ಮನವರಿಕೆ ಆಗಬೇಕು.

ದೊಡ್ಡ ಮೊತ್ತ ನೀಡುವ ಫ್ರ್ಯಾಂಚೈಸಿಗಳ ಗಮನ ಸೆಳೆಯುವಷ್ಟು ಎತ್ತರಕ್ಕೆ ಬೆಳೆಯಲು ಮಂಡಳಿಯು ವರ್ಷಾನುಗಟ್ಟಲೇ ಬಹಳಷ್ಟು ಸಂಪನ್ಮೂಲ ವಿನಿಯೋಗಿಸಿರುತ್ತದೆ. ಆದ್ದರಿಂದ ದೇಶಿ ಕ್ರಿಕೆಟ್ ಘನತೆ ಉಳಿಸಲು ಮತ್ತು ದೇಶಕ್ಕಾಗಿ ಆಡುವ ಮನೋಭಾವವನ್ನು ಆಟಗಾರರಲ್ಲಿ ಬೆಳೆಸಲು ಮತ್ತಷ್ಟು ಕ್ರಮಗಳಿಗೆ ಮುಂದಾಗಬೇಕಿರುವುದು ಇವತ್ತಿನ ತುರ್ತು. ಐಪಿಎಲ್‌ನಲ್ಲಿ ಆಡಲು ರಣಜಿ ಆಡುವುದು ಕಡ್ಡಾಯ ಎಂದು ಘೋಷಿಸಲಾಗಿದೆ. ಆದರೆ ರಣಜಿ ಸೇರಿದಂತೆ ದೇಶಿ ಟೂರ್ನಿಗಳಲ್ಲಿ ಆಡಿದವರನ್ನೇ ತಮ್ಮ ತಂಡಕ್ಕೆ ಖರೀದಿಸಲು ಆದ್ಯತೆ ನೀಡಬೇಕೆಂದು ಫ್ರ್ಯಾಂಚೈಸಿಗಳಿಗೂ ನಿಯಮ ವಿಧಿಸಬೇಕು. ರಾಷ್ಟ್ರೀಯ ತಂಡದಲ್ಲಿ ಸ್ಥಾನ ಪಡೆಯಲು ದೇಶಿ ಸಾಧನೆಯೇ ಪ್ರಮುಖ ಆಗಬೇಕು. ಐಪಿಎಲ್ ಮಾನದಂಡವಾಗಬಾರದು.

ವಿಪರ್ಯಾಸವೆಂದರೆ, ಮುಂಬರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡುವ ಭಾರತ ತಂಡದ ಕೆಲವು ಸ್ಥಾನಗಳನ್ನು ಇದೇ ತಿಂಗಳು ಆರಂಭವಾಗುವ ಐಪಿಎಲ್ ಪ್ರತಿಭೆಗಳಿಂದ ತುಂಬುವುದಾಗಿ ಮಂಡಳಿಯೇ ಹೇಳಿದೆ. ಇಂತಹ ದ್ವಂದ್ವಗಳು ನಿಲ್ಲದಿದ್ದರೆ, ಮತ್ತಷ್ಟು ಆಟಗಾರರು ಇಶಾನ್ ಅವರಂತೆ ಆಗಬಹುದೇನೋ?

ಚುರುಮುರಿ

ಯೋಜನಾ ರಾಕೆಟ್

● ಸುಮಂಗಲಾ

ಬೆಕ್ಕಣ್ಣ ಗಗನಯಾನಕ್ಕೆ ಆಯ್ಕೆಯಾದವರ ಫೋಟೊ ನೋಡುತ್ತ ಲೊಚಗುಡುತ್ತಿತ್ತು. 'ಮೋದಿಮಾಮಾರೇ ಖುಷಿಯಿಂದ ಗಗನಯಾತ್ರಿಗಳ ಹೆಸರು ಪ್ರಕಟಮಾಡ್ಯಾರೆ... ನೀ ಎದಕ್ಕೆ ಬೇಜಾರಾಗೀಯಲೇ?' ಎಂದೆ.

'ನಮ್ ಮೋದಿಮಾಮ ಲಕ್ಷದ್ವೀಪದಲ್ಲಿ ಸ್ನಾರ್ಕಲಿಂಗ್ ಸೂಟ್ ಹಾಕ್ಕಂಡು ಸಾಹಸ ಮಾಡಿದ್ರು. ಸಮುದ್ರದ ಕೆಳಗೆ ಮುಳುಗಿರೋ ದ್ವಾರಕಾಗೆ ಡೈವ್ ಮಾಡಿಕೊಂಡು ಹೋಗಿ ಪ್ರಾರ್ಥನೆ ಸಲ್ಲಿಸಿದರು. ಹಿಂಗೇ ಗಗನಯಾನದ ಸೂಟ್ ಹಾಕ್ಕಂಡು, ಬಾಹ್ಯಾಕಾಶದಾಗೆ ಪ್ರಾರ್ಥಿಸತಾರೆ ಅಂತ ಕನಸು ಕಾಣುತ್ತಿದ್ದೆ' ಅಂತ ನಿಟ್ಟುಸಿರುಬಿಟ್ಟಿತು.

'ಗಗನಯಾನಕ್ಕೆ ಮುಂಚೆ ರಾಕೆಟ್ ಸಿಮುಲೇಶನ್ ಮಾಡ್ತಾರಲ್ಲ, ಆವಾಗ ಗಗನಯಾನದ ಸೂಟ್ ಹಾಕ್ಕಂಡು, ಅದ್ರಾಗೆ ಕೂತು ಫೋಟೊಗೆ ಪೋಸು ಕೊಡ್ತಾರೇಳು' ಎಂದು ಸಮಾಧಾನಿಸಿದೆ. ಆದರೂ ಕೇಳದೆ ಪ್ರಧಾನಿ ಕಾರ್ಯಾಲಯದ ಜಾಲತಾಣದಲ್ಲಿ ಸುದ್ದಿಗಳನ್ನು ತೆರೆತೆರೆದು ಓದಿತು.

'ಬಿಹಾರದಲ್ಲಿ ₹ 21,400 ಕೋಟಿ, ಪಶ್ಚಿಮ ಬಂಗಾಳದಲ್ಲಿ ₹ 22,200 ಕೋಟಿ ಮೊತ್ತದ ಯೋಜನೆಗಳು, ದೇಶದಾದ್ಯಂತ ₹ 41,000 ಕೋಟಿಯ ರೈಲ್ವೆ ಯೋಜನೆ, ರಾಜಕೋಟದಲ್ಲಿ ₹ 48,100 ಕೋಟಿ, ದ್ವಾರಕಾದಲ್ಲಿ ₹ 4,150 ಕೋಟಿ, ವಾರಾಣಸಿಯಲ್ಲಿ ₹ 13,000 ಕೋಟಿ, ಗುಜರಾತಿನ ಮೆಹ್ಸಾನದಲ್ಲಿ ₹ 13,500 ಕೋಟಿ, ಜಮ್ಮುಕಾಶ್ಮೀರದಲ್ಲಿ ₹ 32,000 ಕೋಟಿಯ ಯೋಜನೆಗಳು... ಇವು ಫೆ. 20ರ ನಂತರ ಮೋದಿಮಾಮ ಲೋಕಾರ್ಪಣೆ ಮಾಡಿದ್ದು, ಇದೆಲ್ಲಾ ಕೂಡಿಸು ನೋಡಾಮು' ಎಂದಿತು.

'₹ 1,95,350 ಕೋಟಿ' ಎಂದೆ ಕಕ್ಕಾಬಿಕ್ಕಿಯಾಗಿ.

'ಗಗನಯಾತ್ರಿಗಳನ್ನು ಈಗ ಕಳಿಸೂದು 400 ಕಿ.ಮೀ. ಮೇಲಿನ ಕಕ್ಷೆಗೆ, ಹೌದಿಲ್ಲೋ... ಒಂದು ಕೋಟಿ ರೂ. ಒಂದು ಕಿ.ಮೀ.ಗೆ ಸಮ ಅಂದ್ಕಂಡು ಈ ಕೋಟಿಗಳನ್ನು ಭೂಮಿಯಿಂದ ಮೇಲೆ ಆಕಾಶಕ್ಕೆ ಜೋಡಿಸು. ನಮ್ ಮೋದಿಮಾಮಾನೇ ಖುದ್ದು 1,95,350 ಕಿ.ಮೀ.ನಷ್ಟು ಮೇಲೆ ಯೋಜನಾ ರಾಕೆಟ್ ಅನ್ನು ಉಡಾಯಿಸಿದ ಹಂಗೆ ಆತಿಲ್ಲೋ' ಎಂದು ಹೆಮ್ಮೆಯಿಂದ ಹೆಹ್ಹೆಗುಟ್ಟಿತು!

ಸಂಗತ

ಹಳ್ಳಿ ಶಾಲೆಗೆ ಅಧಿಕಾರಿಗಳ ದೌಡು!

ಚುನಾವಣೆ ಕೆಲಸಕ್ಕೆ ಬೇರೆ ನೌಕರರನ್ನು ಬಿಟ್ಟು ಶಿಕ್ಷಕರನ್ನೇ ಬಳಸಿಕೊಳ್ಳುವುದೇಕೆ?

● ಪ. ರಾಮಕೃಷ್ಣ ಶಾಸ್ತ್ರಿ

ಎಲ್ಲ ತಾಲ್ಲೂಕುಗಳ ಕಂದಾಯ ಇಲಾಖೆಯ ಅಧಿಕಾರಿಗಳು ವಿದ್ಯುತ್ ಸಂಚಲನವಾದ ಹಾಗೆ ಪ್ರತಿ ಗ್ರಾಮಕ್ಕೂ ದೌಡಾಯಿಸುತ್ತಿದ್ದಾರೆ. ಸರ್ಕಾರಿ ಶಾಲೆಗಳಿಗೆ ಭೇಟಿ ನೀಡುತ್ತಿದ್ದಾರೆ. ಅವರ ಇಷ್ಟೊಂದು ಕಾಳಜಿ, ಕಾತರ ನೋಡಿದರೆ, ಕುಸಿದು ಬೀಳಲು ಸಜ್ಜಾಗಿರುವ ಶಾಲೆಯ ಚಾವಣಿಗೆ ಕಾಯಕಲ್ಪ ನೀಡಿ, ಹೊಸ ಹೆಂಚು ಹೊದಿಸಿ ಲಕಲಕಿಸುವಂತೆ ಮಾಡುತ್ತಾರೆಯೆ, ಕುಡಿಯುವ ನೀರಿಗಾಗಿ ಹೊಸ ತೊಟ್ಟಿ ಕಟ್ಟಿಸುತ್ತಾರೆಯೆ, ಪೀಠೋಪಕರಣಗಳು, ಆಟೋಪಕರಣಗಳನ್ನು ಮಂಜೂರು ಮಾಡಲು ಬಂದಿದ್ದಾರೆಯೆ, ಮಳೆಗಾಲದಲ್ಲಿ ನೀರು ಸೋರಿ ನದಿಯಂತಾಗುವ ಬಿಸಿಯೂಟ ತಯಾರಿಕೆಯ ಕೊಠಡಿ ನವವಧುವಿನಂತೆ ಶೃಂಗಾರವಾಗುತ್ತಿದೆಯೆ, ಏನಿದು ಚೋದ್ಯ ಎಂದು ಎಲ್ಲರ ಮನಸ್ಸಿನಲ್ಲೂ ಪ್ರಶ್ನೆಗಳು ಮೂಡುತ್ತಿರುವುದು ಸಹಜ.

'ಮದುವೆ ನಿಶ್ಚಯವಾಗಿಲ್ಲ, ಅದರ ಮೊದಲು ಕಲ್ಯಾಣ ಮಂಟಪ ಹುಡುಕಲು ಹೊರಟರು' ಎಂಬ ಗಾದೆಯಂತೆ, ತಾಲ್ಲೂಕುಗಳ ಅಧಿಕಾರಿಗಳು ಶಾಲೆಗಳ ಸ್ಥಿತಿಗತಿಯನ್ನು ಸುಧಾರಿಸಿ ಅವುಗಳಿಗೆ ಕಾಯಕಲ್ಪ ನೀಡಲು ಹೀಗೆ ಗುಂಪು ಕಟ್ಟಿಕೊಂಡು ಹೊರಟಿಲ್ಲ. ಶಾಲೆಗಳ ಪರಿಸ್ಥಿತಿ ಶೋಚನೀಯವಾಗಿದೆ, ಪಾಠ ಪ್ರವಚನಗಳಿಗೆ ತೊಂದರೆಯಾಗುತ್ತಿದೆ, ಶಾಲೆಯ ಗೋಡೆ ಕುಸಿದು ವಿದ್ಯಾರ್ಥಿಗಳಿಗೆ ತೊಂದರೆಯಾದರೆ ನಮ್ಮನ್ನು ಹೊಣೆ ಮಾಡುತ್ತಾರೆ ಎಂದು ಅಧ್ಯಾಪಕರು ಎಷ್ಟೇ ಬೇಡಿಕೊಂಡರೂ ಅದರತ್ತ ತಲೆಯೆತ್ತಿಯೂ ನೋಡದೆ ಜಾಣಗಿವುಡು ಪ್ರದರ್ಶಿಸಿದ ಅಧಿಕಾರಿಗಳಿಗೆ, ಇದ್ದಕ್ಕಿದ್ದಂತೆ ಯಾಕೆ ಶಾಲೆಗಳನ್ನು ವೀಕ್ಷಿಸಲು ಮನಸ್ಸಾಯಿತು ಎಂಬ ಪ್ರಶ್ನೆ ಮೂಡುತ್ತದೆ.

ಲೋಕಸಭಾ ಚುನಾವಣೆಗೆ ಮುಹೂರ್ತ ಇಟ್ಟಿಲ್ಲ. ಆದರೂ ಕಂದಾಯ ಇಲಾಖೆಯ ಉದ್ಯೋಗಿಗಳು ಪೂರ್ವಭಾವಿಯಾಗಿ ಶಾಲೆಗಳಿಗೆ ಭೇಟಿ ನೀಡುತ್ತಿರುವುದು, ಮತದಾನಕ್ಕೆ ಆ ಶಾಲೆ ಸಜ್ಜಾಗಿದೆಯೇ ಎಂದು ನೋಡುವುದಕ್ಕಷ್ಟೇ. ಶಿಸ್ತಿನ ಸಿಪಾಯಿಗಳಂತೆ ಚುನಾವಣಾ ಅಧಿಕಾರಿಗಳಿಗೆ ಈ ಬಗೆಗೆ ವರದಿ ನೀಡುವುದು ಮಾತ್ರ ಅವರಿಗಿರುವ ಹೊಣೆ. ಆಮೇಲೆ ಚುನಾವಣಾ ಪ್ರಕ್ರಿಯೆಯಲ್ಲಿ ಶಿಕ್ಷಕರನ್ನು ತೊಡಗಿಸಿಕೊಳ್ಳುವ ಸಂದರ್ಭದಲ್ಲಿಯೂ ಶಿಕ್ಷಕರ ಅನಾರೋಗ್ಯ, ಅಸಹಾಯಕ ಪರಿಸ್ಥಿತಿಗಳಲ್ಲೂ ರಿಯಾಯಿತಿ ತೋರುವುದಿಲ್ಲ. ಬರದಿದ್ದರೆ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂಬ ಎಚ್ಚರಿಕೆ. ಭದ್ರಾವತಿಯ ಒಬ್ಬ ಶಿಕ್ಷಕರಿಗೆ ಕಾಲಿಗೆ ಕಬ್ಬಿಣ ತಗುಲಿ ಗಾಯವಾಗಿ ಗ್ಯಾಂಗ್ರಿನ್ ಹಂತ ತಲುಪಿದ್ದರೂ ಚುನಾವಣಾ ಪ್ರಕ್ರಿಯೆಯಿಂದ ವಿಮುಕ್ತಿ ನೀಡಲು ಅಧಿಕಾರಿಗಳು ಒಲ್ಲೆ ಎಂದಿದ್ದರು. ಅದರಿಂದ ಅವರು ಅದೇ ಸ್ಥಿತಿಯಲ್ಲಿ ಕೆಲಸ ಮಾಡಿದರು. ಕಡೆಗೆ ಅವರ ಕಾಲನ್ನೇ ಕತ್ತರಿಸಬೇಕಾಗಿ ಬಂದಿತ್ತು.

ಪಾಠಬೋಧನೆ ಮುಗಿಯದಿದ್ದರೂ ಚುನಾವಣೆ ಬರುತ್ತದೆ ಎನ್ನುವಾಗಲೇ ಶಿಕ್ಷಕರು ಪರೀಕ್ಷೆಗಳನ್ನು ಮುಗಿಸಲು ಸಿದ್ಧರಿರಬೇಕು. ಚುನಾವಣೆಯ ಕೆಲಸಕ್ಕೆ ತಪ್ಪಿಸಿಕೊಳ್ಳುವುದೆಂದರೆ, ಅಧಿಕಾರಿಗಳ ದೃಷ್ಟಿಯಲ್ಲಿ ಅತ್ಯಂತ ಗಂಭೀರವಾದ ಅಪರಾಧ ಎಂಬ ಭಾವನೆಯಿದೆ. ಚುನಾವಣೆ ಕೆಲಸಕ್ಕೆ ಯಾಕೆ ಶಿಕ್ಷಕರನ್ನೇ ಬಳಸಿಕೊಳ್ಳುತ್ತಾರೆ? ಜನಗಣತಿ ಬಂದಾಗಲೂ ಅವರು ಪಾಠ ಮಾಡುವುದು ಬಿಟ್ಟು ಮನೆಮನೆ ಅಲೆಯಬೇಕು. ಜಾತಿ ಗಣತಿ, ಕೋಳಿ ಗಣತಿ ಎಲ್ಲದಕ್ಕೂ ಸುಲಭವಾಗಿ ಸಿಗುವ ಸೇವಕರೆಂದರೆ ಶಿಕ್ಷಕರು ಎಂಬ ಭಾವ ಬೆಳೆದುಬಿಟ್ಟಿದೆ. ಕಂದಾಯ ಇಲಾಖೆಯ ನೌಕರರನ್ನು ತಪ್ಪಿಯೂ ಇದಕ್ಕೆ ಬಳಸುವುದಿಲ್ಲ. ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯದರ್ಶಿ ಎಂಬ ಹುದ್ದೆ ಧಾರಾಳವಾಗಿ ಸಾಕಾಗುತ್ತಿದ್ದರೂ ಅಭಿವೃದ್ಧಿ ಅಧಿಕಾರಿ ಎಂಬ ನಿರರ್ಥಕ ಸ್ಥಾನವನ್ನು ಸೃಷ್ಟಿಸಲಾಗಿದೆ. ಇವರಲ್ಲಿ ಒಬ್ಬರನ್ನು ಶಿಕ್ಷಕರ ಬದಲಿಗೆ ಚುನಾವಣಾ ಕೆಲಸಗಳಿಗೆ ಬಳಸಿಕೊಳ್ಳಬಹುದಿತ್ತು.

ಚುನಾವಣೆ ನಡೆಯುವ ಸ್ಥಳಕ್ಕೆ ಹಿಂದಿನ ದಿನವೇ ಸೇರಿಕೊಳ್ಳುವ ಶಿಕ್ಷಕರಿಗೆ ಮಲಗಲು ಜಾಗವಿದೆಯೇ ಊಟ ಸಿಗಬಹುದೇ ಶೌಚಾಲಯವಿದೆಯೇ ಶಿಕ್ಷಕಿಯರಿಗೆ ಸೂಕ್ತ ಭದ್ರತೆ ಇದೆಯೇ ಇದಾವುದನ್ನೂ ಅಧಿಕಾರಿಗಳು ಲೆಕ್ಕ ಹಾಕುವುದಿಲ್ಲ. ಅದಕ್ಕೆ ಬೇಕಾದ ವ್ಯವಸ್ಥೆ ಬಗೆಗೆ ಚಿಂತಿಸುವುದಿಲ್ಲ. ಮತದಾನ ಮಾಡಲು ಬೇಕಾದ ಕೋಣೆಗಳಿವೆಯೇ ಎಂಬುದಷ್ಟೇ ಅವರ ಲೆಕ್ಕಾಚಾರ. ಕನಿಷ್ಠಪಕ್ಷ ಶಿಕ್ಷಕರನ್ನು ಚುನಾವಣಾ ಕೆಲಸಕ್ಕೆ ಯಾವುದೋ ಊರಿಗೆ ಕಳುಹಿಸುವ ಬದಲು, ಅವರಿರುವ ಊರಿನಲ್ಲೇ ನಿಯುಕ್ತಿಗೊಳಿಸಿದರೆ ವಸತಿ, ಊಟದ ಸಮಸ್ಯೆಗಾದರೂ ಉತ್ತರ ಸಿಗುತ್ತಿತ್ತು.

ಪ್ರಜಾಪ್ರಭುತ್ವದ ಹೆಮ್ಮೆಯ ಮುಕುಟವಾಗಿರುವ ಚುನಾವಣೆಯ ಮುಖಾಂತರ ಪ್ರಜೆಯ ಅಧಿಕಾರ ಪ್ರಕಟಣೆಗೆ ಸಿಗುವ ಮುಕ್ತ ಅವಕಾಶದ ಕ್ರಮ ಸ್ವಾಗತಾರ್ಹವೇನೋ ನಿಜ. ಆದರೆ ಅದರ ಏರ್ಪಾಡಿನ ಹಿಂದೆ ಶಿಕ್ಷಕ ವರ್ಗದ ಮೇಲೆ ತಾಲ್ಲೂಕಿನಿಂದ ಆರಂಭಿಸಿ ಜಿಲ್ಲಾಧಿಕಾರಿಗಳ ತನಕ ಪ್ರತಿಯೊಬ್ಬರೂ ನೀಡುವ ಒತ್ತಡ ಮಾತ್ರ ನಿಶ್ಚಿಂತ ಶಿಕ್ಷಣ ವ್ಯವಸ್ಥೆಯ ಮೇಲೆ ದುಷ್ಪರಿಣಾಮ ಬೀರಬಹುದು.

ಚುನಾವಣೆ ಸನ್ನಿಹಿತವಾಗುವ ಹೊತ್ತಿಗಾದರೂ ಶಿಥಿಲವಾದ ಶಾಲಾ ಕಟ್ಟಡಗಳ ದುರಸ್ತಿಗೆ ಚುನಾಯಿತ ಪ್ರತಿನಿಧಿಗಳು ಮುತುವರ್ಜಿ ವಹಿಸುವುದಿಲ್ಲ. ಆದರೆ ಭವಿಷ್ಯದ ಆಡಳಿತಗಾರರನ್ನು ಗದ್ದುಗೆಗೇರಿಸಲು ಶಾಲೆಗಳು ಬೇಕು. ಸರ್ಕಾರಿ ಶಾಲೆಗಳನ್ನು ಅವ್ಯವಸ್ಥೆಯ ಕೂಪದಿಂದ ಮೇಲಕ್ಕೆತ್ತಲು ಮುಂದಾಗದೆ ಖಾಸಗಿ ವ್ಯವಸ್ಥೆಗಳ ಲಾಭಕ್ಕೆ ಪರೋಕ್ಷವಾಗಿ ಸಹಕರಿಸುತ್ತಲೇ ಬಂದಿರುವ ಜನನಾಯಕರ ಖಯಾಲಿಗೆ ಶಿಕ್ಷಕರು, ಶಿಕ್ಷಣ ವ್ಯವಸ್ಥೆ ತಲೆಬಾಗಬೇಕಾಗಿರುವುದು ವಿಷಾದಕರ ಅಲ್ಲವೆ?!

ವಾಚಕರ ವಾಣಿ

ಜಾತಿ ಜನಗಣತಿ ವರದಿ: ಅಪಹಾಸ್ಯ ಸಲ್ಲ

ಕೋಟ್ಯಂತರ ರೂಪಾಯಿ ಸಾರ್ವಜನಿಕ ಹಣ ಖರ್ಚು ಮಾಡಿ, ಸಾವಿರಾರು ಶಿಕ್ಷಕರನ್ನು ಒಳಗೊಂಡು, ವಿವಿಧ ಹಂತದ ಅಧಿಕಾರಿಗಳು ಮತ್ತು ದೇಶದ ಪ್ರತಿಷ್ಠಿತ ಬಿಇಎಲ್ ಸಂಸ್ಥೆಯ ಮೇಲುಸ್ತುವಾರಿಯಲ್ಲಿ ಹಿಂದುಳಿದ ವರ್ಗಗಳ ಶಾಶ್ವತ ಆಯೋಗವು ಜಾತಿ ಜನಗಣತಿ ವರದಿ ಸಿದ್ಧಪಡಿಸಿದೆ. ರಾಜ್ಯದ ಸರ್ವಜನರ ಅಭ್ಯುದಯಕ್ಕಾಗಿ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸ್ಥಿತಿಗತಿಯ ಸಮೀಕ್ಷೆ ನಡೆಸಿ ಸಿದ್ಧಪಡಿಸಿರುವ ವರದಿಯು ಸರ್ಕಾರಕ್ಕೆ ಸಲ್ಲಿಕೆಯಾಗಿರುವುದು ಕೆಲವು ಪಟ್ಟಭದ್ರರಿಗೆ ನುಂಗಲಾರದ ತುತ್ತಾಗಿದೆ.

ಜಾತಿ, ಮತ, ಪಂಥಗಳ ಹೆಸರಿನಲ್ಲಿ ವರದಿಯನ್ನು ಅನುಮಾನಿಸುತ್ತಿರುವುದು ಇಷ್ಟೊಂದು ಶಿಕ್ಷಕರು, ಅಧಿಕಾರಿಗಳು ಹಾಗೂ ಪ್ರತಿಷ್ಠಿತ ಸಂಸ್ಥೆಯೊಂದನ್ನು ಅಪಹಾಸ್ಯ ಮಾಡಿದಂತೆಯೇ ಸರಿ. ವರದಿಯನ್ನು ಸಂಪುಟ ಸಭೆಯಲ್ಲಿ ಚರ್ಚಿಸಿ ಅನುಷ್ಠಾನ ಮಾಡುವ ಮೂಲಕ, ಒಕ್ಕಲಿಗರು– ಲಿಂಗಾಯತರಲ್ಲಿ ಹಿಂದುಳಿದವರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಲ್ಲಿ ಹಿಂದುಳಿದ, ಒಳಪಂಗಡಗಳ ಅಭಿವೃದ್ಧಿಗೆ ಮತ್ತು ಅತಿಹೆಚ್ಚು ಹಿಂದುಳಿದ ವರ್ಗಗಳಿಗೆ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಶೈಕ್ಷಣಿಕ ಸವಲತ್ತುಗಳು ಸಿಗುವಂತೆ ಕಾರ್ಯಯೋಜನೆ ರೂಪಿಸಬೇಕಾಗಿದೆ.

ಎಂ.ಮಂಚಶೆಟ್ಟಿ, ಕದಿಲುವಾಗಿಲು, ಮದ್ದೂರು

ಕನ್ನಡ ಫಲಕ: ವೆಬ್‌ಸೈಟ್ ಬೇಕಾಗಿದೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ (ಬಿಬಿಎಂಪಿ) ಅಂಗಡಿ ಮುಂಗಟ್ಟುಗಳ ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡವನ್ನು ಕಡ್ಡಾಯಗೊಳಿಸಿರುವ ಸರ್ಕಾರ, ಅದರ ಜಾರಿಗೆ ಕ್ರಮ ಕೈಗೊಂಡಿರುವುದು ಸರಿಯಷ್ಟೆ. ಈ ಸಂದರ್ಭದಲ್ಲಿ, ಕೆಲವು ಜಾತಿಸೂಚಕ ಫಲಕಗಳನ್ನು ತೆಗೆದು ಪ್ರಜಾಪ್ರಭುತ್ವದ ಚೌಕಟ್ಟಿಗೆ ಅವುಗಳನ್ನು ತರಬೇಕಾದುದು ಸೂಕ್ತ. ಉದಾಹರಣೆಗೆ, ಕೆಲವು ಹೋಟೆಲ್ ಹಾಗೂ ತಿಂಡಿ ತಿನಿಸುಗಳ ವಾಣಿಜ್ಯ ಮಳಿಗೆಗಳ ಮೇಲೆ ನಿರ್ದಿಷ್ಟ ಜಾತಿಸೂಚಕ ಫಲಕಗಳಿದ್ದು, ಅವುಗಳನ್ನು ಸರಿಪಡಿಸಬೇಕು. ಹಾಗೆಯೇ ಕೆಲವು ಬಡಾವಣೆಗಳ ವಿಳಾಸ ಬರೆಯುವಾಗ ಹೆಸರನ್ನು ಸಂಕ್ಷಿಪ್ತ ಮಾಡಿ ಬರೆಯಲಾಗುತ್ತಿದೆ. ಉದಾಹರಣೆಗೆ, ಕೆ.ಜಿ.ಹಳ್ಳಿ, ಡಿ.ಜೆ.ಹಳ್ಳಿ... ಇಂತಹ ಸಂಕ್ಷಿಪ್ತಗಳಿಂದ, ಮುಂದಿನ ಪೀಳಿಗೆಯ ಜನರು ಅವುಗಳ ಮೂಲ ಸ್ವರೂಪವನ್ನೇ ಮರೆತರೆ ಆಶ್ಚರ್ಯಪಡಬೇಕಾಗಿಲ್ಲ. ಅವನ್ನು ಸಂಕ್ಷಿಪ್ತ ಮಾಡದೆ ಪೂರ್ತಿ ಅರ್ಥ ಬರುವಂತೆ ಕಾಡುಗೊಂಡನಹಳ್ಳಿ, ದೇವರಜೀವನಹಳ್ಳಿ ಎಂದು ಸ್ಪಷ್ಟವಾಗಿ ಬರೆಸಬೇಕು.

ಇನ್ನು ಕೆಲವು ಕಡೆಗಳಲ್ಲಿ ಅರ್ಥ ವ್ಯತ್ಯಾಸ ಆಗಿರುವ ನಾಮಫಲಕಗಳಿವೆ. ಕೆಲವು ಫಲಕಗಳಲ್ಲಿ 'ಳ'ಕಾರ ಬರುವ ಕಡೆಗಳಲ್ಲಿ 'ಲ'ಕಾರ ಬಂದು ಶಬ್ದಗಳು ಅಪಾರ್ಥಗಳಾಗುತ್ತಿವೆ. ಉದಾಹರಣೆಗೆ, ಕಲಾಮಾಧ್ಯಮ ಹೋಗಿ, ಕಳಾ ಮಾಧ್ಯಮ ಆಗಿದೆ. ಸರ್ಕಾರ 'ಕನ್ನಡ ಫಲಕ ಕಡ್ಡಾಯ'ದ ಹೆಸರಿನಲ್ಲಿ ಒಂದು ವೆಬ್‌ಸೈಟ್ ತೆರೆದು, ಅದರಲ್ಲಿ ರಾಜ್ಯದ ಯಾರೇ ಆಗಲಿ ನಾಮಫಲಕ ಹಾಕುವ ಮೊದಲು, ಸರ್ಕಾರದ ವೆಬ್‌ಸೈಟ್‌ನಲ್ಲಿ ಬರೆದುಕೊಳ್ಳುವಂತೆ ತಿಳಿಸಬೇಕು. ಆಗ ಅದರಲ್ಲಿ ಇರಬಹುದಾದ ಕಾಗುಣಿತದ ತಪ್ಪನ್ನು ಸರಿಪಡಿಸಿ, ಅದೇ ವೆಬ್‌ನಲ್ಲಿ ಮರು ಪ್ರಕಟಿಸಿದಾಗ, ಸಂಬಂಧಿಸಿದವರು ಡೌನ್‌ಲೋಡ್ ಮಾಡಿಕೊಂಡು ನಾಮಫಲಕಗಳನ್ನು ಸರಿಪಡಿಸಿಕೊಳ್ಳಲು ಸಾಧ್ಯವಾಗುತ್ತದೆ. ಇದರಿಂದ ತಪ್ಪಾಗಿ ಬರೆದ ಫಲಕಗಳನ್ನು ಬೀದಿ ಬೀದಿಗಳಿಗೆ ಹೋಗಿ ಸರಿಪಡಿಸುವ ವ್ಯರ್ಥ ಕಸರತ್ತನ್ನು ತಪ್ಪಿಸಬಹುದು.

ಈ ಕೆಲಸಕ್ಕಾಗಿ ಒಂದು ಸಮಿತಿ ರಚಿಸಬೇಕು, ಭಾಷಾತಜ್ಞರ ನೆರವು ಪಡೆಯಬಹುದು. ಹೀಗೆ ಮಾಡುವುದರಿಂದ, ಸಾರ್ವಜನಿಕವಾಗಿ ಪ್ರದರ್ಶನ ಆಗುವ ನಾಮಫಲಕಗಳಲ್ಲಿ ತಪ್ಪು ನುಸುಳದಂತೆ ಎಚ್ಚರ ವಹಿಸಲು ಸಾಧ್ಯವಾಗುತ್ತದೆ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಯುಪಿಎಸ್‌ಸಿ ಪರೀಕ್ಷೆ: ತಪ್ಪು ತಿಳಿವಳಿಕೆ ಬೇಡ

ಇತ್ತೀಚೆಗೆ ನಿಧನರಾದ ನಿವೃತ್ತ ಐಎಎಸ್ ಅಧಿಕಾರಿ ಕೆ.ಶಿವರಾಮ್ ಅವರು ಕನ್ನಡದಲ್ಲಿ ಮೊದಲ ಬಾರಿಗೆ ಯುಪಿಎಸ್‌ಸಿ ಪರೀಕ್ಷೆ ಪಾಸು ಮಾಡಿದ್ದರು ಎಂದು ಬಹುತೇಕರು ಪ್ರಸ್ತುತ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಇದು ಅರ್ಧಸತ್ಯ ಮಾತ್ರ. ಶಿವರಾಮ್ ಅವರು ಯುಪಿಎಸ್‌ಸಿ ಮುಖ್ಯ ಪರೀಕ್ಷೆಯನ್ನು ಕನ್ನಡದಲ್ಲಿ ಬರೆದಿದ್ದರು ಅಷ್ಟೆ. ಯುಪಿಎಸ್‌ಸಿ ಪೂರ್ವಭಾವಿ ಪರೀಕ್ಷೆಯು ಶಿವರಾಮ್ ಅವರು ಈ ಪರೀಕ್ಷೆಯನ್ನು ಪಾಸು ಮಾಡುವ ಕಾಲಕ್ಕೂ ಹಿಂದಿ, ಇಂಗ್ಲಿಷ್ ಮಾಧ್ಯಮಗಳಲ್ಲಷ್ಟೇ ಇತ್ತು. ಈಗಲೂ ಅದೇ ಸ್ಥಿತಿ ಮುಂದುವರಿದಿದೆ. ಅವರು ಇಂಗ್ಲಿಷ್‌ನಲ್ಲಿ ಪೂರ್ವಭಾವಿ ಪರೀಕ್ಷೆಯನ್ನು ಎದುರಿಸಿದ್ದರು.

ಅಂದಹಾಗೆ, ಬರುವ ಮೇ 26ರಂದು ಯುಪಿಎಸ್‌ಸಿ (ಐಎಎಸ್, ಐಪಿಎಸ್...) ಪೂರ್ವಭಾವಿ ಪರೀಕ್ಷೆ ಕರ್ನಾಟಕವೂ ಸೇರಿದಂತೆ ಒಕ್ಕೂಟ ಭಾರತದಾದ್ಯಂತ ನಡೆಯುತ್ತಿದೆ. ಅದು ಬರೀ ಹಿಂದಿ, ಇಂಗ್ಲಿಷ್ ಮಾಧ್ಯಮಗಳಲ್ಲಿ ಮಾತ್ರ! ಇದರ ವಿರುದ್ಧ ಕನ್ನಡಿಗರು ಹಲವು ವರ್ಷಗಳಿಂದಲೂ ಹೋರಾಟ ಮಾಡುತ್ತಲೇ ಬಂದಿದ್ದಾರೆ. ಫಲಿತಾಂಶ ಶೂನ್ಯ.

ಗಿರೀಶ್ ಮತ್ತೇರ, ಯರಗಟ್ಟಿಹಳ್ಳಿ, ಚನ್ನಗಿರಿ

ಎಂಆರ್‌ಪಿ ನೆಪದಲ್ಲಿ ಸುಲಿಗೆ

ಕಿರಾಣಿ ಅಂಗಡಿಗಳಲ್ಲಿ ಕಂಪನಿಗಳಿಗೆ ಸೇರಿದ ದಿನಸಿ ಪ್ಯಾಕೆಟ್‌ಗಳ ಮೇಲೆ ಎಂಆರ್‌ಪಿ (ಗರಿಷ್ಠ ಚಿಲ್ಲರೆ ದರ) ನಮೂದಿಸಲ್ಪಟ್ಟಿರುತ್ತದಷ್ಟೆ. ಇದನ್ನೇ ಗುರಾಣಿಯಾಗಿಸಿಕೊಂಡು ಹೆಚ್ಚಿನ ವ್ಯಾಪಾರಿಗಳು ದುಪ್ಪಟ್ಟು ಲಾಭ ಗಿಟ್ಟಿಸುವ ಪರಿ ಖೇದ ತರುತ್ತದೆ. ಉದಾಹರಣೆಗೆ, ಚಹಾಪುಡಿ, ಅಡುಗೆ ಎಣ್ಣೆಯಂತಹ ವಸ್ತುಗಳ ಪ್ಯಾಕೆಟ್ ಮೇಲೆ ತಯಾರಿಕಾ ಕಂಪನಿಗಳು ಗರಿಷ್ಠ ಬೆಲೆ ನಮೂದಿಸಿರುತ್ತವೆ. ಉದಾಹರಣೆಗೆ, ಒಂದು ವಸ್ತುವಿಗೆ ಗರಿಷ್ಠ ಬೆಲೆ ₹ 140 ಎಂದು ನಮೂದಿಸಿದ್ದರೆ, ಅದು ಭಾರತದ ಕೊನೆಯ ಹಳ್ಳಿಯವರೆಗೂ ಅದೇ ಬೆಲೆಗೆ ಮಾರಲ್ಪಡಬೇಕು ಎಂದರ್ಥ. ಆದರೆ, ಬೆಂಗಳೂರಿನಲ್ಲೇ ಪ್ಯಾಕ್ ಮಾಡಿರುವಂತಹ ಮಾಲು, ಬೆಂಗಳೂರಿನಲ್ಲೇ ₹ 140ಕ್ಕೆ ಮಾರಾಟವಾದರೆ? ಸ್ಥಳೀಯವಾಗಿ ₹ 70-80ಕ್ಕೆ ಖರೀದಿಯಾದ ವಸ್ತುಗಳನ್ನು ₹ 140ಕ್ಕೆ ಮಾರುವ ಅನ್ಯಾಯ ಅವ್ಯಾಹತವಾಗಿ ನಡೆದಿದೆ.

ಇದಕ್ಕೆ ಸೂಕ್ತ ಪರಿಹಾರ ಎಂದರೆ, ಪ್ರತಿ ವಸ್ತುವಿನ ಪ್ಯಾಕೆಟ್ ಮೇಲೆ, 'ಇಂಥಿಂಥ ರಾಜ್ಯಗಳಲ್ಲಿ ಇಷ್ಟಿಷ್ಟೇ ಬೆಲೆ' ಎಂದು ಕಡ್ಡಾಯವಾಗಿ ಮುದ್ರಿಸಬೇಕು. ಆಗ ಈ ಪಿಡುಗಿಗೆ ಕಡಿವಾಣ ಹಾಕಬಹುದು. ಈ ಪ್ರಕ್ರಿಯೆಯನ್ನು ಉದ್ದಿಮೆಗಳು ರೂಢಿಗೆ ತಂದಲ್ಲಿ, ತಮ್ಮ ಉತ್ಪನ್ನಗಳು ಯೋಗ್ಯ ಬೆಲೆಗೆ ಲಭ್ಯವಾಗಿ, ಮಾರಾಟ ಇನ್ನೂ ಹೆಚ್ಚಾಗುವ ಸಾಧ್ಯತೆ ಇರುತ್ತದೆ.

ರಾಮಚಂದ್ರ ಎಸ್. ಕುಲಕರ್ಣಿ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸಂದೇಶ್‌ಖಾಲಿ ಜನ–ರಾಜಕೀಯ ಸಂಘರ್ಷ

ಷಹಜಹಾನ್ ಶೇಖ್‌ನ ಬಂಧನವನ್ನು ಸಂಭ್ರಮಿಸಿದ ಸಂದೇಶ್‌ಖಾಲಿ ಮಹಿಳೆಯರು

ಪ್ರಜಾವಾಣಿ ವಾರ್ತೆ

ಅದೊಂದು ದೊಡ್ಡಗ್ರಾಮ. ಪಶ್ಚಿಮ ಬಂಗಾಳದ ರಾಜಧಾನಿ ಕೋಲ್ಕತ್ತಾದಿಂದ ಕೇವಲ 74 ಕಿ.ಮೀ. ದೂರದಲ್ಲಿದೆ. ಆದರೆ ಅಲ್ಲಿಗೆ ತಲುಪಲು ಮೂರು ನದಿಗಳನ್ನು ದಾಟಬೇಕು. ಅದೊಂದು ರೀತಿಯಲ್ಲಿ ದ್ವೀಪವೂ ಹೌದು. ಎರಡು ನದಿಗಳ ನಡುವೆ ವಿಶಾಲವಾಗಿ ಹರಡಿರುವ ದೊಡ್ಡ ದ್ವೀಪ. ಆ ದ್ವೀಪದಿಂದ ಪಶ್ಚಿಮ ದಿಕ್ಕಿಗೆ ಮತ್ತೆರಡು ನದಿಗಳನ್ನು ದಾಟಿದರೆ ಬಾಂಗ್ಲಾದೇಶದ ಗಡಿಯೊಳಗೆ ಇರಬಹುದು. ಮೀನು ಸಾಕಾಣಿಕೆಯೇ ಬಹುಮುಖ್ಯ ಕಸುಬಾಗಿರುವ ಈ ಗ್ರಾಮ ಇದೇ ಮೊದಲ ಬಾರಿಗೆ ದೇಶದಾದ್ಯಂತ ಸುದ್ದಿಯಲ್ಲಿದೆ, ಆದರೆ ಒಳ್ಳೆಯ ಕಾರಣಕ್ಕಾಗಿ ಅಲ್ಲ. ಅದೇ ಸಂದೇಶ್‌ಖಾಲಿ.

ಸಂದೇಶ್‌ಖಾಲಿಗೆ ಸಂಬಂಧಿಸಿದಂತೆ ಅಲ್ಲಿಗೇ ಭೇಟಿ ನೀಡಿ ಸುದ್ದಿಸಂಸ್ಥೆಗಳು ಮಾಡುತ್ತಿರುವ ವರದಿಗಳು ಯಾವುದೇ ಸಿನಿಮಾ ಕತೆಗಿಂತ ಕಡಿಮೆಯೇನಿಲ್ಲ. ಸಂದೇಶ್‌ಖಾಲಿಗೆ ಭೇಟಿ ನೀಡುವಾಗಲೇ ಅಲ್ಲಿನ ಗೂಂಡಾಗಳ ಸೇನೆ ಸುತ್ತುವರಿಯುತ್ತದೆ, ಹೆಣ್ಣುಮಕ್ಕಳು ಸುರಕ್ಷಿತವಾಗಿ ಓಡಾಡುವಂತಿಲ್ಲ, ಅಲ್ಲಿ ಕ್ಯಾಮೆರಾ ಬಳಸಿ ಫೋಟೊ ತೆಗೆಯುವಂತಿಲ್ಲ... ಸಂದೇಶ್‌ಖಾಲಿಗೆ ಸಂಬಂಧಿಸಿದಂತೆ ಕೆಲವು ಸುದ್ದಿಸಂಸ್ಥೆಗಳು ಮಾಡಿದ ವಿಶೇಷ ವರದಿಗಳ ಕೆಲವು ಮಾದರಿಗಳು ಇವು. ಈ ವರದಿಗಳಲ್ಲಿ ಇರುವ ಅಂಶಗಳು ಅತಿಶಯೋಕ್ತಿ ಅಲ್ಲ ಎನ್ನುತ್ತದೆ ರಾಷ್ಟ್ರೀಯ ಮಹಿಳಾ ಆಯೋಗ.

ತೀರ ಇತ್ತೀಚಿನವರೆಗೆ ಸುದ್ದಿಯಲ್ಲೇ ಇರದಿದ್ದ ಸಂದೇಶ್‌ಖಾಲಿ ಸದ್ದು ಮಾಡಿದ್ದು ಇದೇ ಜನವರಿಯಲ್ಲಿ. ಅಲ್ಲಿನ ಟಿಎಂಸಿ ನಾಯಕ ಷಹಜಹಾನ್ ಶೇಖ್‌ನ ಮನೆಯಲ್ಲಿ ಶೋಧಕಾರ್ಯ ನಡೆಸಲು ಜಾರಿ ನಿರ್ದೇಶನಾಲಯದ ಅಧಿಕಾರಿಗಳ ತಂಡವು ಇದೇ ಜನವರಿಯಲ್ಲಿ ಅಲ್ಲಿಗೆ ಭೇಟಿ ನೀಡಿತ್ತು. ಅಧಿಕಾರಿಗಳ ವಾಹನಗಳನ್ನು ತಡೆದಿದ್ದ ಅಲ್ಲಿನ ಜನರ ಗುಂಪು, ಕಲ್ಲುತೂರಾಟವನ್ನೂ ನಡೆಸಿತ್ತು. ಪಶ್ಚಿಮ ಬಂಗಾಳದಲ್ಲಿ ಗೂಂಡಾ ಆಡಳಿತವಿದೆ. ಅದಕ್ಕೆ ಸಂದೇಶ್‌ಖಾಲಿಯ ಈ ದಾಳಿಯೇ ಜ್ವಲಂತ ಉದಾಹರಣೆ ಎಂದು ಅಲ್ಲಿನ ವಿರೋಧ ಪಕ್ಷ ಬಿಜೆಪಿ ಆರೋಪಿಸಿತ್ತು. ಜಾರಿ ನಿರ್ದೇಶನಾಲಯದ ಕ್ರಮ ರಾಜಕೀಯ ಪ್ರೇರಿತವಾದುದು ಎಂದು ಆಡಳಿತಾರೂಢ ಟಿಎಂಸಿ ಸಹ ಆರೋಪಿಸಿತ್ತು. ಎಲ್ಲಾ ರಾಜಕೀಯ ಆರೋಪ–ಪ್ರತ್ಯಾರೋಪಗಳಂತೆ ಕೆಲವೇ ದಿನಗಳಲ್ಲಿ ಈ ಘಟನೆಯೂ ಮರೆಯಾಗುವುದರಲ್ಲಿ ಇತ್ತು. ಅಷ್ಟರಲ್ಲೇ ಸಂದೇಶ್‌ಖಾಲಿಯಲ್ಲಿ ದಲಿತ ಸಮುದಾಯದ ಮಹಿಳೆ ಮತ್ತು ಬಾಲಕಿಯ ಮೇಲೆ ಸಾಮೂಹಿಕ ಅತ್ಯಾಚಾರ ಹಾಗೂ ಹಲ್ಲೆ ನಡೆದಿದೆ ಎಂಬ ಆರೋಪ ಕೇಳಿಬಂತು.

ಆ ಅತ್ಯಾಚಾರದ ಸಂಬಂಧ ಪೊಲೀಸ್ ಠಾಣೆಯಲ್ಲಿ ದೂರೂ ದಾಖಲಾಯಿತು, ಆದರೆ ಎಫ್‌ಐಆರ್ ದಾಖಲಾಗಲಿಲ್ಲ. ಆಗ ಅಲ್ಲಿನ ಮಹಿಳೆಯರು ಪೊಲೀಸರ ನಿಷ್ಕ್ರಿಯತೆಯ ವಿರುದ್ಧ ಬೀದಿಗಿಳಿದರು. ಮಹಿಳೆಯರ ಆ ಪ್ರತಿಭಟನೆಯನ್ನು ಪೊಲೀಸರು ನಿಯಂತ್ರಿಸಲು ಯತ್ನಿಸಿದಂತೆಲ್ಲಾ, ಅದು ತೀವ್ರತೆ ಪಡೆಯಿತು. ಆ ಮಹಿಳೆಯರು ದೂರು ನೀಡಿದ್ದು, ಅಲ್ಲಿನ ಟಿಎಂಸಿ ನಾಯಕ ಷಹಜಹಾನ್ ಶೇಖ್ ವಿರುದ್ಧ. ಷಹಜಹಾನ್ ಮತ್ತು ಆತನ ಸಹಚರರಾದ ಶಿವಪ್ರಸಾದ್ ಹಜ್ರಾ ಮತ್ತು ಉತ್ತಮ್ ಸರ್ದಾರ್ ವಿರುದ್ಧ ಆ ಮಹಿಳೆಯರು ಲೈಂಗಿಕ ದೌರ್ಜನ್ಯ, ಅತ್ಯಾಚಾರ, ಸಾಮೂಹಿಕ ಅತ್ಯಾಚಾರ, ಭೂಕಬಳಿಕೆ, ಕೊಲೆ ಬೆದರಿಕೆಯ ಆರೋಪಗಳನ್ನು ಮಾಡಿದ್ದರು.

ಮೇಲ್ನೋಟಕ್ಕೆ ಇದು ರಾಜಕೀಯ ಚಳವಳಿ ಎನಿಸಿದರೂ, ಅಲ್ಲಿನ ತಳ ಸಮುದಾಯದ ಜನರೇ ಬೀದಿಗಿಳಿದು ಹೋರಾಡುತ್ತಿರುವುದು ಬೇರೆಯದೇ ಕತೆಯನ್ನು ಹೇಳುತ್ತಿದೆ.

ಮೊದಲು ಪಡಿತರ ಹಗರಣದಲ್ಲಿ ಆರೋಪಿಯಾಗಿದ್ದ ಷಹಜಹಾನ್ ವಿರುದ್ಧ ಈಗ ಅತ್ಯಾಚಾರದ ಆರೋಪಗಳೂ ಇವೆ. ದೂರು ನೀಡುವವರಿಗೆ ಮತ್ತು ಆತನ ವಿರುದ್ಧ ಬೀದಿಗೆ ಇಳಿದವರ ಬೆಂಬಲಕ್ಕೆ ಬಿಜೆಪಿ ಮತ್ತು ಸಿಪಿಎಂ ನಿಂತವು. ಪ್ರತಿಭಟನೆ ತೀವ್ರವಾಯಿತು. ಕೆಲವೇ ದಿನಗಳಲ್ಲಿ ಷಹಜಹಾನ್ ಮತ್ತು ಆತನ ಸಹಚರರ ವಿರುದ್ಧ ಇಂತಹ 70 ದೂರುಗಳು ದಾಖಲಾದವು. ಆದರೆ ಆತನ ವಿರುದ್ಧ ಎಫ್‌ಐಆರ್ ಮಾತ್ರ ದಾಖಲಾಗಲಿಲ್ಲ. ಬಿಜೆಪಿಯ ರಾಷ್ಟ್ರೀಯ ನಾಯಕರು, ಪಶ್ಚಿಮ ಬಂಗಾಳದ ಬಿಜೆಪಿ ನಾಯಕರು, ಬಿಜೆಪಿಯ ಸತ್ಯಶೋಧನಾ ಸಮಿತಿ, ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯರು–ಅಧ್ಯಕ್ಷರು ಸಂದೇಶ್‌ಖಾಲಿಗೆ ಭೇಟಿ ನೀಡಿದರು. ಅವರನ್ನು ಪೊಲೀಸರು ತಡೆದದ್ದು, ಆ ವಿಚಾರದ ಬಗ್ಗೆ ರಾಷ್ಟ್ರಮಟ್ಟದಲ್ಲಿ ಗಮನ ಸೆಳೆಯುವಂತಾಯಿತು. ಸ್ವಯಂಪ್ರೇರಿತವಾಗಿ ಮಧ್ಯಪ್ರವೇಶಿಸಿದ ಕಲ್ಕತ್ತಾ ಹೈಕೋರ್ಟ್, ಏಳು ದಿನಗಳ ಒಳಗೆ ಷಹಜಹಾನ್‌ನನ್ನು ಬಂಧಿಸುವಂತೆ ರಾಜ್ಯ ಸರ್ಕಾರಕ್ಕೆ ತಾಕೀತು ಮಾಡಿತು. ಅದರಂತೆ ಷಹಜಹಾನ್‌ನ ವಿರುದ್ಧ ಎಫ್‌ಐಆರ್ ದಾಖಲಿಸಿ, ಫೆಬ್ರುವರಿ ಕೊನೆಯ ವಾರದ ವೇಳೆಗೆ ಆತನನ್ನು ಬಂಧಿಸಲಾಯಿತು.

ಆದರೆ ಆತನ ವಿರುದ್ಧದ ಸಿಟ್ಟು ಮಾತ್ರ ಸಂದೇಶ್‌ಖಾಲಿಯ ಜನರಲ್ಲಿ ಕಡಿಮೆಯಾಗಿಲ್ಲ. ಷಹಜಹಾನ್ ಮತ್ತು ಆತನ ಸಹಚರರ ಜಮೀನುಗಳು, ಮೀನುಸಾಕಾಣಿಕಾ ಹೊಂಡಗಳು, ಮಾರುಕಟ್ಟೆ ಮಳಿಗೆಗಳಿಗೆ ಜನರು ಬೆಂಕಿ ಹಚ್ಚುತ್ತಿದ್ದಾರೆ. ಈ ಎಲ್ಲಾ ಜಾಗಗಳೂ ನಮ್ಮವೇ, ನಮ್ಮಿಂದ ಅವರು ಅದನ್ನು ಕಸಿದುಕೊಂಡಿದ್ದರು. ಅವೆಲ್ಲವನ್ನೂ ಮರಳಿ ಪಡೆಯುತ್ತೇವೆ ಎಂದು ಘೋಷಿಸುತ್ತಿದ್ದಾರೆ. ಜನರೇ ಗುಂಪುಗೂಡಿ, ಸಂದೇಶ್‌ಖಾಲಿಗೆ ಪೊಲೀಸರು ಭೇಟಿ ನೀಡುವುದನ್ನು ತಡೆಯುತ್ತಿದ್ದಾರೆ. ಶಿವಪ್ರಸಾದ್ ಹಜ್ರಾ, ಉತ್ತಮ್ ಸರ್ದಾರ್‌ನ ಹಲವು ಸ್ವತ್ತುಗಳನ್ನು ಧ್ವಂಸಗೊಳಿಸಿದ್ದಾರೆ. ಅಲ್ಲಿಗೆ ಭೇಟಿ ನೀಡಲು ಮುಂದಾದ ಟಿಎಂಸಿ ನಾಯಕರ ಮೇಲೆ ಹಲ್ಲೆ ನಡೆಸಿ, ಅವರನ್ನು ಓಡಿಸಿದ್ದಾರೆ. ಈ ಎಲ್ಲಾ ಹೋರಾಟಗಳಲ್ಲೂ ಅಲ್ಲಿನ ಮಹಿಳೆಯರೇ ಮುಂದಿದ್ದಾರೆ.

ಆಧಾರ: ರಾಯಿಟರ್ಸ್, ಬಿಬಿಸಿ, ಪಿಟಿಐ

ಮೊದಲು ಸಿಪಿಎಂ, ನಂತರ ಟಿಎಂಸಿ, ಈಗ ಬಿಜೆಪಿ

ಸಂದೇಶ್‌ಖಾಲಿ ಹಲವು ದಶಕಗಳವರೆಗೆ ಸಿಪಿಎಂನ ಭದ್ರಕೋಟೆಯೇ ಆಗಿತ್ತು. ಈಗ ಅಲ್ಲಿ ಟಿಎಂಸಿಯ ನಾಯಕನಾಗಿರುವ ಷಹಜಹಾನ್ ಈ ಹಿಂದೆ, ಅಂದರೆ 2001ಕ್ಕೂ ಮೊದಲು ಸಿಪಿಎಂನ ಕಾರ್ಯಕರ್ತ. ಷಹಜಹಾನ್‌ನ ಸೋದರಮಾವನೇ ಅಲ್ಲಿನ ಸಿಪಿಎಂ ಘಟಕದ ಅಧ್ಯಕ್ಷರಾಗಿದ್ದರು. ಟಿಎಂಸಿ ಸ್ಥಾಪನೆಯಾದ ಆರಂಭದ ವರ್ಷಗಳಲ್ಲೇ ಷಹಜಹಾನ್ ಸಿಪಿಎಂ ತೊರೆದು, ಟಿಎಂಸಿ ಪರವಾಗಿ ದುಡಿಯಲಾರಂಭಿಸಿದ್ದ.

ಸಂದೇಶ್‌ಖಾಲಿಯ ಮೀನುಸಾಕಾಣಿಕಾ ಹೊಂಡಗಳ ನಿರ್ವಹಣೆ, ಮೀನು ಖರೀದಿ, ಮೀನು ಮಾರುಕಟ್ಟೆಗಳನ್ನು ನಿಯಂತ್ರಿಸುತ್ತಿದ್ದ ಷಹಜಹಾನ್‌ಗೆ ಟಿಎಂಸಿಯನ್ನು ಅಲ್ಲಿ ಜನಪ್ರಿಯಗೊಳಿಸುವುದು ಕಷ್ಟವಾಗಲಿಲ್ಲ. ಅಲ್ಲಿನ ಜನರು ಯಾವುದೇ ವ್ಯಾಜ್ಯಗಳನ್ನು ಇರಿಸಿಕೊಂಡು ಪೊಲೀಸ್ ಠಾಣೆ ಮತ್ತು ನ್ಯಾಯಾಲಯದ ಮೆಟ್ಟಿಲೇರಲು ಆತ ಬಿಡುತ್ತಿರಲಿಲ್ಲ. ಬದಲಿಗೆ ತಾನೇ ಮಧ್ಯಸ್ಥಿಕೆ ವಹಿಸಿ ಆ ವ್ಯಾಜ್ಯಗಳನ್ನು ಬಗೆಹರಿಸುತ್ತಿದ್ದ. ಕಷ್ಟ ಎಂದವರಿಗೆ ಹಣಸಹಾಯ ಮಾಡುತ್ತಿದ್ದ. ಅದು ಆತನ ಜನಪ್ರಿಯತೆಯನ್ನು ಹೆಚ್ಚಿಸಿತ್ತು, ಜತೆಗೆ ಟಿಎಂಸಿಯದ್ದು ಕೂಡ. ಕಡೆಗೆ ಆತನ ಸೋದರಮಾವನೂ ಸಿಪಿಎಂ ತೊರೆದು, ಟಿಎಂಸಿ ಸೇರುವ ಅನಿವಾರ್ಯ ಪರಿಸ್ಥಿತಿ ನಿರ್ಮಿಸಿದ್ದ.

ರಾಜಕೀಯದ ಜತೆಗೆ ಮೀನುಗಾರಿಕೆ, ಮೀನುಸಾಕಾಣಿಕೆ ಉದ್ಯಮವು ಅಲ್ಲಿ ದೊಡ್ಡಮಟ್ಟದಲ್ಲಿ ಬೆಳೆಯಲಾರಂಭಿಸಿತ್ತು. ಟಿಎಂಸಿಗೆ ಅಲ್ಲಿ ವಿರೋಧಿಗಳೇ ಇಲ್ಲದಿರುವಂತೆ ಷಹಜಹಾನ್ ನೋಡಿಕೊಂಡಿದ್ದ. ಗ್ರಾಮ ಪಂಚಾಯಿತಿ ಚುನಾವಣೆಗಳಲ್ಲಿ ಟಿಎಂಸಿ ಬೆಂಬಲಿತ ಅಭ್ಯರ್ಥಿಗಳ ವಿರುದ್ಧ ಅನ್ಯಪಕ್ಷ ಬೆಂಬಲಿತ ಅಭ್ಯರ್ಥಿಗಳು ನಿಲ್ಲುವಂತೆಯೇ ಇರಲಿಲ್ಲ. ಕೆಲವೇ ವರ್ಷಗಳಲ್ಲಿ ಸಿಪಿಎಂಗೆ ಅಲ್ಲಿ ನೆಲೆಯೇ ಇಲ್ಲದಂತಾಗಿತ್ತು.

20 ವರ್ಷಗಳ ಹಿಂದೆ ಅಲ್ಲಿ ಸಿಪಿಎಂ ಅನ್ನು ಮೂಲೆಗೆ ತಳ್ಳುವಲ್ಲಿ ಯಶಸ್ವಿಯಾಗಿದ್ದ ಟಿಎಂಸಿಗೆ, ಈಗ ಅಂಥದ್ದೇ ಸ್ಥಿತಿ ಎದುರಾಗಿದೆ. ಆಗ ಟಿಎಂಸಿ ಇದ್ದ ಜಾಗದಲ್ಲಿ ಈಗ ಬಿಜೆಪಿ ಇದೆ. ಆದರೆ ಒಂದೇ ವ್ಯತ್ಯಾಸವೆಂದರೆ ಬಿಜೆಪಿಯ ರಾಷ್ಟ್ರಮಟ್ಟದ ನಾಯಕರೂ ಸಂದೇಶ್‌ಖಾಲಿಗೆ ಕಾಲಿಟ್ಟಿದ್ದಾರೆ. ನಾಯಕರೇ ಇಲ್ಲದ, ನೆಲೆಯೇ ಇಲ್ಲದ ಊರಿನಲ್ಲಿ ಬಿಜೆಪಿ ಈಗ ನೆಲೆಕಂಡುಕೊಳ್ಳಲಾರಂಭಿಸಿದೆ. ಷಹಜಹಾನ್ ವಿರುದ್ಧ ಅಲ್ಲಿನ ಜನರು ದನಿಎತ್ತಲಾರಂಭಿಸಿದ ತಕ್ಷಣವೇ ಬಿಜೆಪಿ ಅವರ ಬೆಂಬಲಕ್ಕೆ ನಿಂತಿತು. ಊರಿನ ಒಳಗೆ ಜನರು ಪ್ರತಿಭಟನೆ ನಡೆಸಿದರೆ, ಬಿಜೆಪಿ ನಾಯಕರು ಮತ್ತು ಕಾರ್ಯಕರ್ತರು ಊರ ಹೊರಗೆ ಮತ್ತು ರಾಜಧಾನಿಯಲ್ಲಿ ಪ್ರತಿಭಟನೆ ನಡೆಸಿದರು. ಈ ಮೂಲಕ ಸಂದೇಶ್‌ಖಾಲಿಯ ಜನರ ವಿಶ್ವಾಸವನ್ನು ಗಳಿಸಿಕೊಳ್ಳಲು ಬಿಜೆಪಿ ಯತ್ನಿಸುತ್ತಿದೆ. ಇದರ ಭಾಗವಾಗಿ ಬಿಜೆಪಿಯ ರಾಷ್ಟ್ರನಾಯಕರ ದಂಡೇ ಸಂದೇಶ್‌ಖಾಲಿಗೆ ಭೇಟಿ ನೀಡಿದೆ. ಪ್ರಧಾನಿ ನರೇಂದ್ರ ಮೋದಿ ಸಹ ಕೆಲವೇ ದಿನಗಳಲ್ಲಿ ಸಂದೇಶ್‌ಖಾಲಿಯಲ್ಲಿ ಸಾರ್ವಜನಿಕ ಸಭೆ ನಡೆಸಲಿದ್ದಾರೆ.

ಕೃಷಿಯನ್ನು ಮೀನು ಸಾಕಾಣಿಕೆ ಕಬಳಿಸಿದ ಬಗೆ

ಸಂದೇಶ್‌ಖಾಲಿಯ ಜನರು ಪೊಲೀಸರಿಗೆ ನೀಡಿರುವ ದೂರಿನಲ್ಲಿ ಇರುವ ಮತ್ತೊಂದು ಪ್ರಮುಖ ಆರೋಪ ಭೂಕಬಳಿಕೆಯದ್ದು. ಷಹಜಹಾನ್ ಮತ್ತು ಆತನ ಸಹಚರರು ‘ನಮ್ಮ ಜಮೀನುಗಳಿಗೆ ನೀರು ಹರಿಸಿ, ಅವುಗಳನ್ನು ಕಬಳಿಸಿದ್ದಾರೆ’ ಎಂಬುದು ಜನರ ಆರೋಪ.

ಸರ್ಕಾರಿ ದಾಖಲೆಗಳ ಪ್ರಕಾರ 2000ಕ್ಕೂ ಮುನ್ನ ಸಂದೇಶ್‌ಖಾಲಿಯ ಪ್ರಧಾನ ಕಸುಬು ಕೃಷಿಯಾಗಿತ್ತು. ನೀರು ಯಥೇಚ್ಛವಾಗಿದ್ದ ಕಾರಣ, ಜನರು ಭತ್ತ ಬೆಳೆಯುತ್ತಿದ್ದರು. ಅಕ್ಕಿಯೇ ಅವರ ಪ್ರಧಾನ ಆಹಾರವೂ ಆಗಿತ್ತು, ಮೀನು ಸಾಕಾಣಿಕೆ ಕೂಡ. ಆದರೆ ಷಹಜಹಾನ್ ರಾಜಕೀಯವಾಗಿ ಪ್ರವರ್ಧಮಾನಕ್ಕೆ ಬರುವ ಹೊತ್ತಿಗೆ, ರಾಜ್ಯ ಸರ್ಕಾರವು ಮೀನು ಸಾಕಾಣಿಕೆಯನ್ನು ಉತ್ತೇಜಿಸುವ ಯೋಜನೆ ಆರಂಭಿಸಿತ್ತು. 24 ಉತ್ತರ ಪರಗಣ ಜಿಲ್ಲೆಯ ಮೀನುಗಾರಿಕಾ ಮಂಡಳಿಯ ಸದಸ್ಯ–ಅಧ್ಯಕ್ಷನಾಗಿದ್ದ ಷಹಜಹಾನ್, ಸಂದೇಶ್‌ಖಾಲಿಯಲ್ಲಿ ಯೋಜನೆಯು ಪರಿಣಾಮಕಾರಿಯಾಗಿ ಅನುಷ್ಠಾನವಾಗುವಲ್ಲಿ ಪ್ರಮುಖ ಪಾತ್ರವಹಿಸಿದ್ದ.

ಅಲ್ಲಿನ ಜನರು ನಿಧಾನವಾಗಿ ಕೃಷಿಬಿಟ್ಟು, ಮೀನು ಸಾಕಾಣಿಕೆಯತ್ತ ಹೊರಳಿದರು. ಲಾಭದಾಯಕ ಉದ್ಯಮವಾಗಿ ಬೆಳೆದ ಮೀನು ಸಾಕಾಣಿಕೆಗೆ ಸಂದೇಶ್‌ಖಾಲಿಯಲ್ಲಿ ಜಾಗ ಸಾಲದೇ ಹೋಯಿತು. ಜನರು ತಾವು ನೀಡಿರುವ ದೂರಿನಲ್ಲಿ, ‘ಷಹಜಹಾನ್‌ನ ಸಹಚರರು ನಮ್ಮ ಹೊಲ–ಗದ್ದೆಗಳಿಗೆ ನದಿಯ ನೀರನ್ನು ಹರಿಸುತ್ತಿದ್ದರು. ಬೆಳೆ ನಷ್ಟವಾಗುತ್ತಿತ್ತು. ಅತ್ಯಂತ ಕಡಿಮೆ ಬೆಲೆಗೆ ಅಂತಹ ಜಮೀನು ಖರೀದಿಸುತ್ತಿದ್ದರು. ಮಾರಾಟ ಮಾಡದಿದ್ದರೆ, ಬೆದರಿಕೆ ಹಾಕಿ ಭೂಮಿ ಕಸಿದುಕೊಳ್ಳುತ್ತಿದ್ದರು. ಒಂದು ಕಾಲದಲ್ಲಿ ನಮ್ಮ ಅಕ್ಕಿಯನ್ನು ನಾವೇ ಬೆಳೆದುಕೊಳ್ಳುತ್ತಿದ್ದೆವು, ಈಗ ಅದನ್ನು ಅಂಗಡಿಯಿಂದ ಖರೀದಿಸುವ ಸ್ಥಿತಿ ಎದುರಾಗಿದೆ’ ಎಂದು ವಿವರಿಸಿದ್ದಾರೆ.

ಷಹಜಹಾನ್‌ನ 25 ಎಕರೆಯ ತೋಟದ ಮನೆಯ ಸುತ್ತಲೂ ಮೀನು ಸಾಕಾಣಿಕಾ ಹೊಂಡಗಳಿವೆ. ಈಗ ಸಂದೇಶ್‌ಖಾಲಿಯಲ್ಲಿ ಎಲ್ಲಿ ನೋಡಿದರೂ ಮೀನು ಸಾಕಾಣಿಕಾ ಹೊಂಡಗಳೇ ತುಂಬಿವೆ. ಭತ್ತದ ಗದ್ದೆಗಳು ಹುಡುಕಿದರೂ ಸಿಗುವುದಿಲ್ಲ ಎನ್ನುವಂತಿದೆ.

ಸಿನಿ ಬಿಟ್ಸ್

ಕೆರೆಬೇಟೆಯಲ್ಲಿ ‘ಮಳಿ ಆತು, ಬೆಳಿ ಆತು’

ಗೌರಿಶಂಕರ್

‘ರಾಜಹಂಸ’ ಚಿತ್ರದಲ್ಲಿ ನಟಿಸಿದ್ದ ಗೌರಿಶಂಕರ್ ಹಾಗೂ ಬಿಂದು ಶಿವರಾಂ ಜೋಡಿಯಾಗಿ ನಟಿಸಿರುವ ‘ಕೆರೆಬೇಟೆ’ ಚಿತ್ರದ ಶೀರ್ಷಿಕೆ ಗೀತೆ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಶಿವಮೊಗ್ಗ ಸಂಸದ ಬಿ.ವೈ. ರಾಘವೇಂದ್ರ ಹಾಗೂ ಶಾಸಕ ಅರಗ ಜ್ಞಾನೇಂದ್ರ ಹಾಡು ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.

‘ಮಳಿ ಆತು, ಬೆಳಿ ಆತು, ಬ್ಯಾಸಗೀನು ಬ್ಯಾಸರಾತು’ ಎಂಬ ಗೀತೆಯಲ್ಲಿ ಮಲೆನಾಡಿನ ಭಾಷೆ, ಆಚರಣೆಯನ್ನು ತೋರಿಸಲಾಗಿದೆ. ಪ್ರಮೋದ್ ಮರವಂತೆ ಬರೆದಿರುವ ಈ ರೈತಾಪಿ ಸಾಹಿತ್ಯದ ಹಾಡನ್ನು ಕರಿಬಸವ ಹಾಡಿದ್ದಾರೆ.

ಟೀಸರ್, ಹಾಡುಗಳಿಂದ ಗಮನ ಸೆಳೆದಿರುವ ಈ ಚಿತ್ರಕ್ಕೆ ರಾಜ್‌ಗುರು ಆ್ಯಕ್ಷನ್ ಕಟ್ ಹೇಳಿದ್ದಾರೆ. ಜನಮನ ಸಂಸ್ಥೆ ನಿರ್ಮಿಸಿದ್ದು, ದಿನಕರ್ ತೂಗುದೀಪ್ ಚಿತ್ರವನ್ನು ಅರ್ಪಿಸುತ್ತಿದ್ದಾರೆ. ಗಗನ್ ಬದೇರಿಯ ಸಂಗೀತವಿದ್ದು, ಕೀರ್ತನ್ ಪೂಜಾರಿ ಛಾಯಾಚಿತ್ರಗ್ರಹಣವಿದೆ. ಗೋಪಾಲ್ ದೇಶಪಾಂಡೆ, ಸಂಪತ್ ಕುಮಾರ್, ಹರಿಣಿ ಮೊದಲಾದವರು ತಾರಾಗಣದಲ್ಲಿದ್ದಾರೆ.

ಸಿಗಂದೂರು, ಕೋಗಾರಿನ ಕಾಡು ಸೇರಿದಂತೆ ಮಲೆನಾಡಿನ ಸುಂದರ ತಾಣಗಳಲ್ಲಿ ಚಿತ್ರೀಕರಣಗೊಂಡಿರುವ ಚಿತ್ರ ಮಾ.15 ರಂದು ತೆರೆಗೆ ಬರುತ್ತಿದೆ.

ದುಬೈ ಚಿತ್ರೋತ್ಸವ: ‘ಚಿಣ್ಣರ ಚಂದ್ರ’ ಉತ್ತಮ ಮಕ್ಕಳ ಚಿತ್ರ

ಫೆಬ್ರುವರಿ 25ರಂದು ದುಬೈನಲ್ಲಿ ನಡೆದ ಕಾರ್ಯಕ್ರಮದಲ್ಲಿ ನಟ ಸುಮನ್ ಅವರಿಂದ ಪ್ರಶಸ್ತಿ ಸ್ವೀಕರಿಸಿದ ಆಕಾಂಕ್ಷ್ ಬರಗೂರ್

ಜಿ.ಎನ್. ಗೋವಿಂದರಾಜು (ರಾಜಶೇಖರ್) ನಿರ್ಮಾಣದ, ಬರಗೂರು ರಾಮಚಂದ್ರಪ್ಪ ಅವರು ನಿರ್ದೇಶಿಸಿದ ‘ಚಿಣ್ಣರ ಚಂದ್ರ’ ಸಿನಿಮಾವು ದುಬೈ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಉತ್ತಮ ಮಕ್ಕಳ ಚಿತ್ರ ಪ್ರಶಸ್ತಿಗೆ ಭಾಜನವಾಗಿದೆ. ಇದೇ ಸಿನಿಮಾದಲ್ಲಿನ ನಟನೆಗಾಗಿ ಆಕಾಂಕ್ಷ್ ಬರಗೂರ್ ಅವರಿಗೆ ಉತ್ತಮ ಬಾಲನಟ ಪ್ರಶಸ್ತಿ ದೊರಕಿದೆ.

ಬರಗೂರು ಅವರ ಮೊಮ್ಮಗನಾದ ಆಕಾಂಕ್ಷ್ ‘ಚಿಣ್ಣರ ಚಂದ್ರ’ ಚಿತ್ರದಲ್ಲಿ ಪ್ರಮುಖ ಪಾತ್ರಧಾರಿಯಾಗಿದ್ದು, ‘ಬಯಲಾಟದ ಭೀಮಣ್ಣ’, ‘ಭಾಗೀರತಿ’, ‘ತಾಯಿ ಕಸ್ತೂರ್ ಗಾಂಧಿ’ ಚಿತ್ರಗಳಲ್ಲೂ ನಟಿಸಿದ್ದಾರೆ. ‘ಚಿಣ್ಣರ ಚಂದ್ರ’ ಚಿತ್ರವು ಬರಗೂರರ ‘ಅಡಗೂಲಜ್ಜಿ’ ಎಂಬ ಕಾದಂಬರಿಯನ್ನು ಆಧರಿಸಿದೆ. ಬರಗೂರು ಅವರೇ ಚಿತ್ರಕಥೆ, ಸಂಭಾಷಣೆ ಬರೆದು ಈ ಚಿತ್ರವನ್ನು ನಿರ್ದೇಶಿಸಿದ್ದಾರೆ. ಈ ಚಿತ್ರವು ಅಲಹಾಬಾದ್ ಮತ್ತು ಮೆಲ್ಬರ್ನ್ ಅಂತರರಾಷ್ಟ್ರೀಯ ಚಿತ್ರೋತ್ಸವಗಳಿಗೂ ಆಯ್ಕೆಯಾಗಿತ್ತು. ಶಿಕ್ಷಣದ ಮಹತ್ವವನ್ನು ಸಾದರಪಡಿಸುವ ಚಿತ್ರ ಇದಾಗಿದ್ದು, ಮಕ್ಕಳ ಮೂಲಕವೇ ಈ ಆಶಯವನ್ನು ಅಭಿವ್ಯಕ್ತಿಸಲಾಗಿದೆ. ಜೊತೆಗೆ ಸಮಾಜದಲ್ಲಿ ಸಮಾನತೆ, ಸೌಹಾರ್ದತೆ ನೆಲೆಸಬೇಕೆಂಬ ಸಂದೇಶವನ್ನು ನೀಡುತ್ತದೆ. ಅಡಗೂಲಜ್ಜಿಯ ಮೂಲಕ ಜನಪದ ಕಥೆಗಳನ್ನು ಕೇಳುವ ಮಕ್ಕಳು ಸದಭಿರುಚಿ ಸಿನಿಮಾಗಳ ಅಗತ್ಯಕ್ಕಾಗಿ ಹಕ್ಕೊತ್ತಾಯ ಮಂಡಿಸುವ ವಿಶೇಷ ಪ್ರಸಂಗವನ್ನೂ ಈ ಚಿತ್ರವು ಒಳಗೊಂಡಿದೆ.

ತಾರಾಗಣದಲ್ಲಿ ಆಕಾಂಕ್ಷ್ ಬರಗೂರ್, ನಿಕ್ಷೇಪ್, ಷಡ್ಜ, ಈಶಾನ್, ಅಭಿನವ್‌ನಾಗ್, ಸುಂದರರಾಜು, ರೇಖಾ, ವತ್ಸಲಾ ಮೋಹನ್, ರಾಧಾ ರಾಮಚಂದ್ರ, ಸುಂದರರಾಜ ಅರಸು, ರಾಘವ್, ರಾಜಪ್ಪ ದಳವಾಯಿ, ಹಂಸ, ವೆಂಕಟರಾಜು, ಮೈಸೂರು ಮಂಜುಳ ಮುಂತಾದವರು ಇದ್ದಾರೆ. ನಾಗರಾಜ ಆದವಾನಿ ಛಾಯಚಿತ್ರಗ್ರಹಣ, ಸುರೇಶ್ ಅರಸು ಸಂಕಲನ, ಶಮಿತಾ ಮಲ್ನಾಡ್ ಸಂಗೀತ ಹಾಗೂ ನಟ್ರಾಜ್ ಶಿವು ಮತ್ತು ಪ್ರವೀಣ್ ಸಹನಿರ್ದೇಶನ ಚಿತ್ರಕ್ಕಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಬೃಹತ್ ಅತ್ಯಾಧುನಿಕ ಯಂತ್ರವೊಂದು ರೈಲು ಹಳಿಗಳನ್ನು ಅತ್ಯಂತ ಕ್ಷಿಪ್ರವಾಗಿ ಅಳವಡಿಸುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಅದರೊಂದಿಗೆ, ‘ನೋಡಿ ಇದು ಈಗಿನ ಭಾರತದ ತಾಂತ್ರಿಕತೆ. ತಾಂತ್ರಿಕವಾಗಿ ಭಾರತ ಎಷ್ಟು ಮುಂದುವರಿದಿದೆ ಎಂಬುದಕ್ಕೆ ಇದೇ ಸಾಕ್ಷ್ಯ. 60 ವರ್ಷಗಳಲ್ಲಿ ಇಂತಹ ಕೆಲಸವಾಗಿರಲಿಲ್ಲ. ಅಷ್ಟೂ ವರ್ಷ ದೇಶದ ಜನರ ತೆರಿಗೆ ಹಣವನ್ನು ಸ್ವಿಸ್ ಬ್ಯಾಂಕ್‌ನಲ್ಲಿ ಇಡಲಾಗುತ್ತಿತ್ತು ಅಷ್ಟೆ’ ಎಂಬ ಸಂದೇಶಗಳನ್ನೂ ಹಂಚಿಕೊಳ್ಳಲಾಗುತ್ತಿದೆ. ಕೆಲವರು, ಈಗಿನ ಸರ್ಕಾರದ ಇಚ್ಛಾಶಕ್ತಿಯ ಕಾರಣದಿಂದ ಮಾತ್ರ ಇದು ಸಾಧ್ಯವಾಗುತ್ತಿದೆ ಎಂದು ಈ ಸಂದೇಶಗಳಿಗೆ ಪ್ರತಿಕ್ರಿಯೆ ನೀಡಿದ್ದಾರೆ. ಆದರೆ ಇದು ಸುಳ್ಳು ಸುದ್ದಿ.

ವಿಡಿಯೊದಲ್ಲಿ ಇರುವುದು ಭಾರತೀಯ ರೈಲ್ವೆಯ ಕಾಮಗಾರಿ ದೃಶ್ಯವಲ್ಲ. ಬದಲಿಗೆ ಅದು, ಮಲೇಷ್ಯಾದಲ್ಲಿ ಅತ್ಯಾಧುನಿಕ ಯಂತ್ರದ ಮೂಲಕ ರೈಲು ಹಳಿ ಅಳವಡಿಕೆ ಕಾಮಗಾರಿ ನಡೆಸುತ್ತಿರುವ ದೃಶ್ಯ. ಇತ್ತೀಚಿನ ತಿಂಗಳುಗಳಲ್ಲಷ್ಟೇ ಮಲೇಷ್ಯಾ ಆ ವಿಡಿಯೊವನ್ನು ಬಿಡುಗಡೆ ಮಾಡಿತ್ತು. ಆ ಕಾಮಗಾರಿ ನಡೆಸುತ್ತಿರುವುದು ಚೀನಾದ ಕಂಪನಿ, ಯಂತ್ರವೂ ಚೀನಾದ್ದೇ ಆಗಿದೆ. ಆ ವಿಡಿಯೊವನ್ನೇ ಭಾರತದ್ದು ಎಂದು ಹೇಳಿಕೊಂಡು ದಾರಿತಪ್ಪಿಸುವಂತಹ ಸಂದೇಶವನ್ನು ಸೃಷ್ಟಿಸಲಾಗಿದೆ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಮಾರ್ಚ್ 4, 2024

ಶ್ರೀಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣ ಅಷ್ಟಮಿ ಗಂ. 08-50 ನಕ್ಷತ್ರ: ಜ್ಯೇಷ್ಠ ಗಂ. 16-21 ಯೋಗ: ವಜ್ರ ಗಂ. 16-06 ಕರಣ: ಕೌಲವ ಗಂ. 08-50, ಕುಂಭ ಮಾಸದ 20ನೇ ದಿನ, ಮಳೆನಕ್ಷತ್ರ: ಪೂರ್ವಾಭಾದ್ರ 1.

ರಾಹುಕಾಲ: ಬೆಳಿಗ್ಗೆ 07-30–09-00

ಸೂರ್ಯೋದಯ: 06-48 **ಸೂರ್ಯಾಸ್ತ:** 06-36

ಮುಸ್ಲಿಂ ದಿನಾಂಕ: 22 ಶಬನ್

ಅದೃಷ್ಟ ಸಂಖ್ಯೆ: 8, 1

ಮೇಷ: ಈ ದಿನ ನೀವು ಆಕಸ್ಮಿಕವಾಗಿ ಆತ್ಮೀಯರನ್ನು ಭೇಟಿ ಮಾಡಲಿದ್ದೀರಿ. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸರ್ವತೋಮುಖ ಅಭಿವೃದ್ಧಿ ಕಂಡುಬರುವುದು. ಸಹೋದರಿಗೆ ಕಂಕಣ ಭಾಗ್ಯ ಕೂಡಿ ಬರಲಿದೆ.

ವೃಷಭ: ಷರತ್ತುಗಳ ವ್ಯವಹಾರಕ್ಕೆ ಕೈಹಾಕಬೇಡಿ. ಉದ್ಯೋಗದಲ್ಲಿ ಉನ್ನತ ಪದವಿ ದೊರೆಯುವ ಅಥವಾ ಸ್ಥಳ ಬದಲಾವಣೆಯ ಸಾಧ್ಯತೆಗಳಿವೆ. ವಿದೇಶದಿಂದ ಶುಭ ಸಮಾಚಾರ ಕೇಳುವಿರಿ.

ಮಿಥುನ: ಸಂಬಂಧಗಳಿಗೆ ಬೆಲೆ ಕೊಡುವ ನೀವು ಸಂಬಂಧಿಕರ ಮೊಸಳೆ ಕಣ್ಣೀರಿಗೆ ಸುಲಭವಾಗಿ ಮರುಳಾಗದಿರಿ. ಹೆಚ್ಚಿನ ಆದಾಯದಿಂದ ಸಂಸಾರದಲ್ಲಿ ಸಂತೋಷ ಉಂಟಾಗುವುದು. ಮಾನಸಿಕ ಕ್ಷೋಭೆ ದೂರಾಗುವುದು.

ಕರ್ಕಾಟಕ: ಸಂಘ-ಸಂಸ್ಥೆಯಲ್ಲಿ ನಡೆದ ಸಣ್ಣಪುಟ್ಟ ತಪ್ಪುಗಳನ್ನು ಸರಿಪಡಿಸಿ, ಕಿರಿಯರಿಗೆ ಮಾರ್ಗದರ್ಶನ ನೀಡಿ. ವೈಯಕ್ತಿಕ ವಿಚಾರಗಳತ್ತ ಗಮನ ಹರಿಸುವಿರಿ. ಸಂಸಾರ ತಾಪತ್ರಯಗಳು ನೀಗಿ ಮನಸ್ಸಿಗೆ ಸಮಾಧಾನ ಉಂಟಾಗುತ್ತದೆ.

ಸಿಂಹ: ಮನುಷ್ಯ ಪ್ರಯತ್ನವಿದ್ದರೂ ಯಶಸ್ಸು ಹೊಂದಲು ಮೊದಲೆರಡು ಬಾರಿ ವಿಘ್ನ ಉಂಟಾಗುವುದು. ಗಣ್ಯರಿಂದ ಮುಂದಿನ ಬದುಕಿನ ದಾರಿ ಬದಲಾಗುವ ಸಾಧ್ಯತೆ ಇದೆ. ವಿಮಾ ಸಲಹೆಗಾರರಿಗೆ ಉತ್ತಮವಾಗಿರಲಿದೆ.

ಕನ್ಯಾ: ಆಸ್ತಿಗೆ ಸಂಬಂಧಿಸಿದಂತೆ ಕೌಟುಂಬಿಕ ಕಲಹಗಳು ಆಗಾಗ ಗೋಚರಕ್ಕೆ ಬಂದಾವು. ಹೊಸ ಹುದ್ದೆಗೆ ಅಭ್ಯರ್ಥಿಯಾಗುವ ಬಯಕೆ ಉಂಟಾಗಲಿದೆ. ಮನೆಯವರ ಒಳಿತಿಗಾಗಿ ಹೊಸ ಮಾರ್ಗ ಕಂಡುಕೊಳ್ಳಲು ಇದು ಸೂಕ್ತ ಸಮಯ.

ತುಲಾ: ಉದ್ಯೋಗ ನಿಮಿತ್ತ ದೂರದೂರಿಗೆ ಹೋಗಬಹುದು. ಮಕ್ಕಳ ಭವಿಷ್ಯದ ಬಗ್ಗೆ ಯೋಜನೆಗಳನ್ನು ರೂಪಿಸಲು ಸಕಾಲ. ಹೊಸ ಜನರಲ್ಲಿ ಮತ್ತು ಹೊಸ ಸ್ಥಳದಲ್ಲಿ ಹೊಂದಿಕೊಳ್ಳಲು ಸಮಯ ತೆಗೆದುಕೊಳ್ಳುವಿರಿ.

ವೃಶ್ಚಿಕ: ರಾಸಾಯನಿಕ ಪದಾರ್ಥಗಳ ವ್ಯಾಪಾರದಲ್ಲಿ ಹೆಚ್ಚಿನ ಲಾಭವಿರುವುದು. ಲಾಭ ತರುವ ಅವಕಾಶ ನೀಡುವ ವ್ಯಕ್ತಿಗಳ ಸ್ನೇಹ ಸಂಪಾದಿಸುವಿರಿ. ಸಂತೋಷದ ನಡುವೆಯೂ ಒತ್ತಡದಿಂದಿರುವುದು ನಿಮ್ಮ ಜಾಯಮಾನ.

ಧನು: ಎಲ್ಲಾ ಕೆಲಸ ಕಾರ್ಯಗಳಲ್ಲಿಯೂ ತಾಳ್ಮೆ, ದೃಢ ನಿರ್ಧಾರ ಅಗತ್ಯವೆನಿಸಲಿದೆ. ಕಳೆದು ಹೋದಂತಹ ವಸ್ತುವನ್ನು ಮತ್ತೆ ಪಡೆದುಕೊಳ್ಳುವ ಹಂಬಲದಿಂದ ಹುಡುಕುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗುವಿರಿ.

ಮಕರ: ಯಶಸ್ಸು ನಿಮ್ಮನ್ನು ಹುಡುಕಿಕೊಂಡು ಬರುವುದರಿಂದ ಸಂತಸ ಸಿಗಲಿದೆ. ದಾಂಪತ್ಯ ಜೀವನ ಸುಖಮಯವಾಗಿರುವುದು ಅಥವಾ ವಿವಾಹ ಅಪೇಕ್ಷಿಗಳಿಗೆ ಶುಭವಿದೆ. ಇಂದು ಶೀತಬಾಧೆ ಉಂಟಾಗಲಿದೆ.

ಕುಂಭ: ಕೆಲಸ ಕಾರ್ಯಗಳು ವಿಳಂಬಗತಿಯಲ್ಲಿ ನಡೆದರೂ ಪೂರ್ಣಗೊಳ್ಳಲಿವೆ. ಅವಮಾನಿಸಿದ ವ್ಯಕ್ತಿಗಳಿಂದ ಗೌರವ ಪಡೆಯುವಂಥ ಕಾಲವನ್ನು ನೀವು ನಿರೀಕ್ಷಿಸಬಹುದು.

ಮೀನ: ಸಾಹಿತಿ ಬರಹಗಾರರಿಗೆ ಹಾಗೂ ಚಲನ ಚಿತ್ರರಂಗದವರಿಗೆ ಹಣ ಮತ್ತು ಖ್ಯಾತಿ ದೊರೆಯುವುದು. ಪ್ರಾಮಾಣಿಕತನದಿಂದಾಗಿ ಒಳ್ಳೆಯ ಕೆಲಸವೊಂದು ಅಯಾಚಿತವಾಗಿ ಸಿಗುತ್ತದೆ. ನೀಲಿ ಬಣ್ಣ ಶುಭಪ್ರದ.

ನುಡಿ ಬೆಳಗು

ಇಲ್ಲದಿರುವಿಕೆಯನ್ನು ಪ್ರೀತಿಸಿ


ಎಚ್.ಎಸ್.ನವೀನಕುಮಾರ್, ಹೊಸದುರ್ಗ

ಒಮ್ಮೆ ಸ್ವಲ್ಪ ದುರಾಸೆ ಬುದ್ಧಿಯ ಸ್ನೇಹಿತನೊಬ್ಬ ಮುಲ್ಲಾ ನಸ್ರುದ್ದೀನ್ ಬಳಿ ಬಂದ. ‘ಮಿತ್ರಾ, ನಾನು ಈ ಊರನ್ನು ಬಿಟ್ಟು ಬೇರೆ ಊರಿಗೆ ಹೋಗಿ ನೆಲೆಸಲು ನಿರ್ಧಾರ ಮಾಡಿದ್ದೇನೆ. ಪ್ರಾಣ ಸ್ನೇಹಿತನಾದ ನಿನ್ನ ನೆನಪು ಸದಾ ನನಗೆ ಇರಬೇಕು. ಹೀಗಾಗಿ ನಿನ್ನ ಬೆರಳಲ್ಲಿರುವ ಉಂಗುರವನ್ನು ನನಗೆ ಕೊಡು. ಅದನ್ನು ನೋಡಿದಾಗಲೆಲ್ಲ ನಿನ್ನ ನೆನಪು ಮಾಡಿಕೊಳ್ಳುತ್ತೇನೆ’ ಎಂದು ನುಡಿದ.

ಆದರೆ ಆತ ಚಾಪೆ ಕೆಳಗೆ ನುಸುಳುವವನಾದರೆ ನಸ್ರುದ್ದೀನ್ ರಂಗೋಲಿ ಕೆಳಗೆ ನುಸಿಯುವಷ್ಟು ಬುದ್ಧಿವಂತ. ‘ಅದೇನೋ ನಿಜ ಮಿತ್ರ. ಆದರೆ ಅಕಸ್ಮಾತ್ ನಾನು ನೀಡಿದ ಉಂಗುರವನ್ನು ನೀನೇನಾದರೂ ಕಳೆದುಕೊಂಡು ಬಿಟ್ಟರೆ ಆಗ ನೀನು ನನ್ನನ್ನು ಮರೆತು ಬಿಡುತ್ತೀಯಾ... ಅದಕ್ಕೆ ನಾನು ನನ್ನ ಉಂಗುರವನ್ನು ನಿನಗೆ ಕೊಡುವುದಿಲ್ಲ. ಆಗ ನಿನ್ನ ಖಾಲಿ ಬೆರಳನ್ನು ನೀನು ನೋಡಿಕೊಂಡಾಗಲೆಲ್ಲ, ನಾನು ಮುಲ್ಲಾನ ಬಳಿ ಉಂಗುರ ಕೇಳಿದ್ದೆ. ಆದರೆ ಅವನು ಕೊಡಲೇ ಇಲ್ಲ, ಎಂಬುದಾಗಿ ಸದಾ ನನ್ನನ್ನು ನೆನಪಿಸಿಕೊಳ್ಳುತ್ತೀ. ಆಗ ನನ್ನನ್ನು ನೀನು ಮರೆಯುವ ಸಾಧ್ಯತೆಯೇ ಇರುವುದಿಲ್ಲ’ ಎಂದು ಉತ್ತರಿಸಿದ.

ನಗು ತರಿಸುವ ಈ ಹಾಸ್ಯ ಚಟಾಕಿಯಲ್ಲಿ ಮುಲ್ಲಾ ನಸ್ರುದ್ದೀನ್‌ನ ಬುದ್ಧಿವಂತಿಕೆ ಜೊತೆಗೆ, ಬದುಕಿನ ಒಂದು ಬಹು ದೊಡ್ಡ ಸಂದೇಶ ಕೂಡ ಅಡಗಿದೆ. ನಾವು ನಮ್ಮ ಬಳಿ ಇರುವುದನ್ನು ಪ್ರೀತಿಸುತ್ತೇವೆ ಹಾಗೂ ಅದರ ಕುರಿತು ವ್ಯಾಮೋಹಿತರಾಗಿರುತ್ತೇವೆ. ಎಲ್ಲಿಯಾದರೂ ಅದು ನಮ್ಮಿಂದ ದೂರಾದರೆ ಗತಿ ಏನು ಎಂದು ಆತಂಕಿತರಾಗುತ್ತಿರುತ್ತೇವೆ. ಆದರೆ, ಇಲ್ಲದಿರುವಿಕೆಯನ್ನು ಸಹ ಪ್ರೀತಿಸಬೇಕೇ ಹೊರತು ಅದರ ಕುರಿತು ಕೊರಗಬಾರದು.

ಏಕೆಂದರೆ ಇಲ್ಲದಿರುವಿಕೆಯ ಬಗ್ಗೆ ಕೊರಗಲು ಆರಂಭಿಸಿದಾಗ ಮನಸ್ಸು ಚಿಂತೆಯ ಗೂಡಾಗುತ್ತದೆ ಹಾಗೂ ಇರುವುದನ್ನು ಅನುಭವಿಸುವ ಅದರಲ್ಲಿ ಸಂತೋಷ ಪಡುವ ನೆಮ್ಮದಿಯ ಬದುಕನ್ನು ನಾವು ಕಳೆದುಕೊಳ್ಳುತ್ತೇವೆ. ‘ಇದ್ದುದ ವಂಚನೆ ಮಾಡದಿರ್ಪುದೇ ಶೀಲ, ಇಲ್ಲದ್ದಕ್ಕೆ ಕಡನ ಮಾಡದಿರ್ಪುದೇ ಶೀಲ’ ಎಂಬುದಾಗಿ ಬಸವಣ್ಣ ಅವರು ತಮ್ಮ ವಚನವೊಂದರಲ್ಲಿ ಹೇಳುತ್ತಾರೆ. ನಾವು ನಮ್ಮ ಬಳಿ ಇರುವ ಅಂತರಂಗದ ಸಂಪತ್ತಾದ ವ್ಯಕ್ತಿತ್ವವನ್ನು ಸರಿಯಾಗಿ ಬಳಸಿಕೊಳ್ಳಬೇಕು. ಅದಕ್ಕೆ ವಂಚನೆ ಮಾಡಬಾರದು. ಅದೇ ರೀತಿ ನಮ್ಮಲ್ಲಿ ಇಲ್ಲದ ಬಾಹ್ಯ ಸಂಪತ್ತಿಗಾಗಿ ಕಡ ಮಾಡಬಾರದು. ಇವೆರಡೂ ನಾವು ಅಗತ್ಯವಾಗಿ ಅಳವಡಿಸಿಕೊಳ್ಳಬೇಕಾದ ವ್ಯಕ್ತಿತ್ವ ವಿಕಸನದ ಸೂತ್ರಗಳು.

ಸಾಲ ಮಾಡಿಯಾದರೂ ತುಪ್ಪ ತಿನ್ನು ಎನ್ನುವಂತೆ, ಸಾಲ ಮಾಡಿದರೂ ಸರಿ ಬಾಹ್ಯದ ಆಸ್ತಿಯನ್ನು ವೃದ್ಧಿಸಿಕೊಳ್ಳುವ ಆಲೋಚನೆ ಬಹಳ ಮಂದಿಯದ್ದು. ಇದರ ಬದಲು ನಮ್ಮ ಬಳಿ ಇಲ್ಲದಿರುವುದನ್ನು ಪ್ರೀತಿಸುವುದು ಸ್ಥಿತಪ್ರಜ್ಞತೆ. ನಮಗೆ ತೀರಾ ಬೇಕಾದವರು ನಮ್ಮಿಂದ ದೂರವಾದಾಗ ಸಹ ಅವರ ಇರುವಿಕೆಯನ್ನು ಪ್ರೀತಿಸಿದಷ್ಟೇ ಇಲ್ಲದಿರುವಿಕೆಯನ್ನೂ ಪ್ರೀತಿಸಬೇಕು ಎನ್ನುತ್ತಾನೆ ಗೌತಮ ಬುದ್ಧ. ಇದು ಬಹಳ ಕಷ್ಟ ನಿಜ. ಆದರೆ ಇದೇ ತಿಳಿದವರು ಬದುಕುವ ರೀತಿ. ❖

ಪದಬಂಧ 5610

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಪ್ರೇಮಿಗಳ ಹುಸಿಜಗಳ (6)
4. ದ್ರವದಿಂದ ತುಂಬಿದುದು (4)
5. ಹಣ್ಣಿನ ಬಳಿಯಿರಿಸಿದ ಥಾಲು (3)
7. ಕೊನೆಗೆ ವರನಿದ್ದರೆ ಇದು ಸ್ಥಿರ! (3)
10. ಭಾಗಲಬ್ಧ ಕಲಿಯುತ್ತಿರುವ ಜಿಪುಣ! (3)
12. ಬಳ್ಳಿ ಇಲ್ಲಿ ಹಬ್ಬಿದೆ (3)
13. ಅದೇ ತಾನೆ ಮೂಡುತ್ತಿರುವ ಸೂರ್ಯ (4)
15. ಕಣ್ಣಿಗೆ ಕಾಣುವ ಸಾಕ್ಷಿ (6)

ಮೇಲಿಂದ ಕೆಳಕ್ಕೆ

1. ಮಾಡಿದ ಕೆಲಸಕ್ಕೆ ದೊರೆತ ಲಾಭ (4)
2. ಹತ್ತಿರದಲ್ಲೇ ಪ್ರತ್ಯಕ್ಷನಾಗಿರುವ ಶಿವ (2)
3. ಆಯಾ ಮಾಡಿದ ಕ್ಷೌರ! (4)
6. ಬೈರಾಗಿಗಳು ಬಳಸುವ ನೀರಿನ ಪಾತ್ರೆ (4)
7. ಈತ ಪ್ರತಿಷ್ಠಾಪಿಸುವವನು (3)
8. ನೆತ್ತರು ಸುರಿಯುವಿಕೆ (4)
9. ಹೂವಿನ ಶರವಿದು (4)
11. ವಿಷ್ಣುವಿನ ಮುಂದಿರಿಸಿದ ಅಗಲವಾದ ತಟ್ಟೆ (4)
14. ಅವಿರತ ಪ್ರಯತ್ನದಲ್ಲಿರುವ ಬ್ರಾಹ್ಮಣ (2)



5609ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸ್ಥಾನಪಲ್ಲಟ 4.ಗರ್ಜನೆ 5.ಗಯ್ಯಾಳಿ 6.ಪುಕಾರು 7.ಕೆಸರು 9.ಮಂಠ 10.ನಾಕ 12.ಸೆರಗು 14.ಪದಕ 15.ಜಠರ 16.ಆಳ್ವೇರಿ 17.ಮರಣಕಾಲ

ಮೇಲಿಂದ ಕೆಳಕ್ಕೆ: 1.ಸ್ಥಾನಭ್ರಷ್ಟ 2.ಪಠ್ಯಪುಸ್ತಕ 3.ಟಗರು 4.ಗಳಿಕೆ 8.ಸಭಿಕ 9.ಮಂದಿರ 10.ನಾಮಕರಣ 11.ಇಳಿಗಾಲ 13.ಗುಜರಿ 14.ಪರಮ

ಸುಡೊಕು 5995

				8			2	
	3							8
6		5		9		4		
	2		6				3	
5		3	2		1	8		9
	1				9		4	
	6			2				4
3		8	9				5	
	5			3	4			1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5994 ಸುಡೊಕು

1	8	3	5	2	6	9	4	7
2	9	5	3	4	7	1	8	6
7	6	4	9	8	1	5	2	3
9	1	6	4	7	5	2	3	8
3	4	7	2	9	8	6	1	5
5	2	8	6	1	3	7	9	4
8	3	1	7	5	9	4	6	2
6	5	2	1	3	4	8	7	9
4	7	9	8	6	2	3	5	1

ಎಂ.ಎಫ್ ಹೂಡಿಕೆ: ಹೆಚ್ಚು ಗಳಿಕೆ ಹೇಗೆ?

ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಮ್ಯೂಚುಯಲ್ ಫಂಡ್ ಹೂಡಿಕೆಯಲ್ಲಿ ಎಸ್‌ಐಪಿ ಹೂಡಿಕೆ ವಿಧಾನ (ವ್ಯವಸ್ಥಿತ ಹೂಡಿಕೆ ಯೋಜನೆ) ಸಾಕಷ್ಟು ಪ್ರಾಮುಖ್ಯತೆ ಪಡೆದುಕೊಂಡಿದೆ. 2022-23ನೇ ಆರ್ಥಿಕ ವರ್ಷದಲ್ಲಿ ಎಸ್‌ಐಪಿ ಮೂಲಕ ಜನರು ಮ್ಯೂಚುಯಲ್ ಫಂಡ್‌ನಲ್ಲಿ ₹1.5 ಲಕ್ಷ ಕೋಟಿ ಹೂಡಿಕೆ ಮಾಡಿದ್ದಾರೆ. ಎಸ್‌ಐಪಿ ಹೂಡಿಕೆ ಮೂಲಕ ಹೂಡಿಕೆದಾರ ಇನ್ನಷ್ಟು ಲಾಭ ಗಳಿಸಲು ನೆರವಾಗುವ ಕೆಲವು ಸೂತ್ರಗಳ ಬಗ್ಗೆ ಈ ಲೇಖನದಲ್ಲಿ ತಿಳಿಯೋಣ ಬನ್ನಿ.

ಎಸ್‌ಐಪಿ ಅಂದರೆ ಏನು?: ಎಸ್‌ಐಪಿ ಎನ್ನುವುದು ಸಂಪತ್ತು ಸೃಷ್ಟಿಗೆ ಇರುವ ಒಂದು ಉತ್ತಮ ಮಾರ್ಗ. ಎಸ್‌ಐಪಿ ಹೂಡಿಕೆ ಮೂಲಕ ಯಾರೂ ಧುತ್ತೆಂದು ಶ್ರೀಮಂತರಾಗಲು ಸಾಧ್ಯವಿಲ್ಲ. ಸಂಪತ್ತಿನೆಡೆಗೆ ನಿಧಾನಗತಿಯ ನಡಿಗೆ ಎನ್ನುವ ಲೆಕ್ಕಾಚಾರವನ್ನು ಯಾರು ನಂಬಿ ಹೂಡಿಕೆ ಮಾಡುತ್ತಾರೋ ಅವರನ್ನು ಇದು ಕೈಹಿಡಿದು ನಡೆಸುತ್ತದೆ.

ಎಸ್‌ಐಪಿ ಅಂದರೆ ಪ್ರತಿ ತಿಂಗಳು ನಿರ್ದಿಷ್ಟ ಮೊತ್ತವನ್ನು ನಿರ್ದಿಷ್ಟ ಮ್ಯೂಚುಯಲ್ ಫಂಡ್‌ನಲ್ಲಿ ನಿಯಮಿತವಾಗಿ ಹೂಡಿಕೆ ಮಾಡುವ ವಿಧಾನ. ಉದಾಹರಣೆಗೆ 'ಎ' ಎನ್ನುವ ಮ್ಯೂಚುಯಲ್ ಫಂಡ್‌ನಲ್ಲಿ ₹2 ಸಾವಿರ ಹಾಕಲು ನಿರ್ಧರಿಸಿ ಎಸ್‌ಐಪಿ ಮೂಲಕ ಹೂಡಿಕೆ ಆರಂಭಿಸಿದರೆ ಪ್ರತಿ ತಿಂಗಳು ಆ ಫಂಡ್‌ನಲ್ಲಿ ₹2 ಸಾವಿರ ಹೂಡುತ್ತಾ ಸಾಗಬೇಕಾಗುತ್ತದೆ.

ಎಸ್‌ಐಪಿ ವಿಧಾನದ ಹೂಡಿಕೆಗೆ ದೊಡ್ಡ ಮೊತ್ತದ ಹಣ ಬೇಡ: ಮ್ಯೂಚುಯಲ್ ಫಂಡ್ ಎಸ್‌ಐಪಿ ಹೂಡಿಕೆಗೆ ದೊಡ್ಡ ಮೊತ್ತದ ಹಣ ಬೇಕಿಲ್ಲ. ಕನಿಷ್ಠ ₹100, ₹500 ರಿಂದಲೂ ಎಸ್‌ಐಪಿ ಹೂಡಿಕೆ ಮಾಡಬಹುದು. ಇಲ್ಲವೆ ಕೆಲವು ಸಾವಿರಗಳಲ್ಲಿ, ಕೆಲ ಲಕ್ಷಗಳಲ್ಲಿ ಹೂಡಿಕೆ ಮಾಡಬೇಕು ಎಂದರೆ ಅದಕ್ಕೂ ಅವಕಾಶವಿದೆ. ನಿಮ್ಮ ಗಳಿಕೆ ಹೆಚ್ಚಾದಂತೆ ಹೂಡಿಕೆ ಮೊತ್ತ ಹೆಚ್ಚಿಸಿಕೊಳ್ಳಬಹುದು.

ಒಂದೊಮ್ಮೆ ನಿಮ್ಮ ಹಣಕಾಸಿನ ಸ್ಥಿತಿ ಉತ್ತಮವಾಗಿಲ್ಲ: ಒಂದು ತಿಂಗಳು ಹೂಡಿಕೆ ಸಾಧ್ಯವಿಲ್ಲ ಎಂದರೆ ಎಸ್‌ಐಪಿಯನ್ನು ನಿಲ್ಲಿಸಬಹುದು (ಸ್ಕಿಪ್ ಮಾಡಬಹುದು). ಇದಕ್ಕೆ ಯಾವುದೇ ದಂಡ ಕಟ್ಟಬೇಕಾಗಿ ಬರುವುದಿಲ್ಲ.

ಮ್ಯೂಚುಯಲ್ ಫಂಡ್‌ನಲ್ಲಿ ಚಕ್ರಬಡ್ಡಿಯ ಲಾಭ: ಮ್ಯೂಚುಯಲ್ ಫಂಡ್‌ನಲ್ಲಿ ದೀರ್ಘಾವಧಿಗೆ ಹೂಡಿಕೆ ಮಾಡಿದಾಗ ಚಕ್ರಬಡ್ಡಿಯ ಲಾಭ ಪಡೆಯಬಹುದು. ಎಸ್‌ಐಪಿಯಲ್ಲಿ ಸಮಯವೇ ನಿಮ್ಮ ಸಂಪತ್ತು. ಹೆಚ್ಚು ಕಾಲ ಹೂಡಿಕೆ ಮಾಡಿದಾಗ ದುಡ್ಡೇ ನಿಮಗೆ ದುಡಿದು ಕೊಡುತ್ತದೆ. ಉದಾಹರಣೆಗೆ ನೀವು ಮುಂದಿನ 20 ವರ್ಷಗಳ ಕಾಲ ಪ್ರತಿ ತಿಂಗಳು ₹1 ಸಾವಿರ ಎಸ್‌ಐಪಿ ಮಾಡಲಿದ್ದೀರಿ, ಶೇ 12ರಷ್ಟು ಲಾಭಾಂಶ ನಿರೀಕ್ಷೆ ಮಾಡುತ್ತೀರಿ ಎಂದುಕೊಳ್ಳಿ. ಆಗ ನಿಮ್ಮ ಹೂಡಿಕೆ ಮತ್ತು ಗಳಿಕೆ ಸೇರಿ ₹9.9 ಲಕ್ಷ ಆಗಿರುತ್ತದೆ. ಇದೇ ಹೂಡಿಕೆಯನ್ನು 20 ವರ್ಷಗಳ ಬದಲಿಗೆ 25 ವರ್ಷಗಳಿಗೆ ವಿಸ್ತರಿಸಿದ್ದೀರಿ ಎಂದುಕೊಳ್ಳಿ. ಆಗ ನಿಮ್ಮ ಹೂಡಿಕೆ ಮತ್ತು ಗಳಿಕೆ ಸೇರಿ ₹18.8 ಲಕ್ಷ ಸಿಗುತ್ತದೆ.

ಎಸ್‌ಐಪಿ ಹೂಡಿಕೆ ತಪ್ಪಿಸಿದರೆ ನಷ್ಟ ಜಾಸ್ತಿ: ಎಸ್‌ಐಪಿ ಮೂಲಕ ಮ್ಯೂಚುಯಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವಾಗ ಯಾವುದೋ ಒಂದು ತಿಂಗಳು ಹಣ ಇಲ್ಲ ಎನ್ನುವ ಕಾರಣಕ್ಕೆ ಎಸ್‌ಐಪಿಯನ್ನು ತಪ್ಪಿಸುವುದು ಅಥವಾ ನಿಲ್ಲಿಸುವುದು ಮಾಡಬಾರದು. ಹೀಗೆ ಮಾಡಿದರೆ ದೀರ್ಘಾವಧಿಯಲ್ಲಿ ಸಂಪತ್ತು ಗಳಿಕೆ ಮೇಲೆ ಪರಿಣಾಮ ಉಂಟಾಗುತ್ತದೆ.

ಉದಾಹರಣೆಗೆ ನೀವು ಈಕ್ವಿಟಿ ಮ್ಯೂಚುಯಲ್ ಫಂಡ್‌ವೊಂದರಲ್ಲಿ 20 ವರ್ಷಗಳ ಕಾಲ ಪ್ರತಿ ತಿಂಗಳು ₹15 ಸಾವಿರ ಹೂಡಿಕೆ ಮಾಡಲು ನಿರ್ಧರಿಸಿದ್ದು, ಶೇ 12ರಷ್ಟು ಲಾಭ ನಿರೀಕ್ಷೆ ಮಾಡಿದ್ದೀರಿ ಎಂದು ಭಾವಿಸಿ. ಆಗ 20 ವರ್ಷಗಳ ನಿಮ್ಮ ಒಟ್ಟು ಹೂಡಿಕೆ ಮೊತ್ತ ₹36 ಲಕ್ಷಗಳಾಗಿದ್ದು ಒಟ್ಟು ಹೂಡಿಕೆ ಮತ್ತು ಗಳಿಕೆ ಹಣ ಸೇರಿ ನಿಮಗೆ ₹1.5 ಕೋಟಿ ಸಿಕ್ಕಿರುತ್ತದೆ.

ಒಂದೊಮ್ಮೆ ನೀವು 20 ವರ್ಷಗಳ ಹೂಡಿಕೆ ಅವಧಿಯಲ್ಲಿ ಪ್ರತಿವರ್ಷ ಒಂದೊಂದು ಎಸ್‌ಐಪಿ ತಪ್ಪಿಸಿದ್ದರೆ ಹೂಡಿಕೆ ಮೊತ್ತ ₹33.2 ಲಕ್ಷ ಆಗಿರುತ್ತದೆ. ಅಂದರೆ ಹೂಡಿಕೆ ಮೊತ್ತದಲ್ಲಿ ₹2.8 ಲಕ್ಷ ಕಡಿಮೆ ಆಗಿರುತ್ತದೆ. ಹೀಗಿರುವಾಗ ನಿಮಗೆ ₹1.5 ಕೋಟಿ ಸಿಗುವ ಜಾಗದಲ್ಲಿ ₹1.1 ಕೋಟಿ ಮಾತ್ರ ಸಿಗುತ್ತದೆ. 20 ವರ್ಷಗಳ ಅವಧಿಯಲ್ಲಿ ₹40 ಲಕ್ಷ ಕಡಿಮೆ ಸಿಗುತ್ತದೆ. ಹಾಗಾಗಿ ಎಸ್‌ಐಪಿಗಳನ್ನು ತಪ್ಪಿಸುವಾಗ ಎಚ್ಚರಿಕೆಯಿಂದ ನಿರ್ಧಾರ ಮಾಡಬೇಕಿದೆ.

ಎಸ್‌ಐಪಿ ಮೂಲಕ ಹೆಚ್ಚು ಗಳಿಸುವುದು ಹೇಗೆ?: ಮ್ಯೂಚುಯಲ್ ಫಂಡ್‌ವೊಂದರಲ್ಲಿ 20 ವರ್ಷಗಳ ಕಾಲ ಪ್ರತಿ ತಿಂಗಳು ₹5 ಸಾವಿರ ಹೂಡಿಕೆ ಮಾಡಿದರೆ ಶೇ 12ರಷ್ಟು ಲಾಭಾಂಶದ ಲೆಕ್ಕಾಚಾರದಲ್ಲಿ ಅಸಲು ಮತ್ತು ಗಳಿಕೆ ಸೇರಿ ₹50 ಲಕ್ಷ ಸಿಗುತ್ತದೆ.

ಆದರೆ, ಹೂಡಿಕೆ ವಿಧಾನದಲ್ಲಿ ಸಣ್ಣ ಮೊತ್ತದ ಹೆಚ್ಚಳ ಮಾಡುತ್ತಾ ಹೋದರೆ ಸುಮಾರು ₹1 ಕೋಟಿ ಮೊತ್ತವನ್ನು ನೀವು ಗಳಿಸಬಹುದು. ನಿಮ್ಮ ಮಾಸಿಕ ಹೂಡಿಕೆ ಮೊತ್ತವನ್ನು ಪ್ರತಿವರ್ಷ ಶೇ 10ರಷ್ಟು ಹೆಚ್ಚಳ ಮಾಡುತ್ತಾ ಹೋದರೆ ಇದು ಸಾಧ್ಯವಾಗುತ್ತದೆ.

ಅಂದರೆ ಒಂದನೇ ವರ್ಷದಲ್ಲಿ ನೀವು ಪ್ರತಿ ತಿಂಗಳು ₹5 ಸಾವಿರ ಎಸ್‌ಐಪಿ ಮಾಡಿದರೆ ಎರಡನೇ ವರ್ಷ ಪ್ರತಿ ತಿಂಗಳು ₹5,500 ಎಸ್‌ಐಪಿ ಮಾಡುತ್ತೀರಿ. ಮೂರನೇ ವರ್ಷ ಪ್ರತಿ ತಿಂಗಳು ₹6,050 ಹೂಡಿಕೆ ಮಾಡುತ್ತಾ ಹೋಗುತ್ತೀರಿ. ಹೀಗೆ 20 ವರ್ಷಗಳ ಕಾಲ ಮಾಡಿದಾಗ ₹1 ಕೋಟಿ ಗಳಿಕೆ ಸಾಧ್ಯವಾಗುತ್ತದೆ. ಹೀಗೆ ಎಸ್‌ಐಪಿಯನ್ನು ಹೆಚ್ಚಿಸುತ್ತಾ ಹೋಗುವುದಕ್ಕೆ ಸ್ಟೆಪ್ ಅಪ್ ಎಸ್‌ಐಪಿ ಎನ್ನುತ್ತಾರೆ.

(ಲೇಖಕ: ಚಾರ್ಟರ್ಡ್ ಅಕೌಂಟೆಂಟ್)

ದಾಖಲೆ ಮಟ್ಟಕ್ಕೆ ಜಿಗಿದ ಸೂಚ್ಯಂಕಗಳು

ಷೇರುಪೇಟೆ ಸೂಚ್ಯಂಕಗಳಾದ ಸೆನ್ಸೆಕ್ಸ್ ಮತ್ತು ನಿಫ್ಟಿ ಸತತ ಮೂರನೇ ವಾರವೂ ಗಳಿಕೆ ದಾಖಲಿಸಿದ್ದು, ದಾಖಲೆ ಮಟ್ಟದ ಜಿಗಿತ ಕಂಡಿವೆ.

ಮಾರ್ಚ್ 2ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಗಳಿಕೆ ದಾಖಲಿಸಿವೆ. 73,806 ಅಂಶಗಳಲ್ಲಿ ವಹಿವಾಟು ಮುಗಿಸಿದ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 0.91ರಷ್ಟು ಹೆಚ್ಚಳವಾಗಿದೆ. 22,378 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 0.75ರಷ್ಟು ಜಿಗಿದಿದೆ. ಜಿಡಿಪಿ ದರದಲ್ಲಿ ಸಕಾರಾತ್ಮಕ ಬೆಳವಣಿಗೆ, ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಉತ್ಸಾಹ, ಬಡ್ಡಿದರ ಇಳಿಕೆ ನಿರೀಕ್ಷೆ ಸೇರಿ ಹಲವು ಅಂಶಗಳು ಮಾರುಕಟ್ಟೆ ಪುಟಿದೇಳಲು ಕಾರಣವಾಗಿವೆ. ವಲಯವಾರು ಸೂಚ್ಯಂಕಗಳ ಪ್ರಗತಿಯಲ್ಲಿ ನಿಫ್ಟಿ ಬ್ಯಾಂಕಿಂಗ್ ಸೂಚ್ಯಂಕ ಶೇ 1.04, ನಿಫ್ಟಿ ಫೈನಾನ್ಸ್ ಶೇ 0.83, ನಿಫ್ಟಿ ಎಫ್‌ಎಂಸಿಜಿ ಶೇ 0.24, ನಿಫ್ಟಿ ಎನರ್ಜಿ ಶೇ 0.49, ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 0.63 , ನಿಫ್ಟಿ ಆಟೊ ಶೇ 1.55 ಮತ್ತು ನಿಫ್ಟಿ ಲೋಹ ವಲಯ ಶೇ 3.6ರಷ್ಟು ಜಿಗಿದಿವೆ. ನಿಫ್ಟಿ ಐಟಿ ಶೇ 1.16, ನಿಫ್ಟಿ ಫಾರ್ಮಾ ಶೇ 0.75, ನಿಫ್ಟಿ ಮಾಧ್ಯಮ ವಲಯ ಶೇ 5.04ರಷ್ಟು ಕುಸಿದಿವೆ.

ನಿಫ್ಟಿಯಲ್ಲಿ ಎಲ್ ಆ್ಯಂಡ್ ಟಿ ಶೇ 7.8, ಟಾಟಾ ಸ್ಟೀಲ್ ಶೇ 6.63, ಟಾಟಾ ಮೋಟರ್ಸ್ ಶೇ 5.47, ಟಾಟಾ ಕನ್ಸ್ಯೂಮರ್ ಶೇ 4.02, ಇಂಡಸ್‌ಇಂಡ್ ಬ್ಯಾಂಕ್ ಶೇ 3.06, ಜೆಎಸ್‌ಡಬ್ಲ್ಯು ಸ್ಟೀಲ್ ಶೇ 2.87, ಐಸಿಐಸಿಐ ಬ್ಯಾಂಕ್ ಶೇ 2.21ರಷ್ಟು ಹೆಚ್ಚಳವಾಗಿವೆ.

ಅಪೋಲೊ ಹಾಸ್ಪಿಟಲ್ಸ್ ಶೇ 9.42, ಬಜಾಜ್ ಆಟೊ ಶೇ 4.55, ಏಷಿಯನ್ ಪೇಂಟ್ಸ್ ಶೇ 4.53, ಟೆಕ್ ಮಹಿಂದ್ರ ಶೇ 3.85 , ವಿಪ್ರೊ ಶೇ 2.5, ಐಷರ್ ಮೋಟರ್ಸ್ ಶೇ 1.78ರಷ್ಟು ಕುಸಿದಿವೆ.

ಮುನ್ನೋಟ: ಮಾರ್ಚ್ 20ರಂದು ಅಮೆರಿಕ ಫೆಡರಲ್ ಬ್ಯಾಂಕ್ ಬಡ್ಡಿ ದರ ನಿಗದಿಯ ಬಗ್ಗೆ ನಿರ್ಧಾರ ಕೈಗೊಳ್ಳಲಿದೆ. ದೇಶೀಯವಾಗಿ ಲೋಕಸಭಾ ಚುನಾವಣೆ ಸಮೀಪಿಸುತ್ತಿರುವುದು ಸೇರಿದಂತೆ ಹಲವು ಅಂಶಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ. ಅನಿಶ್ಚಿತತೆಯ ನಡುವೆಯೂ ಅಲ್ಪಾವಧಿಯಲ್ಲಿ ಷೇರು ಮಾರುಕಟ್ಟೆ ಮತ್ತಷ್ಟು ಜಿಗಿಯುವ ಸಾಧ್ಯತೆಯಿದೆ.

ಅರಿಸಿನಕ್ಕೆ ಬಂಪರ್ ಬೆಲೆ

ಕಳೆದ ಮೂರ್ನಾಲ್ಕು ವರ್ಷಗಳಿಂದ ಅರಿಸಿನಕ್ಕೆ ಉತ್ತಮ ಧಾರಣೆ ಸಿಕ್ಕಿರಲಿಲ್ಲ. ಹಾಗಾಗಿ, ಚಾಮರಾಜನಗರ, ಬಾಗಲಕೋಟೆ, ಕಲಬುರಗಿ ಸೇರಿದಂತೆ ಇತರೆ ಜಿಲ್ಲೆಗಳಲ್ಲಿ ಅರಿಸಿನ ಬೆಳೆದಿದ್ದ ರೈತರು ಕಂಗಾಲಾಗಿದ್ದರು. ಕಳೆದ ವರ್ಷ ರೈತರ ಹೋರಾಟಕ್ಕೆ ಮಣಿದಿದ್ದ ಕೇಂದ್ರ ಸರ್ಕಾರವು ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿ ಅರಿಸಿನ ಖರೀದಿಸಿತ್ತು. ಈ ಬಾರಿ ಇಳುವರಿ ಕುಸಿತದ ನಡುವೆಯೇ ಧಾರಣೆ ಏರಿಕೆಯಾಗಿದ್ದು, ರೈತರಲ್ಲಿ ಸಂತಸ ಮೂಡಿಸಿದೆ.

ಈ ಬಾರಿ ಇಳುವರಿ ಕುಂಠಿತ

• ಸೂರ್ಯನಾರಾಯಣ ವಿ.

ಚಾಮರಾಜನಗರ: ಪ್ರಸಕ್ತ ವರ್ಷದ ಹಂಗಾಮಿನ ಆರಂಭದಲ್ಲೇ ಅರಿಸಿನಕ್ಕೆ ಬಂಪರ್ ಬೆಲೆ ಸಿಕ್ಕಿದೆ.

ಜಿಲ್ಲೆಯಲ್ಲಿ ಕಟಾವು ಆರಂಭವಾಗಿರುವ ಹೊತ್ತಿನಲ್ಲೇ, ಪಾಲಿಶ್ ಮಾಡದ ಅರಿಸಿನಕ್ಕೆ ಕ್ವಿಂಟಲ್‌ಗೆ ₹13 ಸಾವಿರದಿಂದ ₹14,500 ಧಾರಣೆ ಇದೆ. ಪಾಲಿಶ್ ಮಾಡಿದರೆ ಇನ್ನೂ ₹1000ರಿಂದ ₹1,500 ಜಾಸ್ತಿ ಬೆಲೆ ಸಿಗುತ್ತದೆ ಎನ್ನುತ್ತಾರೆ ರೈತರು.

ಕಳೆದ ವರ್ಷದ ಹಂಗಾಮಿನ ಆರಂಭದಲ್ಲಿ ಕ್ವಿಂಟಲ್‌ಗೆ ₹5,000ದಿಂದ ₹6,000 ದರ ಇತ್ತು. ಬೆಲೆ ಕುಸಿತದಿಂದ ಕಂಗಾಲಾಗಿದ್ದ ಜಿಲ್ಲೆಯ ಬೆಳೆಗಾರರು ಕೇಂದ್ರ ಸರ್ಕಾರವು ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿ (ಎಂಐಎಸ್) ಅರಿಸಿನ ಖರೀದಿಸಬೇಕು ಎಂದು ನಿರಂತರವಾಗಿ ಹೋರಾಟ ಮಾಡಿದ್ದರು.

ಕೊನೆಗೆ ಎಂಐಎಸ್‌ನಲ್ಲಿ ಖರೀದಿಸಲು ನಿರ್ಧರಿಸಿದ್ದ ಕೇಂದ್ರವು, ಪ್ರತಿ ಕ್ವಿಂಟಲ್‌ಗೆ ₹6,694 ದರ ನಿಗದಿಪಡಿಸಿತ್ತು. ಸರ್ಕಾರ ರೈತರಿಂದ ನೇರವಾಗಿ ಖರೀದಿಸಲು ಆರಂಭಿಸಿದ ಬಳಿಕ ಮುಕ್ತ ಮಾರುಕಟ್ಟೆಯಲ್ಲೂ ಬೆಲೆ ಹೆಚ್ಚಾಗಿತ್ತು. ಕ್ವಿಂಟಲ್‌ಗೆ ₹10 ಸಾವಿರದವರೆಗೂ ಏರಿಕೆಯಾಗಿತ್ತು.



ಚಾಮರಾಜನಗರ ತಾಲ್ಲೂಕಿನ ಹೊಲದಲ್ಲಿ ರೈತರೊಬ್ಬರು ಒಣ ಹಾಕಿರುವ ಅರಿಸಿನ

ಆದರೆ, ಈ ವರ್ಷ ಆರಂಭದಲ್ಲೇ ಹೆಚ್ಚು ಬೆಲೆ ಸಿಗುತ್ತಿದೆ. ತಮಿಳುನಾಡು, ಕೇರಳ ಹಾಗೂ ಸ್ಥಳೀಯ ವ್ಯಾಪಾರಿಗಳು ರೈತರ ಮನೆ ಬಾಗಿಲಿಗೆ ಬಂದು ಖರೀದಿಸುತ್ತಿದ್ದಾರೆ. ಕಟಾವು ಈಗಷ್ಟೇ ಆರಂಭವಾಗಿದ್ದು, ಮುಂದಿನ ದಿನಗಳಲ್ಲಿ ಬೆಲೆ ಇನ್ನಷ್ಟು ಹೆಚ್ಚಾಗುವ ನಿರೀಕ್ಷೆ ಇದೆ ಎಂದು ಹೇಳುತ್ತಾರೆ ಬೆಳೆಗಾರರು.

ಬಂಪರ್ ಬೆಲೆ ಏಕೆ?: ಜಿಲ್ಲೆಯಲ್ಲಿ ಕಳೆದ ಸಾಲಿನಲ್ಲಿ 8,200 ಹೆಕ್ಟೇರ್ ಪ್ರದೇಶದಲ್ಲಿ ಅರಿಸಿನ ಬೆಳೆಯಲಾಗಿದೆ. ಸಾಮಾನ್ಯವಾಗಿ ಜನವರಿ ಕೊನೆ, ಫೆಬ್ರುವರಿ ಮೊದಲ ವಾರದಲ್ಲಿ ಕಟಾವು ಆರಂಭವಾಗುತ್ತದೆ.

‘ಶನಿವಾರ ಕ್ವಿಂಟಲ್‌ಗೆ ₹14,500 ಸಾವಿರ ಇತ್ತು. ಅರಿಸಿನದಿಂದ ಪ್ರತ್ಯೇಕಿಸಲಾಗುವ ಕರ್ಕ್ಯುಮಿನ್‌ಗೆ (ಅರಿಸಿನದಲ್ಲಿ ಇರುವ ರಾಸಾಯನಿಕ ಅಂಶ) ಮಾರುಕಟ್ಟೆಯಲ್ಲಿ ಉತ್ತಮ ದರವಿದೆ. ಕಳೆದ ವರ್ಷ ಕೆ.ಜಿಗೆ ₹2,500 ಇತ್ತು. ಈ ವರ್ಷ ಅದು ₹4,500ಕ್ಕೆ ಏರಿದೆ. ಜಿಲ್ಲೆಯಲ್ಲಿ ಈ ವರ್ಷ ಶೇ 50ರಷ್ಟು ಇಳುವರಿ ಕಡಿಮೆಯಾಗಿದೆ’ ಎಂದು ಗುಂಡ್ಲುಪೇಟೆ ತಾಲ್ಲೂಕಿನ ರೈತ ನಾಗಾರ್ಜುನ್ ಕುಮಾರ್ ಮಾಹಿತಿ ನೀಡಿದರು.

ಕ್ವಿಂಟಲ್‌ಗೆ ₹13 ಸಾವಿರ ದರ

• ಬಸವರಾಜ ಹವಾಲ್ದಾರ

ಬಾಗಲಕೋಟೆ: ಬರದ ನಡುವೆಯೂ ನೀರಾವರಿ ಆಶ್ರಿತ ಪ್ರದೇಶದಲ್ಲಿ ಅರಿಸಿನ ಬೆಳೆದಿರುವ ಜಿಲ್ಲೆಯ ರೈತರ ಮೊಗದಲ್ಲಿ ಮಂದಹಾಸ ಮೂಡಿದೆ.

ಕಳೆದ ವರ್ಷ ಜಿಲ್ಲೆಯಲ್ಲಿ ಪ್ರತಿ ಕ್ವಿಂಟಲ್‌ಗೆ ₹6 ಸಾವಿರದಿಂದ ₹8 ಸಾವಿರಕ್ಕೆ ಮಾರಾಟವಾಗಿತ್ತು. ಈ ವರ್ಷ ₹13 ಸಾವಿರದಿಂದ ₹25 ಸಾವಿರದವರೆಗೂ ಮಾರಾಟ ಆಗುತ್ತಿದೆ.

ಜಿಲ್ಲೆಯ ರಬಕವಿ–ಬನಹಟ್ಟಿ, ಹೊಸೂರು, ಮಹಾಲಿಂಗಪುರ, ಮುಧೋಳ, ಶಿರೋಳ, ಸಸಾಲಟ್ಟಿ, ತೇರದಾಳ ಸುತ್ತಮುತ್ತಲಿನ ಪ್ರದೇಶದಲ್ಲಿ ಅರಿಸಿನ ಬೆಳೆಯಲಾಗುತ್ತದೆ. ಪ್ರತಿ ಎಕರೆಗೆ 30ರಿಂದ 35 ಕ್ವಿಂಟಲ್ ಇಳುವರಿ ಬರುತ್ತದೆ. ಮಳೆ ಕಡಿಮೆಯಾಗಿದ್ದರಿಂದ ಈ ಬಾರಿ ಸರಾಸರಿ ಇಳುವರಿ 25 ಕ್ವಿಂಟಲ್ ಆಸುಪಾಸಿನಲ್ಲಿದೆ.

ಮೊದಲ ಬಾರಿ ಅರಿಸಿನ ನಾಟಿ ಮಾಡಿದರೆ ಎಕರೆಗೆ ₹1 ಲಕ್ಷ ಖರ್ಚಾಗುತ್ತದೆ. ಎರಡನೇ ವರ್ಷದಿಂದ ಎಕರೆಗೆ ₹60 ಸಾವಿರದಿಂದ ₹70 ಸಾವಿರ ವೆಚ್ಚ ತಗಲುತ್ತದೆ. ಈ ಬಾರಿ ಉತ್ತಮ ಬೆಲೆ ದೊರೆತಿರುವುದರಿಂದ ಖರ್ಚು ಕಳೆದು ಪ್ರತಿ ಎಕರೆಗೆ ₹1.5 ಲಕ್ಷದಿಂದ ₹2 ಲಕ್ಷ ಲಾಭ ಸಿಕ್ಕಿದೆ ಎನ್ನುತ್ತಾರೆ ರೈತರು.

ಜಿಲ್ಲೆಯಲ್ಲಿ ಉತ್ಪಾದನೆಯಾಗುವ ಅರಿಸಿನದ ಪೈಕಿ ಶೇ 10ರಷ್ಟು ಹಸಿ ಅರಿಸಿನವು ರಾಜಸ್ತಾನದಲ್ಲಿ ಬಳಸುವ ಉಪ್ಪಿನಕಾಯಿಗೆ ಹೋಗುತ್ತದೆ. ಒಂದಷ್ಟು ಸ್ಥಳೀಯವಾಗಿ ಮಾರಾಟವಾಗುತ್ತದೆ. ಉಳಿದದ್ದು ಮಹಾರಾಷ್ಟ್ರದ ಸಾಂಗ್ಲಿ ಮಾರುಕಟ್ಟೆಗೆ ಪೂರೈಕೆಯಾಗುತ್ತದೆ.

ಔಷಧಗಳಲ್ಲಿಯೂ ಬಳಕೆ: ‘ಸೇಲಂ’ ಹಾಗೂ ‘ಬೇಸಿಕ್ ಕಡಪಾ’ ತಳಿಯ ಅರಿಸಿನವನ್ನು ಇಲ್ಲಿ ಬೆಳೆಯಲಾಗುತ್ತದೆ. ನೆಗಡಿ, ಕೆಮ್ಮು ಸೇರಿದಂತೆ ಆರೋಗ್ಯ ರಕ್ಷಣೆಯ ವಿವಿಧ ಔಷಧಗಳಲ್ಲಿ ಇದನ್ನು ಬಳಸಲಾಗುತ್ತದೆ. ಸೌಂದರ್ಯವರ್ಧಕ ಉತ್ಪಾದನೆಗಳಲ್ಲಿಯೂ ಬಳಕೆ ಮಾಡುವುದರಿಂದ ಬೇಡಿಕೆ ಹೆಚ್ಚಿದೆ.

ಕಳೆದ ವರ್ಷದಿಂದ ಅಮೆರಿಕ, ಕೊರಿಯಾ, ಯುರೋಪ್ ರಾಷ್ಟ್ರಗಳಿಗೆ ಹುನಗುಂದ ತಾಲ್ಲೂಕಿನ ಸೂಳೇಭಾವಿಯಲ್ಲಿರುವ ತೋಟಗಾರಿಕೆ ರೈತ ಉತ್ಪಾದಕ ಸಂಸ್ಥೆಯ ಮೂಲಕ ರಫ್ತು ಮಾಡಲಾಗುತ್ತಿದೆ.

ಸ್ಥಳೀಯ ಮಾರುಕಟ್ಟೆ ಕೊರತೆ

• ಜಗನ್ನಾಥ ಡಿ. ಶೇರಿಕಾರ

ಚಿಂಚೋಳಿ (ಕಲಬುರಗಿ ಜಿಲ್ಲೆ): ತಾಲ್ಲೂಕಿನಲ್ಲಿ 275 ಹೆಕ್ಟೇರ್‌ನಲ್ಲಿ ರೈತರು ಅರಿಸಿನ ಕೃಷಿ ಮಾಡುತ್ತಿದ್ದಾರೆ. ಕಳೆದ ಮೂರು ವರ್ಷಗಳಿಂದಲೂ ಉತ್ತಮ ಧಾರಣೆ ಸಿಗದೆ ಕಂಗಾಲಾಗಿದ್ದರು. ಈ ಬಾರಿ ಪ್ರತಿ ಕ್ವಿಂಟಲ್ ಅರಿಸಿನವು ₹16 ಸಾವಿರಕ್ಕೆ ಮಾರಾಟವಾಗುತ್ತಿದೆ.

ಸೇಲಂ ತಳಿಯ ಅರಿಸಿನವನ್ನು ಇಲ್ಲಿ ಹೆಚ್ಚಾಗಿ ಬೆಳೆಯಲಾಗುತ್ತಿದೆ. ರಾಜ್ಯದ ಮಹಾಲಿಂಗಪುರ, ತೆಲಂಗಾಣದ ಸದಾಶಿವಪೇಟ ಮತ್ತು ಮಹಾರಾಷ್ಟ್ರದ ಸಾಂಗ್ಲಿಗೆ ರೈತರು ಅರಿಸಿನ ತೆಗೆದುಕೊಂಡು ಹೋಗಿ ಮಾರಾಟ ಮಾಡುತ್ತಾರೆ.

ಚಿಂಚೋಳಿ ತಾಲ್ಲೂಕಿನ ನಾಗಾಈದಲಾಯಿ ಗ್ರಾಮದ ಮಸ್ತಾನ್ ಗಾರಂಪಳ್ಳಿ ಅವರ ತೋಟದಲ್ಲಿ ಬೆಳೆದಿರುವ ಅರಿಸಿನ ಕೊಯ್ಲಿಗೆ ಬಂದಿದೆ

‘20 ವರ್ಷದಿಂದ ಅರಿಸಿನ ಬೆಳೆಯುತ್ತಿದ್ದೇನೆ. ಕಳೆದ ಐದಾರು ವರ್ಷಗಳಿಂದ ಕ್ವಿಂಟಲ್‌ಗೆ ಕೇವಲ ₹6 ಸಾವಿರ ದರ ಲಭಿಸಿತ್ತು. ಪ್ರಸಕ್ತ ವರ್ಷ ಧಾರಣೆಯು ಮೂರು ಪಟ್ಟು ಹೆಚ್ಚಾಗಿದೆ’ ಎಂದು ಅರಿಸಿನ ಬೆಳೆಗಾರ ಮಸ್ತಾನ್ ಗಾರಂಪಳ್ಳಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಅರಿಸಿನ ಬೇಸಾಯದ ನಿರ್ವಹಣೆ ಮತ್ತು ಸಂಸ್ಕರಣೆಗಾಗಿ ಪ್ರತಿ ಎಕರೆಗೆ ಕನಿಷ್ಠ ₹80 ಸಾವಿರಕ್ಕೂ ಹೆಚ್ಚು ಖರ್ಚಾಗುತ್ತದೆ. ನಮ್ಮಲ್ಲಿ ಮಾರುಕಟ್ಟೆ ಇಲ್ಲದ ಕಾರಣ ನಾವು ದಲ್ಲಾಳಿಗಳಿಗೆ ಮಾರಾಟ ಮಾಡುತ್ತೇವೆ. ಇಲ್ಲಿಯೇ ಮಾರುಕಟ್ಟೆ ಸ್ಥಾಪಿಸಿದರೆ ರೈತರಿಗೆ ಹೆಚ್ಚಿನ ಅನುಕೂಲವಾಗುತ್ತದೆ’ ಎನ್ನುತ್ತಾರೆ ಅವರು.

ಪ್ಲೇ ಸ್ಟೋರ್‌ಗೆ ಮರಳಿದ ಮ್ಯಾಟ್ರಿಮನಿ ಆ್ಯಪ್‌ಗಳು

ನವದೆಹಲಿ (ಪಿಟಿಐ): ಶುಲ್ಕ ಪಾವತಿಗೆ ಸಂಬಂಧಿಸಿದಂತೆ ಗೂಗಲ್ ಕಂಪನಿ ವಿಧಿಸಿರುವ ನಿಯಮಗಳಿಗೆ ಸಮ್ಮತಿಸಿದ ಬಳಿಕ ಮ್ಯಾಟ್ರಿಮನಿಡಾಟ್‌ಕಾಂ ಕಂಪನಿಯ ಆ್ಯಪ್‌ಗಳು ಪ್ಲೇ ಸ್ಟೋರ್‌ಗೆ ಮರಳಿವೆ.

‘ಗೂಗಲ್‌ನ ನಿಯಮಗಳ ಪಾಲನೆ ಸಂಬಂಧ ಒಪ್ಪಿಗೆ ಸೂಚಿಸಲಾಗಿದೆ. ಹಾಗಾಗಿ, ಕಂಪನಿಗೆ ಸೇರಿದ ಬೆಂಗಾಲಿ ಮ್ಯಾಟ್ರಿಮನಿ, ಮರಾಠಿ ಮ್ಯಾಟ್ರಿಮನಿ, ತಮಿಳು ಮ್ಯಾಟ್ರಿಮನಿ, ಜೋಡಿ ಮತ್ತು ಭಾರತ್ ಮ್ಯಾಟ್ರಿಮನಿ ಸೇರಿದಂತೆ ಎಂಟು ಆ್ಯಪ್‌ಗಳನ್ನು ಪ್ಲೇ ಸ್ಟೋರ್‌ನಲ್ಲಿ ಮರುಸ್ಥಾಪಿಸಲಾಗಿದೆ.

ಆದರೆ, ಕಂಪನಿಗೆ ಸೇರಿದ 100ಕ್ಕೂ ಹೆಚ್ಚು ಆ್ಯಪ್‌ಗಳನ್ನು ಇನ್ನೂ ಮರುಸ್ಥಾಪಿಸಿಲ್ಲ’ ಎಂದು ‘ಮ್ಯಾಟ್ರಿಮನಿ ಡಾಟ್‌ಕಾಂ’ನ ಸಂಸ್ಥಾಪಕ ಹಾಗೂ ಸಿಇಒ ಮುರುಗವೇಲ್ ಜೆ. ಹೇಳಿದ್ದಾರೆ.

‘ಭಾರತೀಯ ಆ್ಯಪ್‌ಗಳನ್ನು ಪ್ಲೇ ಸ್ಟೋರ್‌ನಿಂದ ತೆಗೆದುಹಾಕುವುದನ್ನು ಒಪ್ಪಲು ಸಾಧ್ಯವಿಲ್ಲ ಎಂದು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ. ಆದರೂ, ಗೂಗಲ್ ಸರ್ಕಾರದ ಸೂಚನೆಯನ್ನು ಪಾಲಿಸಿಲ್ಲ’ ಎಂದು ಅವರು ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಪ್ಲೇ ಸ್ಟೋರ್‌ನಿಂದ ಹಲವು ಕಂಪನಿಗಳ ಆ್ಯಪ್‌ಗಳನ್ನು ತೆಗೆದುಹಾಕಿದ್ದ ಬಗ್ಗೆ ಇಂಟರ್‌ನೆಟ್ ಆ್ಯಂಡ್ ಮೊಬೈಲ್ ಅಸೋಸಿಯೇಷನ್ ಆಫ್ ಇಂಡಿಯಾ (ಐಎಎಂಎಐ) ತೀವ್ರ ಕಳವಳ ವ್ಯಕ್ತಪಡಿಸಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹520
12 ಕ್ಕೆ	₹70
ಮೈಸೂರು	
100ಕ್ಕೆ	₹520

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹277-430
ದ್ವಿತಳಿ (ಬಿ.ವಿ)	₹330-536

₹20 ಲಕ್ಷ ಲಂಚ ಎನ್‌ಎಚ್‌ಎಐ ಅಧಿಕಾರಿ ಸೆರೆ

ನವದೆಹಲಿ (ಪಿಟಿಐ): ಖಾಸಗಿ ಕಂಪನಿಯೊಂದರಿಂದ ₹20 ಲಕ್ಷ ಲಂಚ ಪಡೆಯುತ್ತಿದ್ದ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ (ಎನ್‌ಎಚ್‌ಎಐ) ಪ್ರಧಾನ ವ್ಯವಸ್ಥಾಪಕರೊಬ್ಬರನ್ನು, ಸಿಬಿಐ ಅಧಿಕಾರಿಗಳು ಭಾನುವಾರ ಬಂಧಿಸಿದ್ದಾರೆ.

ಯೋಜನಾ ನಿರ್ದೇಶಕರೂ ಆಗಿರುವ ಅರವಿಂದ ಕಾಳೆ ಬಂಧಿತ. ಮಹಾರಾಷ್ಟ್ರದ ನಾಗ್ಪುರದಲ್ಲಿ ಲಂಚ ಪಡೆಯುತ್ತಿದ್ದ ಸಂದರ್ಭದಲ್ಲಿ ಬಂಧಿಸಲಾಗಿದ್ದು, ಲಂಚದ ಹಣ ಸೇರಿ ಒಟ್ಟು ₹45 ಲಕ್ಷವನ್ನು ವಶಕ್ಕೆ ಪಡೆಯಲಾಗಿದೆ ಎಂದು ಸಿಬಿಐ ಅಧಿಕಾರಿಗಳು ತಿಳಿಸಿದ್ದಾರೆ.

ಕಾಳೆ ಸೇರಿದಂತೆ ಇತರೆ 11 ಮಂದಿ ಹಾಗೂ ಖಾಸಗಿ ಕಂಪನಿ ವಿರುದ್ಧವೂ ಪ್ರಕರಣ ದಾಖಲಿಸಲಾಗಿದೆ ಎಂದು ತಿಳಿಸಿದ್ದಾರೆ.

ಪಾನ್, ತಂಬಾಕು ಖರೀದಿ ಕುಟುಂಬದ ಖರ್ಚು ಏರಿಕೆ

ನವದೆಹಲಿ (ಪಿಟಿಐ): ಪ್ರತಿ ಕುಟುಂಬವು ಪ್ರತಿ ತಿಂಗಳಿನ ಆದಾಯದಲ್ಲಿ ಪಾನ್, ತಂಬಾಕು ಸೇರಿದಂತೆ ಇತರೆ ಅಮಲು ಭರಿಸುವ ಪದಾರ್ಥಗಳ ಖರೀದಿಗೆ ಮಾಡುವ ವೆಚ್ಚವು ಒಂದು ದಶಕದ ಅವಧಿಯಲ್ಲಿ ಏರಿಕೆಯಾಗಿದೆ ಎಂದು ಕುಟುಂಬ ಗೃಹ ಬಳಕೆ ವೆಚ್ಚ ಸಮೀಕ್ಷೆಯು (ಎಚ್‌ಸಿಇಎಸ್) ಹೇಳಿದೆ.

2011-12ರಲ್ಲಿ ಗ್ರಾಮೀಣ ಪ್ರದೇಶದಲ್ಲಿ ಈ ಪದಾರ್ಥಗಳ ಖರೀದಿಗೆ ಪ್ರತಿ ಕುಟುಂಬದ ವೆಚ್ಚವು ಶೇ 3.2ರಷ್ಟಿತ್ತು. 2022–23ರ ವೇಳೆಗೆ ಶೇ 3.79ಕ್ಕೆ ಏರಿಕೆಯಾಗಿದೆ. ನಗರ ಪ್ರದೇಶದಲ್ಲಿ ವೆಚ್ಚದ ಪ್ರಮಾಣವು ಶೇ 1.61ರಿಂದ ಶೇ 2.43ಕ್ಕೆ ಹೆಚ್ಚಳವಾಗಿದೆ ಎಂದು ಕಳೆದ ವಾರ ಬಿಡುಗಡೆಯಾಗಿರುವ 2022–23ರ ಸಮೀಕ್ಷಾ ವರದಿ ತಿಳಿಸಿದೆ.

ಕೇಂದ್ರ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯದ ಅಡಿಯಲ್ಲಿ ಬರುವ ರಾಷ್ಟ್ರೀಯ ಮಾದರಿ ಸಮೀಕ್ಷೆ ಕಚೇರಿಯು (ಎನ್‌ಎಸ್‌ಎಸ್‌ಒ) ಈ ಸಮೀಕ್ಷೆ ನಡೆಸಿದೆ. ಆದರೆ, ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಶಿಕ್ಷಣಕ್ಕಾಗಿ ಮಾಡುವ ವೆಚ್ಚವು ಗಣನೀಯವಾಗಿ ಇಳಿಕೆಯಾಗಿದೆ ಎಂದು ವರದಿ ತಿಳಿಸಿದೆ. ನಗರ ಪ್ರದೇಶಗಳಿಗೆ ಶಿಕ್ಷಣಕ್ಕೆ ಮಾಡುವ ವೆಚ್ಚವು ಹತ್ತು ವರ್ಷಗಳ ಅವಧಿಯಲ್ಲಿ ಶೇ 6.90ರಿಂದ ಶೇ 5.78ಕ್ಕೆ ಕುಸಿದಿದೆ.

ಗ್ರಾಮೀಣ ಪ್ರದೇಶದ ಸ್ಥಿತಿಯೂ ಇದಕ್ಕಿಂತ ಹೊರತಾಗಿಲ್ಲ. ಶಿಕ್ಷಣಕ್ಕಾಗಿ ಭರಿಸುವ ವೆಚ್ಚವು ಶೇ 3.49ರಿಂದ ಶೇ 3.30ಕ್ಕೆ ಇಳಿಕೆಯಾಗಿದೆ.

ಪಾನೀಯಗಳು ಮತ್ತು ಸಂಸ್ಕರಿಸಿದ ಆಹಾರ ಖರೀದಿಗೆ ಭರಿಸುವ ವೆಚ್ಚವೂ ಹೆಚ್ಚಳವಾಗಿದೆ. 2011–12ರಲ್ಲಿ ನಗರ ಪ್ರದೇಶಗಳಲ್ಲಿ ಶೇ 8.98ರಷ್ಟಿತ್ತು. 2022–23ರಲ್ಲಿ ಶೇ 10.64ಕ್ಕೆ ಏರಿಕೆಯಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಶೇ 7.90ರಿಂದ ಶೇ 9.62ಕ್ಕೆ ಹೆಚ್ಚಳವಾಗಿದೆ.

ಸಾಗಣೆ ವೆಚ್ಚವು ನಗರ ಪ್ರದೇಶದಲ್ಲಿ ಶೇ 6.52ರಿಂದ ಶೇ 8.59ಕ್ಕೆ ಹೆಚ್ಚಳವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಶೇ 4.20ರಿಂದ ಶೇ 7.55ಕ್ಕೆ ಏರಿಕೆಯಾಗಿದೆ ಎಂದು ವರದಿ ತಿಳಿಸಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Engg/ Production Technical
MECHANICAL ENGINEERING grads. Design Engineer trainee job in oil & gas, with a renowned Bangalore company. CV to volunteerjobaid@gmail.com

General
ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ಕಂಪನಿಗಳಿಗೆ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ,TVS, ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ,ಡಿಗ್ರಿ, ITIನವರುಗಳು 18,000- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಬೇಕಾಗಿದ್ದಾರೆ. ಊಟ ವಸತಿವಿದೆ 13,000 - 17,000. 8951315839, 9141634619

ಕನ್ನಡ ಟೆಲಿಕಾಲರ್‌ಗಳು ಬೇಕು. (ತಾಜಾ/ ಅನುಭವಿ)ಸ್ಥಳ: ಮಲ್ಲೇಶ್ವರಂ, ಬೆಂಗಳೂರುಸಂಬಳ (ಮಾಸಿಕ ರೂ. 15000/-), ಕೆಲಸದ ಸಮಯ : ಮಧ್ಯಾಹ್ನ 2:00 ರಿಂದ ರಾತ್ರಿ 8:30, ಆಸಕ್ತರು 7669250202 ಗೆ ಮಿಸ್ಡ್ ಕಾಲ್ ನೀಡಿ

Multiple Vacancy
REQUIRED Experienced Telecaller, Loan Recovery Supervisor for BankLoan collection. Salary 30,000 + Incentive Contact: 9620206756.

Part-Time Jobs
ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663542555, 9035482999

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರವಾಸ

Travel
19.03.2024 11.04.2024 ಕಾಶಿ ಅಯೋಧ್ಯಾ ನೇಪಾಳ ಪೋಕ್ರ,ಮುಕ್ತಿನಾಥ. 11.04.2024 28.06.2024 ಕಾಶ್ಮೀರ್,ಗುಲ್ಮಾರ್ಗ್ ವೈಷ್ಣೋದೇವಿ ವಾಘಬಾರ್ಡರ್ ಅಮರನಾಥ್. 28.04.2024 ಸೋಮನಾಥ್ ದ್ವಾರಕ ನಿಷ್ಕಳಂಕ ಮಹಾದೇವ ಓಂಕಾರೇಶ್ವರ. ಮಹಾಕಾಳೇಶ್ವರ. 11.05.2024 24.05.2024 08.06.2024 ಚಾರ್‌ಧಾಮ್ ಸಮೇತ ಪ್ರವಾಸ. ಸಂಪರ್ಕಿಸಿ. ಏಷ್ಯನ್ ಟ್ರಾವೆಲ್‌ಏಜೆನ್ಸಿ ಕೆಳಮಹಡಿ ಬೆಂಗಳೂರು-4. 26574131 7204173686 9686708171

ಏಪ್ರಿಲ್ ಮೇ ಜೂನ್ ತಿಂಗಳಲ್ಲಿ 8 ದಿನಗಳ ಕಾಶಿ, ಗಯಾ/ 13 ದಿನಗಳ ಚಾರ್-ಧಾಮ ಬದರಿನಾಥ್, ಕೇದಾರನಾಥ್ ಗಂಗೋತ್ರಿ ಯಮನೋತ್ರಿ, ದೆಹಲಿ/ 5 ದಿನಗಳ ಹರಿದ್ವಾರ್ ಅಮೃತಸರ್ ವೈಷ್ಣೋದೇವಿ ಸಂಪರ್ಕಿಸಿ 'ಶ್ರೀಸುಧಾ ಟ್ರಾವೆಲ್ಸ್' 080- 22429289 9448119290 9019301300 8088826815

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಶಿಕ್ಷಣ
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9901641752
+91 9731810277 | 080- 45557163/164
*Conditions apply

ಕೇರಳ: ವಿದ್ಯಾರ್ಥಿ ಸಾವು ಸಿಬಿಐ ತನಿಖೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ರ‍್ಯಾಗಿಂಗ್ ಹಾಗೂ ಹಿಂಸೆಯಿಂದಾಗಿ, ವಯನಾಡ್‌ನಲ್ಲಿರುವ ಕೇರಳ ಪಶು ವೈದ್ಯಕೀಯ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಾವನ್ನಪ್ಪಿದ ಎಂಬ ಆರೋಪಗಳ ಕುರಿತು ಸಿಬಿಐ ತನಿಖೆ ನಡೆಸುವಂತೆ ವಿರೋಧ ಪಕ್ಷ ಕಾಂಗ್ರೆಸ್ ಆಗ್ರಹಿಸಿದೆ.

ಈ ಕುರಿತು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರಿಗೆ ಪತ್ರ ಬರೆದಿರುವ ಕಾಂಗ್ರೆಸ್ ನಾಯಕ ವಿ.ಡಿ.ಸತೀಶನ್, ‘ಈ ಪ್ರಕರಣದಲ್ಲಿ ಆರೋಪಿಗಳಾಗಿರುವ ಸಿಪಿಎಂನ ವಿದ್ಯಾರ್ಥಿ ವಿಭಾಗ ಎಸ್‌ಎಫ್‌ಐನ ಸ್ಥಳೀಯ ಮುಖಂಡರನ್ನು ರಕ್ಷಿಸಲು ಪೊಲೀಸರು ಯತ್ನಿಸುತ್ತಿದ್ದಾರೆ ಎನ್ನಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಘಟನೆ ಕುರಿತು ಸಿಬಿಐ ತನಿಖೆಗೆ ಆದೇಶಿಸಬೇಕು’ ಎಂದು ಆಗ್ರಹಿಸಿದ್ದಾರೆ.

ವಿ.ವಿ.ಯ ಪಶುವೈದ್ಯಕೀಯ ಕಾಲೇಜಿನಲ್ಲಿ ಎರಡನೇ ವರ್ಷದ ಪದವಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಜೆ.ಎಸ್.ಸಿದ್ಧಾರ್ಥ ಎಂಬ ವಿದ್ಯಾರ್ಥಿ ಮೇಲೆ ಭೀಕರ ಹಲ್ಲೆ ನಡೆಸಲಾಗಿತ್ತು ಎನ್ನಲಾಗಿದೆ. ಹಲ್ಲೆ ನಡೆಸುವುದಕ್ಕೆ ಬಳಸಲಾಗಿದ್ದ ವಸ್ತುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ ಎಂದು ಹೇಳಲಾಗಿದೆ.

ಫೆ.18ರಂದು ಹಾಸ್ಟೆಲ್‌ನಲ್ಲಿ ಸಿದ್ಧಾರ್ಥ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದರು. ಆದರೆ, ತಮ್ಮ ಪುತ್ರನನ್ನು ಕೊಲೆ ಮಾಡಲಾಗಿದೆ ಎಂದು ಪಾಲಕರು ಶಂಕೆ ವ್ಯಕ್ತಪಡಿಸಿದ್ದಾರೆ.

ಎಂ–ಕ್ಯಾಪ್ ₹65,302 ಕೋಟಿ ಹೆಚ್ಚಳ

ನವದೆಹಲಿ (ಪಿಟಿಐ): ಪ್ರಮುಖ 10 ಕಂಪನಿಗಳ ಪೈಕಿ ಏಳು ಕಂಪನಿಗಳ ಮಾರುಕಟ್ಟೆ ಮೌಲ್ಯವು ಕಳೆದ ವಾರ ₹65,302 ಕೋಟಿ ಹೆಚ್ಚಳವಾಗಿದೆ.

ಟಿಸಿಎಸ್ ₹19,881 ಕೋಟಿ, ಐಸಿಐಸಿಐ ಬ್ಯಾಂಕ್ ₹15,672 ಕೋಟಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ₹12,182 ಕೋಟಿ, ಎಚ್‌ಡಿಎಫ್‌ಸಿ ಬ್ಯಾಂಕ್ ₹7,178 ಕೋಟಿ, ಹಿಂದುಸ್ತಾನ್ ಯೂನಿಲಿವರ್ ₹5,051 ಕೋಟಿ, ಭಾರ್ತಿ ಏರ್‌ಟೆಲ್ ₹4,525 ಕೋಟಿ ಮತ್ತು ಐಟಿಸಿ ಕಂಪನಿಯು ₹811 ಕೋಟಿ ಗಳಿಕೆ ಕಂಡಿವೆ.

ಎಲ್‌ಐಸಿ ₹19,892, ಇನ್ಫೊಸಿಸ್ ₹9,048 ಕೋಟಿ ಮತ್ತು ರಿಲಯನ್ಸ್ ಇಂಡಸ್ಟ್ರೀಸ್‌ನ ₹3,720 ಕೋಟಿ ಮಾರುಕಟ್ಟೆ ಮೌಲ್ಯ ಇಳಿಕೆಯಾಗಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಸಂಕ್ಷಿಪ್ತ ಸುದ್ದಿ

ಸಿಯುಇಟಿ ವೇಳಾಪಟ್ಟಿ ಪರಿಷ್ಕರಣೆ ಸಾಧ್ಯತೆ

ನವದೆಹಲಿ (ಪಿಟಿಐ): ಲೋಕಸಭಾ ಚುನಾವಣಾ ವೇಳಾಪಟ್ಟಿ ಪ್ರಕಟವಾದ ಬಳಿಕ, ವಿಶ್ವವಿದ್ಯಾಲಯಗಳ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಯುಇಟಿ–ಯುಜಿ) ವೇಳಾಪಟ್ಟಿಯನ್ನು ಪರಿಷ್ಕರಿಸಲಾಗುವುದು ಎಂದು ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಅಧ್ಯಕ್ಷ ಜಗದೀಶ್ ಕುಮಾರ್ ತಿಳಿಸಿದ್ದಾರೆ.

ಸಿಯುಇಟಿ ಪರೀಕ್ಷೆಯು ಮೇ 15ರಿಂದ 31ರವರೆಗೆ ನಡೆಯಲಿದ್ದು, ಜೂನ್ 30ರಂದು ಫಲಿತಾಂಶ ಪ್ರಕಟಿಸಲಾಗುವುದು ಎಂದು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯು (ಎನ್‌ಟಿಎ) ಇತ್ತೀಚೆಗೆ ಘೋಷಿಸಿತ್ತು. ಮುಂಬರುವ ಲೋಕಸಭಾ ಚುನಾವಣೆಯ ದಿನಾಂಕಗಳು ಇದೇ ತಿಂಗಳಲ್ಲಿ ಪ್ರಕಟವಾಗಲಿರುವ ಕಾರಣ ಯುಜಿಸಿ ಅಧ್ಯಕ್ಷರು ಈ ಕುರಿತು ಹೇಳಿಕೆ ನೀಡಿದ್ದಾರೆ. ‘ಎನ್‌ಟಿಎ ಇತ್ತೀಚೆಗೆ ಬಿಡುಗಡೆ ಮಾಡಿರುವುದು ತಾತ್ಕಾಲಿಕ ವೇಳಾಪಟ್ಟಿ ಆಗಿದೆ. ಚುನಾವಣಾ ದಿನಾಂಕಗಳು ಪ್ರಕಟವಾದ ಬಳಿಕ ಸಿಯುಇಟಿ–ಯುಜಿ ಪರೀಕ್ಷೆಗಳ ಅಂತಿಮ ವೇಳಾಪಟ್ಟಿಯನ್ನು ಎನ್‌ಟಿಎ ಪ್ರಕಟ ಮಾಡಲಿದೆ’ ಎಂದು ಯುಜಿಸಿ ಅಧ್ಯಕ್ಷರು ಪ್ರತಿಕ್ರಿಯಿಸಿದ್ದಾರೆ.

ಅರ್ಜಿ ಸಲ್ಲಿಸಲು ಮಾರ್ಚ್ 26ರವರೆಗೆ ಅವಕಾಶ ಇದೆ.

ನ್ಯಾಯಮೂರ್ತಿ ಹುದ್ದೆಗೆ ನಾಳೆ ರಾಜೀನಾಮೆ: ಅಭಿಜಿತ್ ಗಂಗೋಪಾಧ್ಯಾಯ

ಕೋಲ್ಕತ್ತ (ಪಿಟಿಐ): ರಾಜ್ಯದಲ್ಲಿ ರಾಜಕೀಯ ಚರ್ಚೆಗೆ ಕಾರಣವಾಗಿದ್ದ ಶಿಕ್ಷಣಕ್ಕೆ ಸಂಬಂಧಿಸಿದ ಹಲವು ವಿಷಯಗಳ ಬಗ್ಗೆ ತೀರ್ಪು ನೀಡಿದ್ದ ಕಲ್ಕತ್ತ ಹೈಕೋರ್ಟ್ ನ್ಯಾಯಮೂರ್ತಿ ಅಭಿಜಿತ್ ಗಂಗೋಪಾಧ್ಯಾಯ ಅವರು ಮಂಗಳವಾರ ತಮ್ಮ ಹುದ್ದೆಗೆ ರಾಜೀನಾಮೆ ನೀಡಲಿದ್ದಾರೆ.

ಈ ಬಗ್ಗೆ ಸ್ವತಃ ಮಾಹಿತಿ ನೀಡಿರುವ ಅವರು, ರಾಜಕೀಯ ಪ್ರವೇಶಿಸುವ ಕುರಿತ ಪ್ರಶ್ನೆಗೆ ಉತ್ತರ ನೀಡಲು ನಿರಾಕರಿಸಿ ದ್ದಾರೆ. ರಾಜೀನಾಮೆ ಸಲ್ಲಿಸಿದ ದಿನ ಎಲ್ಲಾ ಪ್ರಶ್ನೆಗಳಿಗೂ ಉತ್ತರ ನೀಡುತ್ತೇನೆ ಎಂದು ಹೇಳಿದ್ದಾರೆ. ಪಶ್ಚಿಮ ಬಂಗಾಳದ ಸರ್ಕಾರಿ–ಅನುದಾನಿತ ಶಾಲೆಗಳ ಸಿಬ್ಬಂದಿ ನೇಮಕಾತಿಯಲ್ಲಿ ಅವ್ಯವಹಾರ ನಡೆದಿದೆ ಎನ್ನಲಾದ ಪ್ರಕರಣಗಳ ತನಿಖೆ ನಡೆಸುವಂತೆ ಸಿಬಿಐ, ಇ.ಡಿ.ಗೆ ಗಂಗೋಪಾಧ್ಯಾಯ ಅವರು ನಿರ್ದೇಶನ ನೀಡಿದ್ದರು.

ಪಾಕಿಸ್ತಾನದಲ್ಲಿ ಭಾರಿ ಮಳೆ: 37 ಸಾವು

ಪೇಶಾವರ (ಪಿಟಿಐ): ಪಾಕಿಸ್ತಾನದಾದ್ಯಂತ ಭಾರಿ ವರ್ಷಧಾರೆ ಸುರಿದಿದ್ದು, ಕಳೆದ 48 ಗಂಟೆಗಳ ಅವಧಿಯಲ್ಲಿ ಮಳೆ ಸಂಬಂಧಿತ ಘಟನೆಗಳಲ್ಲಿ ಕನಿಷ್ಠ 37 ಜನರು ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಭಾರಿ ಮಳೆಯಿಂದ ಮನೆಗಳು ಕುಸಿದಿವೆ. ಭೂಕುಸಿತದಿಂದಾಗಿ ರಸ್ತೆ ಗಳಿಗೆ ಹಾನಿಯಾಗಿದ್ದು ಸಂಚಾರ ಸ್ಥಗಿತ ಗೊಂಡಿದೆ. ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ವಾಯವ್ಯ ಭಾಗದಲ್ಲಿ ಭಾರಿ ಹಾನಿಯಾಗಿದೆ ಎಂದು ಹೇಳಿದ್ದಾರೆ.

ಅಫ್ಗಾನಿಸ್ತಾನದ ಗಡಿಗೆ ಹೊಂದಿಕೊಂಡಿರುವ ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿ ಗುರುವಾರ ರಾತ್ರಿಯಿಂದ ಮಳೆ ಸಂಬಂಧಿತ ಅವಘಡಗಳಲ್ಲಿ ಕನಿಷ್ಠ 27 ಜನರು ಮೃತಪಟ್ಟಿದ್ದು, ಇವರಲ್ಲಿ ಮಕ್ಕಳ ಸಂಖ್ಯೆಯೇ ಹೆಚ್ಚು ಎಂದು ಪ್ರಾಂತೀಯ ವಿಪತ್ತು ನಿರ್ವಹಣಾ ಪ್ರಾಧಿಕಾರವು ತಿಳಿಸಿದೆ.

ಬಲೂಚಿಸ್ತಾನದ ನೈರುತ್ಯ ಭಾಗದಲ್ಲಿ ಪ್ರವಾಹ ಉಂಟಾಗಿದೆ. ಕರಾವಳಿಯ ಗ್ವಾದಾರ್ ಪಟ್ಟಣದಲ್ಲಿ ಐವರು ಮೃತಪಟ್ಟಿದ್ದಾರೆ. ಜನಜೀವನ ಅಸ್ತವ್ಯಸ್ತವಾಗಿದ್ದು, ಮನೆಗಳಿಗೆ ನೀರು ನುಗ್ಗಿದೆ. ಅಪಾರ ಸಂಖ್ಯೆಯ ಜನರು ನಿರಾಶ್ರಿತರಾಗಿದ್ದಾರೆ. ಪಾಕ್ ಆಕ್ರಮಿತ ಕಾಶ್ಮೀರದಲ್ಲೂ ಐವರು ಮೃತಪಟ್ಟಿದ್ದಾರೆ ಎಂದು ತಿಳಿಸಿದೆ.

ಎನ್‌ಕೌಂಟರ್‌ನಲ್ಲಿ ಪೊಲೀಸ್ ಸಾವು

ಕಾಂಕೇರ್ (ಪಿಟಿಐ): ಛತ್ತೀಸಗಢದ ಕಾಂಕೇರ್ ಜಿಲ್ಲೆಯಲ್ಲಿ ಭಾನುವಾರ ನಡೆದ ಎನ್‌ಕೌಂಟರ್‌ನಲ್ಲಿ ಒಬ್ಬ ನಕ್ಸಲ್ ಹಾಗೂ ಪೊಲೀಸ್ ಕಾನ್‌ಸ್ಟೆಬಲ್ ಹತ್ಯೆಯಾಗಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಛೋಟೆಬೆಥಿಯಾ ಪೊಲೀಸ್ ಠಾಣೆ ವ್ಯಾಪ್ತಿಯ ಹಿದೂರ್ ಗ್ರಾಮ ಸಮೀಪದ ಕಾಡಿನಲ್ಲಿ ಈ ಗುಂಡಿನ ಚಕಮಕಿ ನಡೆದಿದೆ. ಭದ್ರತಾ ಸಿಬ್ಬಂದಿಯ ಜಂಟಿ ತಂಡವು ಇಲ್ಲಿ ನಕ್ಸಲ್ ನಿಗ್ರಹ ಕಾರ್ಯಾಚರಣೆ ನಡೆಸುತ್ತಿದೆ ಎಂದರು.

‘ರಾಜ್ಯ ಪೊಲೀಸ್ ಘಟಕದ ಬಸ್ತರ್ ಫೈಟರ್ಸ್‌ಗೆ ಸೇರಿದ ಕಾನ್‌ಸ್ಟೆಬಲ್ ರಮೇಶ್ ಕುರೇತಿ ಎನ್‌ಕಂಟರ್‌ನಲ್ಲಿ ಮೃತಪಟ್ಟಿದ್ದಾರೆ. ನಕ್ಸಲ್‌ನ ಮೃತದೇಹ ದೊರೆತ ಸ್ಥಳದಲ್ಲಿ ಸಿಕ್ಕ ಎಕೆ–47 ರೈಫಲ್ ವಶಪಡಿಸಿಕೊಳ್ಳಲಾಗಿದೆ. ಹಿದೂರ್ ಅರಣ್ಯದಲ್ಲಿ ನಕ್ಸಲರಿರುವ ಖಚಿತ ಮಾಹಿತಿ ಆಧರಿಸಿ ಈ ಕಾರ್ಯಾಚರಣೆ ಕೈಗೊಳ್ಳಲಾಗಿತ್ತು. ಶೋಧ ಮುಂದು ವರಿದಿದೆ’ ಎಂದು ಅವರು ತಿಳಿಸಿದ್ದಾರೆ.

ಪಟ್ನಾದಲ್ಲಿ ಬೃಹತ್ ರ್‍ಯಾಲಿ; ಕೇಂದ್ರದ ವಿರುದ್ಧ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಾಗ್ದಾಳಿ

‘ಇಂಡಿಯಾ’ ಕೂಟದ ಚುನಾವಣಾ ಕಹಳೆ

ಪಟ್ನಾ (ಪಿಟಿಐ): ರಾಹುಲ್ ಗಾಂಧಿ ಸೇರಿದಂತೆ ವಿರೋಧ ಪಕ್ಷಗಳ ‘ಇಂಡಿಯಾ’ ಮೈತ್ರಿಕೂಟದ ನಾಯಕರು ಭಾನುವಾರ ಇಲ್ಲಿ ನಡೆದ ಬೃಹತ್ ರ್‍ಯಾಲಿಯಲ್ಲಿ ಪಾಲ್ಗೊಂಡು ಲೋಕಸಭಾ ಚುನಾವಣೆಗೆ ರಣಕಹಳೆ ಮೊಳಗಿಸಿದರು.

‘ಭಾರತ್ ಜೋಡೊ ನ್ಯಾಯ ಯಾತ್ರೆ’ಗೆ ಅಲ್ಪವಿರಾಮ ಹಾಕಿ ಮಧ್ಯ-ಪ್ರದೇಶದಿಂದ ಇಲ್ಲಿಗೆ ಬಂದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ‘ಜನ ವಿಶ್ವಾಸ್’ ರ್‍ಯಾಲಿಯನ್ನುದ್ದೇಶಿಸಿ 15 ನಿಮಿಷ ಮಾತನಾಡಿದರು. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರದ ವಿರುದ್ಧ ವಾಗ್ದಾಳಿ ನಡೆಸಿದ ಅವರು, ‘ಮೋದಿ ನೇತೃತ್ವದ ಸರ್ಕಾರ ರೈತರು, ಯುವಜನರು ಮತ್ತು ಬಡವರಿಗೆ ಅನ್ಯಾಯ ಎಸಗುತ್ತಿದೆ’ ಎಂದು ಆರೋಪಿಸಿದರು.

‘ಕೇಂದ್ರ ಸರ್ಕಾರವು 2–3 ಮಂದಿ ಶ್ರೀಮಂತರಿಗಾಗಿ ಕೆಲಸ ಮಾಡುತ್ತಿದ್ದು, ದೇಶದ ಜನಸಂಖ್ಯೆಯ ಶೇ 73 ರಷ್ಟಿರುವ ದಲಿತರು ಮತ್ತು ಹಿಂದುಳಿದ ವರ್ಗದವರನ್ನು ನಿರ್ಲಕ್ಷಿಸಿದೆ’ ಎಂದು ಟೀಕಿಸಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ‘ಇಂಡಿಯಾ’ ಮೈತ್ರಿಕೂಟ ಅತಿಹೆಚ್ಚಿನ ಸ್ಥಾನಗಳನ್ನು ಪಡೆದು ಅಧಿಕಾರಕ್ಕೇರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

‘ಕೇಂದ್ರ ಸರ್ಕಾರವು ಜಾರಿ ನಿರ್ದೇಶನಾಲಯ (ಇ.ಡಿ), ಸಿಬಿಐ ಮತ್ತು ಐ.ಟಿ ಸೇರಿದಂತೆ ಕೇಂದ್ರೀಯ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಂಡು ವಿರೋಧ ಪಕ್ಷಗಳ ನಾಯಕರನ್ನು ಗುರಿಯಾಗಿಸುತ್ತಿದೆ. ಆದರೆ ಕೇಂದ್ರದ ಬೆದರಿಕೆಗೆ ನಮ್ಮ ನಾಯಕರು ಮಣಿಯುವುದಿಲ್ಲ’ ಎಂದರು.

ಪಟ್ನಾದಲ್ಲಿ ನಡೆದ ‘ಜನ ವಿಶ್ವಾಸ್’ ರ್‍ಯಾಲಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಆರ್‌ಜೆಡಿ ಅಧ್ಯಕ್ಷ ಲಾಲು ಪ್ರಸಾದ್, ಪಕ್ಷದ ಮುಖಂಡ ತೇಜಸ್ವಿ ಯಾದವ್, ಎಸ್‌ಪಿ ಅಧ್ಯಕ್ಷ ಅಖಿಲೇಶ್ ಯಾದವ್ ಹಾಗೂ ಇತರ ನಾಯಕರು ಪಾಲ್ಗೊಂಡರು –ಪಿಟಿಐ ಚಿತ್ರ

ಮುಖ್ಯಾಂಶಗಳು

- ಆರ್‌ಜೆಡಿಯಿಂದ ‘ಜನ ವಿಶ್ವಾಸ ಮಹಾ ರ್‍ಯಾಲಿ’ ಆಯೋಜನೆ
- ವಿರೋಧ ಪಕ್ಷಗಳ ಪ್ರಮುಖ ನಾಯಕರು ಭಾಗಿ

ರಾಷ್ಟ್ರೀಯ ಜನತಾ ದಳ (ಆರ್‌ಜೆಡಿ) ಅಧ್ಯಕ್ಷ ಲಾಲು ಪ್ರಸಾದ್ ಅವರು ತಮ್ಮ ಮಾತಿನುದ್ದಕ್ಕೂ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಮತ್ತು ಪ್ರಧಾನಿ ಅವರ ಕಾಲೆಳೆದರು. ‘ಮುಂಬರುವ ಚುನಾವಣೆಗೆ ಸಿದ್ಧರಾಗಿ.

> **ದೇಶದ ಅಭ್ಯುದಯ ಮತ್ತು ಸಂವಿಧಾನದ ರಕ್ಷಣೆಗಾಗಿ ನರೇಂದ್ರ ಮೋದಿ ಸರಕಾರವನ್ನು ಈ ಬಾರಿ ಕೆಳಗಿಳಿಸಲೇಬೇಕು**
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

ಮೋದಿ ಅವರನ್ನು ಅಧಿಕಾರದಿಂದ ದೂರವಿಡಲು ನೀವು ಮತ ಚಲಾಯಿಸುವಾಗ ಆತ್ಮಸ್ಥೈರ್ಯ ಹೆಚ್ಚಿಸಲು ನಾನೂ ನಿಮ್ಮೊಂದಿಗೆ ಇರುತ್ತೇನೆ’ ಎಂದು ಹೇಳಿದರು.

ಬಿಜೆಪಿ ‘ಸುಳ್ಳಿನ ಕಾರ್ಖಾನೆ’: ಬಿಜೆಪಿಯನ್ನು ‘ಸುಳ್ಳಿನ ಕಾರ್ಖಾನೆ’ ಎಂದು ಟೀಕಿಸಿದ ಆರ್‌ಜೆಡಿ ನಾಯಕ ಮತ್ತು ಬಿಹಾರದ ಮಾಜಿ ಉಪ ಮುಖ್ಯಮಂತ್ರಿ ತೇಜಸ್ವಿ ಯಾದವ್, ‘ನಮ್ಮ ಪಕ್ಷವು ಹಕ್ಕುಗಳು, ಉದ್ಯೋಗ ಮತ್ತು ಅಭಿವೃದ್ಧಿ’ಯ ಪರವಾಗಿದೆ ಎಂದರು.

‘ಬಿಜೆಪಿ ನಾಯಕರು ಸುಳ್ಳು ಭರವಸೆಗಳನ್ನು ಮಾತ್ರ ನೀಡುತ್ತಾರೆ. ಆದರೆ ನಾವು ಬಿಹಾರ ಒಳಗೊಂಡಂತೆ ದೇಶದ ಜನರ ಹಕ್ಕುಗಳು ಮತ್ತು ಉದ್ಯೋಗಕ್ಕಾಗಿ ಹೋರಾಟ ಮಾಡುತ್ತೇವೆ’ ಎಂದರು.

ಸಮಾಜವಾದಿ ಪಕ್ಷದ (ಎಸ್‌ಪಿ) ಅಧ್ಯಕ್ಷ ಅಖಿಲೇಶ್ ಯಾದವ್, ‘ಉತ್ತರ ಪ್ರದೇಶ ಮತ್ತು ಬಿಹಾರದಲ್ಲಿ ಒಟ್ಟು 120 ಲೋಕಸಭಾ ಕ್ಷೇತ್ರಗಳಿವೆ. ಈ ಎರಡು ರಾಜ್ಯಗಳಲ್ಲಿ ಬಿಜೆಪಿಯ ಪತನವನ್ನು ಖಚಿತಪಡಿಸಿದರೆ, ಅವರು ಮತ್ತೆ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ’ ಎಂದು ನುಡಿದರು.

ಎಡಪಕ್ಷಗಳ ಮುಖಂಡರಾದ ಸೀತಾರಾಮ್ ಯೆಚೂರಿ, ಡಿ.ರಾಜಾ ಮತ್ತು ದೀಪಾಂಕರ್ ಭಟ್ಟಾಚಾರ್ಯ ಅವರು ಪಾಲ್ಗೊಂಡರು.

‘ಮೋದಿ ನೈಜ ಹಿಂದೂ ಅಲ್ಲ’

ಪ್ರಧಾನಿ ನರೇಂದ್ರ ಮೋದಿ ಅವರು ‘ಕುಟುಂಬ ರಾಜಕಾರಣ’ ವಿಚಾರವಾಗಿ ವಿರೋಧ ಪಕ್ಷಗಳನ್ನು ಟೀಕಿಸುತ್ತಿರುವುದಕ್ಕೆ ತಿರುಗೇಟು ನೀಡಿದ ಆರ್‌ಜೆಡಿ ಅಧ್ಯಕ್ಷ ಲಾಲು ಪ್ರಸಾದ್, ‘ಮೋದಿ ಅವರಿಗೆ ಕುಟುಂಬ ಇಲ್ಲದಿದ್ದರೆ ನಾವೇನು ಮಾಡಲು ಸಾಧ್ಯ?’ ಎಂದು ಲೇವಡಿ ಮಾಡಿದರು. ‘ಮೋದಿ ಅವರು ರಾಮಮಂದಿರ ಬಗ್ಗೆ ಬಡಾಯಿ ಕೊಚ್ಚಿಕೊಳ್ಳುತ್ತಲೇ ಇರುತ್ತಾರೆ. ಆದರೆ, ಅವರು ನೈಜ ಹಿಂದೂ ಅಲ್ಲ. ತಂದೆ ಅಥವಾ ತಾಯಿ ಸತ್ತಾಗ ಪುತ್ರನು ತನ್ನ ತಲೆ, ಗಡ್ಡ ಬೋಳಿಸಿಕೊಳ್ಳುವುದು ಹಿಂದೂ ಸಂಪ್ರದಾಯಲ್ಲಿದೆ. ತಾಯಿ ನಿಧನರಾದಾಗ ಮೋದಿ ಹಾಗೆ ಮಾಡಲಿಲ್ಲ’ ಎಂದರು.

ಬಿಜೆಪಿ ತಿರುಗೇಟು: ಲಾಲು ಅವರು ಪ್ರಧಾನಿ ಬಗ್ಗೆ ಆಡಿದ ಮಾತುಗಳಿಗೆ ಬಿಹಾರ ಉಪಮುಖ್ಯಮಂತ್ರಿ ವಿಜಯ್ ಕುಮಾರ್ ಸಿನ್ಹಾ ತಿರುಗೇಟು ನೀಡಿದ್ದು, ‘ಲಾಲು ಪ್ರಸಾದ್ ಬಳಸಿರುವ ಭಾಷೆ ಅವರ ಮನಃಸ್ಥಿತಿಯನ್ನು ತೋರಿಸುತ್ತದೆ. ಆರ್‌ಜೆಡಿಯು ಸನಾತನ ಧರ್ಮ ವಿರೋಧಿ ಪಕ್ಷ’ ಎಂದು ದೂರಿದ್ದಾರೆ.

‘ಹರಿಯಾಣದಲ್ಲಿ ‘ಇಂಡಿಯಾ’ಗೆ ಗೆಲುವು’

ಚಂಡೀಗಢ (ಪಿಟಿಐ): ಎಎಪಿ ಮತ್ತು ಕಾಂಗ್ರೆಸ್ ಮೈತ್ರಿಕೂಟ ಹರಿಯಾಣದಲ್ಲಿ ಎಲ್ಲ ಲೋಕಸಭಾ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಲಿದೆ ಎಂದು ಎಎಪಿಯ ಹರಿಯಾಣ ಮುಖ್ಯಸ್ಥ ಸುಶೀಲ್ ಗುಪ್ತ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಕೇಂದ್ರದಲ್ಲಿ ಹಾಗೂ ಹರಿಯಾಣದಲ್ಲಿ ಬದಲಾವಣೆ ತರಲು ಜನ ಬಯಸಿದ್ದಾರೆ ಎಂದು ಅವರು ಹೇಳಿದ್ದಾರೆ.

ಟಿಎಂಸಿ ಜೊತೆ ಮೈತ್ರಿಗೆ ಸಿದ್ಧ: ಕಾಂಗ್ರೆಸ್

ಗ್ವಾಲಿಯರ್ (ಪಿಟಿಐ): ಪಶ್ಚಿಮ ಬಂಗಾಳದ ಎಲ್ಲ ಲೋಕಸಭಾ ಸ್ಥಾನಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಲು ತೃಣಮೂಲ ಕಾಂಗ್ರೆಸ್ (ಟಿಎಂಸಿ) ತೀರ್ಮಾನಿಸಿದ್ದರೂ, ಟಿಎಂಸಿ ಜೊತೆ ಮೈತ್ರಿಗೆ ಬಾಗಿಲು ತೆರೆದಿದೆ ಎಂದು ಕಾಂಗ್ರೆಸ್ ಭಾನುವಾರ ಹೇಳಿದೆ.

‘ಇಂಡಿಯಾ’ ಮೈತ್ರಿಕೂಟದಲ್ಲಿ ಇರುವುದಾಗಿ ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಹೇಳಿರುವ ಮಾತಿನ ಅರ್ಥ, ತಮ್ಮ ಆದ್ಯತೆ ಬಿಜೆಪಿ ಸೋಲಿಸುವುದು ಎಂದು ಭಾವಿಸಿರುವುದಾಗಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

ಬಿಜೆಪಿ ಪರ ಪ್ರಚಾರಕ್ಕೆ ‘ಸಾಗರೋತ್ತರ ಸ್ನೇಹಿತರು’ ಸಜ್ಜು

ವಾಷಿಂಗ್ಟನ್ (ಪಿಟಿಐ): ಲೋಕಸಭಾ ಚುನಾವಣೆಗೆ ಬಿಜೆಪಿಯು ಮೊದಲ ಸುತ್ತಿನಲ್ಲಿ 195 ಅಭ್ಯರ್ಥಿಗಳನ್ನು ಘೋಷಿಸಿರುವ ಬೆನ್ನಲ್ಲೇ, ಅಮೆರಿಕದಲ್ಲಿನ ‘ಬಿಜೆಪಿಯ ಸಾಗರೋತ್ತರ ಸ್ನೇಹಿತರು’ ಸಂಘಟನೆಯು ಚುನಾವಣಾ ಅಭಿಯಾನಕ್ಕೆ ಚಾಲನೆ ನೀಡಿದೆ. ಚುನಾವಣೆಯಲ್ಲಿ ಬಿಜೆಪಿಗೆ 400 ಸ್ಥಾನಗಳನ್ನು ಗೆಲ್ಲಲು ನೆರವು ನೀಡುವುದಾಗಿ ಸಂಘಟನೆಯು ಹೇಳಿದೆ.

‘ಭಾರತ ಮೂಲದವರು ಬಿಜೆಪಿಗೆ ಬೆಂಬಲ ನೀಡಲಿದ್ದಾರೆ’ ಎಂದು ಸಂಘಟನೆಯ ಅಮೆರಿಕದ ಅಧ್ಯಕ್ಷ ಅಡಪ ಪ್ರಸಾದ್ ತಿಳಿಸಿದರು. ಸಂಘಟನೆ ಆಯೋಜಿಸಿದ್ದ ಚುನಾವಣಾ ಅಭಿಯಾನದ ಆರಂಭದ ಕಾರ್ಯಕ್ರಮದಲ್ಲಿ ಅಂದಾಜು 100 ಮಂದಿ ಪ್ರಮುಖರು ಪಾಲ್ಗೊಂಡಿದ್ದರು.

ಕರ್ನಾಟಕ, ಕೇರಳ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ಉತ್ತರ ಪ್ರದೇಶ, ಗುಜರಾತ್ ಸೇರಿದಂತೆ ಹಲವು ರಾಜ್ಯಗಳ ಬಗ್ಗೆ ತಾವು ಸಿದ್ಧಪಡಿಸಿರುವ ವಿಶ್ಲೇಷಣೆಯನ್ನು ಭಾರತ ಮೂಲದ ಅಮೆರಿಕನ್ನರು ಕಾರ್ಯಕ್ರಮದಲ್ಲಿ ಮಂಡಿಸಿದರು. ‘ಪ್ರತಿ ರಾಜ್ಯದಲ್ಲಿ ಆಗಿರುವ ಪ್ರಗತಿಯನ್ನು ನಾವು ಪರಿಶೀಲಿಸಿದೆವು. ಪ್ರಧಾನಿ ನರೇಂದ್ರ ಮೋದಿ ಅವರ ಸಾಧನೆಯ ಬಗ್ಗೆ ವಿಸ್ತೃತ ವಿವರಣೆ ನೀಡಿದೆವು’ ಎಂದು ಪ್ರಸಾದ್ ಹೇಳಿದರು.

ಈ ಸಂಘಟನೆಯು ಆಯೋಜಿಸಲಿರುವ ಚುನಾವಣಾ ಸಂಬಂಧಿ ಚಟುವಟಿಕೆಗಳಲ್ಲಿ ಭಾಗಿಯಾಗಲು ಇದುವರೆಗೆ ಮೂರು ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ಮುಂದೆ ಬಂದಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ವಿವಿಧ ಚಟುವಟಿಕೆಗಳು, ದೂರವಾಣಿ ಕರೆಗಳು, ಮತದಾರರ ವಿಶ್ಲೇಷಣೆ, ನೇರವಾಗಿ ಚುನಾವಣಾ ಪ್ರಚಾರದಲ್ಲಿ ಭಾಗಿಯಾಗುವುದು ಹಾಗೂ ಭಾರತಕ್ಕೆ ಪ್ರಯಾಣ ಬೆಳೆಸುವ ಕಾರ್ಯಗಳನ್ನು ಸಂಘಟನೆಯು ಹಮ್ಮಿಕೊಂಡಿದೆ.

ಬಿಜೆಪಿ ಅಭ್ಯರ್ಥಿಗಳಿಗೆ ಮತ ಚಲಾಯಿಸಿ, ಮೋದಿ ಅವರನ್ನು ಮೂರನೆಯ ಬಾರಿಗೆ ಪ್ರಧಾನಿಯಾಗಿ ಆಯ್ಕೆ ಮಾಡಬೇಕು ಎಂಬ ಮನವಿಯೊಂದಿಗೆ ಅಮೆರಿಕದಿಂದ ಭಾರತಕ್ಕೆ 25 ಲಕ್ಷ ದೂರವಾಣಿ ಕರೆಗಳನ್ನು ಮಾಡಲು ಯೋಜನೆಯನ್ನು ಸಂಘಟನೆಯು ಸಿದ್ಧಪಡಿಸುತ್ತಿದೆ.

‘ಮೋದಿ ಕಿ ಗ್ಯಾರಂಟಿ’, ‘ಮೊಹಲ್ಲಾ ಚಾಯ್ ಪೆ ಚರ್ಚಾ’, ಕಾರು ರ್‍ಯಾಲಿ ಮತ್ತು ಹೋಳಿ ಮಿಲನ್ ಕಾರ್ಯಕ್ರಮಗಳನ್ನು ಸಂಘಟನೆ ಹಮ್ಮಿಕೊಳ್ಳಲಿದೆ. ‘ನಾವು ಸಜ್ಜಾಗಿದ್ದೇವೆ. ಎಲ್ಲರಲ್ಲಿಯೂ ಉತ್ಸಾಹ ಮೂಡಿದೆ. ನಾವು ಈ ಬಾರಿ ಪ್ರಧಾನಿಯವರಿಗಾಗಿ 400 ಸ್ಥಾನಗಳ ಗಡಿ ದಾಟಲಿದ್ದೇವೆ. ಪ್ರಧಾನಿಯವರು ದೇಶಕ್ಕಾಗಿ ಎಷ್ಟೆಲ್ಲ ಕೆಲಸ ಮಾಡಿದ್ದಾರೆ, ಅವರನ್ನು ಎಲ್ಲೆಡೆ ಇಷ್ಟಪಡಲಾಗುತ್ತಿದೆ’ ಎಂದು ಸಂಘಟನೆಯ ಸಿಖ್ ವ್ಯವಹಾರಗಳ ವಿಭಾಗದ ಸಂಚಾಲಕ ಕನ್ವಲ್ಜಿತ್ ಸಿಂಗ್ ಸೋನಿ ಹೇಳಿದರು.

ಕಣದಿಂದ ಹಿಂದೆ ಸರಿದ ಪವನ್

ಪವನ್ ಸಿಂಗ್

ನವದೆಹಲಿ/ಕೋಲ್ಕತ್ತ (ಪಿಟಿಐ): ಭೋಜಪುರಿ ಗಾಯಕ ಹಾಗೂ ನಟ ಪವನ್ ಸಿಂಗ್ ಅವರು ಲೋಕಸಭಾ ಚುನಾವಣಾ ಕಣದಿಂದ ಹಿಂದೆ ಸರಿಯುತ್ತಿರುವುದಾಗಿ ಭಾನುವಾರ ಹೇಳಿದ್ದಾರೆ. ಅವರು ಪಶ್ಚಿಮ ಬಂಗಾಳದ ಆಸನ್ಸೋಲ್ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಎಂದು ಬಿಜೆಪಿ ಶನಿವಾರ ಪ್ರಕಟಿಸಿತ್ತು.

ಚುನಾವಣಾ ಪ್ರಚಾರ ಆರಂಭಕ್ಕೂ ಮೊದಲೇ ಬಿಜೆಪಿಯು ಕ್ಷೇತ್ರ ಬಿಟ್ಟುಕೊಟ್ಟಿದೆ ಎಂದು ಟಿಎಂಸಿ ಲೇವಡಿ ಮಾಡಿದೆ. ಟಿಎಂಸಿಯ ಶತ್ರುಘ್ನ ಸಿನ್ಹಾ ಅವರು ಈಗ ಈ ಕ್ಷೇತ್ರ ಪ್ರತಿನಿಧಿಸು-ತ್ತಿದ್ದಾರೆ. ಕೆಲವು ಕಾರಣಗಳಿಂದಾಗಿ ಆಸನ್ಸೋಲ್ ಕ್ಷೇತ್ರದಿಂದ ಸ್ಪರ್ಧಿಸಲು ತಮ್ಮಿಂದ ಆಗುತ್ತಿಲ್ಲ ಎಂದು ಸಿಂಗ್ ಅವರು ‘ಎಕ್ಸ್’ನಲ್ಲಿ ಬರೆದಿದ್ದಾರೆ. ಆದರೆ ಕಾರಣಗಳನ್ನು ಅವರು ವಿವರಿಸಿಲ್ಲ. ಸಿಂಗ್ ಅವರಿಗೆ ಟಿಕೆಟ್ ಘೋಷಿಸಿದ ಕ್ರಮವನ್ನು ಟಿಎಂಸಿ ಟೀಕಿಸಿತ್ತು. ಸಿಂಗ್ ಅವರ ಹಲವು ಹಾಡುಗಳು ಒರಟಾಗಿವೆ, ಮಹಿಳೆಯರನ್ನು ಅಶ್ಲೀಲ ರೀತಿಯಲ್ಲಿ ಚಿತ್ರಿಸಿವೆ ಎಂದು ದೂರಿತ್ತು.

ಬಿಜೆಪಿಯು ಮಹಿಳೆಯರ ಸಬಲೀಕರಣದ ಬಗ್ಗೆ ಮಾತುಗಳನ್ನು ಆಡುತ್ತದೆ. ಆದರೆ, ವಾಸ್ತವದಲ್ಲಿ ಆ ಪಕ್ಷವು ಮಹಿಳಾ ವಿರೋಧಿ ಎಂದು ಟಿಎಂಸಿ ಮುಖಂಡ ಶಂತನು ಸೇನ್ ಟೀಕಿಸಿದ್ದರು. ವಿವಾದವನ್ನು ತಣ್ಣಗಾಗಿಸುವ ಉದ್ದೇಶದಿಂದ ಸಿಂಗ್ ಅವರಿಗೆ ಕಣದಿಂದ ಹಿಂದೆ ಸರಿಯುವಂತೆ ಬಿಜೆಪಿಯು ಮನ ಒಲಿಸಿತು ಎನ್ನಲಾಗಿದೆ.

ಸಿಂಗ್ ಅವರ ವಿಡಿಯೊಗಳು ತೀರಾ ಅಶ್ಲೀಲವಾಗಿ, ಸ್ತ್ರೀದ್ವೇಷದಿಂದ ಕೂಡಿವೆ ಎಂದು ಟಿಎಂಸಿ ಸಂಸದ ಸಾಕೇತ್ ಗೋಖಲೆ ಟೀಕಿಸಿದ್ದರು.

ರಾಜಕಾರಣಕ್ಕೆ ಹರ್ಷವರ್ಧನ್ ವಿದಾಯ

ನವದೆಹಲಿ (ಪಿಟಿಐ): ಸಕ್ರಿಯ ರಾಜಕಾರಣದಿಂದ ಹಿಂದಕ್ಕೆ ಸರಿಯುತ್ತಿರುವುದಾಗಿ ಸಂಸದ, ಬಿಜೆಪಿ ಮುಖಂಡ ಹರ್ಷ ವರ್ಧನ್ ಅವರು ಭಾನುವಾರ ಹೇಳಿದ್ದಾರೆ. ಅವರು ಚಾಂದಿನಿ ಚೌಕ್ ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ. ಶನಿವಾರ ಬಿಡುಗಡೆಯಾದ ಬಿಜೆಪಿ ಅಭ್ಯರ್ಥಿಗಳ ಪಟ್ಟಿಯಲ್ಲಿ ಹರ್ಷ ವರ್ಧನ್ ಅವರ ಹೆಸರು ಇಲ್ಲ.

ಚಾಂದಿನಿ ಚೌಕ್ ಕ್ಷೇತ್ರದಿಂದ ಪ್ರವೀಣ್ ಖಂಡೇಲ್ವಾಲ್ ಅವರನ್ನು ಕಣಕ್ಕೆ ಇಳಿಸಲು ಪಕ್ಷ ತೀರ್ಮಾನಿಸಿದೆ. ಹರ್ಷ ವರ್ಧನ್ ಅವರು ಕೇಂದ್ರ ಸಚಿವರಾಗಿ ಕೆಲಸ ಮಾಡಿದ್ದಾರೆ. ರಾಜಕಾರಣದಲ್ಲಿ 30ಕ್ಕೂ ಹೆಚ್ಚು ವರ್ಷಗಳನ್ನು ಕಳೆದ ನಂತರದಲ್ಲಿ ತಾವು ತಮ್ಮ ಮೂಲಕ್ಕೆ ಮರಳುವುದಾಗಿ ಹರ್ಷ ವರ್ಧನ್ ‘ಎಕ್ಸ್’ನಲ್ಲಿ ಹೇಳಿದ್ದಾರೆ. ‘ತಂಬಾಕು, ಮಾದಕ ವಸ್ತುಗಳ ಬಳಕೆಯ ವಿರುದ್ಧ ಜಾಗೃತಿ ಕಾರ್ಯ, ಹವಾಮಾನ ಬದಲಾವಣೆ ಕುರಿತ ಜಾಗೃತಿ, ಸುಸ್ಥಿರ ಜೀವನ ಪದ್ಧತಿಯ ಬಗ್ಗೆ ನಾನು ಕೆಲಸ ಮುಂದುವರಿಸಲಿದ್ದೇನೆ’ ಎಂದು ತಿಳಿಸಿದ್ದಾರೆ.

ಹರ್ಷ ವರ್ಧನ್ ಅವರು 2014ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಕಪಿಲ್ ಸಿಬಲ್ ಅವರನ್ನು ಸೋಲಿಸಿದ್ದರು. 2019ರ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಜೈ ಪ್ರಕಾಶ್ ಅಗರ್ವಾಲ್ ಅವರಿಗೆ ಸೋಲುಣಿಸಿದ್ದರು.

‘ವಿಕಸಿತ ಭಾರತ’: ಪ್ರಧಾನಿ ಮೋದಿ ಸಭೆ’

ನವದೆಹಲಿ (ಪಿಟಿಐ): ‘ವಿಕಸಿತ ಭಾರತ – 2047’ಕ್ಕೆ ಸಂಬಂಧಿಸಿದ ಕಾರ್ಯಸೂಚಿ ಸಿದ್ಧಪಡಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಸಂಪುಟದ ಸದಸ್ಯರ ಜೊತೆ ಭಾನುವಾರ ಇಡೀ ದಿನ ಸಭೆ ನಡೆಸಿದರು. ಮುಂದಿನ ಐದು ವರ್ಷಗಳಿಗೆ ಸಂಬಂಧಿಸಿದ ವಿಸ್ತೃತ ಕ್ರಿಯಾಯೋಜನೆಯ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆಯಿತು.

ಮೇ ತಿಂಗಳಲ್ಲಿ ಹೊಸ ಸರ್ಕಾರ ರಚನೆ ಆದ ನಂತರದಲ್ಲಿ ತಕ್ಷಣಕ್ಕೆ ಕೈಗೊಳ್ಳಬೇಕಾದ ಕ್ರಮಗಳ ‘100 ದಿನಗಳ ಕಾರ್ಯಸೂಚಿ’ ಕುರಿತು ಕೂಡ ಚರ್ಚೆ ನಡೆಯಿತು ಎಂದು ಸರ್ಕಾರದ ಮೂಲಗಳು ಹೇಳಿವೆ.

‘ವಿಕಸಿತ ಭಾರತ’ ಪರಿಕಲ್ಪನೆಯನ್ನು ಕಾರ್ಯರೂಪಕ್ಕೆ ತರಲು ಅಗತ್ಯವಿರುವ ಯೋಜನೆಯನ್ನು ಸಿದ್ಧಪಡಿಸಲು ಎರಡು ವರ್ಷ ಗಳಿಗೂ ಹೆಚ್ಚಿನ ಅವಧಿ ತೆಗೆದುಕೊಳ್ಳಲಾಗಿದೆ. ಎಲ್ಲ ಸಚಿವಾಲಯಗಳು, ರಾಜ್ಯ ಸರ್ಕಾರಗಳು, ಅಕಾಡೆಮಿಕ್ ವಲಯದ ವಿದ್ವಾಂಸರು, ಉದ್ಯಮಗಳ ಪ್ರಮುಖರು, ನಾಗರಿಕ ಸಮಾಜದ ಪ್ರತಿನಿಧಿಗಳು, ವಿಜ್ಞಾನಿಗಳು, ಯುವಕರಿಂದ ಇದಕ್ಕೆ ಸಲಹೆಗಳನ್ನು ಪಡೆಯಲಾಗಿದೆ. ‘2,700 ಕ್ಕೂ ಹೆಚ್ಚಿನ ಸಭೆಗಳು, ಕಾರ್ಯಾಗಾರಗಳು, ವಿಚಾರಗೋಷ್ಠಿಗಳನ್ನು ಹಲವು ಹಂತಗಳಲ್ಲಿ ನಡೆಸಲಾಗಿದೆ. 20 ಲಕ್ಷಕ್ಕೂ ಹೆಚ್ಚಿನ ಯುವಕರಿಂದ ಸಲಹೆಗಳನ್ನು ಪಡೆಯಲಾಗಿದೆ’ ಎಂದು ಅಧಿಕಾರಿಯೊಬ್ಬರು ಹೇಳಿದರು.

ಲೋಕಸಭಾ ಚುನಾವಣೆಯ ಘೋಷಣೆಗೂ ಮೊದಲು ನಡೆದ ಇಂತಹ ಕಡೆಯ ಸಭೆ ಇದಾಗಬಹುದು ಎನ್ನಲಾಗಿದೆ. ಈ ಸಭೆಯಲ್ಲಿ ಹಲವು ಸಚಿವಾಲಯಗಳು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡವು.

ಬಿಜೆಪಿ: ಹೊಸ ಮುಖಗಳಿಗೂ ಮಣೆ

ಉತ್ತರ ಪ್ರದೇಶ: ಪಟ್ಟಿಯಲ್ಲಿ ವರುಣ್ ಗಾಂಧಿ, ಮೇನಕಾ ಗಾಂಧಿ, ಬ್ರಿಜ್‌ಭೂಷಣ್ ಸಿಂಗ್ ಹೆಸರಿಲ್ಲ

ಲಖನೌ (ಪಿಟಿಐ): ಅತಿ ಹೆಚ್ಚು 80 ಲೋಕಸಭಾ ಕ್ಷೇತ್ರಗಳನ್ನು ಹೊಂದಿರುವ ಉತ್ತರ ಪ್ರದೇಶದ ಎಲ್ಲ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಬೇಕು ಎಂಬ ಉದ್ದೇಶದಿಂದ, ಕೇಸರಿ ಪಕ್ಷವು ಬಹುತೇಕ ಹಾಲಿ ಸಂಸದರಿಗೇ ಮಣೆ ಹಾಕುವ ತೀರ್ಮಾನ ತೆಗೆದುಕೊಂಡಿದೆ. ಕೆಲ ಕ್ಷೇತ್ರಗಳಲ್ಲಿ ಹೊಸಬರಿಗೂ ಟಿಕೆಟ್ ನೀಡುವ ತಂತ್ರಗಾರಿಕೆ ಮೊರೆ ಹೋಗಿದೆ.

ಶನಿವಾರ ಬಿಡುಗಡೆ ಮಾಡಿರುವ ಮೊದಲ ಪಟ್ಟಿಯಲ್ಲಿ, ರಾಜ್ಯದ 51 ಕ್ಷೇತ್ರಗಳ ಅಭ್ಯರ್ಥಿಗಳ ಹೆಸರು ಘೋಷಣೆ ಮಾಡಿರುವುದು ಬಿಜೆಪಿಯ ಈ ಕಾರ್ಯ-ತಂತ್ರವನ್ನು ಸ್ಪಷ್ಟಪಡಿಸುತ್ತದೆ.

ಆದರೆ, ಪಿಲಿಭಿತ್ ಕ್ಷೇತ್ರ ಪ್ರತಿನಿಧಿಸು-ತ್ತಿರುವ ವರುಣ್ ಗಾಂಧಿ, ಸುಲ್ತಾನಪುರ ಸಂಸದೆ ಮೇನಕಾ ಗಾಂಧಿ, ಭಾರತೀಯ ಕುಸ್ತಿ ಫೆಡರೇಷನ್‌ನ ಮಾಜಿ ಅಧ್ಯಕ್ಷ ಬ್ರಿಜ್‌ಭೂಷಣ್ ಸಿಂಗ್ ಅವರಿಗೆ ಮೊದಲ ಪಟ್ಟಿಯಲ್ಲಿ ಸ್ಥಾನ ಸಿಕ್ಕಿಲ್ಲ. ಹೀಗಾಗಿ, ಇವರಿಗೆ ಟಿಕೆಟ್ ನೀಡಲಾಗುತ್ತದೆಯೇ, ಇಲ್ಲವೇ ಎಂಬ ಬಗ್ಗೆ ಅನಿಶ್ಚಿತತೆ ಮೂಡಿದೆ.

ಕೈಸರ್‌ಗಂಜ್ ಲೋಕಸಭಾ ಕ್ಷೇತ್ರದ ಸಂಸದ ಬ್ರಿಜ್‌ಭೂಷಣ್ ಸಿಂಗ್ ಅವರು ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಎದುರಿ-ಸುತ್ತಿದ್ದಾರೆ. ಹೀಗಾಗಿ, ಬ್ರಿಜ್‌ಭೂಷಣ್ ಸಿಂಗ್ ಬದಲಾಗಿ ಅವರ ಪುತ್ರ ಪ್ರತೀಕ್ ಭೂಷಣ್ ಸಿಂಗ್ ಅವರಿಗೆ ಟಿಕೆಟ್ ನೀಡುವ ಸಾಧ್ಯತೆ ಇದೆ ಎಂದು ಬಿಜೆಪಿ ಮೂಲಗಳು ಹೇಳುತ್ತವೆ.

ವರುಣ್ ಗಾಂಧಿ ಅವರು ರೈತರ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಇತ್ತೀಚಿನ ದಿನಗಳಲ್ಲಿ ಪಕ್ಷದ ನಾಯಕತ್ವ ಹಾಗೂ ಉತ್ತರ ಪ್ರದೇಶ ಸರ್ಕಾರವನ್ನು ಟೀಕಿಸುತ್ತಿದ್ದಾರೆ. ಈ ಕಾರಣಕ್ಕೆ ಅವರಿಗೆ ಟಿಕೆಟ್ ನೀಡುವ ಸಾಧ್ಯತೆ ಇಲ್ಲ ಎಂದು ಬಿಜೆಪಿ ಮೂಲಗಳು ಹೇಳುತ್ತವೆ.

ವರುಣ್ ಗಾಂಧಿ ಅವರು ವಿಪಕ್ಷಗಳ ಮೈತ್ರಿಕೂಟ ‘ಇಂಡಿಯಾ’ದ ಬೆಂಬಲದೊಂದಿಗೆ ಅಮೇಠಿ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಯುವ ಸಾಧ್ಯತೆ ಇದೆ. ವರುಣ್ ತಂದೆ ಸಂಜಯ್ ಗಾಂಧಿ ಒಮ್ಮೆ ಈ ಕ್ಷೇತ್ರದಿಂದ ಆಯ್ಕೆ-ಯಾಗಿದ್ದರು. ಆದರೆ, ವರುಣ್ ಅವರ ಈ ರಾಜಕೀಯ ನಡೆ ಕುರಿತು ಕಾಂಗ್ರೆಸ್ ಅಥವಾ ಸಮಾಜವಾದಿ ಪಕ್ಷ ಈ ವರೆಗೆ ಪ್ರತಿಕ್ರಿಯಿಸಿಲ್ಲ.

ರಾಯ್‌ಬರೇಲಿ ಕ್ಷೇತ್ರಕ್ಕೆ ಕಾಂಗ್ರೆಸ್ ಹುರಿಯಾಳು ಘೋಷಣೆಯಾಗುವು-ದನ್ನು ಪಕ್ಷ ಕಾಯುತ್ತಿದೆ. ನಂತರ, ತನ್ನ ಅಭ್ಯರ್ಥಿಯನ್ನು ಘೋಷಿಸಲಿದೆ ಎಂದು ಬಿಜೆಪಿ ಮೂಲಗಳು ಹೇಳುತ್ತವೆ.

ಸಮಾಜವಾದಿ ಪಕ್ಷದ ಭದ್ರಕೋಟೆ ಎನಿಸಿರುವ ಮೈನಪುರಿ, ಫಿರೋಜಾಬಾದ್, ಪ್ರಯಾಗರಾಜ್ ಹಾಗೂ ಬದೌನ್ ಕ್ಷೇತ್ರಗಳಿಗೆ ಪ್ರಬಲ ಅಭ್ಯರ್ಥಿಗಳನ್ನು ಹುಡುಕಲು ಬಿಜೆಪಿ ಕಷ್ಟ ಎದುರಿಸುತ್ತಿದೆ ಎನ್ನಲಾಗಿದೆ.

ಕೆಲ ಹೊಸ ಮುಖಗಳಿಗೆ ಮಣೆ: ಕೆಲ ಕ್ಷೇತ್ರಗಳಲ್ಲಿ ಬಿಜೆಪಿ ಹೊಸ ಮುಖಗಳಿಗೆ ಮಣೆ ಹಾಕಿದೆ. ಶ್ರಾವಸ್ಥಿ ಕ್ಷೇತ್ರದಿಂದ ಸಾಕೇತ್ ಮಿಶ್ರಾ, ಜೌನ್‌ಪುರದಿಂದ ಕೃಪಾ ಶಂಕರ್ ಸಿಂಗ್‌ಗೆ ಅವಕಾಶ ನೀಡಿದೆ.

ಸಾಕೇತ್ ಮಿಶ್ರಾ ಅವರು ಪ್ರಸ್ತುತ ವಿಧಾನಪರಿಷತ್ ಸದಸ್ಯ. ಶ್ರೀ ರಾಮ ಜನ್ಮಭೂಮಿ ದೇವಸ್ಥಾನ ನಿರ್ಮಾಣ ಸಮಿತಿ ಅಧ್ಯಕ್ಷ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರ ಮಾಜಿ ಪ್ರಧಾನ ಕಾರ್ಯದರ್ಶಿ ನೃಪೇಂದ್ರ ಮಿಶ್ರಾ ಅವರ ಪುತ್ರ.

ಕೃಪಾಶಂಕರ್ ಸಿಂಗ್ ಇತ್ತೀಚೆಗೆ ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ್ದಾರೆ. ಇತ್ತೀಚೆಗೆ ಬಿಎಸ್‌ಪಿಗೆ ರಾಜೀನಾಮೆ ನೀಡಿ ಪಕ್ಷಕ್ಕೆ ಸೇರ್ಪಡೆಯಾಗಿರುವ, ಅಂಬೇಡ್ಕರ್‌ನಗರ ಸಂಸದ ರಿತೇಶ್ ಪಾಂಡೆ ಅವರಿಗೆ ಟಿಕೆಟ್ ನೀಡಲಾಗಿದೆ.

ಬಿಎಸ್‌ಪಿ ಈ ವರೆಗೆ ಅಭ್ಯರ್ಥಿಗಳನ್ನು ಘೋಷಿಸಿಲ್ಲ.

ಮೊದಲ ಪಟ್ಟಿ: 33 ಹಾಲಿ ಸಂಸದರಿಗೆ ಕೊಕ್

ನವದೆಹಲಿ (ಪಿಟಿಐ): ಮುಂಬರುವ ಲೋಕಸಭಾ ಚುನಾವಣೆಯಲ್ಲಿ 370 ಸ್ಥಾನಗಳನ್ನು ಗೆಲ್ಲಬೇಕು ಎಂದು ಪಣ ತೊಟ್ಟಿರುವ ಬಿಜೆಪಿ, ಅಳೆದು–ತೂಗಿ ಮೊದಲ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಟಿಕೆಟ್ ಹಂಚಿಕೆ ವಿಷಯದಲ್ಲಿ ವಿವಿಧ ತಂತ್ರಗಾರಿಕೆಗೆ ಮೊರೆ ಹೋಗಿರುವುದು ಶನಿವಾರ ಬಿಡುಗಡೆ ಮಾಡಿರುವ ಮೊದಲ ಪಟ್ಟಿಯಿಂದ ಸ್ಪಷ್ಟವಾಗುತ್ತದೆ.

195 ಅಭ್ಯರ್ಥಿಗಳ ಹೆಸರುಗಳಿರುವ ಮೊದಲ ಪಟ್ಟಿಯಲ್ಲಿ, 33 ಹಾಲಿ ಸಂಸದರ ಹೆಸರು ಇಲ್ಲ. ಅವರ ಬದಲಾಗಿ ಹೊಸ ಮುಖಗಳಿಗೆ ಮಣೆ ಹಾಕಿರುವ ಕಾರ್ಯತಂತ್ರ ಸ್ಪಷ್ಟವಾಗುತ್ತದೆ.

ಅಸ್ಸಾಂನ 11 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರು ಘೋಷಿಸಲಾಗಿದ್ದು, ಈ ಪೈಕಿ ಆರು ಹಾಲಿ ಸಂಸದರಿಗೆ ಮಾತ್ರ ಮತ್ತೆ ಟಿಕೆಟ್ ನೀಡಲಾಗಿದೆ.

ಛತ್ತೀಸಗಢದ, ದೆಹಲಿಯಲ್ಲಿ ಘೋಷಿಸಿರುವ ಅಭ್ಯರ್ಥಿಗಳ ಪೈಕಿ ತಲಾ ನಾಲ್ವರು ಹೊಸಬರಿಗೆ ಟಿಕೆಟ್ ನೀಡಲಾಗಿದೆ. ಗುಜರಾತ್‌ನ 15 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಘೋಷಣೆಯಾಗಿದೆ. ಇಲ್ಲಿ ಐವರು ಹಾಲಿ ಸಂಸದರಿಗೆ ಟಿಕೆಟ್ ನೀಡಿಲ್ಲ. ಮಧ್ಯಪ್ರದೇಶದಲ್ಲಿ ಏಳು ಹಾಗೂ ರಾಜಸ್ಥಾನದಲ್ಲಿ ಐದು ಜನ ಹಾಲಿ ಸಂಸದರಿಗೆ ಬಿಜೆಪಿ ಟಿಕೆಟ್ ನೀಡಿಲ್ಲ.

ಟಿಕೆಟ್‌ಗೆ ಕುತ್ತು ತಂದ ದ್ವೇಷ ಭಾಷಣ!

ಹಾಲಿ ಸಂಸದರಾದ ಪ್ರಗ್ಯಾ ಠಾಕೂರ್, ಪರ್ವೇಶ್ ಸಾಹಿಬ್ ಸಿಂಗ್ ಹಾಗೂ ರಮೇಶ್ ಬಿಧೂಡಿ ಅವರಿಗೆ ಈ ಬಾರಿ ಕೇಸರಿ ಪಕ್ಷ ಟಿಕೆಟ್ ನೀಡಿಲ್ಲ.

ಸಂಸತ್ ಒಳಗೆ ಹಾಗೂ ಹೊರಗೆ ಈ ಮೂವರು ನೀಡಿದ್ದ ವಿವಾದಾತ್ಮಕ ಹೇಳಿಕೆಗಳು, ಕೆಲವು ಸಲ ಮಾಡಿದ್ದ ದ್ವೇಷ ಭಾಷಣಗಳು ಇವರಿಗೆ ಟಿಕೆಟ್ ಕೈತಪ್ಪಲು ಕಾರಣ ಎಂದು ಹೇಳಲಾಗುತ್ತಿದೆ. ಅದರಲ್ಲೂ, ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಮಣಿಸಲು ವಿರೋಧ ಪಕ್ಷಗಳು ‘ಇಂಡಿಯಾ’ ಎಂಬ ಮೈತ್ರಿಕೂಟ ರಚಿಸಿಕೊಂಡಿರುವುದು ಕೂಡ ಈ ಹಾಲಿ ಸಂಸದರಿಗೆ ಟಿಕೆಟ್ ನೀಡದಿರುವುದಕ್ಕೆ ಮತ್ತೊಂದು ಕಾರಣ ಎನ್ನಲಾಗುತ್ತಿದೆ.

ವಿಪಕ್ಷಗಳು ಒಟ್ಟಾಗಿರುವುದರಿಂದ, ಈ ಮೂವರಿಗೆ ಮತ್ತೆ ಟಿಕೆಟ್ ನೀಡುವಂತಹ ಅಪಾಯವನ್ನು ಮೈಮೇಲೆ ಎಳೆದುಕೊಳ್ಳಲು ತಾನು ಸಿದ್ಧ ಇಲ್ಲ ಎಂಬ ಸಂದೇಶವನ್ನು ಸಹ ಬಿಜೆಪಿ ರವಾನಿಸಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಮಾಲೆಗಾಂವ್ ಸ್ಫೋಟ ಪ್ರಕರಣದ ಆರೋಪಿಯಾಗಿರುವ ಪ್ರಗ್ಯಾ ಠಾಕೂರ್ ಭೋಪಾಲ್ ಕ್ಷೇತ್ರದ ಸಂಸದೆ. ಈ ಬಾರಿ ಇಲ್ಲಿ ಪ್ರಗ್ಯಾ ಠಾಕೂರ್ ಬದಲು ಅಲೋಕ್ ಶರ್ಮ ಅವರಿಗೆ ಟಿಕೆಟ್ ನೀಡಲಾಗಿದೆ.

₹2000 ದೇಣಿಗೆ ನೀಡಿದ ಮೋದಿ

ನವದೆಹಲಿ (ಪಿಟಿಐ): ‘ವಿಕಸಿತ ಭಾರತ’ ನಿರ್ಮಾಣಕ್ಕಾಗಿ ಬಿಜೆಪಿಯ ಆಂದೋಲನಕ್ಕೆ ಪ್ರಧಾನಿ ಮೋದಿ ಭಾನುವಾರ ₹2,000 ದೇಣಿಗೆ ನೀಡಿದರು.

ದೇಶ ಕಟ್ಟುವ ಅಭಿಯಾನಕ್ಕೆ ದೇಣಿಗೆ ನೀಡಿ ಎಂದು ದೇಶವಾಸಿಗಳಿಗೆ ಕರೆ ನೀಡಿದರು. ಪ್ರಧಾನಿ ಮೋದಿ ಅವರ ಅಧಿಕೃತ ‘ಎಕ್ಸ್’ ಖಾತೆಯಲ್ಲಿ ರಶೀದಿಯನ್ನು ಹಂಚಿಕೊಳ್ಳಲಾಗಿದೆ. ‘ಬಿಜೆಪಿಗೆ ಮತ್ತು ವಿಕಸಿತ ಭಾರತ ನಿರ್ಮಾಣಕ್ಕೆ ಬೆಂಬಲವಾಗಿ ದೇಣಿಗೆ ನೀಡಲು ಸಂತಸವಾಗುತ್ತಿದೆ. ನಮೊ ಆ್ಯಪ್ ಮೂಲಕ ನೀವೂ ದೇಣಿಗೆ ನೀಡಿ’ ಎಂದು ಎಕ್ಸ್‌ನಲ್ಲಿ ಹೇಳಿದ್ದಾರೆ.

ತೆಲಂಗಾಣ: ಕೆಲವರಿಗೆ ನಿರಾಶೆ

ಹೈದರಾಬಾದ್: ಬಿಜೆಪಿ ಅಭ್ಯರ್ಥಿಗಳ ಮೊದಲ ಪಟ್ಟಿಯಲ್ಲಿ 9 ಹೆಸರು ಗಳಿವೆಯಾದರೂ, ಇಬ್ಬರು ಪ್ರಮುಖ ನಾಯಕರಿಗೆ ನಿರಾಶೆಯಾಗಿದೆ. ಸದ್ಯ ತೆಲಂಗಾಣದಲ್ಲಿ ನಾಲ್ವರು ಬಿಜೆಪಿ ಸಂಸದರಿದ್ದಾರೆ. ಈ ಪೈಕಿ ಮೂವರಿಗೆ ಮತ್ತೆ ಟಿಕೆಟ್ ನೀಡಲಾಗಿದೆ. ಆದರೆ, ಆದಿಲಾಬಾದ್ ಸಂಸದ ಸೋಯಮ್ ಬಾಪು ರಾವ್ ಅವರ ಹೆಸರು ಮೊದಲ ಪಟ್ಟಿಯಲ್ಲಿ ಇಲ್ಲ.

ಮಲ್ಕಜಗಿರಿ ಕ್ಷೇತ್ರದ ಟಿಕೆಟ್‌ಗೆ ಪಿ.ಮುರಳೀಧರ ರಾವ್ ಹಾಗೂ ಮಾಜಿ ಸಚಿವ ಈಟಲ ರಾಜೇಂದ್ರ ನಡುವೆ ಭಾರಿ ಪೈಪೋಟಿ ಇತ್ತು. ಆದರೆ, ಪಕ್ಷವು ರಾಜೇಂದ್ರ ಅವರಿಗೆ ಮಣೆ ಹಾಕಿದೆ. ಬಿಆರ್‌ಎಸ್ ತೊರೆದು ಪಕ್ಷ ಸೇರಿರುವ ಬಿ.ಬಿ.ಪಾಟೀಲ್ ಅವರಿಗೆ ಜಹೀರಾಬಾದ್ ಕ್ಷೇತ್ರದ ಟಿಕೆಟ್ ನೀಡಲಾಗಿದೆ.

ಎರಡನೇ ಬಾರಿಗೆ ಸಮ್ಮಿಶ್ರ ಸರ್ಕಾರದ ನಾಯಕನಾಗಿ ಆಯ್ಕೆ; ಸೋಮವಾರ ಪ್ರಮಾಣ ವಚನ

ಪಾಕ್ ಪ್ರಧಾನಿಯಾಗಿ ಶೆಹಬಾಜ್ ಆಯ್ಕೆ

ಇಸ್ಲಾಮಾಬಾದ್ (ಪಿಟಿಐ): ಪಿಎಂಎಲ್- ಎನ್ ಪಕ್ಷದ ನಾಯಕ ಶೆಹಬಾಜ್ ಷರೀಫ್ ಅವರು ಎರಡನೇ ಬಾರಿಗೆ ಪಾಕಿಸ್ತಾನದ ಪ್ರಧಾನಿಯಾಗಿ ಭಾನುವಾರ ಆಯ್ಕೆಯಾದರು. ನವಾಜ್ ಷರೀಫ್ ಅವರ ತಮ್ಮ ಶೆಹಬಾಜ್ ಅವರು ಈ ಹಿಂದೆ 2022ರ ಏಪ್ರಿಲ್‌ನಿಂದ 2023ರ ಆಗಸ್ಟ್‌ವರೆಗೆ ಸಮ್ಮಿಶ್ರ ಸರ್ಕಾರದ ಪ್ರಧಾನಿಯಾಗಿದ್ದರು.

ಹೊಸ ಪ್ರಧಾನಿ ಆಯ್ಕೆ ಕುರಿತು ಪಾಕಿಸ್ತಾನದ ರಾಷ್ಟ್ರೀಯ ಅಸೆಂಬ್ಲಿಯಲ್ಲಿ ಭಾನುವಾರ ಮತದಾನ ನಡೆಯಿತು. ಪಿಎಂಎಲ್-ಎನ್ ಮತ್ತು ಪಿಪಿಪಿ ಒಮ್ಮತದ ಅಭ್ಯರ್ಥಿಯಾಗಿ 72 ವರ್ಷದ ಶೆಹಬಾಜ್ ಹಾಗೂ ಜೈಲಿನಲ್ಲಿರುವ ಇಮ್ರಾನ್ ಖಾನ್ ಅವರ ಪಿಟಿಐ ಪಕ್ಷದ ಅಭ್ಯರ್ಥಿಯಾಗಿ ಓಮರ್ ಅಯೂಬ್ ಖಾನ್ ಸ್ಪರ್ಧಿಸಿದ್ದರು.

ಸದನದ ಒಟ್ಟು 336 ಸದಸ್ಯರ ಪೈಕಿ ಶೆಹಬಾಜ್ 201 ಮತಗಳನ್ನು (ಅಗತ್ಯಕ್ಕಿಂತ 32 ಹೆಚ್ಚು) ಪಡೆದರೆ, ಓಮರ್ 92 ಮತಗಳನ್ನು ಪಡೆದರು. ವಿರೋಧ ಪಕ್ಷಗಳ ಘೋಷಣೆಗಳ ನಡುವೆಯೇ ಸ್ಪೀಕರ್ ಸರ್ದಾರ್ ಅಯಾಜ್ ಸಾದಿಕ್ ಅವರು 24ನೇ ಪ್ರಧಾನಿಯಾಗಿ ಶೆಹಬಾಜ್ ಆಯ್ಕೆಯಾದ ಕುರಿತ ಫಲಿತಾಂಶ ಪ್ರಕಟಿಸಿದರು. ಪಾಕ್ ಅಧ್ಯಕ್ಷರ ಭವನವಾದ ‘ಐವಾನ್-ಎ-ಸದರ್’ನಲ್ಲಿ ಶೆಹಬಾಜ್ ಸೋಮವಾರ ಪ್ರಮಾಣವಚನ ಸ್ವೀಕರಿಸಲಿದ್ದಾರೆ.


ಪಾಕಿಸ್ತಾನದ ನೂತನ ಪ್ರಧಾನಿಯಾಗಿ ಭಾನುವಾರ ಆಯ್ಕೆಯಾದ ಶೆಹಬಾಜ್ ಷರೀಫ್ ಅವರನ್ನು ಪಿಎಂಎಲ್– ಎನ್ ಪಕ್ಷದ ನಾಯಕ ನವಾಜ್ ಷರೀಫ್ ಅವರು ಅಭಿನಂದಿಸಿದರು – ಎಎಫ್‌ಪಿ ಚಿತ್ರ

ಅಧಿವೇಶನದಲ್ಲಿ ಪಿಟಿಐ ಬೆಂಬಲಿತ ಸದಸ್ಯರು ಇಮ್ರಾನ್ ಖಾನ್ ಪರ ಘೋಷಣೆಗಳನ್ನು ಕೂಗಿದರು. ಕೆಲವರು ಜೈಲಿನಲ್ಲಿರುವ ಖಾನ್ ಅವರನ್ನು ಉಲ್ಲೇಖಿಸಿ ‘ಆಜಾದಿ (ಸ್ವಾತಂತ್ರ್ಯ)’ ಮತ್ತು ‘ಕೈದಿ ನಂ 804’ ಎಂದು ಅವರು ಘೋಷಣೆಗಳನ್ನು ಕೂಗಿದರು. ಇನ್ನೂ ಕೆಲವರು ಇಮ್ರಾನ್ ಅವರ ಪೋಸ್ಟರ್‌ಗಳನ್ನು ಹಿಡಿದಿದ್ದರು.

ಇದಕ್ಕೆ ಪ್ರತಿಯಾಗಿ ಪಿಎಂಎಲ್–ಎನ್ ಸದಸ್ಯರು, ‘ನವಾಜ್ ದೀರ್ಘಕಾಲ ಬಾಳಲಿ’ ಎಂದು ಘೋಷಣೆ ಕೂಗಿದರು. ಕೆಲವರು ವಿರೋಧ ಪಕ್ಷಗಳ ಸದಸ್ಯರತ್ತ ಕೈಗಡಿಯಾರಗಳನ್ನು ತೋರಿಸಿ, ಖಾನ್ ವಿರುದ್ಧದ ‘ತೋಷಖಾನ’ ಭ್ರಷ್ಟಾಚಾರ ಪ್ರಕರಣವನ್ನು ಉಲ್ಲೇಖಿಸಿದರು.

ಫೆಬ್ರುವರಿ 8ರಂದು ನಡೆದ ಚುನಾವಣೆಯಲ್ಲಿ ಷರೀಫ್ ನೇತೃತ್ವದ ಪಕ್ಷವು ಸ್ಪಷ್ಟ ಬಹುಮತ ಗಳಿಸಲು ವಿಫಲವಾಗಿತ್ತು. ಆದರೂ 265 ಕ್ಷೇತ್ರಗಳ ಪೈಕಿ 75ರಲ್ಲಿ ಗೆಲ್ಲುವ ಮೂಲಕ ಅದು ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು.

ಶೆಹಬಾಜ್ ಅವರನ್ನು ಪಿಪಿಪಿ ಜತೆಗೆ, ಮುತ್ತಹಿದಾ ಕ್ವಾಮಿ ಮೂವ್‌ಮೆಂಟ್, ಪಾಕಿಸ್ತಾನ ಮುಸ್ಲಿಂ ಲೀಗ್ (ಕ್ಯೂ), ಬಲೂಚಿಸ್ತಾನ ಅವಾಮಿ ಪಾರ್ಟಿ, ಪಾಕಿಸ್ತಾನ ಮುಸ್ಲಿಂ ಲೀಗ್ (ಜಡ್), ಇಸ್ತೇಕಾಂ–ಎ–ಪಾಕಿಸ್ತಾನ ಪಾರ್ಟಿ ಮತ್ತು ನ್ಯಾಷನಲ್ ಪಾರ್ಟಿಗಳು ಬೆಂಬಲಿಸಿವೆ. ವಿಶ್ವಾಸವಿಟ್ಟು ಸದನದ ನಾಯಕನನ್ನಾಗಿ ಮಾಡಿದ್ದಕ್ಕಾಗಿ ಶೆಹಬಾಜ್ ಅವರು ಸಮ್ಮಿಶ್ರ ಸರ್ಕಾರದ ಎಲ್ಲ ಮಿತ್ರ ಪಕ್ಷಗಳಿಗೆ ಕೃತಜ್ಞತೆ ಸಲ್ಲಿಸಿದರು.

‘ಕಾಶ್ಮೀರಿಗಳ ಸ್ವಾತಂತ್ರ್ಯಕ್ಕೆ ನಿರ್ಣಯ’

ಇಸ್ಲಾಮಾಬಾದ್ (ಪಿಟಿಐ): ಪ್ರಧಾನಿಯಾಗಿ ಆಯ್ಕೆಯಾದ ಶೆಹಬಾಜ್ ಅವರು ತಮ್ಮ ಮೊದಲ ಭಾಷಣದಲ್ಲಿಯೇ ಕಾಶ್ಮೀರ ಸಮಸ್ಯೆಯನ್ನು ಪ್ಯಾಲೆಸ್ಟೀನ್ ಸಮಸ್ಯೆ ಜತೆ ಸಮೀಕರಿಸಿ ಮಾತನಾಡಿದರು. ‘ನಾವೆಲ್ಲರೂ ಒಗ್ಗೂಡಿ, ರಾಷ್ಟ್ರೀಯ ಅಸೆಂಬ್ಲಿಯಲ್ಲಿ ಕಾಶ್ಮೀರಿಗಳು ಮತ್ತು ಪ್ಯಾಲೆಸ್ಟೀನಿಯನ್ನರ ಸ್ವಾತಂತ್ರ್ಯಕ್ಕಾಗಿ ನಿರ್ಣಯ ಅಂಗೀಕರಿಸಬೇಕು’ ಎಂದು ಪ್ರತಿಪಾದಿಸಿದರು.

ಮುಂದುವರಿದು, ದೇಶದ ನೆರೆಹೊರೆಯವರೂ ಸೇರಿದಂತೆ ಎಲ್ಲ ಪ್ರಮುಖ ದೇಶಗಳೊಂದಿಗೆ ಬಾಂಧವ್ಯ ಸುಧಾರಿಸಲು ಪ್ರಯತ್ನಿಸುವುದಾಗಿ ವಾಗ್ದಾನ ಮಾಡಿದರು.

‘ನಮ್ಮ ನಾಯಕರಾದ ನವಾಜ್ ಅವರು ಮೂರು ಬಾರಿ ಪ್ರಧಾನಿಯಾಗಿ ಆಯ್ಕೆಯಾದಾಗ, ದೇಶ ಬಹಳ ಪ್ರಗತಿ ಕಂಡಿತ್ತು. ಹೀಗಾಗಿ ಪಾಕಿಸ್ತಾನವನ್ನು ಕಟ್ಟಿದವರು ನವಾಜ್ ಷರೀಫ್ ಎಂದರೆ ತಪ್ಪಾಗದು’ ಎಂದು ಹೇಳಿದರು.

‘ದೇಶದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಬೇಕಾದ ದೊಡ್ಡ ಸವಾಲು ನಮ್ಮ ಮುಂದಿದೆ. ದೇಶವು ಕೋಟ್ಯಂತರ ರೂಪಾಯಿಗಳನ್ನು ಬಡ್ಡಿಗಾಗಿಯೇ ವ್ಯಯ ಮಾಡುತ್ತಿದೆ. ಇಂಧನ ಮತ್ತು ವಿಮಾನಯಾನ ಕ್ಷೇತ್ರಗಳೂ ಸಾಲದಿಂದಾಗಿ ಕುಸಿಯುತ್ತಿವೆ’ ಎಂದು ಅವರು ಉಲ್ಲೇಖಿಸಿದರು.

‘ದೇಶವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಲು ಇರುವ ಎಲ್ಲ ಅಡೆ-ತಡೆಗಳನ್ನೂ ನಿವಾರಿಸಲು ಶ್ರಮಿಸುತ್ತೇನೆ. ಹೆಚ್ಚಿನ ಹೂಡಿಕೆ ತಂದು, ಆರ್ಥಿಕ ಪ್ರಗತಿಯನ್ನು ಉತ್ತೇಜಿಸಲು ಕ್ರಮಗಳನ್ನು ಕೈಗೊಳ್ಳುತ್ತೇನೆ’ ಎಂದು ಅವರು ಘೋಷಿಸಿದರು. ಅಲ್ಲದೆ ಪಾಕಿಸ್ತಾನವನ್ನು ಸ್ವಾವಲಂಬಿಯನ್ನಾಗಿಸುವ ಪ್ರತಿಜ್ಞೆಯನ್ನೂ ಅವರು ಮಾಡಿದರು.

ಅಮೆರಿಕ ಪ್ರಜೆಯ ಟೀಕೆ ವಿವಾದದಲ್ಲಿ ರೇಖಾ ಶರ್ಮಾ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿದೇಶಿ ಪ್ರವಾಸಿಗರು ಭಾರತದಲ್ಲಿ ಲೈಂಗಿಕ ಕಿರುಕುಳಕ್ಕೆ ಒಳಗಾದ ಘಟನೆಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡ ಅಮೆರಿಕದ ಪ್ರಜೆಯನ್ನು ಟೀಕಿಸಿದ, ರಾಷ್ಟ್ರೀಯ ಮಹಿಳಾ ಆಯೋಗದ (ಎನ್‌ಸಿಡಬ್ಲ್ಯು) ಅಧ್ಯಕ್ಷೆ ರೇಖಾ ಶರ್ಮಾ ಅವರು ವಿವಾದಕ್ಕೆ ಸಿಲುಕಿದ್ದಾರೆ.

ಸ್ಪೇನ್ ಮಹಿಳೆಯ ಮೇಲೆ ಜಾರ್ಖಂಡ್‌ನಲ್ಲಿ ನಡೆದ ಸಾಮೂಹಿಕ ಅತ್ಯಾಚಾರ ಘಟನೆಯನ್ನು ಉಲ್ಲೇಖಿಸಿ ಅಮೆರಿಕದ ಪ್ರಜೆ ಡೇವಿಡ್ ಜೋಸೆಫ್ ವೊಲೊಝ್ಕೊ ಎಂಬವರು ‘ಎಕ್ಸ್’ನಲ್ಲಿ ತಮ್ಮ ಅನುಭವ ಹಂಚಿಕೊಂಡಿದ್ದರು.

‘ಭಾರತ ಪ್ರವಾಸದಲ್ಲಿದ್ದಾಗ ಒಮ್ಮೆ ಅಪರಿಚಿತಳಾಗಿರುವ ಬ್ರಿಟಿಷ್ ಮಹಿಳೆಯೊಬ್ಬಳು ನನ್ನ ಬಳಿ ಬಂದಳು. ರೈಲು ಪ್ರಯಾಣದ ವೇಳೆ ಜತೆಗಿರುವಂತೆಯೂ, ಆಕೆಯ ಗೆಳೆಯನಂತೆ ನಟಿಸುವಂತೆಯೂ ನನ್ನಲ್ಲಿ ಕೇಳಿಕೊಂಡಳು. ಏಕೆಂದರೆ, ವ್ಯಕ್ತಿಯೊಬ್ಬ ಕಿರುಕುಳ ನೀಡಿದ್ದರಿಂದ ಆಕೆಗೆ ಅಸುರಕ್ಷತೆಯ ಭಾವ ಕಾಡಿತ್ತು’ ಎಂದು ಡೇವಿಡ್ ಬರೆದಿದ್ದರು.

ಭಾರತದ ಪುರುಷನೊಬ್ಬ ವಿದೇಶಿ ಮಹಿಳೆಯ ದೇಹ ಸ್ಪರ್ಶಿಸಿ ಕಿರುಕುಳ ನೀಡಿದ ಇನ್ನೊಂದು ಘಟನೆಯನ್ನು ವಿವರಿಸುತ್ತಾ, ‘ಭಾರತದಲ್ಲಿ ಕೆಲವೇ ದಿನಗಳು ಇದ್ದರೂ ವಿದೇಶಿ ಮಹಿಳಾ ಪ್ರಯಾಣಿಕರು ಲೈಂಗಿಕ ಕಿರುಕುಳಕ್ಕೆ ಗುರಿಯಾಗುವರು. ನಾನು ಭಾರತವನ್ನು ಪ್ರೀತಿಸುತ್ತೇನೆ. ಭಾರತವು ಈಗ ಮಾತ್ರವಲ್ಲ, ಮುಂದೆಯೂ ನನ್ನ ನೆಚ್ಚಿನ ಸ್ಥಳಗಳಲ್ಲಿ ಒಂದಾಗಿದೆ. ಆದರೆ ಅಲ್ಲಿಗೆ ಒಬ್ಬಂಟಿಯಾಗಿ ಪ್ರಯಾಣಿಸಬೇಡಿ ಎಂಬ ಸಲಹೆಯನ್ನು ನನ್ನ ಸ್ನೇಹಿತೆಯರಿಗೆ ನೀಡಿದ್ದೇನೆ’ ಎಂದು ಹೇಳಿಕೊಂಡಿದ್ದಾರೆ.

ಅದಕ್ಕೆ ಪ್ರತಿಕ್ರಿಯಿಸಿರುವ ಶರ್ಮಾ, ‘ನೀವು ಎಂದಾದರೂ ಈ ಘಟನೆ ಬಗ್ಗೆ ಪೊಲೀಸರಿಗೆ ದೂರು ನೀಡಿದ್ದೀರಾ? ಇಲ್ಲ ಎಂದಾದಲ್ಲಿ, ನೀವೊಬ್ಬ ಬೇಜವಾಬ್ದಾರಿಯ ವ್ಯಕ್ತಿ. ಸಾಮಾಜಿಕ ಜಾಲತಾಣಗಳಲ್ಲಿ ಬರೆದು ಇಡೀ ದೇಶದ ಮಾನಹಾನಿ ಮಾಡುವುದು ಒಳ್ಳೆಯದಲ್ಲ’ ಎಂದು ಹೇಳಿದ್ದಾರೆ.

ಸಂತ್ರಸ್ತರನ್ನು ದೂರಿದ್ದಕ್ಕೆ ಶರ್ಮಾ ಅವರನ್ನು ಹಲವರು ಟೀಕಿಸಿದ್ದಾರೆ. ತಮ್ಮ ಹುದ್ದೆಗೆ ರಾಜೀನಾಮೆ ನೀಡುವಂತೆಯೂ ಆಗ್ರಹಿಸಿದ್ದಾರೆ.

ಶಸ್ತ್ರಾಸ್ತ್ರ ಕದ್ದೊಯ್ದ ಪ್ರಕರಣ: ಆರೋಪ ಪಟ್ಟಿ ಸಲ್ಲಿಕೆ

ನವದೆಹಲಿ (ಪಿಟಿಐ): ಕಳೆದ ವರ್ಷ ಮಣಿಪುರದಲ್ಲಿ ನಡೆದ ಹಿಂಸಾಚಾರ ಸಂದರ್ಭದಲ್ಲಿ ಬಿಷ್ಣುಪುರ ಪೊಲೀಸ್ ಶಸ್ತ್ರಾಗಾರದಿಂದ ಶಸ್ತ್ರಾಸ್ತ್ರಗಳನ್ನು ಕದ್ದೊಯ್ದ ಪ್ರಕರಣದ ಏಳು ಆರೋಪಿಗಳ ವಿರುದ್ಧ ಸಿಬಿಐ ದೋಷಾರೋಪ ಪಟ್ಟಿ ಸಲ್ಲಿಸಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದರು.

ಅಸ್ಸಾಂನ ಗುವಾಹಟಿಯ ಕಾಮ-ರೂಪದಲ್ಲಿರುವ ಚೀಫ್ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಿದೆ. ಕಳೆದ ವರ್ಷ ಆಗಸ್ಟ್ 3ರಂದು ಗುಂಪೊಂದು 300 ಶಸ್ತ್ರಾಸ್ತ್ರಗಳು, 19,800 ಮದ್ದು-ಗುಂಡುಗಳನ್ನು ಕದ್ದೊಯ್ದಿತ್ತು.

ಎಲ್ಲ ಆರೋಪಿಗಳು ಮೈತೇಯಿ ಸಮುದಾಯಕ್ಕೆ ಸೇರಿದವರಾಗಿ-ದ್ದಾರೆ. ಕಳೆದ ಆಗಸ್ಟ್ 24 ರಂದು ಸಿಬಿಐ ಈ ಪ್ರಕರಣದ ತನಿಖೆಯನ್ನು ಕೈಗೆತ್ತಿಕೊಂಡಿತ್ತು. ಇತರ ಕೆಲವು ಆರೋಪಿಗಳ ವಿರುದ್ಧ ವಿಚಾರಣೆ ಮುಂದುವರಿದಿದೆ ಎಂದು ಸಿಬಿಐ ಅಧಿಕಾರಿಗಳು ತಿಳಿಸಿದ್ದಾರೆ.

ಮಣಿಪುರದಲ್ಲಿ ನಡೆಯುತ್ತಿರುವ ಜನಾಂಗೀಯ ಸಂಘರ್ಷದಲ್ಲಿ ಇದುವರೆಗೆ 219 ಮಂದಿ ಮೃತಪಟ್ಟಿದ್ದಾರೆ, ಹಲವರು ಗಾಯಗೊಂಡಿದ್ದಾರೆ.

ರಣಜಿ ಸೆಮಿಫೈನಲ್: ಸಾಯಿಕಿಶೋರ್‌ಗೆ ಆರು ವಿಕೆಟ್ • ತನುಷ್, ಮುಷೀರ್ ಅರ್ಧಶತಕ

ಶಾರ್ದೂಲ್ ಶತಕ; ಮುಂಬೈ ಮುನ್ನಡೆ

ಮುಂಬೈ ತಂಡದ ಶಾರ್ದೂಲ್ ಠಾಕೂರ್ (ಎಡಚಿತ್ರ). ಮಧ್ಯಪ್ರದೇಶ ತಂಡದ ಹಿಮಾಂಶು ಮಂತ್ರಿ ಶತಕ ಸಂಭ್ರಮ –ಪಿಟಿಐ ಚಿತ್ರ

ಮುಂಬೈ (ಪಿಟಿಐ): ಶಾರ್ದೂಲ್ ಠಾಕೂರ್ (109; 104 ಎಸೆತ) ಅವರ ಶತಕ ಮತ್ತು ತನುಷ್ ಕೋಟ್ಯಾನ್ (ಬ್ಯಾಟಿಂಗ್ 74) ಅವರ ಅಮೋಘ ಆಟದ ಬಲದಿಂದ ಇಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಸೆಮಿ ಫೈನಲ್‌ನಲ್ಲಿ ಮುಂಬೈ ತಂಡವು ತಮಿಳುನಾಡು ವಿರುದ್ಧ 207 ರನ್‌ಗಳ ಉತ್ತಮ ಮುನ್ನಡೆ ಸಾಧಿಸಿತು.

ಬಾಂದ್ರಾ–ಕುರ್ಲಾ ಕಾಂಪ್ಲೆಕ್ಸ್ ಮೈದಾನದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ತಮಿಳುನಾಡು ತಂಡವು ಮೊದಲ ಇನಿಂಗ್ಸ್‌ನಲ್ಲಿ 146ಕ್ಕೆ ಆಲೌಟ್ ಆಗಿತ್ತು. ಅದಕ್ಕುತ್ತರವಾಗಿ ಎರಡನೇ ದಿನವಾದ ಭಾನುವಾರದ ಮುಕ್ತಾಯಕ್ಕೆ ಮುಂಬೈ ತಂಡವು 100 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 353 ರನ್ ಗಳಿಸಿದೆ.

ತಮಿಳುನಾಡು ತಂಡದ ನಾಯಕ ಆರ್. ಸಾಯಿಕಿಶೋರ್ (97ಕ್ಕೆ6) ಅವರ ಪರಿಣಾಮಕಾರಿ ಬೌಲಿಂಗ್‌ನಿಂದಾಗಿ ಮುಂಬೈ ತಂಡದ ಪ್ರಮುಖ ಬ್ಯಾಟರ್‌ಗಳು ಬೇಗನೆ ಔಟಾದರು. ಮುಷೀರ್ ಖಾನ್ (55; 131ಎ) ಬಿಟ್ಟರೆ ಉಳಿದವರು ಹೆಚ್ಚು ರನ್ ಗಳಿಸಲಿಲ್ಲ. ತಂಡವು 106 ರನ್‌ಗಳಿಗೇ ಏಳು ವಿಕೆಟ್ ಕಳೆದುಕೊಂಡಿತ್ತು.

ಆದರೆ ಶಾರ್ದೂಲ್ ಎರಡು ಜೊತೆಯಾಟಗಳಲ್ಲಿ ತಂಡದ ಆತಂಕ ನಿವಾರಿಸಿದರು. ಎಂಟನೇ ವಿಕೆಟ್ ಜೊತೆಯಾಟದಲ್ಲಿ ಹಾರ್ದಿಕ್ ತಮೋರೆ ಅವರೊಂದಿಗೆ 105 ರನ್ ಸೇರಿಸಿದರು. ತನುಷ್ ಜೊತೆಗೆ 9ನೇ ವಿಕೆಟ್‌ಗೆ 79 ರನ್ ಸೇರಿಸಿದರು. ಶಾರ್ದೂಲ್ ಅವರ ಬ್ಯಾಟಿಂಗ್ ಟಿ20 ಮಾದರಿಯದಾಗಿತ್ತು. ಟೂರ್ನಿಯ ಕಳೆದ ಪಂದ್ಯದಲ್ಲಿಯೂ ತನುಷ್ ಮತ್ತು ತುಷಾರ್ ಅವರು ಕೊನೆಯ ವಿಕೆಟ್ ಜೊತೆಯಾಟದ ದಾಖಲೆ ಬರೆದಿದ್ದರು. ಈ ಪಂದ್ಯದಲ್ಲಿಯೂ ಮುಂಬೈ ತಂಡದ ಕೆಳಕ್ರಮಾಂಕದ ಆಟಗಾರರು ಅಮೋಘ ಆಟವಾಡಿದ್ದಾರೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: **ತಮಿಳುನಾಡು:** 146. **ಮುಂಬೈ:** 100 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 353 (ಮುಷೀರ್ ಖಾನ್ 55, ಶಾರ್ದೂಲ್ ಠಾಕೂರ್ 109, ತನುಷ್ ಕೋಟ್ಯಾನ್ ಬ್ಯಾಟಿಂಗ್ 74, ತುಷಾರ್ ದೇಶಪಾಂಡೆ ಬ್ಯಾಟಿಂಗ್ 17, ಆರ್. ಸಾಯಿಕಿಶೋರ್ 97ಕ್ಕೆ6)

ಹಿಮಾಂಶು ಶತಕ

ನಾಗ್ಪುರ (ಪಿಟಿಐ): ತಾಳ್ಮೆ ಮತ್ತು ಉತ್ತಮ ಕೌಶಲಗಳ ಬ್ಯಾಟಿಂಗ್ ಮಾಡಿದ ಹಿಮಾಂಶು ಮಂತ್ರಿ ಶತಕದ ಬಲದಿಂದ ಮಧ್ಯಪ್ರದೇಶ ತಂಡವು ಇಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಸೆಮಿಫೈನಲ್‌ನಲ್ಲಿ ಮೊದಲ ಇನಿಂಗ್ಸ್ ಮುನ್ನಡೆ ಸಾಧಿಸಿತು.

ಮೊದಲು ಬ್ಯಾಟಿಂಗ್ ಮಾಡಿದ್ದ ವಿದರ್ಭ ತಂಡವು 170 ರನ್‌ಗಳಿಸಿತ್ತು. ಮಂತ್ರಿ (126; 265 ಎ, 4X13, 6X1) ಬ್ಯಾಟಿಂಗ್‌ನಿಂದಾಗಿ ಮಧ್ಯಪ್ರದೇಶ 94.3 ಓವರ್‌ಗಳಲ್ಲಿ 252 ರನ್ ಗಳಿಸಿತು. ಇದರೊಂದಿಗೆ 82 ರನ್‌ಗಳ ಮುನ್ನಡೆ ಸಾಧಿಸಿತು. 2ನೇ ಇನಿಂಗ್ಸ್ ಆರಂಭಿಸಿರುವ ವಿದರ್ಭ ತಂಡವು 4 ಓವರ್‌ಗಳಲ್ಲಿ 1 ವಿಕೆಟ್‌ಗೆ 13 ರನ್ ಗಳಿಸಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: **ವಿದರ್ಭ:** 170. **ಮಧ್ಯಪ್ರದೇಶ:** 94.3 ಓವರ್‌ಗಳಲ್ಲಿ 252 (ಹಿಮಾಂಶು ಮಂತ್ರಿ 126, ಹರ್ಷ್ ಗೌಳಿ 25, ಸಾಗರ್ ಸೋಳಂಕಿ 26, ಸಾರಾಂಶ್ ಜೈನ್ 30, ಉಮೇಶ್ ಯಾದವ್ 40ಕ್ಕೆ3, ಯಶ್ ಠಾಕೂರ್ 51ಕ್ಕೆ3, ಅಕ್ಷಯ್ ವಾಖರೆ 68ಕ್ಕೆ2) 2ನೇ ಇನಿಂಗ್ಸ್: **ವಿದರ್ಭ:** 4 ಓವರ್‌ಗಳಲ್ಲಿ 1 ವಿಕೆಟ್‌ಗೆ 13 (ಧ್ರುವ ಶೋರೆ ಬ್ಯಾಟಿಂಗ್ 10, ಆವೇಶ್ ಖಾನ್ 2ರನ್‌ಗೆ 1)

ಗೆಲುವಿನೊಂದಿಗೆ ಅಗ್ರಸ್ಥಾನಕ್ಕೆ ಡೆಲ್ಲಿ

ಡಬ್ಲ್ಯುಪಿಎಲ್: ಗುಜರಾತ್ ಜೈಂಟ್ಸ್‌ಗೆ ಮತ್ತೊಂದು ಸೋಲು

ಪ್ರಜಾವಾಣಿ ವಾರ್ತೆ

ಗೆಲುವಿನ ಸಂಭ್ರಮದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಆಟಗಾರ್ತಿಯರು –ಪ್ರಜಾವಾಣಿ ಚಿತ್ರ/ ಎಸ್.ಕೆ. ದಿನೇಶ್

ಬೆಂಗಳೂರು: ಅನುಭವಿ ಬ್ಯಾಟರ್ ಮೆಗ್ ಲ್ಯಾನಿಂಗ್ ಅರ್ಧಶತಕ ಹಾಗೂ ಸ್ಪಿನ್ನರ್ ಜೆಸ್ ಯಾನ್ಸೆನ್ ಅವರ ಆಟದ ನೆರವಿನಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಇಲ್ಲಿ ನಡೆಯುತ್ತಿರುವ ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಜಯ ಗಳಿಸಿತು.

ಗುಜರಾತ್ ಜೈಂಟ್ಸ್ ತಂಡವು ಸತತ ನಾಲ್ಕನೇ ಪಂದ್ಯದಲ್ಲಿ ಸೋತಿತು. 25 ರನ್‌ಗಳಿಂದ ಜಯಿಸಿದ ಡೆಲ್ಲಿ ತಂಡವು ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಗುಜರಾತ್ ಜೈಂಟ್ಸ್ ಎದುರು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 163 ರನ್ ಗಳಿಸಿತು. ಅದಕ್ಕುತ್ತರವಾಗಿ ಗುಜರಾತ್ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 138 ರನ್ ಗಳಿಸಿತು. ಜೆಸ್ ಯಾನ್ಸೆನ್ (22ಕ್ಕೆ3) ಮತ್ತು ರಾಧಾ ಯಾದವ್ (20ಕ್ಕೆ3) ಅವರ ದಾಳಿಯ ಮುಂದೆ ಗುಜರಾತ್ ತಂಡವು ಸೋಲಿನ ಹಾದಿ ಹಿಡಿಯಿತು.

ಟಾಸ್ ಗೆದ್ದ ಗುಜರಾತ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮಧ್ಯಮವೇಗಿ ಮೇಘನಾ ಸಿಂಗ್ (37ಕ್ಕೆ4) ಅವರ ದಾಳಿಗೆ ಡೆಲ್ಲಿ ತಂಡವು ಅಲ್ಪಮೊತ್ತಕ್ಕೆ ಕುಸಿಯುವ ಆತಂಕ ಎದುರಿಸಿತ್ತು. ಇನಿಂಗ್ಸ್‌ನ ಮೂರನೇ ಓವರ್‌ನಲ್ಲಿ ಮೇಘನಾ ಅವರು ಶಫಾಲಿ ವರ್ಮಾ ವಿಕೆಟ್ ಗಳಿಸಿದರು. ಮೂರು ಓವರ್‌ಗಳ ನಂತರ ಅಲೈಸ್ ಕ್ಯಾಪ್ಸಿಗೂ ಡಗ್‌ಔಟ್ ದಾರಿ ತೋರಿಸಿದರು. ಇದರಿಂದಾಗಿ ತಂಡದ ಮಧ್ಯಮ ಕ್ರಮಾಂಕಕ್ಕೆ ಪೆಟ್ಟು ಬಿತ್ತು.

ಈ ಪರಿಸ್ಥಿತಿಯನ್ನು ಅನುಭವಿ ಬ್ಯಾಟರ್ ಲ್ಯಾನಿಂಗ್ ಸಮರ್ಥವಾಗಿ ನಿಭಾಯಿಸಿದರು. ಆರು ಬೌಂಡರಿ ಮತ್ತು ಒಂದು ಸಿಕ್ಸರ್‌ಗಳಿದ್ದ ಅರ್ಧಶತಕ ಗಳಿಸಿದ ಅವರು ತಂಡದ ಮೊತ್ತ ಹೆಚ್ಚಿಸಿದರು.

ಜೆಮಿಮಾ ರಾಡ್ರಿಗಸ್ ಕೂಡ ವೈಫಲ್ಯ ಅನುಭವಿಸಿದರು. ಆದರೆ ಅನಾಬೆಲ್ ಸದರ್ಲೆಂಡ್ (20; 12ಎ, 4X2, 6X1) ಮತ್ತು ಕೊನೆಯಲ್ಲಿ ಶಿಖಾ ಪಾಂಡೆ (ಔಟಾಗದೆ 14; 8ಎ, 4X2) ಮಹತ್ವದ ಕಾಣಿಕೆ ನೀಡಿದರು. ಇದರಿಂದಾಗಿ ತಂಡವು ಹೋರಾಟದ ಮೊತ್ತ ಗಳಿಸಿತು.

ಗುಜರಾತ್ ತಂಡದ ಆ್ಯಷ್ಲೆ ಗಾರ್ಡನರ್ (37ಕ್ಕೆ2 ಹಾಗೂ 40 ರನ್) ಆಲ್‌ರೌಂಡ್ ಆಟವಾಡಿದರು.

ಸಂಕ್ಷಿಪ್ತ ಸ್ಕೋರು: ಡೆಲ್ಲಿ ಕ್ಯಾಪಿಟಲ್ಸ್: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 163 (ಮೆಗ್ ಲ್ಯಾನಿಂಗ್ 55, ಅಲೈಸ್ ಕ್ಯಾಪ್ಸಿ 27, ಸದರ್ಲೆಂಡ್ 20, ಶಿಖಾ ಪಾಂಡೆ ಔಟಾಗದೆ 14. ಮೇಘನಾ ಸಿಂಗ್ 37ಕ್ಕೆ4, ಆ್ಯಷ್ಲೆ ಗಾರ್ಡನರ್ 37ಕ್ಕೆ2) **ಗುಜರಾತ್ ಜೈಂಟ್ಸ್:** 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 138 (ಆ್ಯಷ್ಲೆ ಗಾರ್ಡನರ್ 40, ತನುಜಾ ಕನ್ವರ್ 13, ಫೋಬೆ ಲಿಚ್ ಫೀಲ್ಡ್ 15, ಜೆಸ್ ಯಾನ್ಸೆನ್ 22ಕ್ಕೆ3, ರಾಧಾ ಯಾದವ್ 20ಕ್ಕೆ3) **ಫಲಿತಾಂಶ:** ಡೆಲ್ಲಿ ಕ್ಯಾಪಿಟಲ್ಸ್‌ಗೆ 25 ರನ್ ಜಯ

ಪಂದ್ಯ ಆಟಗಾರ್ತಿ: ಜೆಸ್ ಯಾನ್ಸೆನ್

ಮಹಿಳಾ ಪ್ರೀಮಿಯರ್ ಲೀಗ್: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಪಾಯಿಂಟ್ಸ್
ಡೆಲ್ಲಿ ಕ್ಯಾಪಿಟಲ್ಸ್	4	3	1	6
ಮುಂಬೈ ಇಂಡಿಯನ್ಸ್	4	3	1	6
ಯುಪಿ ವಾರಿಯರ್ಸ್	4	2	2	4
ರಾಯಲ್ ಚಾಲೆಂಜರ್ಸ್ ಬೆಂಗಳೂರು	4	2	2	4
ಗುಜರಾತ್ ಜೈಂಟ್ಸ್	4	0	4	0

ಡಬ್ಲ್ಯುಟಿಸಿ: ಅಗ್ರಸ್ಥಾನಕ್ಕೆ ಭಾರತ

ದುಬೈ (ಪಿಟಿಐ): ರೋಹಿತ್ ಶರ್ಮಾ ನಾಯಕತ್ವದ ಭಾರತ ತಂಡವು ವಿಶ್ವ ಟೆಸ್ಟ್ ರ‍್ಯಾಂಕಿಂಗ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ.

ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಭಾನುವಾರ ಪ್ರಕಟಿಸಿರುವ ಪಟ್ಟಿಯಲ್ಲಿ ನ್ಯೂಜಿಲೆಂಡ್ ತಂಡವನ್ನು ಹಿಂದಿಕ್ಕಿದ ಭಾರತ ಮೊದಲ ಸ್ಥಾನಕ್ಕೆ ಲಗ್ಗೆ ಇಟ್ಟಿದೆ.

ಇಂಗ್ಲೆಂಡ್ ವಿರುದ್ಧ ನಡೆಯುತ್ತಿರುವ ಐದು ಟೆಸ್ಟ್‌ಗಳ ಸರಣಿಯಲ್ಲಿ ಭಾರತವು 3–1ರಿಂದ ಮುನ್ನಡೆ ಸಾಧಿಸಿದೆ. ಶೇಕಡಾವಾರು ಅಂಕಗಳಲ್ಲಿ 64.58ರ ಸಾಧನೆಯನ್ನು ಭಾರತ ಮಾಡಿದೆ. ಈ ಸಾಲಿನಲ್ಲಿ ಒಟ್ಟು ಎಂಟು ಪಂದ್ಯಗಳಲ್ಲಿ ಭಾರತವು ಐದು ಜಯ, ಎರಡು ಸೋಲು ಮತ್ತು ಒಂದು ಡ್ರಾ ಮಾಡಿಕೊಂಡಿದೆ. ಇದರೊಂದಿಗೆ 62 ಅಂಕಗಳನ್ನು ಗಳಿಸಿದೆ. ನ್ಯೂಜಿಲೆಂಡ್ ತಂಡವು ಐದು ಪಂದ್ಯಗಳಿಂದ (ಮೂರು ಜಯ, ಎರಡು ಸೋಲು) 36 ಅಂಕ ಗಳಿಸಿದೆ. ಶೇ 60ರಷ್ಟು ಪಾಯಿಂಟ್ ಪರ್ಸಂಟೇಜ್ ಹೊಂದಿದೆ.

ವೆಲ್ಲಿಂಗ್ಟನ್ ಟೆಸ್ಟ್ ಪಂದ್ಯಕ್ಕೂ ಮುನ್ನ ಕಿವೀಸ್ ಮೊದಲ ಸ್ಥಾನದಲ್ಲಿತ್ತು. ಆಸ್ಟ್ರೇಲಿಯಾ ಎದುರು 172 ರನ್‌ಗಳಿಂದ ಸೋತಿತ್ತು. ಅದರಿಂದಾಗಿ ಎರಡನೇ ಸ್ಥಾನಕ್ಕಿಳಿಯಿತು.

ಆಸ್ಟ್ರೇಲಿಯಾ ತಂಡವು ಒಟ್ಟು 11 ಪಂದ್ಯಗಳಿಂದ (7 ಜಯ, ಮೂರು ಸೋಲು ಮತ್ತು ಒಂದು ಡ್ರಾ) 78 ಅಂಕ ಕಲೆಹಾಕಿದೆ. 59.09 ಪರ್ಸಂಟೇಜ್ ಹೊಂದಿದೆ. ಮಾರ್ಚ್ 8ರಿಂದ ಕ್ರೈಸ್ಟ್ ಚರ್ಚ್‌ನಲ್ಲಿ ನಡೆಯುವ ಟೆಸ್ಟ್‌ನಲ್ಲಿ –ನ್ಯೂಜಿಲೆಂಡ್ ಮುಖಾಮುಖಿಯಾಗಲಿವೆ. ಆಸ್ಟ್ರೇಲಿಯಾ ಅದರಲ್ಲಿ ಗೆದ್ದರೆ ಕಿವೀಸ್ ತಂಡವನ್ನು ಹಿಂದಿಕ್ಕುವ ಅವಕಾಶ ಇದೆ. ಧರ್ಮಶಾಲಾದಲ್ಲಿ ನಡೆಯಲಿರುವ ಟೆಸ್ಟ್‌ನಲ್ಲಿ ಒಂದೊಮ್ಮೆ ಇಂಗ್ಲೆಂಡ್ ತಂಡವು ಭಾರತದ ಎದುರು ಜಯಿಸಿದರೆ. ಆಸ್ಟ್ರೇಲಿಯಾ ಅಗ್ರಸ್ಥಾನಕ್ಕೇರಬಹುದು.

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ರ‍್ಯಾಂಕಿಂಗ್

ರ‍್ಯಾಂಕ್	ತಂಡ	ಪಂದ್ಯ	ಜಯ	ಸೋಲು	ಡ್ರಾ	ಗೆಲುವಿನ ಸರಾಸರಿ	ಪಾಯಿಂಟ್ಸ್
1	ಭಾರತ	8	5	2	1	64.58	62
2	ನ್ಯೂಜಿಲೆಂಡ್	5	3	2	0	60	36
3	ಆಸ್ಟ್ರೇಲಿಯಾ	11	7	3	1	59.9	78
4	ಬಾಂಗ್ಲಾದೇಶ	2	1	1	0	50	12
5	ಪಾಕಿಸ್ತಾನ	5	2	3	0	36.66	22

ರೋಹಿತ್ ಶರ್ಮಾ ಮತ್ತು ರಾಹುಲ್ ದ್ರಾವಿಡ್

ಲಯನ್ ಸ್ಪಿನ್ ಮೋಡಿ: ಆಸ್ಟ್ರೇಲಿಯಾ ಜಯಭೇರಿ

ವೆಲಿಂಗ್ಟನ್ (ಎಎಫ್‌ಪಿ): ನೇಥನ್ ಲಯನ್ (65ಕ್ಕೆ6) ಸ್ಪಿನ್ ಮೋಡಿಯ ಮುಂದೆ ಕಿವೀಸ್ ಬ್ಯಾಟಿಂಗ್ ಪಡೆ ಕುಸಿಯಿತು. ಇದರಿಂದಾಗಿ ಆಸ್ಟ್ರೇಲಿಯಾ ತಂಡವು ಇಲ್ಲಿ ನಡೆದ ಮೊದಲ ಟೆಸ್ಟ್‌ನಲ್ಲಿ 172 ರನ್‌ಗಳ ಭಾರಿ ಜಯ ಸಾಧಿಸಿತು.

ಭಾನುವಾರ 367 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಆತಿಥೇಯ ತಂಡವು 64.4 ಓವರ್‌ಗಳಲ್ಲಿ 196 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ವಿಶ್ವ ಚಾಂಪಿಯನ್ ಆಸ್ಟ್ರೇಲಿಯಾ ತಂಡವು ಎರಡು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತು. ನ್ಯೂಜಿಲೆಂಡ್ ತಂಡದಲ್ಲಿರುವ ಬೆಂಗಳೂರು ಮೂಲದ ರಚಿನ್ ರವೀಂದ್ರ (59 ರನ್) ಮತ್ತು ಡೆರಿಲ್ ಮಿಚೆಲ್ (38 ರನ್) ಅವರು ಒಂದಿಷ್ಟು ಹೊತ್ತು ಆಸ್ಟ್ರೇಲಿಯಾದ ದಾಳಿಯನ್ನು ಎದುರಿಸಿ ನಿಂತರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: **ಆಸ್ಟ್ರೇಲಿಯಾ:** 115.1 ಓವರ್‌ಗಳಲ್ಲಿ 383. **ನ್ಯೂಜಿಲೆಂಡ್:** 43.1 ಓವರ್‌ಗಳಲ್ಲಿ 179. ಎರಡನೇ ಇನಿಂಗ್ಸ್: **ಆಸ್ಟ್ರೇಲಿಯಾ:** 51.1 ಓವರ್‌ಗಳಲ್ಲಿ 164 (ನೇಥನ್ ಲಯನ್ 41, ಕ್ಯಾಮರಾನ್ ಗ್ರೀನ್ 34, ಟ್ರಾವಿಸ್ ಹೆಡ್ 29, ಟಿಮ್ ಸೌಥಿ 46ಕ್ಕೆ2, ಮ್ಯಾಟ್ ಹೆನ್ರಿ 36ಕ್ಕೆ3, ಗ್ಲೆನ್ ಫಿಲಿಪ್ಸ್ 45ಕ್ಕೆ5) **ನ್ಯೂಜಿಲೆಂಡ್:** 64.4 ಓವರ್‌ಗಳಲ್ಲಿ 196 (ರಚಿನ್ ರವೀಂದ್ರ 59, ಡೆರಿಲ್ ಮಿಚೆಲ್ 38, ಸ್ಕಾಟ್ ಕಗ್ಲೆಜಿನ್ 26, ಜೋಶ್ ಹ್ಯಾಜಲ್‌ವುಡ್ 20ಕ್ಕೆ2, ನೇಥನ್ ಲಯನ್ 65ಕ್ಕೆ6) **ಫಲಿತಾಂಶ:** ಆಸ್ಟ್ರೇಲಿಯಾ ತಂಡಕ್ಕೆ 172 ರನ್‌ಗಳ ಜಯ ಹಾಗೂ ಸರಣಿಯಲ್ಲಿ 1–0 ಮುನ್ನಡೆ.

ಪಂದ್ಯಶ್ರೇಷ್ಠ: ಕ್ಯಾಮರಾನ್ ಗ್ರೀನ್



ಆಸ್ಟ್ರೇಲಿಯಾದ ನೇಥನ್ ಲಯನ್ –ಎಎಫ್‌ಪಿ ಚಿತ್ರ

ಆರ್‌ಸಿಬಿ ಅಭಿಮಾನಕ್ಕೆ ಸಾಟಿಯುಂಟೇ?

ಪ್ರಜಾವಾಣಿ ವಾರ್ತೆ

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸೇರಿದ್ದ ಆರ್‌ಸಿಬಿ ಅಭಿಮಾನಿಗಳು –ಪ್ರಜಾವಾಣಿ ಚಿತ್ರ

ಬೆಂಗಳೂರು: ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಹದಿನಾರು ಆವೃತ್ತಿಗಳಲ್ಲಿ ಒಂದು ಬಾರಿಯೂ ಪ್ರಶಸ್ತಿ ಗೆಲ್ಲದಿದ್ದರೂ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ)ತಂಡದ ಅಭಿಮಾನಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ.

ಅದೇ ಅಭಿಮಾನಿಗಳು ಈಗ ಆರ್‌ಸಿಬಿಯ ಮಹಿಳಾ ತಂಡಕ್ಕೂ ಬೆಂಬಲದ ಧಾರೆಯೆರೆಯುತ್ತಿದ್ದಾರೆ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರದವರೆಗೆ ಆರ್‌ಸಿಬಿ ತಂಡವು ನಾಲ್ಕು ಪಂದ್ಯಗಳನ್ನು ಆಡಿದೆ. ಪ್ರತಿ ಪಂದ್ಯಕ್ಕೂ ಸರಾಸರಿ 27 ಸಾವಿರಕ್ಕೂ ಹೆಚ್ಚು ಅಭಿಮಾನಿಗಳು ಸೇರಿರುವುದು ದಾಖಲೆ.

ಹೋದ ಬಾರಿ ಮುಂಬೈನಲ್ಲಿ ಮಹಿಳಾ ಪ್ರೀಮಿಯರ್ ಲೀಗ್ ಟೂರ್ನಿಯ ಮೊದಲ ಆವೃತ್ತಿ ನಡೆದಿತ್ತು. ಆದರೆ ಅಲ್ಲಿ ಇಷ್ಟೊಂದು ಸಂಖ್ಯೆಯಲ್ಲಿ ಪ್ರೇಕ್ಷಕರು ಸೇರಿರಲಿಲ್ಲ. ಆದರೆ ಬೆಂಗಳೂರಿನ ಕ್ರಿಕೆಟ್‌ಪ್ರೇಮಿಗಳು ಈಗ ಹೊಸ ಮೈಲಿಗಲ್ಲು ಸಾಧಿಸಿದ್ದಾರೆ.

ಆರ್‌ಸಿಬಿ ಪಂದ್ಯಗಳಿಷ್ಟೇ ಅಲ್ಲ; ಇನ್ನುಳಿದ ತಂಡಗಳು ಆಡಿದಾಗಲೂ ಸುಮಾರು ಏಳೆಂಟು ಸಾವಿರ ಜನ ಸೇರಿರುವುದನ್ನು ಆಯೋಜಕರು ಖಚಿತಪಡಿಸಿದ್ದಾರೆ.

‘ಈ ಬಾರಿ ಟಿಕೆಟ್ ದರಗಳನ್ನು ಕಡಿಮೆ ಇಡಲಾಗಿದೆ. ಆರ್‌ಸಿಬಿಗೆ ಇಲ್ಲಿ ಉತ್ತಮ ಫ್ಯಾನ್‌ಬೇಸ್ ಇರುವುದರಿಂದ ಹೆಚ್ಚು ಜನರು ಬರುತ್ತಿದ್ದಾರೆ. ಮಹಿಳಾ ಕ್ರಿಕೆಟ್ ಬೆಳವಣಿಗೆಗೆ ಇದು ಆಶಾದಾಯಕ ಬೆಳವಣಿಗೆ’ ಎಂದು ಆರ್‌ಸಿಬಿಯ ಅಧಿಕಾರಿಯೊಬ್ಬರು ಸಂತಸ ವ್ಯಕ್ತಪಡಿಸಿದ್ದಾರೆ.

’ಇಂಡಿಯನ್ ಕ್ರಿಕೆಟ್ ಫ್ಯಾನ್‌ಡಮ್ ವರದಿ 2024 ಪ್ರಕಟಿಸಿದೆ. ಅದರಲ್ಲಿ ಶೇ 38ರಷ್ಟು 18 ರಿಂದ 24 ವಯೋಮಿತಿಯವರು, ಶೇ 34ರಷ್ಟು 25–34 ವಯೋಮಿತಿಯವರು, ಶೇ 31ರಷ್ಟು 35ರಿಂದ 44 ವರ್ಷದವರು, ಶೇ 33ರಷ್ಟು 45 ರಿಂದ 54 ವರ್ಷದವರು ಹಾಗೂ ಶೇ 31ರಷ್ಟು 55 ವರ್ಷ ದಾಟಿದ ಅಭಿಮಾನಿಗಳು ಇಲ್ಲಿದ್ದರೆಂದು ಉಲ್ಲೇಖಿಸಲಾಗಿದೆ’ ಎಂದು ಆರ್‌ಸಿಬಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

‘ಐ ಲವ್ ಯೂ..’, ‘ವಿಲ್ ಯು ಮ್ಯಾರಿ ಮೀ...’ ಎಂಬ ಒಕ್ಕಣೆಗಳ ಮುಂದೆ ತಮ್ಮ ನೆಚ್ಚಿನ ಆಟಗಾರ್ತಿಯ ಹೆಸರು ಬರೆದ ಪ್ಲೆಕಾರ್ಡ್‌ಗಳೊಂದಿಗೆ ಕೆಲವು ಹುಡುಗರು ಪ್ರೇಕ್ಷಕರ ಗ್ಯಾಲರಿಯಲ್ಲಿದ್ದರು.

‘ನನಗೆ ಇದು ತವರಿನ ಅಂಗಳ. ಇಲ್ಲಿ ಆಡುತ್ತಿರುವುದು ರೋಮಾಂಚನ ಮೂಡಿಸಿದೆ. ಒಂದು ಸಮಯದಲ್ಲಿ ಆರ್‌ಸಿಬಿ (ಪುರುಷರ ತಂಡ) ಪಂದ್ಯಗಳನ್ನು ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತು ಆನಂದಿಸಿದ್ದೆ. ಇದೀಗ ನಾನು ಬೆಂಗಳೂರು ಪ್ರೇಕ್ಷಕರ ಮುಂದೆ ಆಡುತ್ತಿದ್ದೇನೆ’ ಎಂದು ಆಟಗಾರ್ತಿ ಶ್ರೇಯಾಂಕಾ ಪಾಟೀಲ ಹೇಳುತ್ತಾರೆ.

ತಂಡವು ಸೋಲಲಿ, ಗೆಲ್ಲಲಿ ಆರ್‌ಸಿಬಿ..ಆರ್‌ಸಿಬಿ.. ಎಂಬ ಕೂಗು ಪ್ರತಿಧ್ವನಿಸುತ್ತಲೇ ಇರುತ್ತದೆ. ಪುರುಷರ ಐಪಿಎಲ್‌ನಲ್ಲಿ ಈ ಅಭಿಮಾನಿಗಳಿಗೆ ವಿರಾಟ್ ಕೊಹ್ಲಿ ಅಚ್ಚುಮೆಚ್ಚು. ಡಬ್ಲ್ಯುಪಿಎಲ್‌ನಲ್ಲಿ ಸ್ಮೃತಿ ಮಂದಾನ ಮತ್ತು ಎಲಿಸ್ ಪೆರಿ ಮೇಲೆ ಹೆಚ್ಚು ಅಭಿಮಾನ!

ಇಂದಿನ ಪಂದ್ಯ (ರಾತ್ರಿ 7.30)
ರಾಯಲ್ ಚಾಲೆಂಜರ್ಸ್ ಬೆಂಗಳೂರು–ಯುಪಿ ವಾರಿಯರ್ಸ್
ನೇರಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ ಆ್ಯಪ್

ಜೆಮ್, ಕಸಬಾ ಎಫ್‌ಸಿಗೆ ಗೆಲುವು

ಪ್ರಜಾವಾಣಿ ವಾರ್ತೆ

ಬಿವಿಎಸ್ ಟ್ರೋಫಿ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಜೆಮ್ ಎಫ್‌ಸಿಯ ಜ್ಯೋತಿಶ್ ಮುನ್ನಡೆಯನ್ನು ತಡೆಯಲು ಯೆನೆಪೋಯ ಎಫ್‌ಸಿಯ ಅನೀಶ್ ಪ್ರಯತ್ನಿಸಿದರು –ಪ್ರಜಾವಾಣಿ ಚಿತ್ರ /ಫಕ್ರುದ್ದೀನ್ ಎಚ್

ಮಂಗಳೂರು: ನಗರದ ಜೆಮ್ ಎಫ್‌ಸಿ ಮತ್ತು ಕಸಬಾ ಎಫ್‌ಸಿ ತಂಡಗಳು ಸರೋಜಿನಿ ಪುಂಡಲೀಕ ಕರ್ಕೇರ ಬೆಂಗ್ರೆ ಸ್ಮಾರಕ ದಕ್ಷಿಣ ಭಾರತ ಆಹ್ವಾನಿತ ಫುಟ್‌ಬಾಲ್ ಟೂರ್ನಿ ‘ಬಿವಿಎಸ್ ಅಮೃತ ಮಹೋತ್ಸವ ಟ್ರೋಫಿ’ಯ ಪಂದ್ಯಗಳಲ್ಲಿ ಗೆಲುವು ಸಾಧಿಸಿದವು.

ನಗರದ ಬೆಂಗ್ರೆ ವಿದ್ಯಾರ್ಥಿ ಸಂಘ ಯುವಕ ಮಂಡಲದ ಅಮೃತ ಮಹೋತ್ಸವದ ಅಂಗವಾಗಿ ನೆಹರೂ ಮೈದಾನದಲ್ಲಿ ಭಾನುವಾರ ಆರಂಭಗೊಂಡ ಟೂರ್ನಿಯಲ್ಲಿ ಜೆಮ್ ಎಫ್‌ಸಿ 1–0ಯಿಂದ ಯೆನೆಪೋಯ ಎಫ್‌ಸಿಯನ್ನು, ಕಸಬಾ ಎಫ್‌ಸಿ 1–0ಯಿಂದ ಬೋಳಾರ್ ಎಫ್‌ಸಿಯನ್ನು ಮಣಿಸಿತು.

ಯೆನೆಪೋಯ ಮತ್ತು ಜೆಮ್ ನಡುವಿನ ಪಂದ್ಯ ರೋಚಕ ಹೋರಾಟಕ್ಕೆ ಸಾಕ್ಷಿಯಾಯಿತು. 23ನೇ ನಿಮಿಷದಲ್ಲಿ ಅಲ್ಫಜ್ ಗಳಿಸಿದ ಗೋಲಿನ ಮೂಲಕ ಮುನ್ನಡೆ ಸಾಧಿಸಿದ ಜೆಮ್ ಎಫ್‌ಸಿ ನಂತರ ರಕ್ಷಣೆಗೆ ಒತ್ತು ನೀಡಿತು. ಎದುರಾಳಿಗಳ ಆವರಣಕ್ಕೆ ನುಗ್ಗಲು ಸತತ ಪ್ರಯತ್ನ ನಡೆಸಿದರೂ ಲಭಿಸಿದ ಅವಕಾಶಗಳನ್ನು ಕೈಚೆಲ್ಲಿದ ಯೆನೆಪೋಯ ಸೋಲೊಪ್ಪಿಕೊಂಡಿತು.

ಎರಡನೇ ಪಂದ್ಯದಲ್ಲಿ ಜಿದ್ದಾಜಿದ್ದಿಯ ಹೋರಾಟ ಕಂಡು ಬಂತು. 70 ನಿಮಿಷಗಳ ಪಂದ್ಯದ ಮೊದಲಾರ್ಧದ ಮುಕ್ತಾಯಕ್ಕೆ 7 ನಿಮಿಷ ಬಾಕಿ ಇದ್ದಾಗ ಆಶಿರ್, ಚೆಂಡನ್ನು ಗುರಿ ಮುಟ್ಟಿಸಿ ಕಸಬಾ ಎಫ್‌ಸಿ ಪಾಳಯದಲ್ಲಿ ಸಂಭ್ರಮ ಮೂಡಿಸಿದರು.

ಸೋಮವಾರ ಮಧ್ಯಾಹ್ನ 3 ಗಂಟೆಗೆ ಆತಿಥೇಯ ಬಿವಿಎಸ್ ಬೆಂಗ್ರೆ ಎಫ್‌ಸಿ ಮತ್ತು ಮರ್ಚಂಟ್ ಎಫ್‌ಸಿ ನಡುವೆ, 4.30ಕ್ಕೆ ಸ್ಪೋರ್ಟಿಂಗ್ ಬ್ರದರ್ಸ್ ಎಫ್‌ಸಿ ಮತ್ತು ಅಜಾರಿಯ ಎಫ್‌ಸಿ ನಡುವೆ ಹಣಾಹಣಿ ನಡೆಯಲಿದೆ.

ಒಲಿಂಪಿಕ್ಸ್ ಬಾಕ್ಸಿಂಗ್ ಕ್ವಾಲಿಫೈಯರ್: ದೀಪಕ್, ನರೇಂದರ್ ನಿರ್ಗಮನ

ದೀಪಕ್ ಭೋರಿಯಾ

ಬುಸ್ಟೊ ಅರ್ಸಿಜಿಯೊ, ಇಟಲಿ (ಪಿಟಿಐ): ಇಲ್ಲಿ ನಡೆಯುತ್ತಿರುವ ಮೊದಲ ವಿಶ್ವ ಒಲಿಂಪಿಕ್ ಬಾಕ್ಸಿಂಗ್ ಅರ್ಹತಾ ಟೂರ್ನಿಯಲ್ಲಿ ಭಾರತದ ಅಭಿಯಾನವು ನಿರಾಶಾದಾಯಕವಾಗಿ ಪ್ರಾರಂಭವಾಯಿತು. ಪದಕದ ನಿರೀಕ್ಷೆ ಮೂಡಿಸಿದ್ದ ದೀಪಕ್ ಭೋರಿಯಾ (51 ಕೆಜಿ) ಮತ್ತು ನರೇಂದರ್ ಬರ್ವಾಲ್ (92 ಕೆಜಿ) ಆರಂಭಿಕ ಸುತ್ತಿನಲ್ಲೇ ನಿರ್ಗಮಿಸಿದರು.

ವಿಶ್ವ ಚಾಂಪಿಯನ್‌ಷಿಪ್‌ನ ಕಂಚಿನ ಪದಕ ವಿಜೇತ ದೀಪಕ್ ಭೋರಿಯಾ (51 ಕೆಜಿ) ಅವರು 64ರ ಘಟ್ಟದ ಅಜರ್‌ಬೈಜಾನ್‌ನ ಹುಸೇನೊವ್ ನಿಜತ್ ವಿರುದ್ಧ 2–3ರಿಂದ ಮುಗ್ಗರಿಸಿದರು.

ಮೊದಲ ಎರಡು ಸುತ್ತುಗಳಲ್ಲಿ ಇಬ್ಬರೂ ಬಾಕ್ಸರ್‌ಗಳ ನಡುವೆ ತೀವ್ರ ಪೈಪೋಟಿ ಕಂಡುಬಂತು. ಆದರೆ, ಹುಸೇನೊವ್ ಅವರು ವೇಗದ ಚಲನೆಯ ಲಾಭ ಪಡೆದು, ರಿಂಗ್‌ನಲ್ಲಿ ಭೋರಿಯಾ ಅವರನ್ನು ಇಕ್ಕಟ್ಟಿಗೆ ಸಿಲುಕಿಸಿದರು. ಅಂತಿಮ ಮೂರು ನಿಮಿಷದಲ್ಲಿ ಭಾರತದ ಸ್ಪರ್ಧಿ ತಿರುಗೇಟು ನೀಡಿದರೂ ಅದು ಗೆಲುವಿಗೆ ಸಾಕಾಗಲಿಲ್ಲ.

ನರೇಂದರ್ ಅವರು ಜರ್ಮನಿಯ ನೆಲ್ವಿ ಟಿಯಾಫಕ್ ವಿರುದ್ಧ 3–2ರಿಂದ ಪರಾಭವಗೊಂಡರು. ಆರಂಭಿಕ ಸುತ್ತಿನಲ್ಲಿ ಮೇಲುಗೈ ಸಾಧಿಸಿದ್ದ ಭಾರತದ ಬಾಕ್ಸರ್ ನಂತರದ ಸುತ್ತಿನಲ್ಲಿ ಮುಗ್ಗರಿಸಿದರು.

2022ರ ಕಾಮನ್‌ವೆಲ್ತ್ ಗೇಮ್ಸ್ ಕಂಚಿನ ಪದಕ ವಿಜೇತ ಜೈಸ್ಮಿನ್ (60 ಕೆಜಿ), ಮೊಹಮ್ಮದ್ ಹುಸಾಮುದ್ದೀನ್ (57 ಕೆಜಿ), ನಿಶಾಂತ್ ದೇವ್ (71 ಕೆಜಿ), ಶಿವ ಥಾಪಾ (63.5 ಕೆಜಿ) ಮತ್ತು ಸಂಜೀತ್ (92 ಕೆಜಿ) ಸ್ಪರ್ಧಾ ಕಣದಲ್ಲಿದ್ದಾರೆ.

ಭಾರತದ ನಾಲ್ಕು ಬಾಕ್ಸರ್‌ಗಳು ಮಾತ್ರ ಈವರೆಗೆ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿದ್ದಾರೆ. ಈ ಟೂರ್ನಿಯಿಂದ ಒಲಿಂಪಿಕ್ಸ್‌ಗೆ 49 ಕೋಟಾ (ಪುರುಷರಿಗೆ 28, ಮಹಿಳೆಯರಿಗೆ 21) ಸ್ಥಾನಗಳಿವೆ.

ಇಲ್ಲಿ ಕೋಟಾಗಳನ್ನು ಗಳಿಸಲು ವಿಫಲರಾದ ಬಾಕ್ಸರ್‌ಗಳು ಮೇ 23ರಿಂದ ಜೂನ್ 3ರವರೆಗೆ ಬ್ಯಾಂಕಾಕ್‌ನಲ್ಲಿ ನಡೆಯಲಿರುವ ಎರಡನೇ ವಿಶ್ವ ಒಲಿಂಪಿಕ್ ಬಾಕ್ಸಿಂಗ್ ಕ್ವಾಲಿಫೈಯರ್‌ನಲ್ಲಿ ಕಡೆಯ ಅವಕಾಶ ಪಡೆಯಲಿದ್ದಾರೆ.

ಪ್ರಾಗ್ ಚೆಸ್ ಟೂರ್ನಿ: ಪ್ರಜ್ಞಾನಂದಗೆ ಮಣಿದ ವಿದಿತ್

ಪ್ರಜ್ಞಾನಂದ

ಪ್ರಾಗ್ (ಪಿಟಿಐ): ಭಾರತದ ಗ್ರ್ಯಾಂಡ್ ಮಾಸ್ಟರ್ ಆರ್. ಪ್ರಜ್ಞಾನಂದ ಅವರು ಪ್ರಾಗ್ ಚೆಸ್ ಟೂರ್ನಿಯ ಐದನೇ ಸುತ್ತಿನಲ್ಲಿ ಸ್ವದೇಶದ ವಿದಿತ್ ಗುಜರಾತಿ ಅವರನ್ನು ಮಣಿಸಿದರು. ಭಾರತದ ಮತ್ತೊಬ್ಬ ಆಟಗಾರ ಡಿ. ಗುಕೇಶ್ ಅವರು ಜೆಕ್ ಗಣರಾಜ್ಯದ ಡೇವಿಡ್ ನವಾರ ವಿರುದ್ಧ ಮುಗ್ಗರಿಸಿದರು.

ಉಜ್ಬೇಕಿಸ್ತಾನದ ನಾದಿರ್ಬೆಕ್ ಅಬ್ದುಸತ್ತಾರೊವ್ ಗೆಲುವಿನ ಅಭಿಯಾನವನ್ನು ಮುಂದುವರಿಸಿದ್ದು, ಅವರು ಪೋಲೆಂಡ್‌ನ ಮಾಥ್ಯೂಸ್ ಬಾರ್ಟೆಲ್ ಅವರನ್ನು ಮಣಿಸಿ, 4 ಅಂಕದೊಂದಿಗೆ ಅಗ್ರಸ್ಥಾನ ಕಾಯ್ದುಕೊಂಡಿದ್ದಾರೆ.

ಇರಾನ್ ಪರ್ಹಾಮ್ ಮಘಸೂಡ್ಲು 3.5 ಅಂಕದೊಂದಿಗೆ ಎರಡನೇ ಸ್ಥಾನದಲ್ಲಿದ್ದಾರೆ. ಅವರು ಐದನೇ ಸುತ್ತಿನ ಪಂದ್ಯದಲ್ಲಿ ರುಮೇನಿಯಾದ ರಿಚಾರ್ಡ್ ರ‍್ಯಾಪೋರ್ಟ್ ಜತೆ ಡ್ರಾ ಮಾಡಿಕೊಂಡರು. ರಿಚಾರ್ಡ್ 3 ಪಾಯಿಂಟ್‌ನೊಂದಿಗೆ ಮೂರನೇ ಸ್ಥಾನದಲ್ಲಿದ್ದಾರೆ. ಪ್ರಜ್ಞಾನಂದ, ವಿದಿತ್ ಮತ್ತು ಗುಕೇಶ್ ತಲಾ 2.5 ಅಂಕದೊಂದಿಗೆ ಜಂಟಿ ನಾಲ್ಕನೇ ಸ್ಥಾನವನ್ನು ಹಂಚಿಕೊಂಡಿದ್ದಾರೆ.

ಸ್ಥಳೀಯ ಆಟಗಾರ ಗುಯೆನ್ ಥಾಯಿ ದೈ ವಾನ್ ಅವರು ಜರ್ಮನಿಯ ವಿನ್ಸೆಂಟ್ ಕೀಮರ್ ಜತೆ ಡ್ರಾ ಮಾಡಿಕೊಂಡರು.

ಚಾಲೆಂಜರ್ಸ್ ವಿಭಾಗದಲ್ಲಿ ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್. ವೈಶಾಲಿ ಅವರು ಹಾಲೆಂಡ್‌ನ ಎರ್ವಿನ್ ಎಲ್ 'ಅಮಿ ಎದುರು ಸೋತರು.

ಸಂಕ್ಷಿಪ್ತ ಸುದ್ದಿ

ಅಪಘಾತ: ರಾಬಿನ್‌ಗೆ ಗಾಯ

ರಾಂಚಿ (ಪಿಟಿಐ): ಗುಜರಾತ್ ಟೈಟನ್ಸ್ ತಂಡದ ಯುವ ವಿಕೆಟ್ ಕೀಪರ್ ರಾಬಿನ್ ಮಿಂಜ್ ಅವರು ಶನಿವಾರ ಬೈಕ್ ಅಪಘಾತದಲ್ಲಿ ಗಾಯಗೊಂಡಿದ್ದು, ಸ್ಥಳೀಯ ಆಸ್ಪತ್ರೆಯಲ್ಲಿ ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಅವರ ತಂದೆ ಫ್ರಾನ್ಸಿಸ್ ಮಿಂಜ್ ತಿಳಿಸಿದ್ದಾರೆ.

ಜಾರ್ಖಂಡ್‌ನಲ್ಲಿ ಬೈಕ್ ಮತ್ತು ಮೋಟಾರ್ ಸೈಕಲ್ ನಡುವೆ ಸಂಭವಿಸಿದ ಅಪಘಾತದಲ್ಲಿ ರಾಬಿನ್ ಅವರ ಬೈಕ್‌ನ ಮುಂಭಾಗಕ್ಕೆ ತೀವ್ರ ಹಾನಿಯಾಗಿದೆ. ಅವರು ಸಣ್ಣಪುಟ್ಟ ಗಾಯದೊಂದಿಗೆ ಪಾರಾಗಿದ್ದಾರೆ.

21 ವರ್ಷದ ರಾಬಿನ್ ಅವರು ಕರ್ನಲ್ ಸಿ.ಕೆ. ನಾಯ್ಡು ಟ್ರೋಫಿ ಟೂರ್ನಿಯಲ್ಲಿ ಜಾರ್ಖಂಡ್ ತಂಡಕ್ಕೆ ಆಡಿದ್ದರು. ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಕರ್ನಾಟಕ ವಿರುದ್ಧ 137 ರನ್ ಗಳಿಸಿ ಮಿಂಚಿದ್ದರು. ಆದರೆ, ಇನಿಂಗ್ಸ್ ಮುನ್ನಡೆ ಬಲದಿಂದ ಕರ್ನಾಟಕ ತಂಡವು ಸೆಮಿಫೈನಲ್ ಪ್ರವೇಶಿಸಿತ್ತು.

2024ರ ಐಪಿಎಲ್ ಹರಾಜಿನಲ್ಲಿ ₹ 3.6 ಕೋಟಿ ಮೊತ್ತಕ್ಕೆ ಗುಜರಾತ್ ತಂಡದ ಪಾಲಾಗಿರುವ ರಾಬಿನ್ ಅವರು ಟೈಟನ್ಸ್‌ನ ಅಭ್ಯಾಸ ಶಿಬಿರವನ್ನು ಶೀಘ್ರದಲ್ಲೇ ಸೇರಬೇಕಿತ್ತು. ಆದರೆ, ಈ ಘಟನೆಯಿಂದಾಗಿ ಅವರು ತಂಡವನ್ನು ಸೇರಲು ವಿಳಂಬವಾಗಬಹುದು ಎಂದು ಮೂಲಗಳು ತಿಳಿಸಿವೆ.

ಬ್ಯಾಸ್ಕೆಟ್‌ಬಾಲ್: ಎಂಎನ್‌ಕೆ, ಡಿವೈಇಎಸ್ ತಂಡಕ್ಕೆ ಪ್ರಶಸ್ತಿ

ಬೆಂಗಳೂರು: ಎಂಎನ್‌ಕೆ ರಾವ್ ಪಾರ್ಕ್ ಬಿ.ಸಿ ಮತ್ತು ಡಿವೈಇಎಸ್ ಮೈಸೂರು ತಂಡಗಳು ಕ್ರಮವಾಗಿ ಸಹಕಾರನಗರ ಬಿ.ಸಿ ರಾಜ್ಯ ಮಟ್ಟದ ಆಹ್ವಾನಿತ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡವು.

ಭಾನುವಾರ ನಡೆದ ಪುರುಷರ ಫೈನಲ್‌ನಲ್ಲಿ ಸಿದ್ಧಾಂತ್ (16) ಮತ್ತು ಅಜಿನ್ (14) ಅವರ ಆಟದ ಬಲದಿಂದ ಎಂಎನ್‌ಕೆ ತಂಡವು 64–53ರಿಂದ ಭಾರತ್ ಎಸ್‌ಯು ತಂಡವನ್ನು ಮಣಿಸಿತು. ಭಾರತ್ ತಂಡದ ಪರ ಅಕ್ಷಯ್ ಮತ್ತು ಸಂಜಯ್ ಕ್ರಮವಾಗಿ 23 ಮತ್ತು 15 ಪಾಯಿಂಟ್ ಗಳಿಸಿದರು.

ಮಹಿಳೆಯರ ಲೀಗ್ ಪಂದ್ಯಗಳಲ್ಲಿ ಡಿವೈಇಎಸ್ ಮೈಸೂರು ತಂಡವು 40–30ರಿಂದ ಕೆ.ಎಸ್. ಹೆಗ್ಡೆ ನಿಟ್ಟೆ ತಂಡವನ್ನು ಸೋಲಿಸಿದರೆ, ಮೌಂಟ್ಸ್ ಕ್ಲಬ್ ತಂಡವು 55–42ರಿಂದ ಬೀಗಲ್ಸ್ ಬಿಸಿ ತಂಡವನ್ನು ಮಣಿಸಿತು.

ಮಹಿಳೆಯರ ವಿಭಾಗದಲ್ಲಿ ಮೌಂಟ್ಸ್ ಕ್ಲಬ್ ಎರಡನೇ ಸ್ಥಾನ, ಕೆ.ಎಸ್. ಹೆಗ್ಡೆ ನಿಟ್ಟೆ ಮೂರನೇ ಸ್ಥಾನ ಪಡೆಯಿತು. ಬೀಗಲ್ಸ್ ತಂಡವು ನಾಲ್ಕನೇ ಸ್ಥಾನ ಗಳಿಸಿತು.

ಟ್ರಿಪಲ್ ಜಂಪ್: ಪ್ರವೀಣ್ ಚಿತ್ರವೇಲ್‌ಗೆ 11ನೇ ಸ್ಥಾನ

ಗ್ಲಾಸ್ಗೋ (ಪಿಟಿಐ): ಭಾರತದ ಪ್ರವೀಣ್ ಚಿತ್ರವೇಲ್ ಅವರು ಇಲ್ಲಿ ನಡೆಯುತ್ತಿರುವ ವಿಶ್ವ ಒಳಾಂಗಣ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಪುರುಷರ ಟ್ರಿಪಲ್ ಜಂಪ್ ಸ್ಪರ್ಧೆಯಲ್ಲಿ 16.45 ಮೀ ದೂರ ಜಿಗಿದು 11ನೇ ಸ್ಥಾನ ಪಡೆದರು.

ಎಮಿರೇಟ್ಸ್ ಅರೆನಾದಲ್ಲಿ ಶನಿವಾರ ನಡೆದ ಸ್ಪರ್ಧೆಯಲ್ಲಿ 22 ವರ್ಷದ ಪ್ರವೀಣ್ ಮೊದಲ ಪ್ರಯತ್ನದಲ್ಲಿ 15.76 ಮೀಟರ್ ಜಿಗಿದರು. ನಂತರದ ಪ್ರಯತ್ನದಲ್ಲಿ ಕ್ರಮವಾಗಿ 16.29 ಮೀ. ಮತ್ತು 16.45 ಮೀ. ಸಾಧನೆ ಮಾಡಿದರು. ಅವರು 17.37 ಮೀ. ರಾಷ್ಟ್ರೀಯ ದಾಖಲೆಯನ್ನು ಹೊಂದಿದ್ದಾರೆ. ಕಳೆದ ವರ್ಷ ಚೀನಾದ ಹಾಂಗ್‌ಝೌನಲ್ಲಿ ನಡೆದ ಏಷ್ಯನ್ ಕ್ರೀಡಾಕೂಟದಲ್ಲಿ 16.68 ಮೀ ಜಿಗಿತದೊಂದಿಗೆ ಪ್ರವೀಣ್ ಕಂಚು ಗೆದ್ದಿದ್ದರು.

ಬುರ್ಕಿನಾಬೆಯ ಅಥ್ಲೀಟ್ ಹ್ಯೂಗ್ಸ್ ಫ್ಯಾಬ್ರಿಸ್ ಜಾಂಗೊ (17.53 ಮೀ) ಚಿನ್ನ ಗೆದ್ದರೆ, ಅಲ್ಜೀರಿಯಾದ ಯಾಸರ್ ಮೊಹಮ್ಮದ್ ಟ್ರಿಕಿ (17.35 ಮೀ) ಮತ್ತು ಪೋರ್ಚುಗಲ್‌ನ ಟಿಯಾಗೊ ಪೆರೇರಾ (17.08 ಮೀ) ಕ್ರಮವಾಗಿ ಬೆಳ್ಳಿ ಮತ್ತು ಕಂಚು ತನ್ನದಾಗಿಸಿಕೊಂಡರು.

KAS
ಅಧಿಸೂಚನೆ ಪ್ರಕಟಣೆ!
ಪೂರ್ವಭಾವಿ ಪರೀಕ್ಷಾ (Prelims) ದಿನಾಂಕ: 05-05-2024
384 ಗೆಜೆಟೆಡ್ ಪ್ರೊಬೆಷನರ್ಸ (KAS) ಹುದ್ದೆಗಳ ನೇಮಕಾತಿಗೆ ಇದೀಗ ಅಧಿಸೂಚನೆ ಪ್ರಕಟಿಸಿ ಅರ್ಜಿ ಆಹ್ವಾನಿಸಲಾಗಿದೆ!!
ನಿಮ್ಮ ತಯಾರಿಯನ್ನು ಪೂರ್ಣಗೊಳಿಸಿ
EXAM DH ಪ್ರಜಾವಾಣಿ MASTERMIND™
ಇಂದೇ KAS ಮಾಕ್ ಟೆಸ್ಟ್ ಸರಣಿಗೆ ಚಂದಾದಾರರಾಗಿ!
- 12 KAS ಮಾಕ್ ಪ್ರಿಲಿಮ್ಸ್ ಪರೀಕ್ಷೆಗಳ ಸರಣಿ
- 24 ಗಂಟೆಗಳ ಒಳಗೆ ಸಮಗ್ರ ಪರಿಹಾರಗಳು ಮತ್ತು ಶ್ರೇಯಾಂಕಗಳನ್ನು ಪಡೆಯಿರಿ
- ಪ್ರತಿ ಪರೀಕ್ಷೆಯನ್ನು 3 ಬಾರಿ ಪ್ರಯತ್ನಿಸಿ
ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ
ಹೆಚ್ಚಿನ ಮಾಹಿತಿಗಾಗಿ WhatsApp ಮಾಡಿ: 96069 66128
www.exammastermind.com

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ (ರಿ.)
ಆಳ್ವಾಸ್ ಎಜುಕೇಶನ್ ಫೌಂಡೇಶನ್®
ಮೂಡುಬಿದಿರೆ ಮಂಗಳೂರು – 574227, ದಕ್ಷಿಣ ಕನ್ನಡ
ಸಾಂಸ್ಕೃತಿಕ ಯೋಜನೆಯಡಿ ಉಚಿತ ಶಿಕ್ಷಣ
ಸಾಂಸ್ಕೃತಿಕ ಯೋಜನೆಯಡಿ ಉಚಿತ ಶಿಕ್ಷಣ ಹಿರಿಯ ಪ್ರಾಥಮಿಕ, ಪ್ರೌಢಶಾಲೆ, ಪದವಿಪೂರ್ವ (ವಾಣಿಜ್ಯ ಮತ್ತು ಕಲಾ), ಪದವಿ ಮತ್ತು ಸ್ನಾತಕೋತ್ತರ ಕೋರ್ಸುಗಳಿಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳು ಕೆಳಕಂಡ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಪ್ರತಿಭಾ ಕಾರಂಜಿ, ವಿಶ್ವವಿದ್ಯಾನಿಲಯ, ರಾಜ್ಯ ಮತ್ತು ರಾಷ್ಟ್ರಮಟ್ಟದ ಸಾಧನೆಗೈದು ದಾಖಲೆ ನಿರ್ಮಿಸಿರುವ ಹಾಗೂ ಜೂನಿಯರ್– ಸೀನಿಯರ್– ವಿದ್ವತ್ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರುವ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣದ ಅವಕಾಶವನ್ನು ಕಲ್ಪಿಸಲಾಗಿದೆ.
◆ಕರ್ನಾಟಕ ಮತ್ತು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ◆ಸುಗಮ ಸಂಗೀತ
◆ಶಾಸ್ತ್ರೀಯ ನೃತ್ಯ-ಭರತನಾಟ್ಯ, ಕೂಚುಪುಡಿ, ಮೋಹಿನಿಯಾಟ್ಟಮ್ ಮತ್ತು ಒಡಿಸ್ಸಿ
◆ಪಕ್ಕವಾದ್ಯಗಳು ◆ಯಕ್ಷಗಾನ ◆ನಾಟಕ ◆ಜಾನಪದ ನೃತ್ಯ ಮತ್ತು ಸಂಗೀತ
◆ಚಿತ್ರಕಲೆ ◆ಯೋಗ ◆ಮಲ್ಲಕಂಬ
ಅರ್ಹ ಅಭ್ಯರ್ಥಿಗಳು ನಮ್ಮ ಸ್ವ-ವಿವರಗಳೊಂದಿಗೆ
ಅಧ್ಯಕ್ಷರು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ (ರಿ.) ಮೂಡುಬಿದಿರೆ ದ.ಕ - 574227
ಈ ವಿಳಾಸಕ್ಕೆ ಎಪ್ರಿಲ್ 10,2024 ರೊಳಗೆ ಅರ್ಜಿ ಸಲ್ಲಿಸುವುದು.
9480529236, 8971161797 culturals@alvas.org